ಹುಬ್ಬಳ್ಳಿ
ಶನಿವಾರ, 11 ಏಪ್ರಿಲ್ 2026
ಸಂಪುಟ 16, ಸಂಚಿಕೆ 17, ಪುಟಗಳು 14
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಮುಗಿಯದ ರಗಳೆ

ಜೆ.ಡಿ. ವ್ಯಾನ್ಸ್ ಹೊರಟಿದ್ದರೂ ಇರಾನ್ ಸುದ್ದಿಯೇ ಇಲ್ಲ

• ಪುಟ 2



ಕಿರುಸುದ್ದಿ

ವಿವಿಧ ಕಾರ್ಯಕ್ರಮ

ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವತಿಯಿಂದ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ 135 ನೇ ಜನ್ಮ ದಿನಾಚರಣೆ ಅಂಗವಾಗಿ ವಿವಿಧ ಕಾರ್ಯಕ್ರಮಗಳನ್ನು ಏ.14 ರಂದು ಹಮ್ಮಿಕೊಳ್ಳಲಾಗಿದೆ. ಮಾಲಾರ್ಪಣೆ, ಉಪನ್ಯಾಸ, ಮೆರವಣಿಗೆ, ಪೌರಕಾರ್ಮಿಕರಿಗೆ ಸನ್ಮಾನ ಹಾಗೂ ಸಮಾರೋಪ ಸಮಾರಂಭ ನಡೆಯಲಿದೆ. ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಚಿವ ಸಂತೋಷ ಲಾಡ್, ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್, ಶಾಸಕರಾದ ಪ್ರಸಾದ ಅಬ್ಬಯ್ಯ, ಭರಮಗೌಡ ಕಾಗೆ, ಅರವಿಂದ ಬೆಲ್ಲದ, ವಿನಯ ಕುಲಕರ್ಣಿ, ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ, ಮಹೇಶ ಟೆಂಗಿನಕಾಯಿ, ಎಫ್.ಎಚ್. ಜಕ್ಕಪ್ಪನವರ, ಮೇಯರ್ ಜ್ಯೋತಿ ಪಾಟೀಲ, ಉಪ ಮೇಯರ್ ಸಂತೋಷ ಚವ್ಹಾಣ, ವಿರೋಧ ಪಕ್ಷದ ನಾಯಕ ಇಮ್ರಾನ್ ಯಲಿಗಾರ ಸೇರಿದಂತೆ ಅನೇಕರು ಭಾಗವಹಿಸುವರು.

ಕುಂದುಕೊರತೆ ಸಭೆ

ಧಾರವಾಡ: ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರು ಏ.16ರಂದು ಮಧ್ಯಾಹ್ನ 12ರಿಂದ 1 ರವರೆಗೆ ಧಾರವಾಡದ ಅಂಜುಮನ್-ಎ-ಇಸ್ಲಾಂ ಸಭಾಭವನದಲ್ಲಿ ಸ್ಥಳೀಯ ಅಲ್ಪಸಂಖ್ಯಾತರ ಕುಂದುಕೊರತೆ ಸಭೆಯನ್ನು ಜರುಗಿಸುವರು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪೂರ್ವಭಾವಿ ಸಭೆ

ಧಾರವಾಡ: ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಏ.20ರಂದು ಕರ್ನಾಟಕದ ಸಾಂಸ್ಕೃತಿಕ ನಾಯಕ ಬಸವೇಶ್ವರ ಜಯಂತಿ, ಏ.21 ರಂದು ಶಂಕರಾಚಾರ್ಯ ಜಯಂತಿ, ಏ.23ರಂದು ಭಗೀರಥ ಜಯಂತಿ ಕುರಿತು ಏ.13ರಂದು ಬೆಳಗ್ಗೆ 11ಕ್ಕೆ ಜಿಲ್ಲಾಧಿಕಾರಿಗಳ ನೂತನ ಸಭಾಭವನದಲ್ಲಿ ಪೂರ್ವಭಾವಿ ಸಭೆ ಕರೆಯಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಚಿತ ಆರೋಗ್ಯ ತಪಾಸಣೆ

ಹುಬ್ಬಳ್ಳಿ: ಕಾಲವಾಡ ಗ್ರಾ.ಪಂ ಮತ್ತು ಹುಬ್ಬಳ್ಳಿಯ ಬಾಲಾಜಿ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ಏ.12 ರಂದು ನವಲಗುಂದ ತಾಲೂಕಿನ ಕಾಲವಾಡ ಗ್ರಾಮದ ಗ್ರಂಥಾಲಯ ಆವರಣದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಅಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1 ಗಂಟೆವರೆಗೆ ನಡೆಯುವ ಶಿಬಿರದ ನೇತೃತ್ವವನ್ನು ಬಾಲಾಜಿ ಆಸ್ಪತ್ರೆ ಚೇರ್ಮನ್ ಡಾ. ಕ್ರಾಂತಿಕಿರಣ ವಹಿಸಲಿದ್ದು, ನರರೋಗ, ಎಲುಬು-ಕೀಲು, ಹೃದ್ರೋಗ ಹಾಗೂ ಸಾಮಾನ್ಯ ಆರೋಗ್ಯ ಸಮಸ್ಯೆಗಳಿಗೆ ಸಂಬಂಧಿಸಿದ ಖ್ಯಾತ ವೈದ್ಯರು ತಪಾಸಣೆ ಮಾಡಲಿದ್ದಾರೆ. ಬೋನ್ ಡೆನ್ಸಿಟಿ, ರಕ್ತದೊತ್ತಡ, ಸಕ್ಕರೆ ಕಾಯಿಲೆ ತಪಾಸಣೆ ಮಾಡಿ ಉಚಿತ ಸಲಹೆ, ಔಷಧ ನೀಡಲಾಗುವುದು.

ಪ್ರಶಸ್ತಿ ಪ್ರಕಟ

ಧಾರವಾಡ: ಮುಂಡರಗಿಯ ಕಲಾ ಶಿಕ್ಷಣ-ಸಂಸ್ಕೃತಿ ಪ್ರತಿಷ್ಠಾನ 2025ನೇ ಸಾಲಿನ ಸಾಹಿತ್ಯ ಗೌರವ ಪ್ರಶಸ್ತಿ ಹಾಗೂ ಪುಸ್ತಕ ಪ್ರಶಸ್ತಿ ಪ್ರಕಟಿಸಿದ್ದು, ವಿಜಯಪುರದ ಜಂಬುನಾಥ ಕಂಚ್ಯಾಣಿ ಅವರಿಗೆ ಗೌರವ ಪ್ರಶಸ್ತಿ ಹಾಗೂ ಮಸ್ಕಿಯ ಗುಂಡುರಾವ್ ದೇಸಾಯಿಗೆ ಪುಸ್ತಕ ಪ್ರಶಸ್ತಿ ಒಲಿದಿದೆ ಎಂದು ಪ್ರತಿಷ್ಠಾನದ ಸಂಚಾಲಕ ಮಲ್ಲಿಕಾರ್ಜುನ ಸೊಗಲಿ ತಿಳಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿದ ಅವರು, ಏ.25ರಂದು ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ನಡೆಯುವ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಗೌರವ ಪ್ರಶಸ್ತಿ ರೂ.10 ಸಾವಿರ ನಗದು, ಪುಸ್ತಕ ಪ್ರಶಸ್ತಿ ರೂ.5 ಸಾವಿರ ನಗದು, ಸ್ಮರಣಿಕೆ ಒಳಗೊಂಡ ಪ್ರಶಸ್ತಿ ಉಭಯ ಗಣ್ಯರಿಗೆ ಪ್ರದಾನಿಸಲಿದೆ ಎಂದು ತಿಳಿಸಿದ್ದಾರೆ.


ನಿಧನ ಸುದ್ದಿ

ಅನಂತಮತಿ ದೇಸಾಯಿ



ಉಪ್ಪಿನಬೆಟಗೇರಿ: ಧಾರವಾಡ ತಾಲೂಕಿನ ಅಮ್ಮಿನಬಾವಿ ಗ್ರಾಮದ ಚಾರಿತ್ರಿಕ ಪರಂಪರೆಯಲ್ಲಿ ಹಕ್ಕು-ಬಾಬು ಉಳ್ಳ ಗೌರವಾನ್ವಿತ ಘರಾಣೆಗಳಲ್ಲಿ ಒಂದಾದ ಗೌಡಕಿ ದೇಸಾಯಿ ಮನೆತನದ ಹಿರಿಯರಾಗಿದ್ದ ಮತ್ತು ದಿಗಂಬರ ಜೈನ್ ಸಮಾಜದ ಹಿರಿಯ ಶ್ರಾವಕಿ ಅನಂತಮತಿ ವಿಜಯಾನಂದ ದೇಸಾಯಿ (89) ಬುಧವಾರ ನಿಧನರಾದರು. ಓರ್ವ ಪುತ್ರ, ಮೂವರು ಪುತ್ರಿಯರು, 8 ಜನ ಮೊಮ್ಮಕ್ಕಳು, 3 ಜನ ಮರಿಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಇವರ ನಿಧನಕ್ಕೆ ಅಮ್ಮಿನಬಾವಿ ಸಂಸ್ಥಾನ ಪಂಚಗೃಹ ಹಿರೇಮಠದ ಅಭಿನವ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ, ವರೂರ-ಅಮ್ಮಿನಬಾವಿ ಜೈನಮಠದ ಶ್ರೀಧರ್ಮಸೇನ ಭಟ್ಟಾರಕ ಸ್ವಾಮೀಜಿ ಸೇರಿದಂತೆ ವಿವಿಧ ಸಮಾಜಗಳ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಸೂರ್ಯನಾರಾಯಣ



ಧಾರವಾಡ: ಇಲ್ಲಿನ ಹೊಸಯಲ್ಲಾಪುರ ನಿವಾಸಿ ಸೂರ್ಯನಾರಾಯಣ ದತ್ತಾತ್ರೇಯ ನಾಡಿಗೇರ (82) ಗುರುವಾರ ನಿಧನ ಹೊಂದಿದರು. ಇವರಿಗೆ ಪತ್ನಿ, ಓರ್ವ ಪುತ್ರಿ, ಪುತ್ರ ಹಾಗೂ ಅಪಾರ ಬಳಗವಿದೆ.



ಹುಬ್ಬಳ್ಳಿ: ನೈರುತ್ಯ ರೈಲ್ವೆಗೆ ನೂತನವಾಗಿ ಪ್ರಧಾನ ವ್ಯವಸ್ಥಾಪಕರಾಗಿ ಆಯ್ಕೆಯಾದ ಪಿ. ಅನಂತ್ ಅವರಿಗೆ ಸ್ವರ್ಣಾ ಸಮೂಹ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ಹಾಗೂ ಭಾರತೀಯ ರೈಲ್ವೆ ಮೂಲ ಸೌಕರ್ಯ ಪೂರೈಕೆದಾರರ ಸಂಘದ ಉಪಾಧ್ಯಕ್ಷ ಡಾ. ವಿ.ಎಸ್.ವಿ ಪ್ರಸಾದ ಅವರು ಭೇಟಿ ನೀಡಿ ಸನ್ಮಾನಿಸಿದರು.

ಠೇವಣಿ ಹಣ ಹಿಂದಿರುಗಿಸದ ಸೊಸೈಟಿಗೆ ದಂಡ

ಧಾರವಾಡ: ಹುಬ್ಬಳ್ಳಿಯ ಗೋಕುಲರಸ್ತೆಯ ನಿವಾಸಿ ಕಮಲಾ ಅಲಮೇಲಕರ್ ಅವರು ಸುಮಾರು 40 ಲಕ್ಷ ಹಣವನ್ನುಬೈಲಹೊಂಗಲದ ಡಾ. ವಿ.ಎಸ್. ಸಾಧುನವರ ನೇತೃತ್ವದ ಕಿತ್ತೂರ ರಾಣಿ ಚೆನ್ನಮ್ಮ ಸೊಸೈಟಿಯಲ್ಲಿ ಹೆಚ್ಚಿನ ಬಡ್ಡಿ ಆಸೆಗಾಗಿ ಠೇವಣಿ ಇಟ್ಟಿದ್ದರು. ಅವರ ಮಗ ಸುಜಯ ಇಂಜಿನಿಯರಿದ್ದು ಅವರು ಸುಮಾರು ರೂ.37 ಲಕ್ಷ ರೂಪಾಯಿ ಅದೇ ಸೊಸೈಟಿಯಲ್ಲಿ ಠೇವಣಿ ಇಟ್ಟಿದ್ದರು. ಅವರಮಗಳು ಸಂಜೀವಿನಿ ಸವನೂರ ಅವರು ಸುಮಾರು 9 ಲಕ್ಷ ಹಣವನ್ನುಅದೇ ಸೊಸೈಟಿಯಲ್ಲಿ ಠೇವಣಿ ಇಟ್ಟಿದ್ದರು. ಠೇವಣಿ ಅವಧಿ ಮುಗಿದರೂ ಡಾ. ವಿ.ಎಸ್. ಸಾಧುನವರ ಸೊಸೈಟಿಯವರು ಠೇವಣಿದಾರರಿಗೆ ಠೇವಣಿ ಹಣ ಅಥವಾ ಬಡ್ಡಿ ಹಿಂದಿರುಗಿಸಲಿಲ್ಲ. ಡಾ. ವಿ. ಎಸ್. ಸಾಧುನವರು ಆ ಸೊಸೈಟಿಗೆ ಅಧ್ಯಕ್ಷರಾಗಿ ತಮ್ಮ ಠೇವಣಿ ಹಣವನ್ನು ಸ್ವಂತಕ್ಕೆ ದುರುಪಯೋಗ ಪಡಿಸಿಕೊಂಡಿದ್ದಾರೆ ಎಂದು ಆಪಾದಿಸಿದ್ದರು. ಅವರ ಮೇಲೆ ಕ್ರಮಕೈಗೊಳ್ಳುವಂತೆ ಗ್ರಾಹಕರ ರಕ್ಷಣಾ ಕಾಯ್ದೆ ಅಡಿ ಆಯೋಗಕ್ಕೆ ಪ್ರತ್ಯೇಕ ದೂರುಗಳನ್ನು ಸಲ್ಲಿಸಿದ್ದರು. ದೂರುಗಳನ್ನು ವಿಚಾರಣೆ ನಡೆಸಿದ ಆಯೋಗದ ಅಧ್ಯಕ್ಷರಾದ ಈಶಪ್ಪಭೂತೆ ಹಾಗೂ ವಿಶಾಲಾಕ್ಷಿ ಅ. ಬೋಳಶೆಟ್ಟಿ ಸದಸ್ಯರು ಮೂರು ಜನ ಠೇವಣಿದಾರರು ಒಂದೇ ಕುಟುಂಬದ ಸದಸ್ಯರಿದ್ದು, ಅವರಿಗೆ ಅವರವರ ಠೇವಣಿ ಹಣ ಮತ್ತುಅದರ ಮೇಲೆ ಶೇ10ರಂತೆ ಠೇವಣಿ ಇಟ್ಟ ದಿನಾಂಕದಿಂದ ಬಡ್ಡಿ ಲೆಕ್ಕಹಾಕಿ ಹಿಂದಿರುಗಿಸುವಂತೆ ಆಯೋಗ ಆದೇಶಿಸಿದೆ. ದೂರುದಾರರಿಗೆ ಆಗಿರುವ ಅನಾನುಕೂಲ, ಆರ್ಥಿಕನಷ್ಟ ಹಾಗೂ ಮಾನಸಿಕ ಹಿಂಸೆಗಾಗಿ ತಲಾ ರೂ.1 ಲಕ್ಷ ರೂಪಾಯಿ ಪರಿಹಾರ ಕೊಡುವಂತೆ ಸೊಸೈಟಿ ಚೇರ್ಮನ್ ವಿರೂಪಾಕ್ಷಿ ಸಾದುನವರ ಅವರಿಗೆ ಆಯೋಗ ನಿರ್ದೇಶಿಸಿದೆ.



ಹುಬ್ಬಳ್ಳಿ: ನಗರದ ಸಿದ್ಧಾರೂಢ ಸ್ವಾಮಿ ಮಠದ ಟ್ರಸ್ಟ್ ಕಮಿಟಿಗೆ ನೂತನವಾಗಿ ಆಯ್ಕೆಯಾದ ಬಾಳು ಮಗಜಿಕೊಂಡಿ ಅವರಿಗೆ ಮಾಜಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಸನ್ಮಾನಿಸಿ ಅಭಿನಂದಿಸಿದರು.

ರಾಷ್ಟ್ರೀಯ ವಿಚಾರ ಸಂಕಿರಣ | ಪ್ರೊ. ಎಂ.ಎಂ.ಶಿಕರೆ ಅಭಿಮತ

ಗಣಿತಶಾಸ್ತ್ರದ ಸಂಶೋಧನೆ ಹೆಚ್ಚಲಿ

ಧಾರವಾಡ: ಗಣಿತಶಾಸ್ತ್ರದಲ್ಲಿ ಹೊಸ ಹೊಸ ಬೆಳವಣಿಗೆ ಆಗಿದ್ದರೂ, ಸಂಶೋಧನೆ ಹೆಚ್ಚೆಚ್ಚು ನಡೆಯಬೇಕಿದೆ ಎಂದು ಇಂಡಿಯನ್ ಮೆಥೆಮೆಟಿಕಲ್ ಸೊಸೈಟಿಯ ಕಾರ್ಯದರ್ಶಿ ಪ್ರೊ. ಎಂ.ಎಂ.ಶಿಕರೆ ಹೇಳಿದರು.

ಕರ್ನಾಟಕ ವಿಶ್ವವಿದ್ಯಾಲಯದ ಸುವರ್ಣ ಮಹೋತ್ಸವ ಭವನದಲ್ಲಿ ಶುಕ್ರವಾರ ನಡೆದ ಗಣಿತಶಾಸ್ತ್ರೀಯ ವಿಜ್ಞಾನಗಳು ಮತ್ತು ಅದರ ಅನ್ವಯಿಕಗಳ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

ವಿಶ್ರಾಂತ ಕುಲಪತಿ ಪ್ರೊ. ಎಚ್.ಬಿ.ವಾಲೀಕಾರ ಮಾತನಾಡಿ, ಗಣಿತ ಒಂದು ಸರಳ ವಿಷಯ. ಗಣಿತ ಸಾಧನೆಗೆ ಕಾರಣವಾದ ನನ್ನ ಗಣಿತ ಶಿಕ್ಷಕರು, ಸಂಶೋಧನಾ ಮಾರ್ಗದರ್ಶಕರಿಗೆ ಋಣಿಯಾಗಿದ್ದಾಗಿ ತಿಳಿಸಿದರು.

ಕವಿವಿ ಮೌಲ್ಯಮಾಪನ ಕುಲಸಚಿವ ಡಾ. ನಿಜಲಿಂಗಪ್ಪ ಮಟ್ಟಿಹಾಳ ಮಾತನಾಡಿ, ನಾಡಿನ ಹಲವು ಗಣಿತ ತಜ್ಞರಲ್ಲಿ ಡಾ.ವಾಲೀಕಾರ ಸಹ ಒಬ್ಬರು. ಆಡಳಿತಾತ್ಮಕ ಸುಧಾರಣೆಯಿಂದ ಕವಿವಿಗೆ ಕೊಡುಗೆ ನೀಡಿದ್ದಾರೆ ಎಂದರು. ಡಾ.ವಾಲೀಕಾರ ಅವರು, ಅನೇಕ ಹುದ್ದೆಗಳು ಭರ್ತಿ ಮಾಡುವ ಮೂಲಕ ಕವಿವಿ ಶಕ್ತಿ ಹೆಚ್ಚಿಸಿದ್ದಾರೆ. ಈ ವಿಷಯದಲ್ಲಿ ಹಲವು ತೊಂದರೆ-ಸವಾಲು ಎದುರಿಸಿದ್ದಾರೆ. ಪ್ರಗತಿಶೀಲ ಸಮಾಜ ನಿರ್ಮಿಸಲು ಶ್ರಮಿಸಿದ್ದಾಗಿ ಹೇಳಿದರು.

ಈ ವೇಳೆ ಸಂಶೋಧನಾ ಲೇಖನಗಳ ಸಂಗ್ರಹದ ಸಂಶೋಧನಾ ನಿಯತಕಾಲಿಕೆ ಬಿಡುಗಡೆ ಮಾಡಲಾಯಿತು. ಗಣಿತಶಾಸ್ತ್ರ, ಸಂಖ್ಯಾಶಾಸ್ತ್ರ ಕಂಪ್ಯೂಟರ್, ವಿಜ್ಞಾನ ವಿಭಾಗಗಳಲ್ಲಿ ವಿವಿಧ ತಾಂತ್ರಿಕ ಗೋಷ್ಠಿಗಳು ಜರುಗಿದವು.

ಪ್ರೊ. ಎ.ಬಿ.ವೇದಮೂರ್ತಿ, ಡಾ.ಸುಭಾಷಚಂದ್ರ ನಾಟೀಕಾರ, ಪ್ರೊ. ನಾಗೇಶ ಎಸ್., ಪ್ರೊ. ಎಸ್.ಸಿ.ಶಿರಾಳಶೆಟ್ಟಿ, ಪ್ರೊ. ಶ್ರೀದೇವಿ, ಪ್ರೊ. ಐ.ಜಿ.ಸನದಿ, ಪ್ರೊ. ಪಿ.ಜಿ.ಪಾಟೀಲ, ಎಚ್.ಬಿ.ವಾಲೀಕಾರ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.



ಗ್ರಾಫ್ ಮಟ್ಟದಲ್ಲಿ ಹೆಚ್ಚಿನ ಸಂಶೋಧನೆ

ಅಂತಾರಾಷ್ಟ್ರೀಯ ಮಟ್ಟಕ್ಕೆ ಗಣಿತದ ಪ್ರಾಮುಖ್ಯತೆ ತಿಳಿಸಬೇಕಿದೆ. ಈ ನಿಟ್ಟಿನಲ್ಲೂ ಕಳೆದ ಆರೇಳು ವರ್ಷದಲ್ಲಿ ಗಣಿತದ ಹಲವು ಮೆಥ್ಯಾಮೇಟಿಕ್ಸ್ ಮ್ಯಾಟ್ರಿಕ್ಸಗಳ ಬಗ್ಗೆ ಸಂಶೋಧಕರು ಬೆಳಕು ಚೆಲ್ಲಿಸಿದ್ದಾಗಿ ಹೇಳಿದ ಇಂಡಿಯನ್ ಮೆಥೆಮೇಟಿಕಲ್ ಸೊಸೈಟಿಯ ಕಾರ್ಯದರ್ಶಿ ಪ್ರೊ. ಎಂ.ಎಂ.ಶಿಕರೆನ ಅವರು, ಗಣಿತಶಾಸ್ತ್ರದ ಪಾಥ್-ಮ್ಯಾಟಮಿಕ್ ಥಿಯರಿ ಕುರಿತು ಹಲವು ಉನ್ನತ ಮಟ್ಟದ ಸಂಶೋಧನಾ ಪ್ರಬಂಧಗಳು ಹೊಸ ರೀತಿಯ ವ್ಯಾಖ್ಯಾನ ನೀಡಿವೆ. ಗ್ರಾಫ್ ಮಟ್ಟದಲ್ಲಿ ಹೆಚ್ಚಿನ ಸಂಶೋಧನೆ ನಡೆದಿವೆ ಎಂದರು.

ಏ.23ರಿಂದ ಲಸಿಕೆ ಅಭಿಯಾನ: ಡಿಸಿ

ಧಾರವಾಡ: ಜಿಲ್ಲೆಯ ದನಕರುಗಳಿಗೆ ಕಾಲುಬಾಯಿ ಲಸಿಕೆ ಶಿಬಿರ ಏ.23ರಿಂದ 22ರವರೆಗೆ ಹಮ್ಮಿಕೊಂಡಿದ್ದು, ಪಶು ಇಲಾಖೆಯ ಅಧಿಕಾರಿಗಳು ಮನೆ ಬಾಗಿಲಿಗೆ ತೆರಳಿ ಜಾನುವಾರುಗಳಿಗೆ ಲಸಿಕೆ ಹಾಕಲಿದ್ದಾರೆ ಎಂದು ಜಿಲ್ಲಾಧಿಕಾರಿ ಸ್ನೇಹಲ್ ಸೂಚಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕೇಂದ್ರ ಪುರಸ್ಕೃತ ರಾಷ್ಟ್ರೀಯ ಕಾಲುಬಾಯಿ ರೋಗ ನಿಯಂತ್ರಣದ ಒಂಬತ್ತನೇಯ ಜಿಲ್ಲಾ ಮೇಲುಸ್ತುವಾರಿ ಸಮಿತಿ ಸಭೆ ನಡೆಸಿದ ಅವರು, ಮೇಲುಸ್ತುವಾರಿ ಸಮಿತಿಯ ಸೂಚನೆ ಪಾಲಿಸಲು ಆದೇಶಿಸಿದರು.

ರೈತರ ಮನೆ ಬಾಗಿಲಲ್ಲಿ ದನ ಮತ್ತು ಎಮ್ಮೆಗಳಿಗೆ ಕಾಲುಬಾಯಿ ಬೇನೆ ಲಸಿಕೆ ಹಾಕಲಾಗುವುದು. ಈ ಕಾರ್ಯಕ್ಕಾಗಿ ಜಿಲ್ಲೆಯಲ್ಲಿ 116 ತಂಡಗಳನ್ನು ರಚಿಸಿದ್ದು, ಪ್ರತಿ ತಂಡದಲ್ಲಿ ಒಬ್ಬರು ಮೇಲ್ವಿಚಾರಕರು, ಇಬ್ಬರು ಲಸಿಕದಾರರು ಇರಲಿದ್ದಾರೆ ಎಂದರು.

ಕೇಂದ್ರ ಪುರಸ್ಕೃತ ಜಾನುವಾರು ರೋಗಗಳ ನಿಯಂತ್ರಣ ಯೋಜನೆ ಅಡಿಯಲ್ಲಿ 2030ರೊಳಗಾಗಿ ದೇಶವನ್ನು ಕಾಲುಬಾಯಿ ಬೇನೆ ಮುಕ್ತಗೊಳಿಸಲು ಸಂಕಲ್ಪ ಮಾಡಿದೆ. ದೇಶದ ದನ, ಎಮ್ಮೆಗಳು ಕಾಲುಬಾಯಿ ಬೇನೆ ಮುಕ್ತಗೊಳಿಸುವುದಾಗಿ ಹೇಳಿದರು.

> **ಜಿಲ್ಲೆಯಲ್ಲಿ 1,36,865 ದನಗಳು, 47,172 ಎಮ್ಮೆಗಳನ್ನು ಲಸಿಕಾಕರಣಕ್ಕೆ ಒಳಪಡಿಸಲಿದೆ. ಪ್ರತಿ 100 ಜಾನುವಾರಗಳಿಗೆ ಒಂದು ಬ್ಲಾಕ್ ನಂತೆ, 1854 ಬ್ಲಾಕ್ ಮಾಡಲಾಗಿದೆ. ಈ ಬ್ಲಾಕ್‌ಗಳನ್ನು ಸಂಪೂರ್ಣ ಲಸಿಕೆಗೆ ಒಳಪಡಿಸಲಿದೆ.**
> ■ **ಸ್ನೇಹಲ್, ಜಿಲ್ಲಾಧಿಕಾರಿ**

ಲಸಿಕಾ ಅಭಿಯಾನ ಕಾರ್ಯಕ್ರಮದಲ್ಲಿ ರೈತರು ತಮ್ಮ ಜಾನುವಾರುಗಳಿಗೆ ಲಸಿಕೆ ಹಾಕಿಸಿ ಶೇ.100 ರಷ್ಟು ಗುರಿ ಸಾಧಿಸಲು ಸಹಕರಿಸಲು ಗ್ರಾಮೀಣ ಭಾಗದಲ್ಲಿ ಹೆಚ್ಚು ಜಾಗೃತಿ ಮೂಡಿಸುವಂತೆ ಪಶು ಇಲಾಖೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸೂಚಿಸಿದರು.

ಸಭೆಯಲ್ಲಿ ಪಶುಪಾಲನೆ-ಪಶುವೈದ್ಯಕೀಯ ಸೇವಾ ಇಲಾಖೆ ಉಪನಿರ್ದೇಶಕ ಡಾ. ಎಸ್.ವಿ.ಸಂತಿ, ಎಲ್ಲ ತಾಲೂಕುಗಳ ಮುಖ್ಯ ಪಶುವೈದ್ಯಾಧಿಕಾರಿಗಳು, ಜಿಲ್ಲಾ ನಗರಾಭಿವೃದ್ಧಿ ಕೋಶದ ಕಾರ್ಯಪಾಲಕ ಅಭಿಯಂತರರು, ಹಾಲು ಒಕ್ಕೂಟದ ಪ್ರತಿನಿಧಿಗಳು ಇದ್ದರು.



ಧಾರವಾಡ: ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಭಾಷಾ ಪತ್ರಿಕೆಗೆ ಅಂಕಗಳ ಬದಲು ಗ್ರೇಡ್ ವ್ಯವಸ್ಥೆ ಜಾರಿಗೆ ತಂದಿರುವ ರಾಜ್ಯ ಸರಕಾರದ ನಿರ್ಧಾರವನ್ನು ಪುನರ್ ಪರಿಶೀಲಿಸುವಂತೆ ಕೋರಿದ್ದ ರಾಜ್ಯಪಾಲರ ನಿರ್ಧಾರವನ್ನು ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾ ಘಟಕದ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.



ಯೋಜನೆಗಳ ಪರಿಣಾಮಕಾರಿ ಅನುಷ್ಠಾನ ಅಗತ್ಯ

ಕುಂದಗೋಳ: ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಪಂಚ ಗ್ಯಾರಂಟಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ ಮತ್ತು ಪ್ರಗತಿಯ ಕುರಿತು ತಾಲೂಕು ಮಟ್ಟದಲ್ಲಿ ಪರಿಣಾಮಕಾರಿಯಾಗಿ ಜಾರಿಗೆ ತರುವ ನಿಟ್ಟಿನಲ್ಲಿ ಅಧಿಕಾರಿಗಳು ನಿಗಾ ವಹಿಸಬೇಕು ಎಂದು ಅಧ್ಯಕ್ಷತೆ ವಹಿಸಿದ್ದ ಪಂಚ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಸತೀಶ ಕೊಬ್ಬಯ್ಯನವರ ಹೇಳಿದರು.

ಅವರು ಪಟ್ಟಣದ ತಾಲೂಕು ಪಂಚಾಯತಿ ಸಭಾಭವನದಲ್ಲಿ ಶುಕ್ರವಾರ ನಡೆದ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿ, ಸರ್ಕಾರ ಜಾರಿಗೆ ತಂದಿರುವ ಗೃಹಲಕ್ಷ್ಮೀ, ಗೃಹಜ್ಯೋತಿ, ಅನ್ನಭಾಗ್ಯ, ಯುವನಿಧಿ ಹಾಗೂ ಶಕ್ತಿ ಯೋಜನೆಗಳು ಜನರಿಗೆ ತಲುಪುವಲ್ಲಿ ಯಾವುದೇ ಅಡಚಣೆ ಆಗಬಾರದು.

ಗ್ಯಾರಂಟಿ ಅಧ್ಯಕ್ಷರು ಮಧ್ಯಪ್ರವೇಶಿಸಿ ಮಾತನಾಡಿ, ತಾಲೂಕಿನಲ್ಲಿ ಸಾಕಷ್ಟು ತಾಂತ್ರಿಕ ಅರ್ಹತೆ ಹೊಂದಿರುವ ಯುವಕರಿದ್ದಾರೆ, ಸ್ಥಳೀಯವಾಗಿ ನೇಮಕಾತಿ ಮಾಡುವ ಕುರಿತು ಇಲಾಖೆ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿ, ಚರ್ಚೆ ನಡೆಸಿದರು.

ತಾ.ಪಂ ಪ್ರಭಾರಿ ಕಾರ್ಯನಿರ್ವಾಹಕ ಅಧಿಕಾರಿ ರೇಖಾ ಗಡ್ಡದವರು, ಸಮಿತಿ ಸದಸ್ಯರಾದ ಅಡಿವೆಪ್ಪ ಹೆಬಸೂರ, ವೈ.ಜಿ ಪಾಟೀಲ, ಗೌಡಪ್ಪ ಪಾಣಿಗಟ್ಟಿ, ಗಿರೀಶ ಮುದಿಗೌಡ್ರ, ಯಲ್ಲಪ್ಪ ಸಿಂಗಣ್ಣವರ, ಶೇಕಪ್ಪ ಹಡಪದ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.



ಬಸ್ ಸೇವೆ ಆರಂಭ

ಶಕ್ತಿ ಯೋಜನೆ ಅಧಿಕಾರಿ ವರದಿ ನೀಡುತ್ತಿರುವ ವೇಳೆ ಇನಾಮಕೊಪ್ಪದಿಂದ ಬೆಟದೂರ ಶಾಲೆಗೆ ಹೋಗುವ ವಿದ್ಯಾರ್ಥಿಗಳಿಗೆ ಸಾರಿಗೆ ಸೌಲಭ್ಯ ಇಲ್ಲದಿರುವುದನ್ನು ಸದಸ್ಯರು ಪ್ರಸ್ತಾಪಿಸಿ, ವಿದ್ಯಾಭ್ಯಾಸಕ್ಕೆ ಅಡಚಣೆ ಉಂಟಾಗುತ್ತಿದೆ. ತಕ್ಷಣ ಬಸ್ ವ್ಯವಸ್ಥೆ ಕಲ್ಪಿಸುವಂತೆ ಕೆಎಸ್ಆರ್‌ಟಿಸಿ ಅಧಿಕಾರಿಗಳಿಗೆ ಆಗ್ರಹಿಸಿದರು.ಇದಕ್ಕೆ ಪ್ರತಿಕ್ರಿಯಿಸಿದ ಅಧಿಕಾರಿ ಜೂನ್ ತಿಂಗಳ ಆರಂಭದೊಳಗೆ ಅಗತ್ಯ ಕ್ರಮ ಕೈಗೊಂಡು ಬಸ್ ಸೇವೆ ಪ್ರಾರಂಭಿಸುವುದಾಗಿ ಹೇಳಿದರು.

- ವಿದ್ಯುತ್ ಸಮಸ್ಯೆ ಕುರಿತು ಚರ್ಚೆ ವೇಳೆ ಸಮಿತಿ ಸದಸ್ಯರು, ಗ್ರಾಮೀಣ ಭಾಗಗಳಲ್ಲಿ ವಿದ್ಯುತ್ ಕಂಬಗಳ ಕೊರತೆ ಹಾಗೂ ದುರಸ್ತಿ ಸಮಸ್ಯೆಗಳ ಬಗ್ಗೆ ಗಮನ ಸೆಳೆದರು
- ಇದಕ್ಕೆ ಪ್ರತಿಕ್ರಿಯಿಸಿದ ಹೆಸ್ಕಾಂ ಅಧಿಕಾರಿ, ನಮ್ಮ ಇಲಾಖೆಯಲ್ಲಿ 24x7 ಕೆಲಸ ನಿರ್ವಹಿಸುತ್ತಿದ್ದು, ಸರಿಯಾಗಿ ರಜೆ ಸಿಗುವುದಿಲ್ಲ, ಸಿಬ್ಬಂದಿ ಕೊರತೆಯಿಂದ ತೊಂದರೆ ಉಂಟಾಗಿದೆ ಎಂದರು

ಬಸವ ಜಯ ಮೃತ್ಯುಂಜಯ ಶ್ರೀಗಳ ಪರವಾಗಿ ನಿಲ್ಲುವೆವು: ಅರವಿಂದ ಕಟಗಿ

ಕುಂದಗೋಳ: ಪಂಚಮಸಾಲಿ ಸಮಾಜದ ಹಿತಾಸಕ್ತಿಗಾಗಿ ಶ್ರಮಿಸುತ್ತಿರುವ ಬಸವ ಜಯ ಮೃತ್ಯುಂಜಯ ಶ್ರೀಗಳ ಪರವಾಗಿ ನಾವು ದೃಢವಾಗಿ ನಿಲ್ಲುತ್ತೇವೆ. ಗೃಹ ಸಚಿವರು ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕು. ಎಲ್ಲಾ ವಿಚಾರಗಳು ಕಾನೂನುಬದ್ಧವಾಗಿ ಸಾಗಬೇಕು. ಯಾವುದೇ ರೀತಿಯ ಷಡ್ಯಂತ್ರ ನಡೆದರೆ ಅದನ್ನು ಎದುರಿಸಲು ನಾವು ಹಿಂಜರಿಯದೆ ಹೋರಾಟಕ್ಕೆ ಇಳಿಯುತ್ತೇವೆ ಎಂದು ಸಮಾಜದ ಮುಖಂಡ ಅರವಿಂದ ಕಟಗಿ ಹೇಳಿದರು.

ಅವರು ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ನಡೆದ ಪತ್ರಕಾಗೋಷ್ಠಿಯಲ್ಲಿ ಮಾತನಾಡಿ, ಪಂಚಮಸಾಲಿ ಸಮಾಜದ ವಿಚಾರದಲ್ಲಿ ಕೆಲವರು ಮಾಡುತ್ತಿರುವ ಹೇಳಿಕೆಗಳು ಸಮಾಜದ ಅಸಮಾಧಾನಕ್ಕೆ ಕಾರಣವಾಗಿವೆ ಎಂದರು. ಸಮಾಜದ ತಾಲೂಕು ಅಧ್ಯಕ್ಷ ನಾಗರಾಜ ದೇಶಪಾಂಡೆ ಮಾತನಾಡಿ, ಶ್ರೀಗಳ ಬಗ್ಗೆ ವಿನಾಕಾರಣ ಮಾತನಾಡುವುದು ಸರಿಯಲ್ಲ, ಕಾನೂನು ಎಲ್ಲರಿಗೂ ಸಮಾನವಾಗಿದೆ. ಗೃಹ ಸಚಿವರು ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕು. ಇಲ್ಲವಾದಲ್ಲಿ ತಾಲೂಕು ಮಟ್ಟದಲ್ಲಿ ಹೋರಾಟ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು. ಕಾರ್ಯದರ್ಶಿ ಬಸವರಾಜ ನಾವಳ್ಳಿ ಮಾತನಾಡಿ, ಪೀಠದಿಂದ ಉಚ್ಚಾಟನೆಗೊಂಡ ಬಳಿಕವೂ ಶ್ರೀಗಳ ಬೆಂಬಲದಲ್ಲಿ ನಿಂತ ಸಮಾಜದವರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿದೆ. ಇದು ಸರ್ಕಾರದಿಂದ ಪಂಚಮಸಾಲಿ ಸಮಾಜಕ್ಕೆ ಆಗುತ್ತಿರುವ ಅನ್ಯಾಯ,ಎಂದು ಆರೋಪಿಸಿದರು. ಇದೇ ವೇಳೆ ವಿಜಯಾನಂದ ಕಾಶಪ್ಪನವರ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿ, ಶ್ರೀಗಳು ಬೇಕಾದಾಗ ಅವರ ಜೊತೆಗೆ ನಿಂತು,ಅವರ ಆಶೀರ್ವಾದದ ಶಾಸಕರಾಗಿ ಮೂರು ವರ್ಷ ಕಳೆದರೂ ಅಧಿವೇಶನದಲ್ಲಿ ಒಮ್ಮೆಯೂ ಕೂಡ 2 ಎ ಮೀಸಲಾತಿ ಕುರಿತು ಧ್ವನಿ ಎತ್ತದೆ ಸಮಾಜಕ್ಕೆ ಅನ್ಯಾಯ ಮಾಡಿದ್ದಾರೆ. ಬೆಳಗಾವಿಯಲ್ಲಿ ಲಾಠಿಚಾರ್ಜ್ ನಡೆದ ಸಂದರ್ಭದಲ್ಲಿ ಸಮಾಜದವರ ಮೇಲೆ ಪ್ರಕರಣಗಳು ದಾಖಲಾಗುತ್ತಿದ್ದಾಗ ಮೌನವಾಗಿದ್ದ ಕಾಶಪ್ಪನವರು, ಈಗ ಬಾಗಲಕೋಟೆಯಲ್ಲಿ ಸಮಾಜದವರೊಂದಿಗೆ ಮಾತನಾಡುತ್ತಿರುವುದು ಏಕೆ? ಎಂದು ಪ್ರಶ್ನಿಸಿದರು. ಮುಖಂಡರಾದ ವೆಂಕನಗೌಡ ಕಂಠೇಪ್ಪಗೌಡ್ರ ಹಾಗೂ ಗುರುಪಾದಪ್ಪ ಬಂಕದ ಕೂಡ ಕಾಶಪ್ಪನವರ ನಡೆಯನ್ನು ತೀವ್ರವಾಗಿ ಖಂಡಿಸಿದರು. ಸಮಾಜದ ಹಿತಾಸಕ್ತಿಗೆ ವಿರುದ್ಧವಾಗಿ ನಡೆಯುವ ಯಾವುದೇ ಕ್ರಮವನ್ನು ಸಹಿಸಲಾಗುವುದಿಲ್ಲ ಎಂದರು. ಇದೇ ಸಂದರ್ಭದಲ್ಲಿ ಬೆಳಗಾವಿ ಲಾಠಿಚಾರ್ಜ್ ವೇಳೆ ತಾಲೂಕಿನ ಏಳು ಜನರ ಮೇಲೆ ದಾಖಲಾಗಿದ್ದ ಪ್ರಕರಣಗಳಿಗೆ ಜಾಮೀನು ನೀಡಿದ ಸಂಶಿ ಗ್ರಾಮದ ಮಂಜುನಾಥ ಕಾಲವಾಡ ಅವರನ್ನು ಸನ್ಮಾನಿಸಲಾಯಿತು. ಹೋರಾಟ ಸಮಿತಿ ಅಧ್ಯಕ್ಷ ಮಲ್ಲಪ್ಪ ಮಾರಡಗಿ, ವೈ.ಎನ್. ಪಾಟೀಲ, ಸಿದ್ದಪ್ಪ ಇಂಗಳಳ್ಳಿ, ಶಂಕರಗೌಡ ಹಿರೇಗೌಡ್ರ, ಜಿ.ಎಸ್. ಯಲಿವಾಳ, ಆರ್.ವಿ. ರಾಮನಗೌಡ್ರ, ಬಸವರಾಜ ಶಿರಸಂಗಿ, ಪ್ರಭುಗೌಡ ಸಂಕಾಗೌಡಶ್ಯಾನಿ, ಯಲ್ಲಪ್ಪ ಸವಣೂರು, ಶಂಭು ನಂದೆಪ್ಪನವರ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಮಗುವಿನ ಸರ್ವಾಂಗೀಣ ಅಭಿವೃದ್ಧಿಗೆ ಶಿಕ್ಷಣವೇ ಅಸ್ತ್ರ: ಪಿಎಸ್ಐ ಉಮಾದೇವಿ

ನವಲಗುಂದ: ತಾಲೂಕಿನ ನಾಗನೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಉರ್ದು ಶಾಲೆಯಲ್ಲಿ 2025 - 26ನೇ ಸಾಲಿನ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ 7ನೇ ತರಗತಿ ಮಕ್ಕಳಿಗೆ ಬೀಳ್ಕೊಡುಗೆ ಸಮಾರಂಭ ನೆರವೇರಿತು.

ಸಮಾರಂಭದ ಉದ್ಘಾಟಿಸಿದ ಅಣ್ಣಿಗೇರಿ ಜನಸ್ನೇಹಿ ಪೊಲೀಸ್ ಠಾಣೆಯ ಪಿಎಸ್ಐ ಉಮಾದೇವಿ ಮಾತನಾಡಿ, ಸಮಾಜ ಮತ್ತು ರಾಷ್ಟ್ರದ ಅಭಿವೃದ್ಧಿಗಾಗಿ ಶಿಕ್ಷಣ ಬಹುದೊಡ್ಡ ಅಸ್ತ್ರ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಡಾ. ಶೌಕತ್ ಅಲಿ ಲಂಬೂನವರ ವಹಿಸಿದ್ದರು. ಐ.ಆಮ್. ಟೇಲರ್ ಎಂದೇ ಖ್ಯಾತಿಯಾದ ಜನಪದ ಕ್ಷೇತ್ರದ ಸಾಧನೆಗಾಗಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಗ್ರಾಮದ ಕಲಾವಿದರಾದ ಇಮಾಮಸಾಬ ವಲ್ಲೆಪ್ಪನವರ, ಶಿಕ್ಷಕರ ಸಂಘದ ಅಧ್ಯಕ್ಷ ಎಸ್ ನೀರಲಗಿ, ಗಣೇಶ ಹೊಳೆಯಣ್ಣವರ ಮಾತನಾಡಿದರು. ಎಂ.ಎಸ್. ಹೊಳೆಯಣ್ಣವರ, ನಿವೃತ್ತ ಶಿಕ್ಷಕ ಎ.ಎಚ್. ಗುಳಗಂದಿ, ಚಮನಸಾಬ, ರುಕ್ಸಾನ ಬೇಗಮ, ಆದಮಸಾಬ ಮೊರಬದ, ಇಮಾಮಸಾಬ ಲಂಬೂನವರ, ಆರ್.ಆರ್. ವೈದ್ಯ, ಎಸ್. ಎಂ. ಬೆಂಚಿಕೇರಿ, ಪಿ.ಪಿ.ಪಾಟೀಲ, ಡಿ.ಎಚ್. ನಾವಳ್ಳಿ, ಆರ್.ಐ. ಉಳ್ಳಾಗಡ್ಡಿ, ಬಿ.ಕೆ.ಹಾಲವರ, ಎಂ.ಎನ್. ವಗ್ಗರ, ಎಸ್.ಹೆಚ್. ಭಜಂತ್ರಿ, ಎಸ್.ಎಸ್. ಅಮಾತ್ಯನವರ ಸೇರಿದಂತೆ ವಿದ್ಯಾರ್ಥಿಗಳು, ಗ್ರಾಮಸ್ಥರು ಇನ್ನಿತರರಿದ್ದರು.



ಜೆಎಸ್ಸೆಸ್ ಎಸ್ಎಂಪಿಯು ಉತ್ತಮ ಸಾಧನೆ

ಧಾರವಾಡ: ಮಾರ್ಚ್ ತಿಂಗಳಲ್ಲಿ ನಡೆದ 2025-26ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಜನತಾ ಶಿಕ್ಷಣ ಸಮಿತಿಯ ಮಂಜುನಾಥೇಶ್ವರ ಕಲಾ-ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಉತ್ತಮ ಸಾಧನೆ ಮಾಡಿದೆ.

ಪರೀಕ್ಷೆಯಲ್ಲಿ 466 ಮಕ್ಕಳಲ್ಲಿ 374 ಮಕ್ಕಳು ಉತ್ತೀರ್ಣರಾಗಿ, ಶೇ.80.26ರಷ್ಟು ಫಲಿತಾಂಶ ದಾಖಲಿಸಿದೆ. ಒಟ್ಟು 54 ಮಕ್ಕಳು ಅತ್ಯುನ್ನತಶ್ರೇಣಿ, 211 ಮಕ್ಕಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಪರೀಕ್ಷೆ ಬರೆದ 254 ಮಕ್ಕಳಲ್ಲಿ 25 ಮಕ್ಕಳು ಅತ್ಯುನ್ನತ ಶ್ರೇಣಿ, 126 ಮಕ್ಕಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿ, ಶೇ.78.74ರಷ್ಟು ಫಲಿತಾಂಶ ದಾಖಲಿಸಿದೆ. ವಾಣಿಜ್ಯ ವಿಭಾಗದಲ್ಲಿ ಪರೀಕ್ಷೆ ಬರೆದ 157 ಮಕ್ಕಳಲ್ಲಿ 23 ಮಕ್ಕಳು ಅತ್ಯುನ್ನತ ಶ್ರೇಣಿ, 66 ಮಕ್ಕಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ, ಶೇ.86.62ರಷ್ಟು ಫಲಿತಾಂಶ ದಾಖಲಿಸಿದೆ. ಕಲಾ ವಿಭಾಗದಲ್ಲಿ ಕಲಾ ವಿಭಾಗದಲ್ಲಿ ಪರೀಕ್ಷೆ ಬರೆದ 55 ಮಕ್ಕಳಲ್ಲಿ 6 ಜನರು ಅತ್ಯುನ್ನತ ಶ್ರೇಣಿ, 19 ಮಕ್ಕಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದು, ಇದೇ ವಿಭಾಗದ ಶ್ರಾವಣಿ ಪಾಟೀಲ ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದಿದ್ದಾಳೆ. ಒಟ್ಟು 8 ವಿದ್ಯಾರ್ಥಿಗಳು ನೂರರಷ್ಟು ಅಂಕಗಳು ಪಡೆದಿದ್ದಾರೆ.



ಕಲಾ ವಿಭಾಗದಲ್ಲಿ ಶ್ರಾವಣಿ ಪಾಟೀಲ ಶೇ.99.16, ವಿದ್ಯಾಶ್ರೀ ಶೇ.97.33, ರಕ್ಷಿತಾ ಶೇ.94.83 ಕ್ರಮವಾಗಿ ಪ್ರಥಮ, ದ್ವಿತೀಯ, ತೃತೀಯ ಸ್ಥಾನ ಪಡೆದಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಶಾಂಭವಿ ಕಂಬಿ ಶೇ.97.83, ಬಿಂದು ಗಾಣಿಗ ಶೇ.94.83, ಲಕ್ಷ್ಮಣರಾವ್ ಚೊಣ್ಣನ್ನವರ ಶೇ.94.16, ಕಲಾ ವಿಭಾಗದಲ್ಲಿ ಡ್ವಿಂಕಲ್ ಪುರೋಹಿತ ಶೇ.96.50, ಸಹನಾ ಸಣ್ಣಪ್ಪನವರ ಶೇ.96.16, ರಿದ್ಧಿ ಮುನೋತ ಶೇ.95.83 ಅಂಕಗಳಿಸಿ ಕ್ರಮವಾಗಿ ಪ್ರಥಮ, ದ್ವಿತೀಯ ತೃತೀಯ ಸ್ಥಾನ ಪಡೆದಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಕಾರ್ಯಾಧ್ಯಕ್ಷ ಡಾ. ಡಿ. ವಿರೇಂದ್ರ ಹೆಗ್ಗಡೆ, ಕಾರ್ಯದರ್ಶಿ ಡಾ.ಅಜಿತ ಪ್ರಸಾದ, ಆಡಳಿತಾಧಿಕಾರಿ ಅರಿಹಂತ ಪ್ರಸಾದ, ಕಾಲೇಜಿನ ಪ್ರಾಚಾರ್ಯ ರವಿವರ್ಮಾ ಜೋಶಿ, ಸಿಬ್ಬಂದಿ ಹರ್ಷವ್ಯಕ್ತಪಡಿಸಿದ್ದಾರೆ.

ಶಿವಾಜಿ ಪಿಯು ಕಾಲೇಜು ಸಾಧನೆ

ಧಾರವಾಡ: ನಗರದ ಮರಾಠಾ ವಿದ್ಯಾಪ್ರಸಾರಕ ಮಂಡಳದ ಶ್ರೀ ಛತ್ರಪತಿ ಶಿವಾಜಿ ಪದವಿಪೂರ್ವ ಮಹಾವಿದ್ಯಾಲಯ ಕಳೆದ ಮಾರ್ಚ್ ತಿಂಗಳಲ್ಲಿ ನಡೆದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದೆ.

ಕಲಾ ವಿಭಾಗದಲ್ಲಿ ಕೀರ್ತಿ ಇಂಗನಹಳ್ಳಿ ಶೇ.88, ಸಂಜನಾ ಗುಡಸಲಮನಿ ಶೇ.87, ಸ್ನೇಹಾ ಗುಡಸಲಮನಿ ಶೇ.87ರಷ್ಟು ಅಂಕಗಳಿಸಿ ಕಾಲೇಜಿಗೆ ಕ್ರಮವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಹರ್ಷ ಹನುಮಸಾಗ ಶೇ.94, ಮಲ್ಲಿಕಾರ್ಜುನ ಅಂಬೂರಿ ಶೇ. 92.16, ಶ್ರೀಕಾಂತ ಗುರವಾಲೆ ಶೇ.92ರಷ್ಟು ಅಂಕಗಳಿಸಿ ಕಾಲೇಜಿಗೆ ಕ್ರಮವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಗಣೇಶ ಸಂಬೋಜಿ ಶೇ.85, ಕಲಾವತಿ ಕುರಾಡೆ ಶೇ.73, ಲಕ್ಷ್ಮೀ ತುರಮರಿ ಶೇ.68ರಷ್ಟು ಅಂಕಗಳಿಸಿ ಕಾಲೇಜಿಗೆ ಕ್ರಮವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಅಧ್ಯಕ್ಷ ಎಂ.ಎನ್.ಮೋರೆ, ಉಪಾಧ್ಯಕ್ಷ ಯಲ್ಲಪ್ಪ ಚವ್ಹಾಣ, ಕಾರ್ಯಾಧ್ಯಕ್ಷ ಸುನೀಲ ಮೋರೆ, ಕಾರ್ಯದರ್ಶಿ ರಾಜು ಬಿರಜೆನವರ, ನಿರ್ದೇಶಕರು, ಪ್ರಾಚಾರ್ಯರು, ಸಿಬ್ಬಂದಿ ಹರ್ಷವ್ಯಕ್ತಪಡಿಸಿದ್ದಾರೆ.



ಶೇ.100ರಷ್ಟು ಫಲಿತಾಂಶ

ಹುಬ್ಬಳ್ಳಿ: ಗೋಕುಲ್ ರಸ್ತೆಯ ವಾಸವಿ ನಗರದಲ್ಲಿರುವ ಹುಬ್ಬಳ್ಳಿ-ಧಾರವಾಡ ಬಂಟರ ಸಂಘದ ಆರ್.ಎನ್.ಎಸ್. ವಿದ್ಯಾನಿಕೇತನ ವಾಣಿಜ್ಯ ಕಾಲೇಜು ಪ್ರಥಮ ಬ್ಯಾಚ್‌ನ ವಿದ್ಯಾರ್ಥಿಗಳು ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಶೇ.100 ಫಲಿತಾಂಶ ಬಂದಿದೆ.

ವಿದ್ಯಾರ್ಥಿಗಳಾದ ಸೃಷ್ಟಿ ಬೆಳಂಕರ, ಕಾವೇರಿ ಬಡಿಗೇರ, ಪ್ರತಿಭಾ ಪಾಟೀಲ, ಸಂಜನಾ ಅರಕೇರಿ ಅವರು ಕಾಲೇಜಿಗೆ ಪ್ರಥಮ ಸ್ಥಾನ ತರುವುದರ ಜೊತೆಗೆ ಕಾಲೇಜಿನ ಹೆಗ್ಗಳಿಕೆಯನ್ನು ಹೆಚ್ಚಿಸಿದ್ದಾರೆ. ಇವರನ್ನು ಕಾಲೇಜಿನ ಆಡಳಿತ ಮಂಡಳಿ, ಪ್ರಾಶುಂಪಾಲರು ಹಾಗೂ ಸಿಬ್ಬಂದಿ ಅಭಿನಂದಿಸಿದ್ದಾರೆ.



ಇಂದು ಫೇಸ್ ಸ್ಟ್ರೆಂಥ್ ಸಮಾರಂಭ

ಹುಬ್ಬಳ್ಳಿ: ರೋಟರಿ ಕ್ಲಬ್ ಆಫ್ ಸೆಂಟ್ರಲ್ ವತಿಯಿಂದ ಏ.11 ರಂದು ಸಂಜೆ4.30ಕ್ಕೆ ದೇಶಪಾಂಡೆ ನಗರದ ಸವಾಯಿ ಗಂಧರ್ವ ಭವನದಲ್ಲಿ ಫಸ್ಟ್ ಎವರ್ ಬಿಯರ್ಡ್ ಸ್ಪರ್ಧೆಯಾದ ಫೇಸ್ ಸ್ಟ್ರೆಂಥ್ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಪುರುಷರ ಮಾನಸಿಕ ಆರೋಗ್ಯ ಮತ್ತು ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸುವ ಗುರಿಯನ್ನು ಹೊಂದಿದೆ. ಆಕರ್ಷಕ ಮತ್ತು ರೋಮಾಂಚಕ ವೇದಿಕೆಯ ಮೂಲಕ ಅರ್ಥಪೂರ್ಣ ಆಚರಿಸಲು ನಿರ್ಧರಿಸಲಾಗಿದೆ. ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತರಾದವರಿಗೆ ಆಕರ್ಷಕ ಬಹುಮಾನ ನೀಡಲಾಗುತ್ತದೆ. ಮಿಸ್ಟರ್ ಬಿಯರ್ಡ್ 2026 15 ಸಾವಿರ, ರನ್ನರ್‌ಅಪ್ ಮಿಸ್ಟರ್ ಬಿಯರ್ಡೊ 2026 10 ಸಾವಿರ, ಸ್ಟಾಲ್ ಪೆಪ್ಪರ್ ಲುಕ್, ಬೆಸ್ಟ್ ಮೀಸೆ, ಬೆಸ್ಟೈಲ್ ಬಿಯರ್ಡ್, ಬೆಸ್ಟ್ ಫುಲ್ ಬಿಯರ್ಡ್ ಹಾಗೂ ಬಿಯರ್ಡ್ ರೂಕಿಗಳಿಗೆ ಪ್ರಶಸ್ತಿ ವಿತರಿಸಲಾಗುವುದು. ನಟ ಮತ್ತು ರೂಪದರ್ಶಿ ಪರಾಸ್ ರಾಥೋಡ್ ಮತ್ತು ರೂಪದರ್ಶಿ ಮತ್ತು ನರ್ತಕಿ ಶ್ರುತಿ ಹೆಗ್ಡೆ ಭಾಗವಹಿಸುವರು ಎಂದು ಪ್ರಕಟಣೆಗೆ ತಿಳಿಸಿದ್ದಾರೆ.

ಉಚಿತ ನೇತ್ರ ತಪಾಸಣೆ ಇಂದು

ಅಳ್ನಾವರ: ಸಮೀಪದ ಡೋರಿ ಗ್ರಾಮದಲ್ಲಿ ಅರವಟಗಿ ವಿವಿದೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ಸದಸ್ಯರಿಗಾಗಿ ಕಣ್ಣಿನ ಉಚಿತ ತಪಾಸಣಾ ಶಿಬಿರವನ್ನು ಏ.11 ರಂದು ಬೆಳಗ್ಗೆ 1030 ರಿಂದ ಏರ್ಪಡಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಶಿವಾನಂದ ಹಿರೇಮಠ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹುಬ್ಬಳ್ಳಿ
ಶನಿವಾರ, 11 ಏಪ್ರಿಲ್ 2026
ಸಂಪುಟ 16, ಸಂಚಿಕೆ 17, ಪುಟಗಳು 14
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ ₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಮಥುರಾ: ದೋಣಿ ಮುಳುಗಿ 10 ಜನ ಸಾವು | ೦೭ | ಏರ್ ಡ್ರಾಪ್ ಟೆಸ್ಟ್ ಯಶಸ್ವಿ | ೦೭ | ಗ್ಯಾಸ್ ಮಾದರಿ ವಿದ್ಯುತ್ ಜ್ವಾಲೆ ಸ್ಟೌ: ಜೋಶಿ | ೦೫

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ನವಮಿ, ನಕ್ಷತ್ರ: ಉತ್ತರಾಷಾಢ

ದಿನದ ಮಾತು

ಸುಖ ದುಃಖಗಳೆರಡನ್ನು ಅರಿಯದವನು ಜ್ಞಾನಿ ಎನಿಸಲಾರ.

▲ಲಾವೋತ್ಸೆ

ಹಸ್ತದಲ್ಲಿ ಸೂರ್ಯ ರೇಖೆ

ಪೂರ್ಣ ಪರಿಪೂರ್ಣ

• ಪೂರ್ಣಪ್ರಜ್ಞ ಬೇಳೂರು

• ಪುಟ ೬

ಕಿರುಸುದ್ದಿ

ಸರ್ಕಾರಿ ಕಟ್ಟಡಗಳಿಂದ ಸೇವಾ ತೆರಿಗೆ ವಸೂಲಿ

• **ಬೆಂಗಳೂರು:** ವಿಧಾನಸೌಧ ಸೇರಿದಂತೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ(ಜಿಬಿಎ) ಐದು ನಗರ ಪಾಲಿಕೆಗಳಲ್ಲಿನ ಸರ್ಕಾರಿ ಕಟ್ಟಡಗಳಿಂದ ಬಾಕಿ ಇರುವ ಸೇವಾ ತೆರಿಗೆ ವಿಚಾರವಾಗಿ ಪರಿಶೀಲಿಸಿ ಅಗತ್ಯ ಕ್ರಮಕ್ಕೆಗೊಳ್ಳುವಂತೆ ಜಿಬಿಎ ಮುಖ್ಯ ಆಯುಕ್ತರು ಪಾಲಿಕೆಗಳಿಗೆ ಸೂಚನೆ ನೀಡಿದ್ದಾರೆ. ಜಿಬಿಎ ವ್ಯಾಪ್ತಿಯಲ್ಲಿರುವ ಸರ್ಕಾರಿ ಕಟ್ಟಡಗಳಿಂದ ಬಾಕಿ ಇರುವ ಸುಮಾರು 473 ಕೋಟಿ ರೂ. ಸೇವಾ ತೆರಿಗೆ ವಸೂಲಿಗೆ ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಐದು ಪಾಲಿಕೆಗಳ ಆಯುಕ್ತರಿಗೆ ಜಿಬಿಎ ಮುಖ್ಯ ಆಯುಕ್ತರು ಕಚೇರಿ ಟಿಪ್ಪಣಿ ಹೊರಡಿಸಿದ್ದಾರೆ. ಪುಟ ೪

ಗುಡ್ಡ ಕುಸಿದು ಕಾರ್ಮಿಕರ ಸಾವು; ಪರಿಹಾರ ಘೋಷಣೆ

• **ಶಿವಮೊಗ್ಗ:** ಜಿಲ್ಲೆಯ ಹೊಸನಗರ ತಾಲೂಕಿನ ಹುಲಿಕಲ್ ಘಾಟ್‌ನಲ್ಲಿ ತಡೆಗೋಡೆ ನಿರ್ಮಾಣ ಕಾಮಗಾರಿ ವೇಳೆ ಗುರುವಾರ ಗುಡ್ಡ ಕುಸಿದು ಮೂವರು ಕಾರ್ಮಿಕರು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಮೃತ ಕಾರ್ಮಿಕರನ್ನು ರಾಘವೇಂದ್ರ(37), ರಾಜು(30) ಮತ್ತು ಶಬ್ಬೀರ್(40) ಎಂದು ಗುರುತಿಸಲಾಗಿದೆ. ಮೃತರ ಕುಟುಂಬ ಸದಸ್ಯರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ತಲಾ 5 ಲಕ್ಷ ರೂ. ಪರಿಹಾರ ಘೋಷಿಸಿದ್ದಾರೆ. ಪುಟ ೪

ಪಾಕಿಸ್ತಾನ ಬೆಂಬಲಿತ 11 ಶಂಕಿತ ಉಗ್ರರ ಬಂಧನ

• ಪುಟ ೭

ಅರ್ಜಿದಾರರಿಗೆ 1 ಲಕ್ಷ ರೂ. ದಂಡ ವಿಧಿಸಿದ ಹೈಕೋರ್ಟ್

• ಪುಟ ೫

ಮಹಾಭಿಯೋಗ ಭೀತಿ ನ್ಯಾ.ವರ್ಮಾ ರಾಜೀನಾಮೆ

• ಪುಟ ೭

ಸಿಡಬ್ಲ್ಯುಸಿ ಸಭೆ: ಮಹಿಳಾ ಮೀಸಲಾತಿ ಕಾಯ್ದೆ ಬಗ್ಗೆ ಚರ್ಚೆ

• ಪುಟ ೭

ಉತ್ತರ ಪ್ರದೇಶ ಅಂತಿಮ ಪಟ್ಟಿಗೆ 84 ಲಕ್ಷ ಮತದಾರರು ಸೇರ್ಪಡೆ

• ಪುಟ ೭

ಜೆ.ಡಿ. ವ್ಯಾನ್ಸ್ ಹೊರಟಿದ್ದರೂ ಇರಾನ್ ಸುದ್ದಿಯೇ ಇಲ್ಲ

ಮುಗಿಯದ ರಗಳೆ



• **ಇಸ್ಲಾಮಾಬಾದ್:** ಪಶ್ಚಿಮ ಏಷ್ಯಾದ ಉದ್ವಿಗ್ನತೆಗೆ ತೆರೆ ಎಳೆಯುವ ನಿರ್ಣಾಯಕ ರಾಜತಾಂತ್ರಿಕ ಪ್ರಯತ್ನವಾಗಿ ಕಾಣಲಾಗುತ್ತಿರುವ ಅಮೆರಿಕ-ಇರಾನ್ ಶಾಂತಿ ಮಾತುಕತೆಗೆ ಅಮೆರಿಕದ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಪಾಕಿಸ್ತಾನಕ್ಕೆ ಆಗಮಿಸುತ್ತಿದ್ದು, ಇರಾನ್ ಪ್ರತಿನಿಧಿ ಮಂಡಳಿಯ ಆಗಮನದ ಕುರಿತು ಇನ್ನೂ ಅನಿಶ್ಚಿತತೆ ಮುಂದುವರಿದಿದೆ. ಈ ಬೆಳವಣಿಗೆಯ ನಡುವೆ ಇಸ್ಲಾಮಾಬಾದ್‌ನ್ನು ಕಟ್ಟುನಿಟ್ಟಿನ ಭದ್ರತಾ ವಲಯಕ್ಕೆ ಒಳಪಡಿಸಲಾಗಿದೆ. ಎರಡು ವಾರಗಳ ಯುದ್ಧ ವಿರಾಮ ಘೋಷಿಸಿದ್ದ ಪಾಕಿಸ್ತಾನದ ಪ್ರಧಾನಿ ಶಹಬಾಜ್ ಷರೀಫ್, ಅಮೆರಿಕ ಮತ್ತು ಇರಾನ್ ನಡುವಿನ ಮಹತ್ವದ ಮಾತುಕತೆ ಪಾಕಿಸ್ತಾನದ ರಾಜಧಾನಿಯಲ್ಲಿ ನಡೆಯಲಿದೆ ಎಂದು ಪ್ರಕಟಿಸಿದ್ದರು.

ಪಾಕ್‌ಗೆ ತೆರಳುವ ಮುನ್ನ ವ್ಯಾನ್ಸ್ ಕಠಿಣ ಸಂದೇಶ ರವಾನಿಸಿದ್ದು, 'ಇರಾನ್ ಉತ್ತಮ ಸಂಕಲ್ಪದಿಂದ ಬಂದರೆ ಅಮೆರಿಕ ಮಾತುಕತೆಗೆ ಸಿದ್ಧ; ಆದರೆ ನಮ್ಮ ಜತೆ ಆಟವಾಡಲು ಬಯಸಿದರೆ ನಮ್ಮ ಪ್ರತಿಕ್ರಿಯೆ ಗಟ್ಟಿಯಾಗಿರಲಿದೆ' ಎಂದು ಎಚ್ಚರಿಸಿದರು.

ಇದಕ್ಕೆ ಪ್ರತಿಯಾಗಿ, ಲೆಬನಾನ್ ಮೇಲಿನ ಇಸ್ರೇಲ್ ದಾಳಿ ತಕ್ಷಣ ನಿಲ್ಲದಿದ್ದರೆ ಮಾತುಕತೆಯಿಂದ ಹಿಂದೆ ಸರಿಯುವುದಾಗಿ ಇರಾನ್ ಘೋಷಿಸಿದೆ. ಇರಾನ್ ಸಂಸತ್ ಸ್ಪೀಕರ್ ಮೊಹಮ್ಮದ್ ಬಘೇರ್ ಘಾಲಿಬಫ್, 'ಲೆಬನಾನ್ ಯುದ್ಧ ವಿರಾಮ ಮತ್ತು ಇರಾನ್‌ನ ಸ್ಥಗಿತ ಆಸ್ತಿಗಳ ಬಿಡುಗಡೆ ಆಗುವವರೆಗೂ ಮಾತುಕತೆ ಆರಂಭವೇ ಇಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ. ಪುಟ ೪

ಜಗತ್ತಿನ ಕಣ್ಣು ಪಾಕ್ ಮೇಲೆ

ಈ ಮಾತುಕತೆಯ ಫಲಿತಾಂಶ ಪಶ್ಚಿಮ ಏಷ್ಯಾದ ಭದ್ರತೆ, ಜಾಗತಿಕ ತೈಲ ಮಾರುಕಟ್ಟೆ ಹಾಗೂ ಅಂತಾರಾಷ್ಟ್ರೀಯ ರಾಜತಾಂತ್ರಿಕ ಸಮೀಕರಣಗಳನ್ನು ನಿರ್ಧರಿಸಬಹುದಾದ ಮಹತ್ವದ್ದಾಗಿರುವುದರಿಂದ ವಿಶ್ವದ ಗಮನ ಈಗ ಇಸ್ಲಾಮಾಬಾದ್ ಕಡೆ ನೆಟ್ಟಿದೆ.

ಡೊನಾಲ್ಡ್ ಟ್ರಂಪ್‌ಗೆ ಟೆನ್ಶನ್ • ಪುಟ ೪





» ಪಶ್ಚಿಮ ಏಷ್ಯಾ ಉದ್ವಿಗ್ನತೆ ತಣಿಸುವ ನಿರ್ಣಾಯಕ ಕ್ಷಣ

» ಲೆಬನಾನ್ ದಾಳಿ ನಿಲ್ಲದಿದ್ದರೆ ಹಿಂದೆ ಸರಿಯುವ ಎಚ್ಚರಿಕೆ ನೀಡಿದ ಇರಾನ್

ಇಸ್ಲಾಮಾಬಾದ್‌ನಲ್ಲಿ 2 ದಿನಗಳ ಲಾಕ್‌ಡೌನ್

ಮಾತುಕತೆ ಹಿನ್ನೆಲೆ ರಾಜಧಾನಿಯಲ್ಲಿ ರೆಡ್ ಅಲರ್ಟ್ ಜಾರಿಗೊಂಡಿದ್ದು, 10,000ಕ್ಕೂ ಅಧಿಕ ಭದ್ರತಾ ಸಿಬ್ಬಂದಿ ನಿಯೋಜಿಸಲಾಗಿದೆ. ಸೇನೆ, ರೇಂಜರ್ಸ್ ಹಾಗೂ ಪೊಲೀಸ್ ಪಡೆಗಳ ಸಹಾಯದಿಂದ ರೆಡ್ ಝೋನ್ ಸಂಪೂರ್ಣ ಸೀಲ್ ಮಾಡಲಾಗಿದೆ. ಕೇವಲ ಅಧಿಕೃತ ಅಧಿಕಾರಿಗಳು ಮತ್ತು ಈ ಸ್ಥಳಗಳಲ್ಲಿ ವಾಸ ಮಾಡುತ್ತಿರುವ ಮಂದಿಗೆ ಪ್ರವೇಶ ನೀಡಲಾಗಿದೆ. ಇಡೀ ಇಸ್ಲಾಮಾಬಾದ್‌ನಲ್ಲಿ ಎರಡು ದಿನಗಳ ಲಾಕ್‌ಡೌನ್ ಘೋಷಿಸಲಾಗಿದೆ.

ನಿತ್ಯ 15 ಶಿಪ್‌ಗೆ ಒಪ್ಪಿಗೆ

ಇಸ್ರೇಲ್‌ನಿಂದ ಲೆಬನಾನ್ ಮೇಲೆ ದಾಳಿ ಮುಂದುವರಿದಿರುವಂತೆಯೇ, ಇರಾನ್ ಹಾರ್ಮುಜ್ ಜಲಸಂಧಿಯನ್ನು ಮತ್ತೆ ಮುಚ್ಚಿದೆ. ಅಲ್ಲದೆ, ಮುಂದೆಯೂ ದಿನಕ್ಕೆ ಕೇವಲ 15 ಶಿಪ್‌ಗಳಿಗಷ್ಟೇ ಇಲ್ಲಿಂದ ತೆರಳಲು ಅವಕಾಶ ನೀಡುವುದಾಗಿ ಅದು ಹೇಳಿದೆ. ಅಮೆರಿಕ ಮತ್ತು ಇರಾನ್ ದೇಶಗಳು ಕದನ ವಿರಾಮ ಘೋಷಿಸಿದ್ದರೂ, ಇಸ್ರೇಲ್ ಲೆಬನಾನ್ ಮೇಲೆ ದಾಳಿ ಮುಂದುವರಿಸಿತ್ತು. ಸಿಟ್ಟಿಗೆದ್ದಿದ್ದ ಇರಾನ್, ಶಾಂತಿ ಮಾತುಕತೆಗೆ ಬರುವುದಿಲ್ಲ ಎಂಬ ಎಚ್ಚರಿಕೆ ನೀಡಿತ್ತು.

ಮಾತುಕತೆ ವಿಫಲವಾದರೆ ಮತ್ತೊಮ್ಮೆ ದಾಳಿ: ಟ್ರಂಪ್

• **ವಾಷಿಂಗ್ಟನ್/ಇಸ್ಲಾಮಾಬಾದ್:** ಮಾತುಕತೆ ವಿಫಲವಾದರೆ ಹೊಸ ದಾಳಿಗಳನ್ನು ನಡೆಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.ಅಮೆರಿಕದ ಯುದ್ಧನೌಕೆಗಳಿಗೆ ಹೊಸದಾಗಿ ಶಸ್ತ್ರಾಸ್ತ್ರಗಳನ್ನು ತುಂಬಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ. ಪಾಕಿಸ್ತಾನದಲ್ಲಿ ನಡೆಯಲಿರುವ ಮಾತುಕತೆಗಳು ಯಾವುದೇ ಒಪ್ಪಂದಕ್ಕೆ ದಾರಿ ಮಾಡಿಕೊಡದಿದ್ದರೆ, ಈ ಶಸ್ತ್ರಾಸ್ತ್ರಗಳನ್ನು ಪರಿಣಾಮಕಾರಿಯಾಗಿ ಬಳಸಲಾಗುವುದು ಎಂದು ಟ್ರಂಪ್ ಹೇಳಿದ್ದಾರೆ. 'ನಾವು ಒಂದು ಹೊಸ ಆರಂಭವನ್ನು ಮಾಡುತ್ತಿದ್ದೇವೆ. ನಮ್ಮ ನೌಕೆಗಳನ್ನು ಅತ್ಯುತ್ತಮ ಗುಂಡುಮದ್ದು ಮತ್ತು ಶಸ್ತ್ರಾಸ್ತ್ರಗಳಿಂದ ತುಂಬುತ್ತಿದ್ದೇವೆ. ಹಿಂದಿನದಕ್ಕಿಂತಲೂ ಹೆಚ್ಚು ಶಕ್ತಿಶಾಲಿ ಸಜ್ಜುಗೊಳಿಸಿದ್ದೇವೆ,' ಎಂದು ಅವರು ನ್ಯೂಯಾರ್ಕ್ ಪೋಸ್ಟ್‌ಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ. 'ಒಪ್ಪಂದವಾಗದಿದ್ದರೆ, ನಾವು ಅವನ್ನು ಅತ್ಯಂತ ಪರಿಣಾಮಕಾರಿಯಾಗಿ ಬಳಸುತ್ತೇವೆ,' ಎಂದು ಅವರು ಎಚ್ಚರಿಸಿದ್ದಾರೆ. ಇದಕ್ಕೂ ಮೊದಲು, ತಮ್ಮ ಸಾಮಾಜಿಕ ಜಾಲತಾಣ ಟ್ರುಥ್ ಸೋಶಿಯಲ್ ನಲ್ಲಿ ಟ್ರಂಪ್ 'ವಿಶ್ವದ ಅತ್ಯಂತ ಶಕ್ತಿಶಾಲಿ ರೀಸೆಟ್' ಎಂಬ ಸಂಕ್ಷಿಪ್ತ ಸಂದೇಶವನ್ನು ಹಂಚಿಕೊಂಡಿದ್ದರು.

ಜೆಡಿಎಸ್‌ಗೆ 25 ವರ್ಷ ಹಿನ್ನೆಲೆ ಕಾರ್ಯಕ್ರಮ

ಬೆಳ್ಳಿ ಹಬ್ಬದ ಜನತಾ ಸಮಾವೇಶ ಇಂದು



• **ಬೆಂಗಳೂರು:** ಜನತಾದಳ(ಜಾತ್ಯಾತೀತ) ಪಕ್ಷ ಉದಯವಾಗಿ 25 ವರ್ಷವಾದ ಹಿನ್ನೆಲೆಯಲ್ಲಿ ಬೆಳ್ಳಿ ಹಬ್ಬದ ಸಂಭ್ರಮ ಜನತಾ ಸಮಾವೇಶವನ್ನು ಆಯೋಜಿಸಲಾಗಿದ್ದು, ಜೆಡಿಎಸ್ ಘಟಾನುಘಟಿ ನಾಯಕರು ಪಾಲ್ಗೊಳ್ಳಲಿದ್ದಾರೆ.



ಕೆಂಗೇರಿ ಹತ್ತಿರವಿರುವ ಕೊಮ್ಮಘಟ್ಟ ನೈಸ್ ಗ್ರೌಂಡ್‌ನಲ್ಲಿ ಶನಿವಾರ(ಏ.11) ಬೆಳಗ್ಗೆ 10.30ಕ್ಕೆ ನಡೆಯಲಿರುವ ಈ ಬೆಳ್ಳಿ ಹಬ್ಬ ಜನತಾ ಸಮಾವೇಶದಲ್ಲಿ ಲಕ್ಷಾಂತರ ಕಾರ್ಯಕರ್ತರನ್ನು ಸೇರಿಸಲು ಸಿದ್ಧತೆ ನಡೆಸಲಾಗಿದೆ. ವಿಶೇಷವಾಗಿ ಮುಂಬರು ಜಿಬಿಎ ಚುನಾವಣೆಗೆ ಎನ್‌ಡಿಎ ಮಿತ್ರ ಪಕ್ಷವಾದ ಜನತಾದಳ ನಿಲುವು ಏನೆಂದು ಕಾರ್ಯಕರ್ತರಿಗೆ ತಿಳಿಸಿ ಈಗಿನಿಂದಲೇ ಪಕ್ಷ ಸಂಘಟನೆ ಮಾಡಿ ತಯಾರಾಗಿ ಎಂಬ ಕರೆ ಕೊಡಲಿದ್ದಾರೆ. ಸ್ಥಳೀಯ ಸಂಸ್ಥೆಗಳ ಚುನಾವಣೆ ಹಿನ್ನೆಲೆಯಲ್ಲಿ ರಾಜ್ಯದ ಎಂಟು ಕಡೆ ಸಮಾವೇಶಗಳನ್ನು ಆಯೋಜಿಸಲಾಗುತ್ತಿದ್ದು, ಶನಿವಾರ ಬೆಂಗಳೂರಿನಿಂದ ಆರಂಭವಾಗಲಿದೆ. ಪುಟ ೪

ಬೆಂಗಳೂರು ನಗರಕ್ಕೆ ದೇವೇಗೌಡರು ಮತ್ತು ಕುಮಾರಸ್ವಾಮಿ ಅವರ ಕೊಡುಗೆ ಅಪಾರವಾಗಿದೆ. ಬೆಂಗಳೂರು ನಗರದಲ್ಲಿ ಜೆಡಿಎಸ್ ಶಕ್ತಿ ಕುಂದಿದೆ ಎಂದು ಕಾಂಗ್ರೆಸ್‌ನ ಕೆಲವರು ಹೇಳುತ್ತಿದ್ದಾರೆ. ಅವರಿಗೆ ಜಿಬಿಎ ಚುನಾವಣೆ ನಂತರ ಉತ್ತರ ನೀಡುತ್ತೇನೆ.

■ **ನಿಖಿಲ್ ಕುಮಾರಸ್ವಾಮಿ,** ಜೆಡಿಎಸ್ ಯುವ ಘಟಕದ ಅಧ್ಯಕ್ಷ

ಸಮಾವೇಶಕ್ಕೆ 1 ಲಕ್ಷಕ್ಕೂ ಅಧಿಕ ಜನ

ಸಮಾವೇಶದ ಪೂರ್ವಸಿದ್ಧತೆ ಪರಿಶೀಲನೆ ನಡೆಸಲು ಶುಕ್ರವಾರ ಸ್ಥಳಕ್ಕೆ ಆಗಮಿಸಿದ್ದ ನಿಖಿಲ್ ಕುಮಾರ್ ಅವರು, ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜನತಾ ಸಮಾವೇಶ ಹೊಸ ನಾಯಕತ್ವಕ್ಕೆ ಹೊಸ ಹುರುಪು ತುಂಬಲಿದೆ. 1 ಲಕ್ಷಕ್ಕೂ ಅಧಿಕ ಜನರು ಭಾಗವಹಿಸುವ ವಿಶ್ವಾಸವಿದೆ. ದೇವೇಗೌಡರು ಸಮಾವೇಶ ಉದ್ಘಾಟನೆ ಮಾಡಲಿದ್ದಾರೆ ಎಂದು ತಿಳಿಸಿದರು.ಜಿಬಿಎ ಚುನಾವಣೆ ಹಿನ್ನೆಲೆ ಪಕ್ಷವನ್ನು ಸಂಘಟಿತಗೊಳಿಸುವ ಕಾರ್ಯ ನಡೆಯುತ್ತಿದೆ. ಮಾಜಿ ಪ್ರಧಾನಮಂತ್ರಿ ದೇವೇಗೌಡ ಹಾಗೂ ಎಚ್.ಡಿ. ಕುಮಾರಸ್ವಾಮಿ ಅವರು ಸಿಎಂ ಆಗಿದ್ದ ಅವಧಿಯಲ್ಲಿ ಬೆಂಗಳೂರಿಗೆ ನೀಡಿದ ಕೊಡುಗೆಗಳನ್ನು ಜನರಿಗೆ ತಿಳಿಸಲಾಗುವುದು ಎಂದು ತಿಳಿಸಿದ್ದಾರೆ. ಜಿಬಿಎ ಚುನಾವಣೆಯಲ್ಲೂ ಹೆಚ್ಚಿನ ಸದಸ್ಯರನ್ನು ಹೊಂದುವ ಗುರಿಯೊಂದಿಗೆ ಪಕ್ಷ ಸಂಘಟನೆ ಬಲಪಡಿಸಲು ಈ ಸಮಾವೇಶಗಳು ನೆರವಾಗಲಿವೆ. ಬೆಂಗಳೂರಿನಲ್ಲಿ ಜೆಡಿಎಸ್ ಶಕ್ತಿ ಕುಂದಿದೆ ಎಂಬ ಟೀಕೆಗಳಿಗೆ ಉತ್ತರವಾಗಿ, ಪಕ್ಷ ಸಂಘಟನೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ ಎಂದು ತಿಳಿಸಿದರು. ವಿಧಾನ ಪರಿಷತ್ ಸದಸ್ಯರಾದ ಶರವಣ, ಟಿ.ಎನ್. ಜವರಾಯಿಗೌಡ, ಮಾಜಿ ಶಾಸಕರಾದ ವೈ.ಎಸ್.ವಿ.ದತ್ತ, ಕೃಷ್ಣಾರೆಡ್ಡಿ, ಮುಖಂಡರಾದ ಚೇತನ್ ಗೌಡ, ಎಸ್. ಕೇಶವ ಮೂರ್ತಿ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಪತ್ರಕರ್ತ, ಲೇಖಕ, ಚಿಂತಕ, ವಿಮರ್ಶಕ, ಪರಿಸರ ಹೋರಾಟಗಾರ

ನಾಡೋಜ ಡಾ.ರಾಮಸ್ವಾಮಿ ನಿಧನ

• **ಬೆಂಗಳೂರು:** ಪತ್ರಕರ್ತ, ಲೇಖಕ, ಚಿಂತಕ, ವಿಮರ್ಶಕ, ಪರಿಸರ ಹೋರಾಟಗಾರ ನಾಡೋಜ ಡಾ. ಎಸ್.ಆರ್. ರಾಮಸ್ವಾಮಿ ಅವರು ಶುಕ್ರವಾರ ಬೆಳಗ್ಗೆ ಬೆಂಗಳೂರಿನ



ಶಂಕರಪುರಂನ ರಂಗರಾವ್ ರಸ್ತೆಯಲ್ಲಿರುವ ತಮ್ಮ ಸ್ವಗೃಹದಲ್ಲಿ ನಿಧನರಾದರು. ಕೆಲ ಸಮಯದಿಂದ ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ಅವರಿಗೆ 88 ವರ್ಷ ವಯಸ್ಸಾಗಿತ್ತು. ಸೊಂಡೆಕೊಪ್ಪ ರಾಮಚಂದ್ರಶಾಸ್ತ್ರಿ ರಾಮಸ್ವಾಮಿ ಅವರು 1937ರ ಅಕ್ಟೋಬರ್ 29ರಂದು ಬೆಂಗಳೂರಿನಲ್ಲಿ ಜನಿಸಿದರು. 1950ರ ದಶಕದಲ್ಲಿ ಪತ್ರಿಕೋದ್ಯಮ ಪ್ರವೇಶಿಸಿದ ಅವರು, 1972ರಿಂದ 79ರವರೆಗೆ ಸುಧಾ ವಾರಪತ್ರಿಕೆಯ ಮುಖ್ಯ ಉಪಸಂಪಾದಕರಾಗಿ ಸೇವೆ ಸಲ್ಲಿಸಿದ್ದರು. ಪುಟ ೪




ಸಾರಸ್ವತ ಲೋಕದ ಧೀಮಂತ ಎಸ್.ಆರ್. ರಾಮಸ್ವಾಮಿ • ಪುಟ ೧೦

ಪ.ಬಂಗಾಳ: ಏನಾಸಂ ಸೇರಿ 15 ಅಂಶಗಳ ಬಿಜೆಪಿ ಪ್ರಣಾಳಿಕೆ

ಮಹಿಳೆಯರಿಗೆ 3000 ರೂ. ನೆರವು

• **ಕೋಲ್ಕತ್ತಾ:** ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಗೆದ್ದು ಅಧಿಕಾರಕ್ಕೆ ಬಂದಲ್ಲಿ, ರಾಜ್ಯದಲ್ಲಿ ಏಕರೂಪ ನಾಗರಿಕ ಸಂಹಿತೆ(ಏನಾಸಂ) ಜಾರಿ, ಅಕ್ರಮ ನುಸುಳುವಿಕೆಗೆ ತಡೆ, ಯುವವರ್ಗ ಮತ್ತು ಮಹಿಳೆಯರು, ರೈತರು, ರಾಜ್ಯ ಸರ್ಕಾರಿ ನೌಕರರಿಗೆ ಕಲ್ಯಾಣ ಪ್ಯಾಕೇಜ್‌ಗಳ ಭರವಸೆ ಸೇರಿದಂತೆ 15 ಅಂಶಗಳ ಮಹತ್ವದ ಮೆಗಾ ಪ್ರಣಾಳಿಕೆಯನ್ನು ಶುಕ್ರವಾರ ಬಿಡುಗಡೆಗೊಳಿಸಿದೆ. ಮಹಿಳೆಯರಿಗೆ ಮತ್ತು ನಿರುದ್ಯೋಗಿ ಯುವಜನತೆಗೆ ತಿಂಗಳಿಗೆ ತಲಾ 3000 ರೂ. ಆರ್ಥಿಕ ನೆರವಿನ ಭರವಸೆ ನೀಡಿದೆ. ಪುಟ ೪



ರೈತರಿಗೆ ವಾರ್ಷಿಕ ₹9 ಸಾವಿರ • ಪುಟ ೪

ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧತೆಗಾಗಿ ₹15000

ಮಹಿಳೆಯರು, ಯುವಶಕ್ತಿ, ರೈತರಿಗಾಗಿ ಹಲವು ಕಲ್ಯಾಣ ಯೋಜನೆಗಳನ್ನು ಪ್ರಕಟಿಸಿದ ಬಿಜೆಪಿಯು, ಪಕ್ಷ ಅಧಿಕಾರಕ್ಕೆ ಬಂದಲ್ಲಿ ಮಹಿಳೆಯರಿಗೆ ತಿಂಗಳಿಗೆ 3000 ರೂ., ಹಾಗೆಯೇ ನಿರುದ್ಯೋಗಿ ಯುವಜನತೆಗೆ ತಿಂಗಳಿಗೆ 3000 ರೂ. ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆಗಾಗಿ 15000 ರೂ.ಗಳ ಭರವಸೆ ನೀಡಿದೆ. ಪುಟ ೪

ಶ್ರೀನಂದಾ ಶವವಾಗಿ ಪತ್ತೆ



ಮಾಣಿಕ್ಯಧಾರ ಜಲಪಾತ ಬಳಿ ನಾಪತ್ತೆಯಾಗಿದ್ದ ಬಾಲಕಿ

• **ಚಿಕ್ಕಮಗಳೂರು:** ಕಳೆದನಾಲ್ಕುದಿನಗಳಹಿಂದೆಚಂದ್ರದ್ರೋಣ ಪರ್ವತದ ಮಾಣಿಕ್ಯಧಾರ ಜಲಪಾತದ ಬಳಿ ನಿಗೂಢವಾಗಿ ನಾಪತ್ತೆಯಾಗಿದ್ದ ಕೇರಳ ಮೂಲದ ಬಾಲಕಿ ಶ್ರೀನಂದಾ ಶುಕ್ರವಾರ ಶವವಾಗಿ ಪತ್ತೆಯಾಗಿದ್ದಾಳೆ. ಕುಟುಂಬದವರೊಂದಿಗೆ ಪ್ರವಾಸಕ್ಕೆ ಬಂದಾಕೆ ದಿಢೀರನೆ ಕಣ್ಮರೆಯಾಗಿದ್ದ ಹಿನ್ನೆಲೆಯಲ್ಲಿ ಪ್ರಕರಣ ಹತ್ತು ಹಲವು ಸಂಶಯಗಳನ್ನು ಹುಟ್ಟುಹಾಕಿತ್ತು. ಇದೀಗ ಬಾಲಕಿ ಮೃತದೇಹ ಪತ್ತೆಯಾಗುವ ಮೂಲಕ ಶೋಧ ಕಾರ್ಯಕ್ಕೆ ತೆರೆಬಿದ್ದಿದೆ ಆದರೂ ಆಕೆಯ ಸಾವಿನ ಬಗ್ಗೆ ಹಲವು ಪ್ರಶ್ನೆಗಳು ಹಾಗೆಯೇ ಉಳಿದಿರುವ ಕಾರಣ ಪೊಲೀಸರು ವಿವಿಧ ಆಯಾಮಗಳಲ್ಲಿ ತನಿಖೆ ಮುಂದುವರಿಸಿದ್ದಾರೆ. ಪುಟ ೪

ಜ್ಯೋತಿರಾವ್ ಫುಲೆ: ಭಾರತಕ್ಕೆ ದಾರಿ ದೀಪವಾಗಿರುವ ಮಹಾನ್ ಚೇತನ

▸ ನರೇಂದ್ರ ಮೋದಿ, ಪ್ರಧಾನಿ



ಇಂದು, ಏಪ್ರಿಲ್ 11, ನಮ್ಮೆಲ್ಲರಿಗೂ ಅತ್ಯಂತ ವಿಶೇಷವಾದ ದಿನ. ಇದು ಭಾರತದ ಶ್ರೇಷ್ಠ ಸಮಾಜ ಸುಧಾರಕರಲ್ಲಿ ಒಬ್ಬರು ಮತ್ತು ತಲೆಮಾರುಗಳಿಗೆ ಮಾರ್ಗದರ್ಶಕರಾಗಿರುವ ಮಹಾತ್ಮ ಜ್ಯೋತಿರಾವ್ ಫುಲೆ ಅವರ ಜನ್ಮದಿನೋತ್ಸವ. ಪ್ರಸಕ್ತ ವರ್ಷ ಈ ಸಂದರ್ಭವು ಇನ್ನೂ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದಿದೆ, ಏಕೆಂದರೆ ಇದು ಅವರ 200ನೇ ಜಯಂತಿ ಆಚರಣೆಯ ಆರಂಭವನ್ನು ಸೂಚಿಸುತ್ತದೆ.

ಮಹಾತ್ಮ ಫುಲೆ ಅವರು ಕೇವಲ ಒಬ್ಬ ಮಹಾನ್ ಸುಧಾರಕರಷ್ಟೇ ಅಲ್ಲ, ಅವರ ಜೀವನವು ನೈತಿಕ ಧೈರ್ಯ, ನಿರಂತರ ಅನ್ವೇಷಣೆ ಮತ್ತು ಸಾಮಾಜಿಕ ಒಳಿತಿಗಾಗಿ ಅಚಲವಾದ ಬದ್ಧತೆಯಿಂದ ಕೂಡಿತ್ತು. ತಾವು ಕಟ್ಟಿದ ಸಂಸ್ಥೆಗಳು ಮತ್ತು ಮುನ್ನಡೆಸಿದ ಚಳವಳಿಗಳಿಗಾಗಿ ಮಹಾತ್ಮ ಫುಲೆ ಅವರು ಸ್ಮರಣೀಯರು. ಅದೇ ಸಮಯದಲ್ಲಿ, ನಮ್ಮ ನಾಗರಿಕತೆಯ ಪಯಣಕ್ಕೆ ಅವರ ದೊಡ್ಡ ಕೊಡುಗೆಯೆಂದರೆ? ಅವರು ಜನರಲ್ಲಿ ಮೂಡಿಸಿದ ಭರವಸೆ, ತುಂಬಿದ ಆತ್ಮವಿಶ್ವಾಸ ಮತ್ತು



ಅವರ ಪ್ರಖರ ಆಲೋಚನೆಗಳು ಇಂದಿಗೂ ದೇಶದ ಕೋಟ್ಯಂತರ ಜನರಿಗೆ ನೀಡುತ್ತಿರುವ ಅತೀವ ಶಕ್ತಿಯಾಗಿದೆ.

1827ರಲ್ಲಿ ಮಹಾರಾಷ್ಟ್ರದ ಪುಣೆಯಲ್ಲಿ ಜನಿಸಿದ ಮಹಾತ್ಮ ಫುಲೆ ಅವರು ಸಾಮಾನ್ಯ ಹಿನ್ನೆಲೆಯಿಂದ ಬಂದವರು. ಆದರೆ ಅವರ ಆರಂಭಿಕ ಸಂಕಷ್ಟಗಳು ಅವರ ಕಲಿಕೆ, ಧೈರ್ಯ ಅಥವಾ ಸಮಾಜದ ಬಗೆಗಿನ ಬದ್ಧತೆಗೆ ಎಂದಿಗೂ ಅಡ್ಡಿಯಾಗಲಿಲ್ಲ. ಸವಾಲುಗಳು ಏನೇ ಇರಲಿ, ಕಷ್ಟಪಟ್ಟು ಕೆಲಸ ಮಾಡಬೇಕು, ಜ್ಞಾನವನ್ನು ಪಡೆಯಬೇಕು ಮತ್ತು ಸುಮ್ಮನೆ ಕುಳಿತುಕೊಳ್ಳುವ ಬದಲಿಗೆ ಆ ಸವಾಲುಗಳನ್ನು ಎದುರಿಸಬೇಕು ಎಂಬುದು ಅವರ ಜೀವನದುದ್ದಕ್ಕೂ ಪಾಲಿಸಿಕೊಂಡು ಬಂದ ಗುಣವಾಗಿತ್ತು. ಪುಟ ೬

ಕೆಪಿಸಿಎಲ್ ಸಾರ್ವಕಾಲಿಕ ದಾಖಲೆ

• **ಬೆಂಗಳೂರು:** ಜಲ ವಿದ್ಯುತ್ ಉತ್ಪಾದನೆಯಲ್ಲಿ ಸರ್ಕಾರಿ ಸ್ವಾಮ್ಯದ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ (ಕೆಪಿಸಿಎಲ್) ಸಾರ್ವಕಾಲಿಕ ದಾಖಲೆ ನಿರ್ಮಿಸಿದೆ. ವಿದ್ಯುತ್ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿರುವ ಕೆಪಿಸಿಎಲ್ 2025–26ನೇ ಸಾಲಿನಲ್ಲಿ 15,509 ದಶಲಕ್ಷ ಯೂನಿಟ್ ಜಲ ವಿದ್ಯುತ್ ಉತ್ಪಾದಿಸುವ ಮೂಲಕ ದಾಖಲೆ ಬರೆದಿದೆ. ಕರ್ನಾಟಕವು 3.63 ಗಿಗಾವ್ಯಾಟ್ ವಿದ್ಯುತ್‌ನೊಂದಿಗೆ ಜಲ ವಿದ್ಯುತ್ ಉತ್ಪಾದನೆಯಲ್ಲಿ ದೇಶದಲ್ಲೇ ಕರ್ನಾಟಕ ಮುಂಚೂಣಿಯಲ್ಲಿದೆ ಎಂದು ಇತ್ತೀಚೆಗೆ ಕೇಂದ್ರ ಸಚಿವಾಲಯ ವರದಿ ನೀಡಿತ್ತು. • ವಿವರ ಪುಟ ೫

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ಪತ್ರಿಕೆ
೦೪

ಶನಿವಾರ
11 ಏಪ್ರಿಲ್ 2026
ಹುಬ್ಬಳ್ಳಿ

ಎರಡು ಹೈಸ್ಪೀಡ್ ರೈಲು ಮಾರ್ಗ

- ಚೆನ್ನೈ-ಮೈಸೂರು, ಚೆನ್ನೈ-ಬೆಂಗಳೂರು ಆಗಿ ಬದಲು
- ಬೆಂಗಳೂರು-ಹೈದರಾಬಾದ್ ನಡುವೆ ಹೊಸ ಮಾರ್ಗ



ಹೊಸದಿಲ್ಲಿ: ಕೇಂದ್ರ ಸರ್ಕಾರ ಘೋಷಿಸಿರುವ ಹೊಸ ಹೈ-ಸ್ಪೀಡ್ ರೈಲು ಕಾರಿಡಾರ್ ಯೋಜನೆಗಳಲ್ಲಿ ಕರ್ನಾಟಕಕ್ಕೆ ಮಹತ್ವದ ಎರಡು ವೇಗ ರೈಲು ಮಾರ್ಗಗಳು ಲಭಿಸಿರುವುದು ವಿಶೇಷವಾಗಿದ್ದು, ಹೈದರಾಬಾದ್-ಬೆಂಗಳೂರು ಹಾಗೂ ಚೆನ್ನೈ-ಬೆಂಗಳೂರು ಕಾರಿಡಾರ್‌ಗಳಿಗೆ ಆದ್ಯತೆ ನೀಡಲಾಗಿದೆ.


ಹಿಂದಿನ ವಿಸ್ತೃತ ಯೋಜನಾ ವರದಿಗಳ (ಡಿಪಿಆರ್) ಆಧಾರದ ಮೇಲೆ ರೂಪುಗೊಂಡಿದ್ದ ಏಳು ಹೈ-ಸ್ಪೀಡ್ ಕಾರಿಡಾರ್‌ಗಳ ಪಟ್ಟಿಯನ್ನು ಕೇಂದ್ರ ಸರ್ಕಾರ ಮರುಪರಿಶೀಲನೆ ಮಾಡಿ, ಹಲವು ಮಾರ್ಗಗಳಲ್ಲಿ ಬದಲಾವಣೆ ಮಾಡಿದ ಬಳಿಕ ಅಂತಿಮ ರೂಪುರೇಷೆ ಪ್ರಕಟಿಸಿದೆ.

ಈ ಪ್ರಕ್ರಿಯೆಯಲ್ಲಿ ದೆಹಲಿ-ಅಹಮದಾಬಾದ್ ಮಾರ್ಗದ ಬದಲು ಹೈದರಾಬಾದ್-ಬೆಂಗಳೂರು ಕಾರಿಡಾರ್ ಸೇರಿಸಲ್ಪಟ್ಟರೆ, ಚೆನ್ನೈ-ಮೈಸೂರು ಮಾರ್ಗವನ್ನು ಪರಿಷ್ಕರಿಸಿ ಚೆನ್ನೈ-ಬೆಂಗಳೂರು ಕಾರಿಡಾರ್ ಆಗಿ ರೂಪಿಸಲಾಗಿದೆ. ಇದರಿಂದ ದಕ್ಷಿಣ ಭಾರತದ ಪ್ರಮುಖ ಐಟಿ ಮತ್ತು ಕೈಗಾರಿಕಾ ಕೇಂದ್ರವಾದ ಬೆಂಗಳೂರಿಗೆ ಎರಡು ವೇಗ ರೈಲು ಸಂಪರ್ಕ ಸಿಗುವಂತಾಗಿದೆ.

ರೈಲ್ವೆ ವಲಯದ ತಜ್ಞರ ಪ್ರಕಾರ, ಈ ಎರಡೂ ಕಾರಿಡಾರ್‌ಗಳು ಜಾರಿಯಾದರೆ ಬೆಂಗಳೂರು-ಹೈದರಾಬಾದ್ ಹಾಗೂ ಬೆಂಗಳೂರು-ಚೆನ್ನೈ ನಡುವಿನ ಪ್ರಯಾಣ ಸಮಯದಲ್ಲಿ ಭಾರೀ ಇಳಿಕೆ ಸಂಭವಿಸುವುದರ ಜೊತೆಗೆ, ಕೈಗಾರಿಕೆ, ಐಟಿ, ಲಾಜಿಸ್ಟಿಕ್ಸ್ ಮತ್ತು ಹೂಡಿಕೆ ಚಟುವಟಿಕೆಗಳಿಗೆ ಉತ್ತೇಜನ ಸಿಗಲಿದೆ.

ಇದಲ್ಲದೆ ಮೂಲ ಯೋಜನೆಗಳಲ್ಲಿ ಪ್ರಸ್ತಾಪವಾಗಿದ್ದ ಹಲವಾರು ಮಾರ್ಗಗಳಿಗೆ ತಿದ್ದುಪಡಿ ಮಾಡಲಾಗಿದೆ. ದಿಲ್ಲಿ-ವಾರಾಣಸಿ ಕಾರಿಡಾರ್ ಮಾತ್ರ ಮೂಲ ರೂಪದಲ್ಲೇ ಉಳಿದಿದ್ದು, ಉಳಿದ ಆರು ಮಾರ್ಗಗಳಲ್ಲಿ ಬದಲಾವಣೆ ಅಥವಾ ಪರ್ಯಾಯ ಮಾರ್ಗಗಳನ್ನು ಕೇಂದ್ರ ಸರ್ಕಾರ ಅಂತಿಮಗೊಳಿಸಿದೆ.

ರಾಮ ಬಾಣ



ಕಣ್ಣೀರಿಟ್ಟ ಉಪಸಭಾಪತಿ ರುದ್ರಪ್ಪ ಲಮಾಣಿ

ಹಾವೇರಿ: ನಗರಸಭೆಯಿಂದ ನೀರಿನ ಟ್ಯಾಂಕ್ ನಿರ್ಮಾಣಕ್ಕೂ ಅರಣ್ಯ ಇಲಾಖೆ ಅಧಿಕಾರಿಗಳು ಅಡ್ಡಿ ಮಾಡುತ್ತಿದ್ದಾರೆ. ಸಣ್ಣ ಗಿಡ ಕಡಿದದ್ದಕ್ಕೆ ಕೇಸ್ ಹಾಕಿದ್ದಾರೆ. ಖಂಡೇರಾಯನಹಳ್ಳಿಯಲ್ಲಿ ನನ್ನದೂ ಸೇರಿದಂತೆ ಹಲವು ವರ್ಷಗಳಿಂದ ವಾಸವಿರುವ ಜಾಗವನ್ನು ತೆರವು ಮಾಡಲು ಅರಣ್ಯ ಅಧಿಕಾರಿಗಳು ಮುಂದಾಗಿದ್ದಾರೆ. ಇವರ ಕಿರುಕುಳದಿಂದ ನನಗೇ ಇಷ್ಟು ಸಮಸ್ಯೆ ಆಗಿರುವಾಗ ಜನಸಾಮಾನ್ಯರ ಗತಿಯೇನು ಎಂದು ವಿಧಾನಸಭೆ ಉಪಾಧ್ಯಕ್ಷರೂ ಆಗಿರುವ ಶಾಸಕ ರುದ್ರಪ್ಪ ಲಮಾಣಿ ಕಣ್ಣೀರಿಟ್ಟು ಕೆಡಿಪಿ ಸಭೆಯಲ್ಲಿ ಅಸಹಾಯಕತೆ ಪ್ರದರ್ಶಿಸಿ ಕಣ್ಣೀರು ಹಾಕಿದರು. ಆಗ ಮಧ್ಯ ಪ್ರವೇಶಿಸಿದ ಜಿಲ್ಲಾಧಿಕಾರಿ ವಿಜಯಮಹಾಂತೇಶ ದಾನಮ್ಮನವರ, ಕುಡಿಯುವ ನೀರು ಸೇರಿದಂತೆ ಜನರಿಗೆ ಅಗತ್ಯವಿರುವ ಕೆಲಸ ಮಾಡುತ್ತಿದ್ದಾಗ ಕೇಸ್ ಹಾಕಿದರೆ ಹೇಗೆ? ಸುಖಾಸುಮ್ಮನೆ ಅಡ್ಡಿಪಡಿಸಬಾರದು ಎಂದು ಅರಣ್ಯ ಇಲಾಖೆ ಸಿಬ್ಬಂದಿಗೆ ತಾಕೀತು ಮಾಡಿದರು. ರಸ್ತೆ ಬದಿ ಗಿಡ ನೆಡುವ ಯೋಜನೆಯಲ್ಲಿ ಅಕ್ರಮ ನಡೆದಿರುವ ಬಗ್ಗೆ ಮಾಹಿತಿ ನೀಡುವಂತೆ ಡಿಎಫ್‌ಒಗೆ ಕೇಳಿದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕನೇಜಿ

0 ಬಿಜೆಪಿ ಆರೆಸ್ಸೆಸ್ಸನ್ನು ವಿಷದ ಸರ್ಪ ಎನ್ನುವ ಹಾಗೆ ಖರ್ಗೆಯವರು ಮಂಗಳೂರಿನಲ್ಲಿ ಕುಕ್ಕರ್ ಸ್ಫೋಟ ಮಾಡಿದವರು ಯಾರು ಎಂಬುದನ್ನು ತಿಳಿಸಲಿ, ಇವರಿಗೆ ನಕ್ಸಲರು, ಭಯೋತ್ಪಾದಕರು ದೇವದೂತರಂತೆ ಕಾಣಿಸುತ್ತಾರೆ -ಆರ್.ಅಶೋಕ್

-ನಾವೆಲ್ಲ ಭಕ್ತಿಯಿಂದ ಪೂಜಿಸುವ ನಾಗರ ಹಾವಿಗೆ ವಿಷವಿದೆ ನಿಜ, ಅದಿಲ್ಲದೆ ಹೋಗಿದ್ದಲ್ಲಿ ಅದನ್ನು ಬದುಕಲು ದುರ್ಜನರು ಬಿಡುತ್ತಿರಲಿಲ್ಲ, ಆದರೆ ಅದು ಸುಮ್ಮನಿರುವ ಸಜ್ಜನರ ತಂಟೆಗೆ ಬರುವುದಿಲ್ಲ, ತೊಂದರೆ ಮಾಡುವ ದುರ್ಜನರ ಮೇಲೆ ವಿಷವನ್ನು ಕಾರದೆ ಬಿಡುವುದಿಲ್ಲ!

ದಿನ ಭವಿಷ್ಯ

ಮೇಷ ವೃತ್ತಿಯಲ್ಲೂ ಖಾಸಗಿಯಾಗಿಯೂ ನಿಮ್ಮ ಹಿತಾಸಕ್ತಿಗೆ ಧಕ್ಕೆ ಒದಗಲಿದೆ. ತಾಳ್ಮೆಯಿಂದ ಪರಿಸ್ಥಿತಿ ನಿಭಾಯಿಸಿ. ದುಡುಕಿನ ವರ್ತನೆ ತೋರದಿರಿ.

ವೃಷಭ ವೈಯಕ್ತಿಕವಾಗಿ ಅನಿರೀಕ್ಷಿತ ಸನ್ನಿವೇಶ. ವೃತ್ತಿ ಸಂಬಂಧಿತ ಪ್ರಯಾಣ ಸುಖಕರ, ಉದ್ದೇಶ ಸಾಧನೆ. ಆಪ್ತರೊಬ್ಬರು ಮುನಿಸು ತೋರಿಯಾರು.

ಮಿಥುನ ಕೆಲ ವಿಷಯದಲ್ಲಿ ಅತಿರೇಕದ ಉತ್ಸುಕತೆ ತೋರದಿರಿ. ಬಳಿಕ ನಿರಾಶೆ ಆದೀತು. ಆಹಾರದಲ್ಲಿ ಹಿತಮಿತ ಸಾಧಿಸಿ. ಧನವ್ಯಯ ನಿಯಂತ್ರಣ.

ಕಟಕ ಅಹಿತಕರ ಭಾವ. ಮಾಡುವ ಕೆಲಸದಲ್ಲಿ ಅನಿಶ್ಚಿತತೆ. ಅಧಿಕ ಕೆಲಸದ ಒತ್ತಡ. ಆತುರ ತೋರದೆ ಸಮಾಧಾನದಿಂದ ವ್ಯವಹರಿಸಿ.

ಸಿಂಹ ನಿಮ್ಮ ಕಾರ್ಯಶೈಲಿಗೆ ಇನ್ನಷ್ಟು ಹೊಸತನ ಅಳವಡಿಸಿ. ಕೆಲಸದಲ್ಲಿ ಸದಾ ಧಾವಂತ ತೋರುವ ನೀವು ಸ್ವಲ್ಪ ನಿಧಾನಗತಿ ತೋರುವುದು ಒಳಿತು.

ಕನ್ಯಾ ನಿರ್ವಹಣೆಯಿಂದ ಇತರರನ್ನು ಮೆಚ್ಚಿಸುವ ಪ್ರಯತ್ನ ಫಲ ನೀಡಲಿದೆ. ಆದರೆ ವಿನಯ ಬಿಡದಿರಿ. ಅಹಂಭಾವದ ವರ್ತನೆ ಟೀಕೆಗೆ ಗುರಿಯಾದೀತು.

ತುಲಾ ವೃತ್ತಿಯಲ್ಲಿ ನಿಮಗೆ ಪೂರಕ ಬೆಳವಣಿಗೆ. ಬುದ್ಧಿವಂತಿಕೆಯಿಂದ ಹಣ ವ್ಯಯಿಸಿರಿ. ಆತ್ಮೀಯರ ಸಂಗದಲ್ಲಿ ಹರುಷ. ಖರ್ಚು ನಿಯಂತ್ರಣ.

ವೃಶ್ಚಿಕ ಹೆಚ್ಚು ಹೊಣೆ. ನೆರವು ಯಾಚಿಸಲು ಹಿಂಜರಿಕೆ ಬೇಡ. ಅವಿವಾಹಿತರಿಗೆ ಸಂಗಾತಿ ಹುಡುಕಾಟ ಕಷ್ಟವೆನಿಸಲಿದೆ. ದೇವರ ಪ್ರಾರ್ಥನೆ ಮಾಡಿರಿ.

ಧನು ಅಧಿಕ ಕೆಲಸದ ನಡುವೆಯೂ ಸಂತೋಷ ಆಚರಣೆಯ ಅವಕಾಶ. ಪ್ರೀತಿಯಲ್ಲಿ ಯಶಸ್ಸು. ಕೌಟುಂಬಿಕ ಸಾಮರಸ್ಯ. ಆಪ್ತರಿಂದ ಧನಪ್ರಾಪ್ತಿ.

ಮಕರ ಆಪ್ತರ ಸಾಮಿಪ್ಯದಲ್ಲಿ ಖುಷಿ ಕಾಣುವಿರಿ. ಆದರೆ ಅವರ ಮೇಲೆ ಅಧಿಪತ್ಯ ಸಾಧಿಸುವ ಪ್ರಯತ್ನ ಬೇಡ. ಸೌಹಾರ್ದದಿಂದ ಕಾರ್ಯ ಸಾಧಿಸಿರಿ.

ಕುಂಭ ಆತ್ಮವಿಶ್ವಾಸ ಮತ್ತು ಸಮರ್ಥ ನಿರ್ವಹಣೆ ನಿಮ್ಮ ಕುರುಹಾಗಲಿದೆ. ಅನ್ಯರ ದೌರ್ಬಲ್ಯವನ್ನು ನಿಮ್ಮ ಪ್ರಯೋಜನಕ್ಕೆ ಬಳಸಿಕೊಳ್ಳುವಿರಿ.

ಮೀನ ಏರುಪೇರು ಇಲ್ಲದ ಸಾಧಾರಣ ದಿನ. ಹಾಗಾಗಿ ದೊಡ್ಡ ಕಾರ್ಯಕ್ಕೆ ಕೈ ಹಾಕದಿರಿ. ವಿವಾಹಿತರಿಗೆ ಶುಭ ಬೆಳವಣಿಗೆ. ಆರ್ಥಿಕ ಪ್ರಗತಿಗೆ ಅಡ್ಡಿ ತೋರಲಿದೆ.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ: 8,2,5.0

ಸಹಕಾರ ಭಾರತಿ ರಾಷ್ಟ್ರೀಯ ಅಧ್ಯಕ್ಷ ಉದಯ್ ಜೋಶಿ ಕಿವಿಮಾತು

ಬಲವರ್ಧನೆಗೆ ಸಂಕಲ್ಪ ಮಾಡಿ



ವಿಜಯನಗರ: ರಾಷ್ಟ್ರವಾದದ ನೆಲೆಗಟ್ಟಿನಲ್ಲಿ ಸ್ಥಾಪನೆಗೊಂಡಿರುವ ರಾಷ್ಟ್ರೀಯ ಸಹಕಾರ ಭಾರತಿ ಇನ್ನೆರಡು ವರ್ಷಗಳಲ್ಲಿ ಸುವರ್ಣ ಮಹೋತ್ಸವವನ್ನು ಆಚರಿಸಲಿದೆ. ಅದಕ್ಕೂ ಮುನ್ನವೇ ಸಹಕಾರ ಭಾರತಿಯನ್ನು ಮತ್ತಷ್ಟು ವಿಸ್ತರಣೆಯೊಂದಿಗೆ ಬಲವರ್ಧನೆಗೆ ಎಲ್ಲರೂ ಪಣತೊಡಬೇಕು ಎಂದು ಸಹಕಾರ ಭಾರತಿ ರಾಷ್ಟ್ರೀಯ ಅಧ್ಯಕ್ಷ ಉದಯ್ ಜೋಶಿ ಹೇಳಿದರು.

ಹೊಸಪೇಟೆಯಲ್ಲಿ ಶುಕ್ರವಾರ ಏರ್ಪಡಿಸಿದ್ದ ಸಹಕಾರ ಭಾರತಿಯ ರಾಜ್ಯ ಕಾರ್ಯಕಾರಿ ಹಾಗೂ ಪ್ರಮುಖ ಸಹಕಾರಿಗಳ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿ, ರಾಷ್ಟ್ರೀಯ ಸ್ವಯಂ ಸೇವೆಯಲ್ಲಿರುವ ಪ್ರಮುಖ ಪ್ರಕೋಷ್ಠಗಳಲ್ಲಿ ಸಹಕಾರ ಭಾರತಿಯೂ ಒಂದು. ಆದರೆ, ಇದು ಆರಂಭಗೊಂಡಾಗ ಆರ್‌ಎಸ್‌ಎಸ್‌ನ ಶೇ.30ರಷ್ಟು ಜನರು ಸಹಕಾರ ರಂಗದಲ್ಲಿ ತೊಡಗಿಸಿಕೊಂಡಿದ್ದರು. ಆದರೆ, ಈಗ ಎಲ್ಲೆಡೆ ಸಹಕಾರ ಭಾರತಿ ಸಹಯೋಗದಲ್ಲಿ ಎಲ್ಲೆಡೆ ಸಹಕಾರ ಸಂಘಗಳು ಸ್ಥಾಪನೆಗೊಂಡಿವೆ. ಸಹಕಾರ ಭಾರತಿ ಸಂಸ್ಥೆಯೂ ದೇಶಾದ್ಯಂತ ವಿಸ್ತಾರಗೊಂಡಿದೆ. ಸಹಕಾರ ಭಾರತಿ ಪರಿಶ್ರಮದಿಂದಾಗಿ ಕೇಂದ್ರ ಸರ್ಕಾರ ಪ್ರತ್ಯೇಕವಾದ ಸಹಕಾರ ಸಚಿವಾಲಯವನ್ನೂ ಸ್ಥಾಪಿಸಿ, ಸಚಿವರನ್ನೂ ನೇಮಿಸಿತು. ಪರಿಣಾಮ ಇಲಾಖೆಯಲ್ಲಿ ಆಮೂಲಾಗ್ರ ಬದಲಾವಣೆ ಸಾಧ್ಯವಾಗುತ್ತಿದೆ. ಇದು ನಮ್ಮ ಸಂಸ್ಥೆಯ ಹೆಮ್ಮೆ ಎಂದು ತಿಳಿಸಿದರು.

ನಮ್ಮ ಸಂಸ್ಕೃತಿ, ಇತಿಹಾಸ, ಪರಂಪರೆಯ ಬಗ್ಗೆ ನಾವು ಮಾತನಾಡುವುದನ್ನು ಬಿಡಬಾರದು. ಇಂತಹ ಚರ್ಚೆ, ಸಂವಾದಗಳೇ ನಮ್ಮ ಸಂಸ್ಕೃತಿಯನ್ನು ಉಳಿಸಲು ಇರುವ ದಾರಿ. ಸಂಸ್ಕೃತಿ ಗಟ್ಟಿಯಾದಷ್ಟೂ ಸಹಕಾರ ಚಳವಳಿಯೂ ಪ್ರಬಲವಾಗುತ್ತದೆ. ಸಹಕಾರ ಕ್ಷೇತ್ರದಲ್ಲಿರುವ ಅನೇಕ ಲೋಪದೋಷಗಳು, ಸಮಸ್ಯೆ, ಸವಾಲುಗಳನ್ನು ಮೆಟ್ಟಿನಿಲ್ಲುವ ಜೊತೆಗೆ ದೇಶದ ಅಭಿವೃದ್ಧಿಗೆ ತನ್ನದೇ ಆದ ಯೋಗದಾನ ನೀಡಬೇಕು. ಅದಕ್ಕಾಗಿ ಸಂಸ್ಥೆ 50 ವರ್ಷ ಪೂರ್ಣಗೊಳಿಸುವ ವೇಳೆಗೆ ಸಂಘಟನೆಯನ್ನು ಬಲಪಡಿಸಬೇಕು. ವಿಸ್ತರಿಸುವ ಜೊತೆಗೆ ಬಿನಾ ಸಂಸ್ಕಾರ ನಹಿ ಸಹಕಾರ್, ಬಿನಾ ಸಹಕಾರ್ ನಹೀ ಉದ್ಧಾರ್ ಎಂಬ ಸಂಕಲ್ಪವನ್ನು ಸಾಕಾರಗೊಳಿಸಬೇಕು ಎಂದು ಸಲಹೆ ನೀಡಿದರು.

ಕೊಟ್ಟೂರು ಸಂಸ್ಥಾನ ಮಠದ ಜ.ಬಸವಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ, ಸಹಕಾರ ಎಂಬುದೇ ಮಾನವ ಬದುಕಿನ ಮೂಲ ತಿರುಳು. ಸಹಕಾರವಿಲ್ಲದೇ ಜೀವನದಲ್ಲಿ ಯಾರೂ, ಏನನ್ನೂ ಸಾಧಿಸಲಾರರು. ಪರಸ್ಪರ ಸಹಕಾರದೊಂದಿಗೆ ಎಲ್ಲರೂ ದೇಶ ಕಟ್ಟುವ ಕಾಯಕದಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ವೇದಿಕೆ ಮೇಲೆ ಆರ್‌ಎಸ್‌ಎಸ್ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ್ ಮಂಗೇಶ್ ಭೆಂಡೆ, ಸಹಕಾರ ಭಾರತಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರಭುದೇವ ಚೌರಾಸಿಯಾ, ರಾಜ್ಯ ಪ್ರಧಾನ ಕಾರ್ಯದರ್ಶಿ ನರಸಿಂಹ ಕಾಮತ್, ಕಾರ್ಯಕಾರಿಣಿ ಸಮಿತಿ ಸಂಚಾಲಕ ಜಿ.ನಂಜನಗೌಡ, ರಾಜ್ಯ ಮಹಿಳಾ ಪ್ರಮುಖ್ ವಿದ್ಯಾ ಪೈ, ವಿಜಯನಗರ ಜಿಲ್ಲಾ ಅಧ್ಯಕ್ಷ ಕರಿಬಸವರಾಜ್ ಬದಾಮಿ ಉಪಸ್ಥಿತರಿದ್ದರು.

ಆರು ಜಿಲ್ಲೆಗಳಲ್ಲಿ ಮಹಿಳಾ ಸಮಿತಿ

ಈ ಅವಧಿಯಲ್ಲಿ ಎರಡನೇ ಬಾರಿಗೆ ರಾಜ್ಯ ಕಾರ್ಯ ಕಾರಿ ಸಮಿತಿ ಸಭೆ ನಡೆಯುತ್ತಿದೆ. ಸಹಕಾರ ಭಾರತಿಯನ್ನು ಬೇರು ಮಟ್ಟದಿಂದ ಬಲಪಡಿಸಲು ಈಗಾಗಲೇ ರಾಜ್ಯದ 24 ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು, ಜಿಲ್ಲಾ ಮಟ್ಟದ ಅಭ್ಯಾಸ ವರ್ಗವನ್ನು ಯಶಸ್ವಿಯಾಗಿ ನಿರ್ವಹಿಸಲಾಗಿದೆ. 6 ಜಿಲ್ಲೆಗಳಲ್ಲಿ ಮಹಿಳಾ ಸಮಿತಿಗಳನ್ನು ರಚಿಸಿದ್ದು, 2 ಜಿಲ್ಲೆಗಳಲ್ಲಿ ಮಹಿಳಾ ಅಭ್ಯಾಸ ವರ್ಗ ನಿರ್ವಹಿಸಲಾಗಿದೆ ಎಂದು ಸಹಕಾರ ಭಾರತಿ ರಾಜ್ಯ ಅಧ್ಯಕ್ಷ ಪ್ರಭುದೇವ ಮಾಗನೂರ್ ಮಾಹಿತಿ ನೀಡಿದರು.

ಮುಗಿಯದ ರಗಳೆ

ಪುಟ 1➜ ಇದಕ್ಕೂ ಮೊದಲು ಪಾಕಿಸ್ತಾನದಲ್ಲಿನ ಇರಾನ್ ರಾಯಭಾರಿ ರೆಜಾ ಅಮಿರ್ ಮೋಗ್ದಮ್ 10 ಸದಸ್ಯರ ಪ್ರತಿನಿಧಿ ಮಂಡಳಿ ಇಸ್ಲಾಮಾಬಾದ್‌ಗೆ ಆಗಮಿಸಲಿದೆ ಎಂದು ಹೇಳಿದ್ದರೂ, ನಂತರ ತಮ್ಮ ಹೇಳಿಕೆಯನ್ನು ಹಿಂಪಡೆದಿದ್ದು ಕುತೂಹಲ ಹೆಚ್ಚಿಸಿದೆ.



ಟ್ರಂಪ್‌ಗೆ ಟೆನ್ಶನ್

ಸದ್ಯ ಇರಾನ್-ಅಮೆರಿಕ ನಡುವೆ ಕದನ ವಿರಾಮ ಏರ್ಪಟ್ಟಿದ್ದರೂ, ಲೆಬನಾನ್ ಮೇಲೆ ಇಸ್ರೇಲ್ ದಾಳಿ ಮುಂದುವರಿಸಿರುವುದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಟೆನ್ಶನ್ ತಂದಿದೆ ಎಂದು ಮೂಲಗಳು ಹೇಳಿವೆ. ಇದರ ಬೆನ್ನಲ್ಲೇ ಅವರು, ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರಿಗೆ ಕರೆ ಮಾಡಿ, ದಾಳಿ ನಿಲ್ಲಿಸುವಂತೆ ಹೇಳಿದ್ದಾರೆ. ಇದಾದ ಬಳಿಕ ನೆತನ್ಯಾಹು ಲೆಬನಾನ್ ಮೇಲೆ ದಾಳಿ ಮಾಡುವುದಿಲ್ಲ ಎಂದು ಹೇಳಿ ಕದನ ವಿರಾಮ ಘೋಷಿಸಿದ್ದಾರೆ. ಅಲ್ಲದೆ, ಶಾಂತಿ ಮಾತುಕತೆಯಲ್ಲಿ ಭಾಗಿಯಾಗುವ ಬಗ್ಗೆ ಲೆಬನಾನ್ ಕೂಡ ಇಚ್ಛೆ ವ್ಯಕ್ತಪಡಿಸಿದೆ.

ಬೆಳ್ಳಿ ಹಬ್ಬದ ಜನತಾ ಸಮಾವೇಶ ಇಂದು

ಪುಟ 1➜ ತುಮಕೂರು ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ರಜತ ಮಹೋತ್ಸವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಮುಂಬರುವ ಗ್ರೇಟರ್ ಬೆಂಗಳೂರು ಚುನಾವಣೆ ಸೇರಿದಂತೆ ರಾಜ್ಯದಲ್ಲಿ ಜೆಡಿಎಸ್ ಮತ್ತು ಬಿಜೆಪಿ ಮೈತ್ರಿಕೂಟವನ್ನು ಬಲಪಡಿಸುವ ನಿಟ್ಟಿನಲ್ಲಿ ಜೆಡಿಎಸ್ ಗ್ರೇಟರ್ ಬೆಂಗಳೂರು ಸಮಾವೇಶವನ್ನು ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಈಗಾಗಲೇ ಪಕ್ಷದ ಮುಖಂಡರು ಕಾರ್ಯಕರ್ತರ ಜತೆಗೆ ಮಹತ್ವದ ಸಭೆ ನಡೆಸಿದ್ದಾರೆ. ಈ ಜನತಾ ಸಮಾವೇಶವು ಬೆಂಗಳೂರು ಹಾಗೂ ಪಕ್ಷದ ಬೆಳ್ಳಿ ಹಬ್ಬದ ಸಂಭ್ರಮವಾಗಿದ್ದು, ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡರು, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹಾಗೂ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಸೇರಿದಂತೆ ಪಕ್ಷದ ನಾಯಕರು, ಶಾಸಕರು ಮತ್ತು ಅಪಾರ ಸಂಖ್ಯೆಯಲ್ಲಿ ಕಾರ್ಯಕರ್ತರು ಭಾಗವಹಿಸಲಿದ್ದಾರೆ ಎಂದು ತಿಳಿಸಲಾಗಿದೆ.

ಮಹಿಳೆಯರಿಗೆ 3000 ರೂ. ನೆರವು

ಪುಟ 1➜ ಕೇಂದ್ರ ಗೃಹಸಚಿವ ಅಮಿತ್ ಶಾ ಅವರು 'ಸಂಕಲ್ಪ ಪತ್ರ'– ಪ್ರಣಾಳಿಕೆಯನ್ನು ಬಿಡುಗಡೆಗೊಳಿಸಿ ಇದು 'ಸೋನಾರ್ ಬಾಂಗ್ಲಾ'ಕ್ಕಾಗಿ ಇರುವ ಮಾರ್ಗಸೂಚಿ ಎಂದು ಬಣ್ಣಿಸಿದರು. ಟಿಎಂಸಿಯ 15 ವರ್ಷಗಳ ಆಡಳಿತ ಪಶ್ಚಿಮ ಬಂಗಾಳದ ಜನತೆಯ ಪಾಲಿಗೆ ಒಂದು 'ದುಃಸ್ವಪ್ನ'ವಾಗಿತ್ತು ಎಂದ ಅವರು, ದುರಾಡಳಿತಕ್ಕಾಗಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು ತೀವ್ರ ತರಾಟೆಗೆತ್ತಿಕೊಂಡರು.

ಟಿಎಂಸಿಯ ಜನವಿರೋಧಿ ಆಡಳಿತದಿಂದ ಬಂಗಾಳದ ಜನತೆ ರೋಸಿ ಹೋಗಿದ್ದು, ಈ ಚುನಾವಣೆಯನ್ನು ಟಿಎಂಸಿಯ ಭ್ರಷ್ಟಾಚಾರ, ರಾಜಕೀಯ ಹಿಂಸಾಚಾರ, ಅಕ್ರಮ ನುಸುಳುವಿಕೆ ಮತ್ತು ನಿರುದ್ಯೋಗದ ಮೇಲಿನ ಜನಮತ ಸಂಗ್ರಹವಾಗುವಂತೆ ಪರಿವರ್ತಿಸಬೇಕೆಂದು ಕರೆ ನೀಡಿದರು.

ಬಿಜೆಪಿ ಅಧಿಕಾರಕ್ಕೆ ಬಂದಲ್ಲಿ ಅಕ್ರಮ ನುಸುಳುಕೋರರ ವಿರುದ್ಧ "ಪತ್ತೆ, ಅಳಿಸಿ ಮತ್ತು ಗಡೀಪಾರುಗೊಳಿಸಿ" ನೀತಿಯನ್ನು ಅನುಸರಿಸಲಿದೆ. ಬಂಗಾಳದಲ್ಲಿ ಬಿಜೆಪಿಗೆ ಜನಾಶೀರ್ವಾದ ಲಭಿಸಿದಲ್ಲಿ ಅಕ್ರಮ ನುಸುಳುವಿಕೆಯ ಬಗೆಗೆ ಶೂನ್ಯ ಸಹಿಷ್ಣುತೆಯ ನೀತಿಯನ್ನು ಹೊಂದಲಿದೆ ಎಂದ ಅಮಿತ್ ಶಾ ಅವರು, ಟಿಎಂಸಿಯ ಹಿಂಸಾಯುಕ್ತ ದುರಾಡಳಿತದ ವಿರುದ್ಧ ಬಿಜೆಪಿಯ ಬಲವಾದ ನಿಲುವನ್ನು ಪ್ರಕಟಿಸಿದರು. ರಾಜ್ಯದ ಗಡಿಗಳನ್ನು ಸುರಕ್ಷಿತವಾಗಿರಿಸುವ ಭರವಸೆ ನೀಡಿರುವ ಪಕ್ಷವು, ಗೋವುಗಳ ಕಳ್ಳಸಾಗಣೆಯನ್ನು ತಡೆದು ಸರ್ಕಾರಿ ಭೂಮಿಯನ್ನು ಅತಿಕ್ರಮಣಕಾರರು ಮತ್ತು ನುಸುಳುಕೋರರಿಂದ ಮುಕ್ತಗೊಳಿಸ ಲಾಗುವುದು ಎಂದಿದೆ. ವಿಶೇಷವಾಗಿ ಉತ್ತರ 24 ಪರಗಣಾಸ್, ನಾಡಿಯಾ, ಮಾಲ್ಡಾ, ಮುರ್ಷಿದಾಬಾದ್ ಮತ್ತು ಉತ್ತರ ಬಂಗಾಳದ ಜನತೆಗೆ ಭದ್ರತೆಯ ಭರವಸೆಯನ್ನು ನೀಡಿದೆ. ವಿಶೇಷವಾಗಿ ನಿರಾಶ್ರಿತ ಮತುವಾ, ದಲಿತರನ್ನೊಳಗೊಂಡ ಹಿಂದು ಮತದಾರರಿಗೆ ಸುರಕ್ಷತೆಯ ಖಾತ್ರಿಯನ್ನು ನೀಡುವ ನಿಲುವನ್ನು ವ್ಯಕ್ತಪಡಿಸಿದೆ. ಬಿಜೆಪಿ ಅಧಿಕಾರಕ್ಕೆ ಬಂದ ಆರು ತಿಂಗಳಲ್ಲಿ ಏಕರೂಪ ಸಂಹಿತೆ ಜಾರಿಗೊಳಿಸಲಾಗುವುದು, ಈ ಮೂಲಕ ರಾಜ್ಯದ ಎಲ್ಲ ನಾಗರಿಕ ಪ್ರಜೆಗಳಿಗೂ ಒಂದೇ ಕಾನೂನನ್ನು ಅನ್ವಯಿಸಲಾಗುವುದು. ಇದೇ ವೇಳೆ ರಾಜ್ಯದ ಪ್ರತಿಯೊಬ್ಬ ನಾಗರಿಕನಿಗೂ ತಮ್ಮ ಮತ, ಧರ್ಮಗಳ ಆಚರಣೆಗೆ ಮುಕ್ತ ಸ್ವಾತಂತ್ರ್ಯ ನೀಡಲಾಗುವುದು ಎನ್ನುವ ಮೂಲಕ ಅಲ್ಪಸಂಖ್ಯಾತರಲ್ಲಿ ಬಿಜೆಪಿ ವಿರೋಧಿಗಳು ಬಿತ್ತಿರುವ ಆತಂಕವನ್ನು ನಿವಾರಿಸುವ ಯತ್ನವನ್ನೂ ಬಿಜೆಪಿ ಮಾಡಿದೆ.

ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧತೆಗಾಗಿ ₹15000

ಪುಟ 1➜ ಪೊಲೀಸ್ ಸೇರಿದಂತೆ ಎಲ್ಲ ಸರ್ಕಾರಿ ಉದ್ಯೋಗದಲ್ಲಿ ಮಹಿಳೆಯರಿಗೆ ಶೇ.33ರ ಮೀಸಲಾತಿ, ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಾಹನಗಳಲ್ಲಿ ಉಚಿತ ಪ್ರಯಾಣದ ಭರವಸೆ ನೀಡಲಾಗಿದೆ. ಟಿಎಂಸಿ ಸರ್ಕಾರವು ಮಹಿಳೆಯರನ್ನು ಸೆಳೆಯಲು ಲಕ್ಷ್ಮೀರ್ ಭಾಂಡರ್ ಯೋಜನೆಯಲ್ಲಿ ಸಾಮಾನ್ಯ ವರ್ಗದ ಮಹಿಳೆಯರಿಗೆ ತಿಂಗಳಿಗೆ 1500 ರೂ. ಮತ್ತು ಪರಿಶಿಷ್ಟ ಜಾತಿ, ವರ್ಗದ ಮಹಿಳೆಯರಿಗೆ 1700 ರೂ.ಗಳ ನೆರವನ್ನು ಪ್ರಕಟಿಸಿರುವ ಹಿನ್ನೆಲೆಯಲ್ಲಿ ಬಿಜೆಪಿ ಈ ಭರವಸೆ ನೀಡಿದೆ. ಮಮತಾ ಸರ್ಕಾರದ ಶಾಲಾ ನೇಮಕಾತಿ ಹಗರಣದಲ್ಲಿ ಉದ್ಯೋಗ ಕಳೆದುಕೊಂಡವರಿಗೆ ವಯೋಮಿತಿಯನ್ನು 5 ವರ್ಷಗಳಷ್ಟು ವಿಸ್ತರಿಸುವ ಭರವಸೆ ನೀಡಿದೆ.

ರೈತರಿಗೆ ವಾರ್ಷಿಕ 9 ಸಾವಿರ ರೂ.

ರೈತರಿಗೆ ಪಿಎಂ ಕಿಸಾನ್ ಯೋಜನೆಯಲ್ಲಿ ಕೇಂದ್ರದ 6000 ರೂ.ಗಳಿಗೆ ರಾಜ್ಯ ಸರ್ಕಾರದ ಕಡೆಯಿಂದ 3000 ರೂ.ಗಳನ್ನು ಸೇರಿಸಿ 9000 ರೂ.ಗಳಿಗೆ ಹೆಚ್ಚಿಸಲಾಗುತ್ತದೆ. ರಾಜ್ಯ ಸರ್ಕಾರಿ ನೌಕರರಿಗೆ ತುಟ್ಟಿ ಭತ್ಯೆ ವ್ಯತ್ಯಯವನ್ನು ಸರಿಪಡಿಸಿ 7ನೇ ವೇತನಾ ಆಯೋಗದ ಶಿಫಾರಸುಗಳನ್ನು ಜಾರಿಗೆ ತರುವುದಾಗಿಯೂ ಬಿಜೆಪಿ ಹೇಳಿದೆ. ರಸ್ತೆ, ಬಂದರು ಅಭಿವೃದ್ಧಿ ಸೇರಿದಂತೆ ರಾಜ್ಯದ ಮೂಲಸೌಕರ್ಯ ಅಭಿವೃದ್ಧಿಗೆ ವಿಶೇಷ ಯೋಜನೆಗಳನ್ನು ಅನುಷ್ಠಾನಕ್ಕೆ ತರಲಾಗುವುದು. ಉತ್ತರ ಬಂಗಾಲದ ವಿವಿಧೆಡೆ ಎಐಐಎಂಎಸ್, ಐಐಟಿ, ಐಐಎಂ, ಅತ್ಯಾಧುನಿಕ ಸೌಕರ್ಯಗಳುಳ್ಳ ಹೊಸ ಕ್ಯಾನ್ಸರ್ ಆಸ್ಪತ್ರೆ ನಿರ್ಮಾಣದ ಭರವಸೆಯನ್ನೂ ನೀಡಲಾಗಿದೆ. ಕೋಲ್ಕತ್ತಾಕ್ಕಾಗಿ 10 ವರ್ಷಗಳ ಕ್ರಿಯಾ ಯೋಜನೆಯೊಂದನ್ನು ಪ್ರಕಟಿಸಲಾಗಿದೆ. ಚೈತನ್ಯ ಮಹಾಪ್ರಭು ಆಧ್ಯಾತ್ಮಿಕ ಸರ್ಕ್ಯೂಟ್, ರವೀಂದ್ರನಾಥ ಟಾಗೋರ್ ಹೆಸರಿನಲ್ಲಿ ಸಾಂಸ್ಕೃತಿಕ ಕೇಂದ್ರ ಸ್ಥಾಪನೆ, ವಂದೇಮಾತರಂ ಮ್ಯೂಸಿಯಂ ಸ್ಥಾಪನೆಯ ಬಗೆಗೂ ಭರವಸೆ ನೀಡಲಾಗಿದೆ. ಮಮತಾ ಸರ್ಕಾರದಲ್ಲಿ ಸಂದೇಶಖಾಲಿಯಲ್ಲಿ ನಡೆದ ಮಹಿಳೆಯರ ವಿರುದ್ಧದ ದೌರ್ಜನ್ಯ ಸೇರಿದಂತೆ ರಾಜಕೀಯ ಹಿಂಸಾಚಾರಗಳ ತನಿಖೆಗೆ ಸುಪ್ರೀಂಕೋರ್ಟಿನ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಲಾಗುವುದು ಎಂದಿದೆ.

ಸರ್ಕಾರಿ ಕಟ್ಟಡಗಳಿಂದ ಸೇವಾ ತೆರಿಗೆ ವಸೂಲಿ

ಪುಟ 1➜ 473 ಕೋಟಿ ಬಾಕಿ ವಸೂಲಿ ಜತೆಗೆ, ಅಗತ್ಯಬಿದ್ದರೆ ವಿಧಾನಸೌಧ, ವಿಕಾಸಸೌಧದಂತಹ ಪ್ರಮುಖ ಕಟ್ಟಡಗಳನ್ನೇ ಜಪ್ತಿ ಮಾಡುವ ಬಗ್ಗೆ ದೂರುದಾರರು ಪ್ರಸ್ತಾಪಿಸಿದ್ದು, ಇದನ್ನು ಸಹ ನಿಯಮಾನುಸಾರ ಪರಿಶೀಲಿಸುವಂತೆ ಟಿಪ್ಪಣಿಯಲ್ಲಿ ತಿಳಿಸಲಾಗಿದೆ. ಕಚೇರಿಗಳು ಬಾಕಿ ಉಳಿಸಿಕೊಂಡಿರುವ ಬೃಹತ್ ಮೊತ್ತದ ಕುರಿತು ಮೌನ ವಹಿಸಿರುವ ಜಿಬಿಎ ಬಗ್ಗೆ ಬಿಜೆಪಿ ನಾಯಕ ಎನ್.ಆರ್.ರಮೇಶ್ ಸರ್ಕಾರಿ ಕಟ್ಟಗಳ ಸೇವಾ ತೆರಿಗೆ ಬಾಕಿ ವಸೂಲಿ ಕ್ರಮ ವಹಿಸುವಂತೆ ಜಿಬಿಎ ಮುಖ್ಯ ಆಯುಕ್ತರಿಗೆ ಮನವಿ ಸಲ್ಲಿಸಿದ್ದರು.

ಗುಡ್ಡ ಕುಸಿದು ಕಾರ್ಮಿಕರ ಸಾವು; ಪರಿಹಾರ ಘೋಷಣೆ

ಪುಟ 1➜ ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಅವರು ಪೋಸ್ಟ್ ಮಾಡಿದ್ದು, ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನ ಹುಲಿಕಲ್ ಘಾಟಿ ತಿರುವಿನಲ್ಲಿ ರಸ್ತೆ ತಡೆಗೋಡೆ ನಿರ್ಮಾಣ ಕಾಮಗಾರಿಯ ವೇಳೆ ಮಣ್ಣು ಕುಸಿದು ಮೂವರು ಕಾರ್ಮಿಕರು ಮೃತಪಟ್ಟ ಸುದ್ದಿ ಕೇಳಿ ದುಃಖವಾಯಿತು. ಮೃತ ಕಾರ್ಮಿಕರ ಆತ್ಮಕ್ಕೆ ಚಿರಶಾಂತಿ ದೊರಕಲಿ, ಅವರ ಕುಟುಂಬ ಸದಸ್ಯರಿಗೆ ನೋವು ಭರಿಸುವ ಶಕ್ತಿ ಸಿಗಲಿ ಎಂದು ಪ್ರಾರ್ಥಿಸುತ್ತೇನೆ ಎಂದಿದ್ದಾರೆ. ಘಟನೆ ಸಂಬಂಧ ಜಿಲ್ಲಾ ಉಸ್ತುವಾರಿ ಸಚಿವರಾದ ಮಧು ಬಂಗಾರಪ್ಪ ಅವರೊಂದಿಗೆ ಮಾತುಕತೆ ನಡೆಸಿ, ಮಾಹಿತಿ ಪಡೆದಿದ್ದೇನೆ. ಕುಟುಂಬಕ್ಕೆ ಆಧಾರವಾಗಿದ್ದ ದುಡಿಯುವ ಜೀವಗಳು ಈ ಘಟನೆಯಲ್ಲಿ ಬಲಿಯಾಗಿದ್ದು, ಮಾನವೀಯ ನೆಲೆಯಲ್ಲಿ ಮೃತ ಕಾರ್ಮಿಕರ ಕುಟುಂಬಕ್ಕೆ ತಲಾ 5 ಲಕ್ಷ ರೂ. ಪರಿಹಾರ ನೀಡಲಾಗುವುದು ಎಂದು ತಿಳಿಸಿದ್ದಾರೆ.

ಶ್ರೀನಂದಾ ಶವವಾಗಿ ಪತ್ತೆ

ಪುಟ 1➜ ಶ್ರೀನಂದಾ ಜೀವಂತವಾಗಿರಲಿ ಎಂಬ ನೂರಾರು ಜನರ ಪ್ರಾರ್ಥನೆಗೆ ಕೊನೆಗೂ ಫಲ ಸಿಗಲಿಲ್ಲ. ಆಕೆಯ ನಾಪತ್ತೆ ಪ್ರಕರಣದ ಕುರಿತು ವ್ಯಕ್ತವಾದ ಬೇರೆ ಬೇರೆ ವ್ಯಾಖ್ಯಾನಗಳಾವುವು ನಿಜವಾಗಲೂ ಇಲ್ಲ. ಆಕೆ ಸಾವಿಗೆ ನಿಖರವಾದ ಕಾರಣ ಏನು ಎನ್ನುವುದಕ್ಕೆ ಸಿಸಿ ಕ್ಯಾಮೆರಾ ಸೇರಿದಂತೆ ಸ್ಥಳದಲ್ಲಿ ಯಾವುದೇ ಸ್ಪಷ್ಟ ಸಾಕ್ಷ್ಯಗಳೂ ಇಲ್ಲದಿರುವುದರಿಂದ ಈಗ ಅದನ್ನು ಪತ್ತೆ ಹಚ್ಚುವ ಜವಾಬ್ದಾರಿ ಪೊಲೀಸರ ಹೆಗಲಮೇಲಿದೆ.

ಮೇಲ್ನೋಟಕ್ಕೆ ಶ್ರೀನಂದಾ ಕಾಲು ಜಾರಿ ಬಿದ್ದಿರಬಹುದು ಅಥವಾ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂಬ ಅನಿಸಿಕೆಗಳನ್ನು ಘಟನೆ ನಡೆದಿರುವ ಸ್ಥಳವು ಹುಟ್ಟುಹಾಕುತ್ತದೆ. ದೂರದ ಕೇರಳದಿಂದ ಬಂದು ಇಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವಂತಹದ್ದು ಏನಿತ್ತು? ಎನ್ನುವ ಪ್ರಶ್ನೆ ಎದುರಾದರೆ, ಅದು ಆತ್ಮಹತ್ಯೆಯೇ ಆಗಿದ್ದರೆ ಅದರ ಹಿಂದೆ ಏನಾದರೂ ಕಾರಣ ಇರಲೇ ಬೇಕಾಗುತ್ತದೆ. ಅದು ಗೊತ್ತಾಗುವವರೆಗೆ ಸಂಶಯಗಳು ಹಾಗೇ ಉಳಿಯುತ್ತವೆ ಎನ್ನುವ ಅಭಿಪ್ರಾಯಗಳು ವ್ಯಕ್ತವಾಗಿವೆ. ಮಾಣಿಕ್ಯಧಾರದ ಬಳಿ ಕುಟುಂಬದವರೆಲ್ಲರೂ ಬಂದ ಸಂದರ್ಭದಲ್ಲಿ ಶ್ರೀನಂದಾ ತನ್ನ ಬಳಿ ಇದ್ದ ಮೊಬೈಲ್‌ನ್ನು ತಾಯಿಯ ಕೈಗಿತ್ತು, ನಾನು ಜಲಪಾತದ ಬಳಿ ಬರುವುದಿಲ್ಲ, ನೀವು ಬರುವವರೆಗೆ ಇಲ್ಲೇ ಇರುತ್ತೇನೆ ಎಂದು ಒಬ್ಬಳೇ ಉಳಿದುಕೊಂಡಿದ್ದಾಳೆ. ಕುಟುಂಬದವರು ಹಿಂತಿರುಗಿ ಬರುವಷ್ಟರಲ್ಲಿ ಆಕೆ ನಾಪತ್ತೆಯಾಗಿದ್ದಾಳೆ. ಈ ಅಂಶಗಳನ್ನೂ ಆಧಾರವಾಗಿಟ್ಟುಕೊಂಡು ಪೊಲೀಸ್ ತನಿಖೆ ನಡೆಯುತ್ತಿದೆ.

ನಿಗೂಢವಾಗಿ ಕಣ್ಮರೆಯಾದ ಮಗಳನ್ನು ಜೀವಂತವಾಗಿ ಕಾಣಲು ಕಾತುರದಿಂದ ಕಾಯುತ್ತಿದ್ದ ತಂದೆ ರಮೇಶ್‌ಗೆ ಆಕೆ ಸಾವಿನ ವಿಷಯ ಕೇಳಿ ಜಂಗಾಬಲವೇ ಕುಸಿದಂತಾಯಿತು. ಆದರೂ ಹತ್ತಾರು ಕಿ.ಮೀ. ದುರ್ಗಮ ಮಾರ್ಗವನ್ನು ಸಿಬ್ಬಂದಿಯ ಜತೆ ಕ್ರಮಿಸಿ ಶವವಾಗಿ ಮಲಗಿದ್ದ ಮಗಳನ್ನು ಕಂಡು ಕಣ್ಣೀರಿಟ್ಟರು. ಅತ್ತ ತಾಯಿ ರೋಹಿಣಿ ಅವರು ಮಾಣಿಕ್ಯಧಾರದ ಬಳಿ ಮಗಳ ಅಗಲಿಕೆ ವಿಚಾರ ಕೇಳಿ ಕುಸಿದುಬಿದ್ದರು. ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತು.

ಡ್ರೋನ್ ಕ್ಯಾಮೆರಾದಲ್ಲಿ ಪತ್ತೆ

ಚಂದ್ರದ್ರೋಣ ಪರ್ವತದ ಮಾಣಿಕ್ಯಧಾರದ ಬಳಿ ನಾಲ್ಕು ದಿನಗಳ ಹಿಂದೆ ನಾಪತ್ತೆಯಾಗಿದ್ದ ಕೇರಳದ ಬಾಲಕಿ ಶ್ರೀನಂದಾ ಕೊನೆಯದಾಗಿ ನಿಂತಿದ್ದ ಸ್ಥಳದ ಪಕ್ಕದಲ್ಲೇ ಪ್ರಪಾತಕ್ಕೆ ಬಿದ್ದಿರುವುದು ಅರಣ್ಯ ಇಲಾಖೆಯ ಥರ್ಮಲ್ ಡ್ರೋನ್ ಕ್ಯಾಮೆರಾದಲ್ಲಿ ಶುಕ್ರವಾರ ಮಧ್ಯಾಹ್ನ 12 ಗಂಟೆ ವೇಳೆಗೆ ಪತ್ತೆಯಾಗಿದೆ. ಆಕೆಯ ಶವ ಸಾವಿರಾರು ಅಡಿ ಆಳದ ಮರವೊಂದರ ಬಳಿ ಕಂಡುಬಂದಿದೆ. ಕೂಡಲೇ ಶವವನ್ನು ಮೇಲೆತ್ತುವ ಕಾರ್ಯಾಚರಣೆ ಆರಂಭವಾಯಿತಾದರೂ ಸತತ ಆರು ಗಂಟೆಗಳ ಸವಾಲಿನ ಕಾರ್ಯಾಚರಣೆ ನಂತರ ಜಿಲ್ಲಾ ಆಸ್ಪತ್ರೆಯ ಶವಾಗಾರಕ್ಕೆ ಸ್ಥಳಾಂತರಿಸಲಾಯಿತು. ಶವ ಕೊಳೆತಿದ್ದ ಕಾರಣ ಅದನ್ನು ಮೇಲ್ಮುಖವಾಗಿ ಹೊರತರಲು ಸಾಧ್ಯವಿರಲಿಲ್ಲ. ಅಲ್ಲದೆ ಶವವಿದ್ದ ಸ್ಥಳಕ್ಕೆ ಹಗ್ಗ ಕಟ್ಟಿ ಇಳಿಯುವುದಕ್ಕೂ ಆಗುತ್ತಿರಲಿಲ್ಲ. ಈ ಕಾರಣಕ್ಕೆ ಸಿಬ್ಬಂದಿ ಮಲ್ಲೇನಹಳ್ಳಿ ಮಾರ್ಗದ ಹರಿಶಿನಗುಪ್ಪೆ ಭಾಗದಿಂದ ಸಾವಿರಾರು ಅಡಿ ಎತ್ತರದ ಬೆಟ್ಟವನ್ನು ಹರಸಾಹಸ ಪಟ್ಟು ಏರುವ ಮೂಲಕ ಸ್ಥಳಕ್ಕೆ ತಲುಪಬೇಕಾಯಿತು. ಪೊಲೀಸ್ ಇಲಾಖೆ, ಅರಣ್ಯ ಇಲಾಖೆ, ಅಗ್ನಿಶಾಮಕ, ಎಸ್‌ಡಿಆರ್‌ಎಫ್, ಎಎನ್‌ಎಫ್ ಸಿಬ್ಬಂದಿ ಸೇರಿ ಚಿಕ್ಕಮಗಳೂರು ಅಡ್ವೆಂಚರ್ ಸ್ಪೋರ್ಟ್ಸ್ ಕ್ಲಬ್ ಸದಸ್ಯರು ಸ್ಥಳೀಯರು ಶ್ರೀನಂದಾ ಪತ್ತೆಗಾಗಿ ನಾಲ್ಕು ದಿನ ಶ್ರಮಪಟ್ಟರು. ಅಂತಿಮವಾಗಿ ಆಕೆ ಶವವಾಗಿ ಪತ್ತೆಯಾಗಿದ್ದು ಮಾತ್ರ ಎಲ್ಲರ ಬೇಸರಕ್ಕೆ ಕಾರಣವಾಯಿತು. ಸೋಕೋ ತಂಡದ ಸಿಬ್ಬಂದಿ ಹಾಗೂ ಎಫ್‌ಎಸ್‌ಎಲ್ ಪರೀಕ್ಷಾ ಸಿಬ್ಬಂದಿಯೊಂದಿಗೆ ತೆರಳಿದ್ದ ಡಿವೈಎಸ್ಪಿ ನಾಗರಾಜ್ ಅವರು ಸ್ಥಳಮಹಜರು ನಡೆಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿತೇಂದ್ರ ಕುಮಾರ್ ದಯಾಮ, ಜಿಲ್ಲಾಧಿಕಾರಿ ಎನ್.ಎಂ. ನಾಗರಾಜು ಸ್ಥಳದಲ್ಲೇ ಇದ್ದು ಶೋಧ ಕಾರ್ಯದ ಮೇಲ್ವಿಚಾರಣೆ ನೋಡಿಕೊಂಡರು. ಸಂಜೆ 6 ಗಂಟೆ ವೇಳೆಗೆ ಶ್ರೀನಂದಾ ಮೃತದೇಹವನ್ನು ಅರಿಶಿನಗುಪ್ಪೆ ಮಾರ್ಗವಾಗಿ ಕೈಮರ ಮುಖಾಂತರ ನಗರದ ಮಲ್ಲೇಗೌಡ ಜಿಲ್ಲಾ ಆಸ್ಪತ್ರೆಯ ಶವಾಗಾರಕ್ಕೆ ತಂದು ಶವಪರೀಕ್ಷೆ ನಂತರ ಕುಟುಂಸ್ಥರಿಗೆ ಹಸ್ತಾಂತರಿಸಲಾಯಿತು.

ನಾಡೋಜ ಡಾ.ರಾಮಸ್ವಾಮಿ ನಿಧನ

ಪುಟ 1➜ 1980ರಲ್ಲಿ ರಾಷ್ಟ್ರೋತ್ಥಾನ ಸಾಹಿತ್ಯ ಮತ್ತು ಉತ್ಥಾನ ಮಾಸಪತ್ರಿಕೆಯ ಗೌರವ ಪ್ರಧಾನ ಸಂಪಾದಕರಾಗಿ ನಿಧನರಾಗುವವರೆಗೂ ಆ ಹುದ್ದೆಯಲ್ಲಿ ಸೇವಾನಿರತರಾಗಿದ್ದರು.

ರಾಮಸ್ವಾಮಿ ಅವರು 1966ರಿಂದ ರಾಷ್ಟ್ರೋತ್ಥಾನ ಪರಿಷತ್‌ನ ನಿಕಟ ಸಂಪರ್ಕ ಹೊಂದಿದ್ದರು. ಅಲ್ಲದೇ ರಾಷ್ಟ್ರೋತ್ಥಾನ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷರಾಗಿದ್ದರು. ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ (ಜಿಐಪಿಎ) ಗೌರವ ಕಾರ್ಯದರ್ಶಿಯಾಗಿಯೂ ಸಾಮಾಜಿಕ ಕಾರ್ಯಗಳಲ್ಲಿ ಅವರು ತಮ್ಮನ್ನು ತೊಡಗಿಸಿಕೊಂಡಿದ್ದರು.

ಬಹುಭಾಷಾ ಪರಿಣಿತ: ರಾಮಸ್ವಾಮಿ ಅವರು ಕನ್ನಡ, ತೆಲುಗು, ಸಂಸ್ಕೃತ, ಹಿಂದಿ, ಇಂಗ್ಲಿಷ್, ಜರ್ಮನ್, ಫ್ರೆಂಚ್ ಭಾಷೆಗಳಲ್ಲಿ ಪ್ರಾವೀಣ್ಯತೆ ಹೊಂದಿದ್ದರು. ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಸುಮಾರು 55ಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿರುವ ಅವರು ಸಾವಿರಾರು ಲೇಖನ ಬರೆದಿದ್ದಾರೆ. ಐದು ದಶಕಗಳ ಸಾಹಿತ್ಯ ಮತ್ತು ಪತ್ರಿಕೋದ್ಯಮ ಜೀವನದ ನಡುವೆ ಸ್ವದೇಶಿ ಚಳವಳಿಯ ಬಲವಾದ ಪ್ರತಿಪಾದಕರೂ ಆಗಿದ್ದರು.

ಡಿ.ವಿ.ಗುಂಡಪ್ಪ ಮತ್ತಿತರ ಶ್ರೇಷ್ಠ ಚಿಂತಕರ ಒಡನಾಟ ಇವರಿಗೆ ಲಭಿಸಿತ್ತು. ಡಿ.ವಿ.ಜಿ. ಅವರೊಂದಿಗೆ ಅತ್ಯಂತ ನಿಕಟ ಸಂಪರ್ಕ ಹೊಂದಿದ್ದ ಅವರು, ಡಿವಿಜಿ ಅವರ ಅತ್ಯಮೂಲ್ಯ ಗ್ರಂಥವಾದ ಜೀವನಧರ್ಮಯೋಗ ಸೇರಿದಂತೆ ಅನೇಕ ಗ್ರಂಥಗಳ ಪ್ರಕಾಶನಕ್ಕೆ ಬಹುಮುಖವಾಗಿ ಶ್ರಮಿಸಿದವರು.

ರಾಮಸ್ವಾಮಿ ಅವರು ಬರೆದ ಶತಮಾನದ ತಿರುವಿನಲ್ಲಿ ಭಾರತ ಕೃತಿಗೆ 1992ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

ಗಣ್ಯರಿಂದ ಸಂತಾಪ

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ, ಸಹಸರಕಾರ್ಯವಾಹ ಮುಕುಂದ ಸಿ.ಆರ್., ಕ್ಷೇತ್ರೀಯ ಸಂಘಚಾಲಕ ಡಾ. ಪಿ.ವಾಮನ್ ಶೆಣೈ, ಕ್ಷೇತ್ರೀಯ ಕಾರ್ಯವಾಹ ನಾ.ತಿಪ್ಪೇಸ್ವಾಮಿ, ಕರ್ನಾಟಕ ದಕ್ಷಿಣ ಪ್ರಾಂತ ಸಂಘಚಾಲಕ ಜಿ.ಎಸ್. ಉಮಾಪತಿ, ಪ್ರಾಂತ ಕಾರ್ಯವಾಹ ಡಾ. ಎಂ. ಜಯಪ್ರಕಾಶ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸೇರಿದಂತೆ ಅನೇಕ ಗಣ್ಯರು ಡಾ. ಎಸ್.ಆರ್. ರಾಮಸ್ವಾಮಿ ಅವರ ಅಗಲಿಕೆಗೆ ಸಂತಾಪ ಸೂಚಿಸಿದ್ದಾರೆ.

ಅಂತಿಮ ದರ್ಶನ-ಅಂತ್ಯಕ್ರಿಯೆ: ಶುಕ್ರವಾರ ಬೆಳಗ್ಗೆ 10.30ರಿಂದ 12ಗಂಟೆಯವರೆಗೆ ಕೆಂಪೇಗೌಡನಗರದ ರಾಷ್ಟ್ರೋತ್ಥಾನ ಪರಿಷತ್‌ನ ಕೇಂದ್ರ ಕಚೇರಿ ಕೇಶವಶಿಲ್ಪ ಸಭಾಂಗಣದಲ್ಲಿ ಅಂತಿಮ ದರ್ಶನದ ವ್ಯವಸ್ಥೆ ಮಾಡಲಾಗಿತ್ತು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹಸರಕಾರ್ಯವಾಹ ಮುಕುಂದ ಸಿ.ಆರ್., ಅಖಿಲ ಭಾರತೀಯ ಸಹ ಬೌದ್ಧಿಕ್ ಪ್ರಮುಖ್ ಸುಧೀರ್, ಕ್ಷೇತ್ರೀಯ ಕಾರ್ಯಕಾರಿಣಿ ಸದಸ್ಯ ವಿ. ನಾಗರಾಜ, ರಾಷ್ಟ್ರೋತ್ಥಾನ ಪರಿಷತ್‌ನ ಅಧ್ಯಕ್ಷ ಎಂ.ಪಿ.ಕುಮಾರ್, ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ, ಸೇರಿದಂತೆ ಅನೇಕ ಗಣ್ಯರು ಅಂತಿಮ ದರ್ಶನ ಪಡೆದರು. ಬಳಿಕ ಚಾಮರಾಜಪೇಟೆಯ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಿತು.

ಅರ್ಜಿದಾರರಿಗೆ ₹1 ಲಕ್ಷ ದಂಡ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆಗೆ ಅಂಕಗಳ ಬದಲಿಗೆ ಗ್ರೇಡ್ ನೀಡುವುದಕ್ಕೆ ಮುಂದಾಗಿರುವ ರಾಜ್ಯ ಸರ್ಕಾರದ ನಿರ್ಧಾರ ಪ್ರಶ್ನಿಸಿ ಸಲ್ಲಿಸಿರುವ ಪಿಐಎಲ್ ವಜಾಗೊಳಿಸಿರುವ ಹೈಕೋರ್ಟ್, ಪ್ರಚಾರಕ್ಕಾಗಿ ಅರ್ಜಿ ಸಲ್ಲಿಸಲಾಗಿದೆ ಎಂದು ಅರ್ಜಿದಾರರಿಗೆ ಬರೋಬ್ಬರಿ 1ಲಕ್ಷ ರೂ.ದಂಡ ವಿಧಿಸಿ ಅರ್ಜಿ ವಜಾಗೊಳಿಸಿದೆ.

ಕರ್ನಾಟಕ ರಾಜ್ಯ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆಗೆ ಅಂಕಗಳ ಬದಲಿಗೆ ಗ್ರೇಡ್ ನೀಡುವುದಕ್ಕೆ ಮುಂದಾಗಿರುವ ರಾಜ್ಯ ಸರ್ಕಾರದ ಪ್ರಸ್ತಾವ ಪ್ರಶ್ನಿಸಿ ಬೆಂಗಳೂರಿನ ಎಚ್.ಎನ್. ಚಂದನಾ ಮತ್ತು ಎಸ್.ವೆಂಕಟೇಶ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಶುಕ್ರವಾರ ವಿಚಾರಣೆಗೆ ಕೈಗೆತ್ತಿಕೊಂಡ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾ. ಸಿ.ಎಂ. ಪೂಣಚ್ಚ ಅವರ ವಿಭಾಗೀಯ ಪೀಠ ವಜಾಗೊಳಿಸಿದೆ. ಸಚಿವರು ಆಕ್ಷೇಪಾರ್ಹವಾದ ಹೇಳಿಕೆ ನೀಡಿದ್ದು, ನ್ಯಾಯಾಲಯವು ವಿಶೇಷ ವ್ಯಾಪ್ತಿಯ ಅಧಿಕಾರ ಬಳಸಿ, ಹೇಳಿಕೆ ವಜಾಗೊಳಿಸಬೇಕು ಎಂದು ಕೋರಿದ್ದಾರೆ. ಇದೊಂದು ಪ್ರಚಾರ ಹಿತಾಸಕ್ತಿ ಹೊಂದಿರುವ ಅರ್ಜಿಯಾಗಿದ್ದು, ಅರ್ಜಿದಾರರಿಗೆ 50,000 ದಂಡ ವಿಧಿಸಿ ವಜಾಗೊಳಿಸಲಾಗಿದೆ. ಎರಡು ವಾರಗಳಲ್ಲಿ ಕಾನೂನು ಸೇವಾ ಪ್ರಾಧಿಕಾರಕ್ಕೆ ದಂಡದ ಮೊತ್ತ ಪಾವತಿಸಬೇಕು ಎಂದು ನಿರ್ದೇಶಿಸಿತು. ಇಲ್ಲವಾದಲ್ಲಿ ಅದನ್ನು ಭೂಕಂದಾಯ ಬಾಕಿಯಾಗಿ ವಸೂಲಿ ಮಾಡಲು ಜಿಲ್ಲಾಧಿಕಾರಿಗೆ ಆದೇಶ ಕಳುಹಿಸಿಕೊಡಲು ಸರ್ಕಾರಕ್ಕೆ ನಿರ್ದೇಶಿಸಿತು.

ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಹಿಂದಿಯನ್ನು ಕೈಬಿಡುವ ಆತಂಕ ವ್ಯಕ್ತಪಡಿಸಿದರು. ಅದಕ್ಕೆ ಪೀಠವು ಪತ್ರಿಕಾ ವರದಿಯಲ್ಲಿ ಮೂರು ಪದಗಳು ಮಾತ್ರ ಇವೆ. ಹಿಂದಿಯನ್ನು ಕೈಬಿಡುವ ಹೇಳಿಕೆಯೇ ವರದಿಯಲ್ಲಿಲ್ಲ. ಇದಕ್ಕಾಗಿ ದಂಡವನ್ನು 1 ಲಕ್ಷಕ್ಕೆ ಏರಿಸಲಾಗುತ್ತಿದೆ ಎಂದಿತು. ಆದೇಶದಲ್ಲಿ ಮಾರ್ಪಾಡು ಮಾಡಿದ ಪೀಠವು ದಂಡದ ಮೊತ್ತವನ್ನು 1 ಲಕ್ಷಕ್ಕೆ ಏರಿಕೆ ಮಾಡಿತು. ಅಲ್ಲದೇ, ಹಿಂದಿಯನ್ನು ಕೈಬಿಡಲಾಗುತ್ತದೆ ಎಂಬ ಹೇಳಿಕೆಯೇ ಉಲ್ಲೇಖಿತ ಪತ್ರಿಕಾ ವರದಿಯಲ್ಲಿಲ್ಲ. ಇದೊಂದು ಪ್ರಚಾರ ಹಿತಾಸಕ್ತಿ ಅರ್ಜಿಯಾಗಿದೆ ಎಂದು ಆದೇಶಲ್ಲಿ ದಾಖಲಿಸಿತು. ವಿವಾದಾತ್ಮಕ ವಿಷಯ ಸಾರ್ವಜನಿಕವಾಗಿ ಚರ್ಚೆಯಾಗುತ್ತಿದೆ ಎಂಬುದನ್ನು ಗಮನಿಸಿ, ಹೇಳಿಕೆಯಲ್ಲದ ಹೇಳಿಕೆ ಆಧರಿಸಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗಿದೆ. ಕೇವಲ ಮೂರು ಪದದ ಪತ್ರಿಕಾ ಹೇಳಿಕೆ! ಎಂದು ಕಿಡಿಕಾರಿತು.

ಅನಾವರಣ



ಬೆಂಗಳೂರು ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್(ಎಚ್‌ಎಎಲ್)ನ ಉನ್ನತೀಕರಿಸಿದ ಹೆರಿಟೇಜ್ ಸೆಂಟರ್ ಮತ್ತು ಏರೋಸ್ಪೇಸ್ ಮ್ಯೂಸಿಯಂ ಅನ್ನು ಎಚ್‌ಎಎಲ್ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಡಾ.ಡಿ.ಕೆ.ಸುನೀಲ್ ಶುಕ್ರವಾರ ಅನಾವರಣಗೊಳಿಸಿದರು.

ಗ್ರಾಹಕರಿಗೆ ತೊಂದರೆ ನೀಡಿದ್ರೆ ಕ್ರಮ

ಬೆಂಗಳೂರು: ಮಾರುಕಟ್ಟೆಯಲ್ಲಿ ಸರ್ಕಾರದ ದರದಂತೆ ಖಾಸಗಿ ಕಂಪನಿಗಳು ಗ್ಯಾಸ್ ವಿತರಿಸಬೇಕು. ಹೆಚ್ಚಿನ ದರ ವಿಧಿಸಿ ಗ್ರಾಹಕರಿಗೆ ತೊಂದರೆ ನೀಡದಿದ್ದಲ್ಲಿ ಅಂತಹ ಕಂಪನಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಿ ಸೀಜ್ ಮಾಡಲಾಗುವುದು ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದರು.



ಶುಕ್ರವಾರ ವಸಂತನಗರದಲ್ಲಿರುವ ಆಹಾರ ಭವನದಲ್ಲಿ ತೈಲ ಕಂಪನಿಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಸಚಿವರು, ಖಾಸಗಿ ಕಂಪನಿಗಳ ಹೆಚ್ಚಿನ ದರದಿಂದ ಗ್ರಾಹಕರಲ್ಲಿ ಗೊಂದಲ ಉಂಟಾಗಿದ್ದು ಅದಷ್ಟು ಕಡಿಮೆ ಮಾಡಿದರೆ ಗ್ರಾಹಕರಿಗೆ ಸಹಕಾರಿಯಾಗಲಿದ್ದು, ತಾವು ನಿರ್ಧಾರ ಮಾಡಬೇಕು ಎಂದು ಸೂಚಿಸಿದರು. ಮಾರುಕಟ್ಟೆಯಲ್ಲಿ ಗ್ರಾಹಕರು ನಿಮಗೆ ಅತ್ಯವಶ್ಯಕವಾಗಿದ್ದು ಈ ಕಷ್ಟದ ಸಂದರ್ಭದಲ್ಲಿ ಗ್ರಾಹಕರಿಗಾಗಿ ಧರ ಹೆಚ್ಚಿಸದೆ ಒಂದೆ ದರವನ್ನು ವಿಧಿಸಲು ನಿಮ್ಮ ಮಾಲಿಕರೊಂದಿಗೆ ಚರ್ಚಿಸಿ ಸರ್ಕಾರದ ದರವನ್ನು ಪಾಲಿಸುವಂತೆ ಮನವರಿಕೆ ಮಾಡಲು ಸಲಹೆ ನೀಡಿದರು.

ಕೇಂದ್ರ ಸರ್ಕಾರವು ಹಂಚಿಕೆ ಮಾಡುವ ಇಂಧನವನ್ನು ನಾವು ರಾಜ್ಯದ ಗ್ರಾಹಕರಿಗೆ ವಿತರಣೆ ಮಾಡುವುದು ಮತ್ತು ಹೆಚ್ಚಿನ ಬೇಡಿಕೆಗೆ ಒತ್ತಡ ತಂದು ವಿತರಿಸಲು ನಾವು ಬದ್ಧರಾಗಿ ಕೆಲಸ ಮಾಡುತ್ತಿದ್ದೇವೆ. ಕಾಳಸಂತೆಯಲ್ಲಿ ಹೆಚ್ಚಿನ ಧರದಲ್ಲಿ ಮಾರಾಟ ಮಾಡುವ ಮಾಲಿಕರ ವಿರುದ್ಧ ಕಾನೂನು ಕ್ರಮವಹಿಸಲಾಗುತ್ತದೆ ಮತ್ತು ಗ್ಯಾಸ್ ಸಿಲಿಂಡರ್‌ಗಳನ್ನು ವಶಪಡಿಸಿಕೊಳ್ಳಲಾಗುತ್ತಿದೆ ಎಂದರು.

ನಿತ್ಯ 29 ಸಾವಿರ ವಾಣಿಜ್ಯ ಸಿಲಿಂಡರ್ ವಿತರಣೆ

ರಾಜ್ಯದಲ್ಲಿ ಗೃಹ ಬಳಕೆಯ ಎಲ್‌ಪಿಜಿ ಸರಬರಾಜಿನಲ್ಲಿ ಯಾವುದೇ ವ್ಯತ್ಯಯವಿಲ್ಲ. ಇದುವರೆಗೆ ಒಟ್ಟು 88,99,796 ಗೃಹ ಸಿಲಿಂಡರ್‌ಗಳು ವಿತರಣೆಗೊಂಡಿವೆ. ಜತೆಗೆ 5,30,426 ವಾಣಿಜ್ಯ ಸಿಲಿಂಡರ್‌ಗಳು ಹಾಗೂ ಸುಮಾರು 1,17,522 ಆಟೋ ಎಲ್‌ಪಿಜಿ ಸಿಲಿಂಡರ್‌ಗಳು (2232.68 ಮೆಟ್ರಿಕ್ ಟನ್) ವಿತರಣೆಗೊಂಡಿವೆ. ರಾಜ್ಯದಲ್ಲಿ ನಿತ್ಯ 44,700 ವಾಣಿಜ್ಯ ಸಿಲಿಂಡರ್‌ಗಳ ಬೇಡಿಕೆ ಇದ್ದು, ಸರಾಸರಿ 29,463 ವಾಣಿಜ್ಯ ಸಿಲಿಂಡರ್‌ಗಳು ವಿತರಣೆಗೊಳ್ಳುತ್ತಿವೆ. ಆಟೋ ಎಲ್‌ಪಿಜಿ ಸರಬರಾಜು ಸರಾಸರಿ ಶೇ.98 ರಷ್ಟು ಇದೆ ಎಂದು ಸಚಿವರು ಮಾಹಿತಿ ನೀಡಿದ್ದಾರೆ.

ಕಿರುಸುದ್ದಿ

ಅಂಕಗಳ ಆಧಾರದ ಮೇಲೆ ಗ್ರೇಡ್

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಇತ್ತೀಚೆಗೆ ತೃತೀಯ ಭಾಷೆಯನ್ನು ಗ್ರೇಡ್‌ಗೆ ಸೀಮಿತಗೊಳಿಸಿದ್ದು, ಅಭ್ಯರ್ಥಿಯು ತೃತೀಯ ಭಾಷೆ ಮತ್ತು ರಾಷ್ಟ್ರೀಯ ಕೌಶಲ ಅರ್ಹತಾ ಚೌಕಟ್ಟಿನ ವಿಷಯಗಳಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಫಲಿತಾಂಶಗಳನ್ನು ಶ್ರೇಣಿಗಳಲ್ಲಿ (ಗ್ರೇಡ್) ಘೋಷಿಸಿ ಸರ್ಕಾರ ಆದೇಶಿಸಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೃತೀಯ ಭಾಷೆ ಮತ್ತು ಎನ್‌ಎಸ್‌ಕ್ಯೂಎಫ್ ವಿಷಯಗಳಲ್ಲಿ ಪಡೆದ ಅಂಕಗಳನ್ನು ಶ್ರೇಣಿಗಳ ರೂಪದಲ್ಲಿ ಪ್ರಕಟಿಸಲಿದೆ. ಈ ವಿಷಯಗಳನ್ನು ಅಂಕಪಟ್ಟಿಯಲ್ಲಿ ಹೆಚ್ಚುವರಿ ವಿಷಯಗಳಾಗಿ ನಮೂದಿಬೇಕು ಮತ್ತು ಉತ್ತೀರ್ಣರಾಗಲು ಪರಿಗಣಿಸಲಾಗುವುದಿಲ್ಲ. ಇದು 2026ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಿಂದ ಜಾರಿಗೆ ಬಂದಿದೆ. ತೃತೀಯ ಭಾಷೆಯಾದ ಹಿಂದಿ, ಅರೇಬಿಕ್, ಉರ್ದು, ಮರಾಠಿ ಸೇರಿದಂತೆ ಇತ್ಯಾದಿ ಅಂಕಗಳನ್ನು ಒಟ್ಟು ಫಲಿತಾಂಶಕ್ಕೆ ಪರಿಗಣಿಸಲಾಗುವುದಿಲ್ಲ. ಬದಲಾಗಿ ತೃತೀಯ ಭಾಷೆಯಲ್ಲಿ ವಿದ್ಯಾರ್ಥಿಗಳು ಗಳಿಸುವ ಅಂಕಗಳ ಆಧಾರದ ಮೇಲೆ ಎ,ಬಿ,ಸಿ,ಡಿ ಶ್ರೇಣಿಗಳನ್ನು ನೀಡಲಾಗುತ್ತದೆ. ಅದರಂತೆ, ತೃತೀಯ ಭಾಷೆ ಪರೀಕ್ಷೆಯಲ್ಲಿ ಶೇಕಡಾವಾರು 80 ರಿಂದ 100 ರವರೆಗೆ ಎ ಶ್ರೇಣಿ, 50 ರಿಂದ 79ರವರೆಗೆ ಬಿ ಮತ್ತು 49ರವರೆಗೆ ಸಿ ಶ್ರೇಣಿಗಳನ್ನು ನೀಡಲಿದೆ. ಅಭ್ಯರ್ಥಿಗಳು ಆಂತರಿಕ ಮೌಲ್ಯಮಾಪನ ಮತ್ತು ಬಾಹ್ಯ ಪರೀಕ್ಷೆ ಒಟ್ಟಾರೆಯಾಗಿ ಶೇ.33 ಅಂಕಗಳನ್ನು ಪಡೆಯಬೇಕು ಹಾಗೂ ಅವರ ಒಟ್ಟು 525 ಅಂಕಗಳಲ್ಲಿ ಕನಿಷ್ಟ 173 ಅಂಕಗಳನ್ನು ಗಳಿಸುವುದರೊಂದಿಗೆ ಆಯಾ ವಿಷಯದ ಒಟ್ಟು ಅಂಕಗಳಲ್ಲಿ ಪ್ರತಿ ವಿಷಯದಲ್ಲಿ ಕನಿಷ್ಟ 30 ಪ್ರತಿಶತ ಅಂಕಗಳನ್ನು ಗಳಿಸಿದರೆ ಅಂತಹ ಅಭ್ಯರ್ಥಿಗಳನ್ನು ಉತ್ತೀರ್ಣರೆಂದು ಘೋಷಿಸಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಸೂಚಿಸಿದ್ದಾರೆ.

ದೂರುದಾರರಿಗೆ ತೃಪ್ತಿಯಾಗುವ ಭಾಷೆಯಲ್ಲಿ ಪರಿಷ್ಕೃತ ಪ್ರಮಾಣಪತ್ರ

ಬೆಂಗಳೂರು: ಕಾಂತಾರ ಚಾಪ್ಟರ್-1 ಸಿನಿಮಾದ ದೈವಪಾತ್ರದ ಕುರಿತು ಅಪಮಾನಕಾರಿ ಸನ್ನೆ ಮಾಡಿ ಮಾತನಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ ದೂರುದಾರರೊಂದಿಗೆ ಚರ್ಚಿಸಿ ಅವರಿಗೆ ತೃಪ್ತಿಯಾಗುವ ಭಾಷೆಯಲ್ಲಿ ಪರಿಷ್ಕೃತ ಕ್ಷಮಾಪಣಾ ಪ್ರಮಾಣ ಪತ್ರ ಸಲ್ಲಿಸುವುದಾಗಿ ನಟ ರಣವೀರ್ ಸಿಂಗ್ ಹೈಕೋರ್ಟ್‌ಗೆ ತಿಳಿಸಿದ್ದಾರೆ. ಗೋವಾದಲ್ಲಿ ಕೆಲ ತಿಂಗಳ ಹಿಂದೆ ನಡೆದ ಭಾರತೀಯ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಕಾಂತಾರ ಚಾಪ್ಟರ್-1 ಚಿತ್ರದ ಚಾಮುಂಡಿ ದೈವಕ್ಕೆ ಅಪಮಾನ ಮಾಡಿದ ಆರೋಪದಡಿ ದಾಖಲಾಗಿರುವ ಖಾಸಗಿ ದೂರು ಮತ್ತು ಅದರ ಮುಂದುವರಿದ ಭಾಗವಾಗಿ ಬೆಂಗಳೂರಿನ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸುವಂತೆ ಕೋರಿ, ರಣವೀರ್ ಸಿಂಗ್ ಸಲ್ಲಿಸಿರುವ ಅರ್ಜಿಯನ್ನು ನ್ಯಾ. ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು. ವಿಚಾರಣೆಯ ವೇಳೆ ದೂರುದಾರರ ಪರ ವಕೀಲರು, ಅರ್ಜಿದಾರ ರಣವೀರ್ ಸಿಂಗ್ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಪಶ್ಚಾತ್ತಾಪವಿಲ್ಲ, ದೂರು ನೀಡಿರುವುದೇ ತಪ್ಪು ಎಂಬಂತೆ ಬಿಂಬಿಸಲಾಗಿದೆ ಎಂದು ಪೀಠಕ್ಕೆ ತಿಳಿಸಿದರು. ಇದಕ್ಕೆ ಅರ್ಜಿದಾರರ ಪರ ವಕೀಲರು, ದೂರುದಾರರೊಂದಿಗೆ ಚರ್ಚಿಸಿ ಅವರಿಗೆ ತೃಪ್ತಿಯಾಗುವ ಭಾಷೆಯಲ್ಲಿಯೇ ಪರಿಷ್ಕೃತ ಪ್ರಮಾಣ ಪತ್ರ ಸಲ್ಲಿಸುವುದಾಗಿ ಹೇಳಿದರು.

ಕೆಪಿಸಿಎಲ್‌ನಿಂದ 15,509 ದಶಲಕ್ಷ ಯುನಿಟ್ ಜಲವಿದ್ಯುತ್ ಉತ್ಪಾದನೆ

ಸಾರ್ವಕಾಲಿಕ ವಿದ್ಯುತ್ ದಾಖಲೆ



ಬೆಂಗಳೂರು: ಜಲ ವಿದ್ಯುತ್ ಉತ್ಪಾದನೆಯಲ್ಲಿ ಸರ್ಕಾರಿ ಸ್ವಾಮ್ಯದ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ (ಕೆಪಿಸಿಎಲ್) ಸಾರ್ವಕಾಲಿಕ ದಾಖಲೆ ನಿರ್ಮಿಸಿದೆ. ವಿದ್ಯುತ್ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿರುವ ಕೆಪಿಸಿಎಲ್ 2025-26ನೇ ಸಾಲಿನಲ್ಲಿ 15,509 ದಶಲಕ್ಷ ಯುನಿಟ್ ಜಲ ವಿದ್ಯುತ್ ಉತ್ಪಾದಿಸುವ ಮೂಲಕ ದಾಖಲೆ ಬರೆದಿದೆ.

ಕರ್ನಾಟಕವು 3.63 ಗಿಗಾವ್ಯಾಟ್ ವಿದ್ಯುತ್‌ನೊಂದಿಗೆ ಜಲ ವಿದ್ಯುತ್ ಉತ್ಪಾದನೆಯಲ್ಲಿ ದೇಶದಲ್ಲೇ ಕರ್ನಾಟಕ ಮುಂಚೂಣಿಯಲ್ಲಿದೆ ಎಂದು ಇತ್ತೀಚೆಗೆ ಕೇಂದ್ರ ಸಚಿವಾಲಯ ವರದಿ ನೀಡಿತ್ತು. ಇದರ ಮಧ್ಯೆಯೇ 2025-26ನೇ ಸಾಲಿನಲ್ಲಿ ಕೆಪಿಸಿಎಲ್ ಈ ದಾಖಲೆ ನಿರ್ಮಿಸಿರುವುದು ಹೆಚ್ಚು ಮಹತ್ವ ಪಡೆದಿದೆ. ಶರಾವತಿ ಕಣಿವೆಯಲ್ಲಿ ನಾಲ್ಕು, ಕಾಳಿ ಕಣಿವೆಯ ನಾಲ್ಕು, ವಾರಾಹಿ ಕಣಿವೆ ಮತ್ತು ಕಾವೇರಿ ಕಣಿವೆಯ ತಲಾ ಎರಡು, ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ತಲಾ ಒಂದು ವಿದ್ಯುತ್ ಉತ್ಪಾದನಾ ಸ್ಥಾವರಗಳಲ್ಲಿ 15,509 ದಶಲಕ್ಷ ಯುನಿಟ್ ವಿದ್ಯುತ್ ಉತ್ಪಾದನೆಯಾಗಿದೆ. 2024-25ನೇ ಸಾಲಿನಲ್ಲಿ 13,853 ದಶಲಕ್ಷ ಯುನಿಟ್ ವಿದ್ಯುತ್ ಉತ್ಪಾದಿಸಿರುವುದು ಇದುವರೆಗಿನ ದಾಖಲೆಯಾಗಿತ್ತು.

2025-26ನೇ ಸಾಲಿನಲ್ಲಿ ಸ್ಥಾವರಗಳ ವಿವರ

ವಿದ್ಯುತ್ ಸ್ಥಾವರದ ಹೆಸರು	ಸಿಇಎ ಗುರಿ	ಸಾಧನೆ
ಶರಾವತಿ ಕಣಿವೆ	4800 ದಶಲಕ್ಷ ಯುನಿಟ್	5642 ಮಿಲಿಯನ್ ಯುನಿಟ್ (ಶೇ. 17.54ರಷ್ಟು ಹೆಚ್ಚು)
ಮಹಾತ್ಮಾ ಗಾಂಧಿ	549 ದಶಲಕ್ಷ ಯುನಿಟ್	643 ದಶಲಕ್ಷ ಯುನಿಟ್ (ಶೇ. 17.15ರಷ್ಟು ಹೆಚ್ಚು)
ಗೇರುಸೊಪ್ಪ	1060 ದಶಲಕ್ಷ ಯೂನಿಟ್	644 ದಶಲಕ್ಷ ಯುನಿಟ್ (ಹಿಂದಿನ ವರ್ಷಕ್ಕಿಂತ ಹೆಚ್ಚು)
ವರಾಹಿ	1060 ದಶಲಕ್ಷ ಯುನಿಟ್	1599 ದಶಲಕ್ಷ ಯುನಿಟ್ (ಶೇ. 50.85ರಷ್ಟು ಹೆಚ್ಚು)
ಭದ್ರಾ	55 ದಶಲಕ್ಷ ಯುನಿಟ್	68 ದಶಲಕ್ಷ ಯುನಿಟ್ (ಶೇ. 25.39ರಷ್ಟು ಹೆಚ್ಚು)
ಶಿಂಷಾ	47 ದಶಲಕ್ಷ ಯುನಿಟ್	66 ದಶಲಕ್ಷ ಯುನಿಟ್ (ಶೇ. 41.03ರಷ್ಟು ಹೆಚ್ಚು)
ಮಾಣಿ	24 ದಶಲಕ್ಷ ಯುನಿಟ್	32 ದಶಲಕ್ಷ ಯುನಿಟ್ (ಶೇ. 34.37ರಷ್ಟು ಹೆಚ್ಚು)

ಸ್ಥಾವರದಲ್ಲಿ ದಾಖಲೆ

ರಾಜ್ಯದ ವಿದ್ಯುತ್ ಸ್ಥಾವರಗಳು ಕೇಂದ್ರ ವಿದ್ಯುತ್ ಪ್ರಾಧಿಕಾರ(ಸಿಇಎ) ನೀಡಿದ ಗುರಿಗಿಂತಲೂ ಹೆಚ್ಚಿನ ವಿದ್ಯುತ್ ಉತ್ಪಾದನೆ ಮಾಡಿವೆ. ರಾಜ್ಯದಲ್ಲಿ ಅತಿ ಹೆಚ್ಚು ಜಲ ವಿದ್ಯುತ್ ಉತ್ಪಾದನೆಯಾಗುವ ಶರಾವತಿ ಮತ್ತು ವಾರಾಹಿ ಕಣಿವೆಯ ವಿದ್ಯುತ್ ಸ್ಥಾವರಗಳಲ್ಲೂ 2025-26ನೇ ಸಾಲಿನಲ್ಲಿ ಒಟ್ಟಾರೆ 8,696 ದಶಲಕ್ಷ ಯುನಿಟ್ ವಿದ್ಯುತ್ ಉತ್ಪಾದಿಸುವ ಮೂಲಕ ದಾಖಲೆ ನಿರ್ಮಿಸಿದೆ. ಅಲ್ಲದೆ ಮಹಾತ್ಮಾ ಗಾಂಧಿ, ಗೇರುಸೊಪ್ಪ, ವರಾಹಿ ವಿದ್ಯುತ್ ಸ್ಥಾವರಗಳ ವಿದ್ಯುತ್ ಉತ್ಪಾದನೆಯಲ್ಲಿ ಹಿಂದಿನ ದಾಖಲೆಗಳನ್ನು ಮೀರಿ ಈ ಸಲ ಸಾರ್ವಕಾಲಿಕ ದಾಖಲೆ ನಿರ್ಮಾಣ ಮಾಡಿವೆ.

ಕಳೆದ ವರ್ಷ ಸಾಕಷ್ಟು ಮಳೆ ಬಿದ್ದಿರುವುದರ ಜತೆಗೆ ವಿದ್ಯುತ್ ಸ್ಥಾವರಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಣೆ ಮಾಡಿರುವುದರಿಂದ ರಾಜ್ಯದ ಜಲ ವಿದ್ಯುತ್ ಸ್ಥಾವರಗಳಲ್ಲಿ ದಾಖಲೆಯ ವಿದ್ಯುತ್ ಉತ್ಪಾದನೆಯಾಗಿದೆ.
■ ಕೆ.ಜೆ.ಜಾರ್ಜ್, ಇಂಧನ ಸಚಿವ

ಕೆಪಿಸಿಎಲ್ ರಾಜ್ಯದ ವಿದ್ಯುತ್ ಬೇಡಿಕೆಯನ್ನು ಈಡೇರಿಸಲು ಶ್ರಮಿಸಿದೆ. ಜಲವಿದ್ಯುತ್ ಕೇಂದ್ರಗಳ ಕಾರ್ಯಕ್ಷಮತೆ ಮತ್ತು ಉತ್ತಮ ನಿರ್ವಹಣೆಯಿಂದ ಹೆಚ್ಚು ವಿದ್ಯುತ್ ಉತ್ಪಾದನೆ ಸಾಧ್ಯವಾಗಿದೆ.
■ ಗೌರವ್ ಗುಪ್ತ, ಕೆಪಿಸಿಎಲ್ ವ್ಯವಸ್ಥಾಪಕ ನಿರ್ದೇಶಕ

ಖರ್ಗೆ ವಿರುದ್ಧ ದೂರು



ಹುಬ್ಬಳ್ಳಿ: ಕಾಂಗ್ರೆಸ್ಸಿನ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಬಿಜೆಪಿ, ಆರೆಸ್ಸೆಸ್ ಕುರಿತಾಗಿ ಆಡಿರುವ ದ್ವೇಷಪೂರಿತ ಭಾಷಣದ ಹಿನ್ನೆಲೆಯಲ್ಲಿ ಅವರನ್ನು ಬಂಧಿಸಿ ಕಾನೂನು ಕ್ರಮಕ್ಕೆ ಒಳಪಡಿಸುವಂತೆ ಒತ್ತಾಯಿಸಿ ಉತ್ತರ ಕರ್ನಾಟಕದ ವಿವಿಧ ಜಿಲ್ಲೆಗಳ ಪೊಲೀಸ್ ಠಾಣೆಗಳಲ್ಲಿ ಬಿಜೆಪಿ ದೂರು ದಾಖಲಿಸಿದೆ.

ಖರ್ಗೆ ಅವರು ಈ ರೀತಿ ಮಾತನಾಡುವ ಮೂಲಕ ಸಮಾಜದಲ್ಲಿ ಶಾಂತಿ ಕದಡುವ ಕೆಲಸ ಮಾಡಿ ದ್ದಾರೆ. ಈ ಕೂಡಲೇ ಬಂಧಿಸುವಂತೆ ಬಿಜೆಪಿ ಯುವ ಮೋರ್ಚಾದಿಂದ ಹೊಸಪೇಟೆ ಪಟ್ಟಣದ ಠಾಣೆಗೆ ದೂರು ನೀಡಿ ಒತ್ತಾಯಿಸಿದರು.

ಯುವ ಮೋರ್ಚಾ ಜಿಲ್ಲಾಧ್ಯಕ್ಷ ಕಿಚಿಡಿ ಕೊಟ್ರೇಶ್ ಮಾತನಾಡಿ, ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಅಸ್ಸಾಂ ಚುನಾವಣಾ ಪ್ರಚಾರದಲ್ಲಿ ಭಾಷಣ ಮಾಡುತ್ತಾ, 'ಕುರಾನ್‌ನಲ್ಲಿ ಬರೆದಿದೆ, ನಮಾಜ್ ಮಾಡುವ ಸಂದರ್ಭದಲ್ಲಿ ವಿಷ ಸರ್ಪ ಕಂಡರೆ ಅದನ್ನು ಕೊಲ್ಲಬೇಕು. ಆರ್‌ಎಸ್‌ಎಸ್ ಹಾಗೂ ಬಿಜೆಪಿ ಅದೇ ರೀತಿಯ ವಿಷ ಸರ್ಪಗಳಿ ದ್ದಂತೆ. ನೀವು ಅದನ್ನು ಕೊಲ್ಲದಿದ್ದರೆ ಬದುಕುವುದಿಲ್ಲ'ಎಂದು ಮುಸಲ್ಮಾನರಿಗೆ ಆರ್‌ಎಸ್‌ಎಸ್ ಸದಸ್ಯರನ್ನು ಕೊಲ್ಲಬೇಕು ಎಂದು ಪ್ರಚೋದಿಸಿದ್ದಾರೆ ಎಂದು ಆರೋಪ ಮಾಡಿದರು. ಖರ್ಗೆ ಮೇಲೆ ಕ್ರಮ ಆಗದಿದ್ದರೆ ತೀವ್ರ ಪ್ರತಿಭಟನೆಯ ದಾರಿ ಹಿಡಿಯುವುದಾಗಿ ಬಿಜೆಪಿ ಎಚ್ಚರಿಸಿದೆ. ಉತ್ತರ ಕನ್ನಡ ಜಿಲ್ಲೆಯ ಕಾರವಾರ ಅಂಕೋಲಾ, ಶಿರಸಿ, ದಾಂಡೇಲಿ ಮತ್ತಿತರ ಕಡೆ ಬಿಜೆಪಿ ಕಾರ್ಯಕರ್ತರು ಮಲ್ಲಿಕಾರ್ಜುನ್ ಖರ್ಗೆ ವಿರುದ್ಧ ದೂರು ದಾಖಲಿಸಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿಗಳಿಗೆ ಗೆಲುವು

ದಾವಣಗೆರೆ: ಮುಖ್ಯಮಂತ್ರಿ ಬದಲಾವಣೆ ವಿಚಾರದ ಬಗ್ಗೆ ನವೆಂಬರ್‌ನಿಂದಲೇ ಹೇಳುತ್ತಿದ್ದಾರೆ. ಅದರ ಬಗ್ಗೆ ಹೆಚ್ಚು ಮಾತನಾಡಬೇಕಾಗಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ಹರಿಹರ ತಾಲೂಕು ಬೆಳ್ಳೂಡಿ ಸಮೀಪದ ಕನಕ ಗುರುಪೀಠ ಶಾಖಾಮಠದ ಕಾರ್ಯಕ್ರಮಕ್ಕೆ ಶುಕ್ರವಾರ ಆಗಮಿಸಿದ್ದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯ ಸದನದಲ್ಲೇ ಅದರ ಬಗ್ಗೆ ಉತ್ತರ ನೀಡಿದ್ದಾರೆ. ಉಪ ಚುನಾವಣೆ ಫಲಿತಾಂಶದ ಬಳಿಕ ರಾಜಕೀಯ ಜಂಗಿ ನಿಕಾಲಿ ಕುಸ್ತಿ ಎಂದೆಲ್ಲಾ ವಿಪಕ್ಷದವರು ಹೇಳುತ್ತಿದ್ದಾರೆ. ಆದರೆ, ವಿಪಕ್ಷದವರು ಅಂದಿದ್ದೆಲ್ಲಾ ಆಗುವುದಿಲ್ಲ ಎಂದರು. ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ಎರಡೂ ಕ್ಷೇತ್ರಗಳಲ್ಲೂ ನಮ್ಮ ಪರ ಜನರ ಒಲವಿದ್ದು, ಕಾಂಗ್ರೆಸ್ ಗೆಲುವು ಸಾಧಿಸಲಿದೆ.



ಉಭಯ ಕ್ಷೇತ್ರಗಳಲ್ಲಿ ಶೇಕಡವಾರು ಮತದಾನ ಪ್ರಮಾಣ ಹೆಚ್ಚಾಗಿರುವುದು ಸಹ ನಮಗೆ ಪ್ಲಸ್ ಪಾಯಿಂಟ್ ಆಗಿದೆ. ಎರಡೂ ಕಡೆಯಲ್ಲಿ ನಮ್ಮ ಪಕ್ಷದ ಅಭ್ಯರ್ಥಿಗಳೇ ಜಯ ಸಾಧಿಸಲಿದ್ದಾರೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ವಿರುದ್ಧವೇ ಸ್ವಪಕ್ಷದ ನಾಯಕರು ಷಡ್ಯಂತ್ರ ಮಾಡಿದ್ದಾರೆಂಬ ವಿಧಾನ ಪರಿಷತ್ ವಿಪಕ್ಷ ನಾಯಕ ಸಲೀಂ ಅಹಮ್ಮದ್ ಹೇಳಿಕೆಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಅವರು, ಸಲೀಂ ಅಹಮ್ಮದ್ ರ ಹೇಳಿಕೆ ಬಗ್ಗೆ ನನಗೆ ಗೊತ್ತಿಲ್ಲ, ದಾವಣಗೆರೆ ದಕ್ಷಿಣ, ಬಾಗಲಕೋಟೆ ಉಪ ಚುನಾವಣೆಗಳಲ್ಲಿ ನಮ್ಮೆಲ್ಲಾ ನಾಯಕರು, ಮುಖಂಡರು, ಕಾರ್ಯಕರ್ತರು ಒಗ್ಗಟ್ಟಿನಿಂದ ಪಕ್ಷದ ಗೆಲುವಿಗಾಗಿ ಕೆಲಸ ಮಾಡಿದ್ದೇವೆ ಎಂದು ಅವರು ತಿಳಿಸಿದರು.

ಕ್ಷೇತ್ರ ಪುನರ್ವಿಂಗಡಣೆ ಹಾಗೂ ಮಹಿಳಾ ಮೀಸಲಾತಿ ಕುರಿತಂತೆ ಚರ್ಚಿಸಲು ಸಿಎಂ ದೆಹಲಿ ಪ್ರವಾಸ ಹೋಗಿದ್ದಾರೆ. ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಈಗಾಗಲೇ ರಾಜ್ಯ ಸರ್ಕಾರ ಕೇಂದ್ರಕ್ಕೆ ಶಿಫಾರಸು ಮಾಡಿದೆ. ಕೇಂದ್ರ ಸರ್ಕಾರ ಒಂದಿಷ್ಟು ವಿವರಣೆ ಕೇಳಿದ್ದು, ಕುರುಬ ಸಮಾಜವನ್ನು ಎಸ್ಟಿಗೆ ಸೇರ್ಪಡೆ ಮಾಡುವುದು ಕೇಂದ್ರ ಸರ್ಕಾರದ ಜವಾಬ್ದಾರಿ. ಕೇಂದ್ರದವರು ಏನು ಮಾಡುತ್ತಾರೋ ನೋಡಬೇಕು ಎಂದು ಅವರು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ದಾಖಲಾತಿಗೆ ವಿನಾಯಿತಿ

ಬೆಂಗಳೂರು: 2026-27ನೇ ಶೈಕ್ಷಣಿಕ ಸಾಲಿಗೆ ಮಕ್ಕಳನ್ನು ಒಂದನೇ ತರಗತಿ ದಾಖಲಾತಿ ಮಾಡಲು 60 ದಿನಗಳ ವಯೋಮಿತಿ ಸಡಿಲಿಕೆ ನೀಡಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆದೇಶಿಸಿದೆ. ಈ ವರ್ಷಕ್ಕೆ ಮಾತ್ರ ಅನ್ವಯವಾಗುವಂತೆ ಒಟ್ಟು 60 ದಿನಗಳು ವಿನಾಯಿತಿ ನೀಡಿದೆ.

ಕಳೆದ ಅಧಿವೇಶನದ ಸಂದರ್ಭದಲ್ಲಿ ವಿಧಾನಸಭೆಯಲ್ಲಿಯೇ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಅವರು, ಈ ವರ್ಷ ಒಂದನೇ ತರಗತಿ ದಾಖಲಾತಿಗೆ ಜೂ.1 ರಂದು ಆರು ವರ್ಷ ತುಂಬಿರದ ಮಕ್ಕಳಿಗೆ 60 ದಿನಗಳ ವಯೋಮಿತಿ ನೀಡುವುದಾಗಿ ಪ್ರಕಟಿಸಿದ್ದರು. ಆದರೆ, ಸರ್ಕಾರ ಈ ತೀರ್ಮಾನ ಪ್ರಕಟಿಸುತ್ತಿದ್ದಂತೆ ಈ ವಯೋಮಿತಿ ಸಡಿಲಿಕೆಯನ್ನು 5.5 ವರ್ಷ ತುಂಬಿದ ಮಕ್ಕಳಿಗೂ ವಿಸ್ತರಿಸಬೇಕು ಎಂದು ಹಲವು ಪೋಷಕರು ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗಳನ್ನು ಭೇಟಿಯಾಗಿ ಸರ್ಕಾರದ ಮೇಲೆ ಒತ್ತಡ ಹೇರುವ ಪ್ರಯತ್ನ ನಡೆಸಿದ್ದರು. ಆದರೆ ಇದಕ್ಕೆ ಮಣಿಯದ ಶಿಕ್ಷಣ ಇಲಾಖೆ ಇದೀಗ ಜೂ.1ಕ್ಕೆ 6 ವರ್ಷ ಪೂರ್ಣಗೊಳ್ಳಲು ಗರಿಷ್ಠ 60 ದಿನ ಬಾಕಿ ಇರುವ ಮಕ್ಕಳನ್ನು ಸಹ ಈ ಬಾರಿ ಒಂದನೇ ತರಗತಿಗೆ ದಾಖಲಿಸಿಕೊಳ್ಳಲು ಅವಕಾಶ ನೀಡಿ ಆದೇಶಿಸಿದೆ. ಸರ್ಕಾರದ ಹೊಸ ಆದೇಶದ ಪ್ರಕಾರ, ಒಂದನೇ ತರಗತಿಗೆ ದಾಖಲಾಗಲು ಮಗುವಿಗೆ ಜೂ. 1 ರಂದು ಕಡ್ಡಾಯವಾಗಿ 6 ವರ್ಷ ತುಂಬಿರಬೇಕು ಎಂಬ ನಿಯಮ ಚಾಲ್ತಿಯಲ್ಲಿದೆ. ಆದರೆ, ಪೋಷಕರ ನಿರಂತರ ಮನವಿ ಹಾಗೂ ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯನ್ನು ಪರಿಗಣಿಸಿ, ಕರ್ನಾಟಕ ಶಿಕ್ಷಣ ಅಧಿನಿಯಮ 1983ರ ಕಲಂ 20ರ ಅಡಿಯಲ್ಲಿ ಈ ಬಾರಿ ವಿಶೇಷ ವಿನಾಯಿತಿ ನೀಡಲಾಗಿದೆ ಎಂದು ಸರ್ಕಾರ ತನ್ನ ಆದೇಶದಲ್ಲಿ ತಿಳಿಸಿದೆ. ಈ ಸಡಿಲಿಕೆಯು 2026-27ನೇ ಶೈಕ್ಷಣಿಕ ಸಾಲಿಗೆ ಮಾತ್ರ ಸೀಮಿತವಾಗಿರಲಿದೆ ಎಂದು ಆದೇಶದಲ್ಲಿ ಸರ್ಕಾರ ಸ್ಪಷ್ಟಪಡಿಸಿದೆ.

ಗ್ಯಾಸ್ ಮಾದರಿ ವಿದ್ಯುತ್ ಜ್ವಾಲೆ

ಹೊಸದಿಲ್ಲಿ/ಬೆಂಗಳೂರು: ಮಧ್ಯಪ್ರಾಚ್ಯ ಯುದ್ಧ ಪರಿಣಾಮ ಗ್ಯಾಸ್, ಪೆಟ್ರೋಲಿಯಂ ಉತ್ಪನ್ನಗಳಿಲ್ಲದೆ ಜಗತ್ತೇ ತತ್ತರಿಸುತ್ತಿದ್ದರೆ, ಇತ್ತ ಭಾರತ ಹೊಸ ಹೊಸ ತಂತ್ರಜ್ಞಾನ, ಆವಿಷ್ಕಾರದೊಂದಿಗೆ ಒಂದೊಂದೇ ಸ್ವಾವಲಂಬನೆ ಹೆಜ್ಜೆ ಇರಿಸುತ್ತಿದೆ.

ಹೌದು, ಎಲ್‌ಪಿಜಿಗೆ ಪರ್ಯಾಯವಾಗಿ ಕೇಂದ್ರ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ ಅವರ ಸಲಹೆಯಂತೆ ಕೇಂದ್ರ ಸರ್ಕಾರ ದೇಶದೆಲ್ಲೆಡೆ 50 ಲಕ್ಷ ಪಿಎನ್‌ಜಿ ಸಂಪರ್ಕಕ್ಕೆ ಪ್ರಾಶಸ್ತ್ಯ ನೀಡಿದ ಬೆನ್ನಲ್ಲೇ ಇದೀಗ ಗ್ಯಾಸ್ ಸ್ಟೌ ಮಾದರಿಯಲ್ಲೇ ಜ್ವಾಲೆ ಹರಡುವ ವಿದ್ಯುತ್ ಸ್ಟೌ ಅನ್ನು ಪರಿಚಯಿಸಿ ಅದರ ಉತ್ಪಾದನೆಗೆ ಆದ್ಯತೆ ನೀಡುವ ಚಿಂತನೆ ಸಹ ನಡೆಸುತ್ತಿದೆ.



ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ಅವರು ಎಲ್‌ಪಿಜಿ ಇಲ್ಲದೆ ಜ್ವಾಲೆಯನ್ನು ಉತ್ಪಾದಿಸುವ ವಿನೂತನ ಮಾದರಿ, ತಂತ್ರಜ್ಞಾನದ ವಿದ್ಯುತ್ ಸ್ಟೌ ಅನ್ನು ಪ್ರದರ್ಶಿಸಿ, ಪರಿಚಯಿಸಿದ್ದಾರೆ. ಗ್ಯಾಸ್ ಸ್ಟೌ ರೀತಿಯೇ ಜ್ವಾಲೆ ಹರಡುವ ಈ ವಿದ್ಯುತ್ ಸ್ಟೌ ನೋಡಿ ಭಾರತದಲ್ಲಿ ಬೃಹತ್ ಪ್ರಮಾಣದಲ್ಲಿ ಇದರ ಉತ್ಪಾದನೆಗೆ ಸಿದ್ಧತೆ ನಡೆಸುವಂತೆ ಗಮನ ಸೆಳೆದಿದ್ದಾರೆ. ಎಲ್‌ಪಿಜಿಯ ಅಗತ್ಯವಿಲ್ಲದೆ ಅನಿಲದಂತೆ ಉರಿಯುವ ಶುದ್ಧ ಇಂಧನ ಮೂಲವನ್ನು ಅರಸುತ್ತಿದ್ದ ಭಾರತೀಯರಿಗೆ ಇದೀಗ ಎಲ್‌ಪಿಜಿಯಂತೆ ಜ್ವಾಲೆ ಹರಡುವ ಈ ವಿದ್ಯುತ್ ಸ್ಟೌ ಅಡುಗೆ ಅನಿಲದ ಕೊರತೆ ನೀಗಿಸುವ ಆಶಾಭಾವನೆ ಮೂಡಿಸಿದೆ. ಹೋಟೆಲ್, ಬೇಕರಿ ಮುಂತಾದ ಆಹಾರೋದ್ಯಮಿಗಳಿಗೆ ಒಂದು ಪರ್ಯಾಯ ಇಂಧನ ಮೂಲದ ಒಲೆಯಾಗಿ ಕಾಣಿಸುತ್ತಿದೆ. ಎಲ್‌ಪಿಜಿ ಬಳಸದೆ ಜ್ವಾಲೆಯನ್ನು ಉತ್ಪಾದಿಸುವ ಈ ಸ್ಟೌವ್ ಅಂದುಕೊಂಡಂತೆ ಭಾರತದಲ್ಲೇ ದೊಡ್ಡ ಮಟ್ಟದಲ್ಲಿ ತಯಾರಾದರೆ ಪ್ರಧಾನಿ ನರೇಂದ್ರ ಮೋದಿ ಅವರ ಆತ್ಮನಿರ್ಭರ ಭಾರತ ಸಾಕಾರಕ್ಕೆ ಮತ್ತೊಂದು ಗರಿ ಎನ್ನುತ್ತಾರೆ ಸಚಿವ ಪ್ರಲ್ಹಾದ ಜೋಶಿ.

ಏನಿದರ ವಿಶೇಷತೆ:? ವಿದ್ಯುತ್ ಚಾಲಿತ ಈ ಸ್ಟೌವ್ ಅಲ್ಲಿ ಎಲ್‌ಪಿಜಿ ಇಲ್ಲದೆಯೇ ಗ್ಯಾಸ್ ಒಲೆಯಂತೆಯೇ ಜ್ವಾಲೆ ಉತ್ಪಾದನೆ ಆಗುತ್ತದೆ. ಹೆಚ್ಚು ಶಾಖವೂ ಇರುತ್ತದೆ. ಮಾತ್ರವಲ್ಲದೆ, ಕಾರ್ಬನ್ ಸಹ ಹೊರ ಸೂಸುವುದಿಲ್ಲ. ನಿಜವಾಗಿ ನಾನು ಸಹ ಈ ಹೊಸ ತಂತ್ರಜ್ಞಾನದಿಂದ ಪ್ರಭಾವಿತನಾಗಿದ್ದೇನೆ ಎಂದಿದ್ದಾರೆ.

ಎಲ್‌ಪಿಜಿ ಗೆ ಪರ್ಯಾಯವಾಗಿ ದೇಶದಲ್ಲಿ ಮತ್ತೊಂದು ತಂತ್ರಜ್ಞಾನದ ಬಗ್ಗೆಯೂ ಚರ್ಚೆ ನಡೆದಿದೆ. LPG ಕೊರತೆ ಮತ್ತು ಬೆಲೆ ಏರಿಕೆ ಪರಿಣಾಮ ಹೈಡ್ರೋಜನ್ ಅಡುಗೆ ಘಟಕದ ಬಗ್ಗೆಯೂ ವ್ಯಾಪಕ ಚಿಂತನೆ ನಡೆದಿದೆ. ನೀರಿನಿಂದ ಅನಿಲ ಉತ್ಪಾದಿಸುವ ವಿಧಾನ ಇದಾಗಿದೆ.

ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನ ಬಿಡಲ್ಲ: ಕೇಂದ್ರ ಸಚಿವ

ಡಿಕೆಶಿ ಪ್ರಯತ್ನ ಫಲಿಸುವುದಿಲ್ಲ: ಎಚ್‌ಡಿಕೆ

ಮೈಸೂರು: ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನ ಬಿಟ್ಟು ಕೊಡುವುದಿಲ್ಲ, ಅವರ ಸ್ವಭಾವ ನನಗೆ ಗೊತ್ತಿದೆ. ಸಿಎಂ ಗಾದಿಗಾಗಿಯೇ ಒಬ್ಬರು ಹೆಚ್ಚಾಗಿ ದೇವರ ಮೊರೆ ಹೋಗುತ್ತಿದ್ದಾರೆ. ದೇವರಿಗೆ ಪ್ರಾರ್ಥನೆಯನ್ನು ಮನಪೂರ್ವಕವಾಗಿ ಮಾಡಬೇಕು. ಸ್ವಾರ್ಥಕ್ಕೆ ಬೇಡಿಕೊಂಡರೆ ದೇವರು ಫಲ ಕೊಡುವುದಿಲ್ಲ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವ್ಯಂಗ್ಯವಾಡಿದರು.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್‌ಗೆ ಕೊನೆಯ ಮೊಳೆ ಹೊಡೆಯು ವುದೇ ಇದೇ ಸಿದ್ದರಾಮಯ್ಯ. ಅವರನ್ನು ಕಂಡರೆ ಅಸೂಯೆ, ಹೊಟ್ಟೆಕಿಚ್ಚು ಇರುವುದು ನಮಗಲ್ಲ, ಕಾಂಗ್ರೆಸ್‌ನಲ್ಲೇ ಕೆಲವರಿಗೆ ಹೊಟ್ಟೆಕಿಚ್ಚಿದೆ' ಎಂದರು. ನಾನು ಅಹಿಂದ ಚಾಂಪಿಯನ್ ಎನ್ನುವ ಸಿದ್ದರಾಮಯ್ಯ, ಕಾಂಗ್ರೆಸ್ ಬಿಟ್ಟು ಹೊರ ಬಂದು 5-10 ಕ್ಷೇತ್ರಗಳಲ್ಲಿ ಅವರ ಅಭ್ಯರ್ಥಿಗಳನ್ನು ಗೆಲ್ಲಿಸಲಿ ನೋಡೋಣ ಎಂದು ಸವಾಲು ಹಾಕಿದರು. ರಾಜಕೀಯವೇ ಸಾಕೆಂದು ಕಣ್ಣೀರಿಟ್ಟಿದ್ದ ಸಿದ್ದರಾಮಯ್ಯಗೆ ಎಚ್.ಡಿ. ದೇವೇಗೌಡರು ಸಮಾಧಾನ ಪಡಿಸಿದ್ದರು. 1999ರ ಚುನಾವಣೆಯಲ್ಲಿ ಸಿದ್ದರಾಮಯ್ಯ ಸೇರಿದಂತೆ ನಾವೆಲ್ಲರೂ ಸೋತಿದ್ದವು. ಆಗ ಸಿದ್ದರಾ ಮಯ್ಯ, ಡಾ.ಎಚ್.ಸಿ. ಮಹದೇವಪ್ಪ ಇಬ್ಬರೂ ಎಚ್.ಡಿ. ದೇವೇಗೌಡರ ಮನೆಗೆ ಬಂದಿದ್ದರು. ನನಗೆ ರಾಜಕೀಯವೇ ಸಾಕೆಂದು ಸಿದ್ದರಾಮಯ್ಯ ಕಣ್ಣೀರಿಟ್ಟಿದ್ದರು. ಅಂದು ಅವರಿಟ್ಟಿದ್ದ ಕಣ್ಣೀರಿಗೆ ಬಕೆಟ್ಟಿ ತುಂಬುತ್ತಿತ್ತು. ಆ ಘಟನೆಗೆ ನಾನೇ ಸಾಕ್ಷಿ. ಅವರಿಗೆ ಸಮಾಧಾನ ಮಾಡಿ, ಧೈರ್ಯ ತುಂಬಿ ಬೇರೆ ವ್ಯವಸ್ಥೆಯನ್ನು ದೇವೇಗೌಡರು ಮಾಡಿಕೊಟ್ಟಿದ್ದರು. ಅದನ್ನೆಲ್ಲ ಸಿದ್ದರಾಮಯ್ಯ ಮರೆತಿದ್ದಾರೆ ಎಂದರು.

2006ರಲ್ಲಿ ಸಿದ್ದರಾಮಯ್ಯ ಅಹಿಂದ ಹೆಸರಿನಲ್ಲಿ ನಮ್ಮ ಪಕ್ಷಕ್ಕೆ ಚೂರಿ ಹಾಕಿದರು. ಅವರು ನಮ್ಮ ಪಕ್ಷ ಬಿಟ್ಟಾಗ ಅವರೊಂದಿಗೆ ಹೋದವರು ಕೇವಲ 8 ಮಂದಿ. ಇದೆಲ್ಲಾ ಸಿದ್ದರಾಮಯ್ಯ ಅವರಿಗೆ ನೆನಪಿಲ್ಲವೇ ಎಂದು ಕೇಳಿದರು. ಸಿದ್ದರಾಮಯ್ಯ ಹಣ ವಸೂಲಿಗಾಗಿಯೇ ತಮ್ಮ ಮಗ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರರನ್ನು ನೇಮಿಸಿ ಕೊಂಡಿದ್ದಾರೆ ಎಂದರು.

ಸಿಎಂ ಆದದ್ದು ದೇವರ ಕೃಪೆಯಿಂದ

ಹಿಂದೆ ನಾನು ಮುಖ್ಯಮಂತ್ರಿ ಆಗಿದ್ದು ದೇವರ ಕೃಪೆಯಿಂದ. ಒಮ್ಮೆಯೂ ನಮಗೆ ಬಹುಮತ ಬಂದಿರಲಿಲ್ಲ, ಕುಮಾರಸ್ವಾಮಿ ಸಿಎಂ ಆಗುತ್ತಾನೆಂದು ಯಾವ ಜ್ಯೋತಿಷಿಯೂ ಹೇಳಿರಲಿಲ್ಲ. ಆದರೂ ಎರಡು ಬಾರಿ ಮುಖ್ಯಮಂತ್ರಿಯಾದೆ. ಮುಂದೆಯೂ ದೇವರ ಕೃಪೆ ಇದ್ದರೆ ಆಗುತ್ತೇನೆ. ಅದು ನನ್ನ ಕೈಯಲ್ಲಿ ಇಲ್ಲ ಎಂದರು. ಶಾಸಕರು, ಕಾರ್ಯಕರ್ತರು ಪ್ರೀತಿಯಿಂದ ಮುಂದಿನ ಸಿಎಂ ಅಂತಾರೆ. ಸಿಎಂ ಆಗುವುದು ನನ್ನ ಕೈಯಲ್ಲಿಲ್ಲ ಭಗವಂತನ ಕೃಪೆ ಬೇಕು. ಹಿಂದೆ ಸಿಎಂ ಆದಾಗ ಯಾರೂ ಕೇಳಿರಲಿಲ್ಲ. ಮುಂದೆಯೂ ಅದೇ ರೀತಿ ಆಗುತ್ತದೆ ಎಂದರು.

ದ.ಕ.ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಹೇಳಿಕೆ

ನಾಯಕತ್ವ ಬದಲಾವಣೆ ವರಿಷ್ಠರ ತೀರ್ಮಾನ

ಮಂಗಳೂರು: ರಾಜ್ಯದಲ್ಲಿ ಉಪಚುನಾವಣೆ ಫಲಿತಾಂಶಕ್ಕೂ ನಾಯಕತ್ವ ಬದಲಾವಣೆಗೂ ಯಾವುದೇ ಸಂಬಂಧ ಇಲ್ಲ. ಈ ವಿಚಾರಗಳ ಬಗ್ಗೆ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಅವರು ಸ್ಪಷ್ಟವಾಗಿ ಹೇಳಿದ್ದಾರೆ ಎಂದು ದ.ಕ.ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಮಂಗಳೂರಿನಲ್ಲಿ ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ನಾಯಕತ್ವ ಬದಲಾವಣೆ ಮುಂತಾದ ವಿಚಾರಗಳ ಬಗ್ಗೆ ಪಕ್ಷದ ವರಿಷ್ಠರು ತೀರ್ಮಾನ ಮಾಡುತ್ತಾರೆ. ನಾವು ಚರ್ಚೆ ಮಾಡುವ ಅಗತ್ಯ, ಅನಿವಾರ್ಯತೆ, ಆವಶ್ಯಕತೆ ಇಲ್ಲ. ಉಪ ಚುನಾವಣೆ ನಡೆದ ಎರಡು ಕ್ಷೇತ್ರದಲ್ಲೂ ಕಾಂಗ್ರೆಸ್ ಗೆಲುವಿನ ಬಲವಾದ ನಿರೀಕ್ಷೆಗಳು ಇದೆ. ಒಳ್ಳೆಯ ಫಲಿತಾಂಶ ಬರುವ ಬಗ್ಗೆ ನೂರಕ್ಕೆ ನೂರು ವಿಶ್ವಾಸವಿದೆ ಎಂದರು.

ನಾವು ಎಲ್ಲ ವರ್ಗ, ಧರ್ಮದ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡುತ್ತೇವೆ. ನಮ್ಮಲ್ಲಿ ಯಾರನ್ನು ದೂರ ಮಾಡುವ ಪ್ರಶ್ನೆ ಬರುವುದಿಲ್ಲ. ಒಂದು ಕೋಮು ಇನ್ನೊಂದು ಕೋಮು ಎಂದು ಸೀಮಿತ ಅಲ್ಲ. ಚುನಾವಣೆ ಸಂದರ್ಭ ಟಿಕೆಟ್ ಸಿಕ್ಕಿಲ್ಲ ಎಂದು ಕೆಲವು ಆಕಾಂಕ್ಷಿಗಳಿಗೆ ನೋವು ಇರಬಹುದು. ಅದರಿಂದ ದೊಡ್ಡ ಸಮಸ್ಯೆ ಆಗುವುದಿಲ್ಲ, ನಮ್ಮವರೆಲ್ಲಾ ಚುನಾವಣಾ ಪ್ರಚಾರದಲ್ಲಿ ಒಗ್ಗಟ್ಟಾಗಿ ಕೆಲಸ ಮಾಡಿದ್ದಾರೆ. ಬಿಜೆಪಿಯಲ್ಲಿ ಲಿಂಗಾಯತರಿಗೆ ಟಿಕೆಟ್ ಕೊಟ್ಟಿಲ್ಲ, ಹಾಗೆಂದು ಲಿಂಗಾಯತರು ಯಾರು ಓಟು ಹಾಕಿಲ್ಲ ಎಂದು ಹೇಳಲು ಆಗುತ್ತಾ? ದಾವಣಗೆರೆಯಲ್ಲಿ ಹೆಚ್ಚಿನ ಅಂತರದಲ್ಲಿ ನಮ್ಮ ಅಭ್ಯರ್ಥಿ ಗೆಲ್ಲುತ್ತಾರೆ ಎಂದರು.

ಯುದ್ಧದ ಸನ್ನಿವೇಶದಿಂದಾಗಿ ಮಧ್ಯಪ್ರಾಚ್ಯದಿಂದ ಭಾರತಕ್ಕೆ ಬರುತ್ತಿದ್ದ ಕೆಲವು ಔಷಧಗಳ ಪೂರೈಕೆ ಆಗುತ್ತಿಲ್ಲ. ಔಷಧ ಪೂರೈಕೆಗೆ ಸ್ವಲ್ಪ ಸಮಯ ಕೇಳುತ್ತಿದ್ದಾರೆ. ಈ ಹಿಂದೆ ಕೊಟ್ಟಿರುವ ಆರ್ಡರ್‌ಗಳ ಡೆಲಿವರಿ ಮಾಡಲು ಆಗುತ್ತಿಲ್ಲ. 30 ದಿನ ಸಮಯ ಕೊಡಿ ಎಂದು ಕೇಳುತ್ತಿದ್ದಾರೆ ಎಂದರು.

ರಾಜ್ಯದಲ್ಲಿ ಗ್ಯಾಸ್ ಸಮಸ್ಯೆ ಇದೆ

ರಾಜ್ಯದಲ್ಲಿ ಗ್ಯಾಸ್ ಸಮಸ್ಯೆ ಇದೆ ಎಂದು ಸ್ಪಷ್ಟವಾಗಿ ಹೇಳಬೇಕು. ಸುಮ್ಮನೆ ಸಮಸ್ಯೆ ಇಲ್ಲ ಎಂದು ಹೇಳಬಾರದು. ಅನೇಕ ಕಡೆ ಆಹಾರ ತಯಾರಿಕೆ ಶೇ.50 ಕ್ಕೆ ಇಳಿಸಿದ್ದಾರೆ. ಕೋವಿಡ್ ಸಂದರ್ಭದ ಪರಿಸ್ಥಿತಿಯಂತಾಗಿದೆ ಈಗ. ಹಾಗೆಂದು ಸಮಸ್ಯೆ ಇಲ್ಲ ಎಂದು ಹೇಳಬಾರದು. ಜನರಿಗೆ ಸ್ಪಷ್ಟವಾಗಿ ವಿಷಯ ತಿಳಿಸಬೇಕು. ಎಲ್ಲ ಚೆನ್ನಾಗಿದೆ ಎಂದು ಹೇಳಿ ಜನರನ್ನು ದಾರಿ ತಪ್ಪಿಸಬಾರದು. ನಾವು ಕೇಂದ್ರ ಸರ್ಕಾರವೇ ಹೊಣೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಸಮಸ್ಯೆ ಇಲ್ಲ ಎಂದು ಯಾಕೆ ಹೇಳಬೇಕು. ಪರ್ಯಾಯ ಕ್ರಮ, ನಿಜಾಂಶವನ್ನು ಜನರ ಮುಂದೆ ಇಡಬೇಕು. ಎಲ್ಲ ಕಡೆ ಕಮರ್ಷಿಯಲ್ ಗ್ಯಾಸ್‌ಗೆ ತೊಂದರೆ ಇದೆ. ಇಲ್ಲ ಎಂದು ಹೇಳುವುದಕ್ಕೆ ಆಗುವುದಿಲ್ಲ. ಸಮಸ್ಯೆ ಇದ್ದಾಗ ಇಲ್ಲ ಎಂದು ಹೇಳಿದರೆ ಏನು ಪ್ರಯೋಜನ ಎಂದು ಅವರು ಪ್ರಶ್ನಿಸಿದರು.

ಸಂಪಾದಕೀಯ

ಮಾತುಕತೆ ಯಶಸ್ವಿಯಾದೀತೇ?

ಅಮೆರಿಕ-ಇರಾನ್ ಯುದ್ಧ ವಿರಾಮದ ಭವಿಷ್ಯ ಹಾಗೂ ಪಶ್ಚಿಮ ಏಷ್ಯಾದ ಸ್ಥಿರತೆಯನ್ನು ನಿರ್ಧರಿಸಬಲ್ಲ ಮಹತ್ವದ ಮಾತುಕತೆಗಳ ಹೊಣೆಗಾರಿಕೆಯನ್ನು ಹೊತ್ತು ಅಮೆರಿಕ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಪಾಕಿಸ್ತಾನದತ್ತ ಬರುತ್ತಿದ್ದಾರೆ. ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ಇಡೀ ಶಾಂತಿ ಮಾತುಕತೆಯ ಹೊಣೆಯನ್ನು ವ್ಯಾನ್ಸ್‌ಗೆ ವಹಿಸಿರುವುದು ಅಚ್ಚರಿಯ ವಿಚಾರವೇ.

ಆದರೂ, ಇವರಿಗೆ ವಹಿಸಿರುವುದು ಟ್ರಂಪ್ ಅವರ ತಂತ್ರಾತ್ಮಕ ನಡೆ ಎಂದೇ ಹೇಳಬೇಕು. ಇರಾನ್ ಜೊತೆಗಿನ ಉದ್ವಿಗ್ನತೆ ಆರು ವಾರಗಳ ಯುದ್ಧದ ಬಳಿಕ ತಾತ್ಕಾಲಿಕ ಯುದ್ಧ ವಿರಾಮಕ್ಕೆ ಬಂದಿದ್ದರೂ, ನೆಲಮಟ್ಟದ ವಾಸ್ತವಿಕತೆ ಇನ್ನೂ ಅತೀ ನಾಜೂಕಾಗಿದೆ. ಇಂತಹ ಸಂದರ್ಭದಲ್ಲಿ 'ಸದಭಿಪ್ರಾಯದಿಂದ ಮಾತುಕತೆಗೆ ಬನ್ನಿ; ಇಲ್ಲವಾದರೆ ಅಮೆರಿಕೆಯನ್ನು ಆಟವಾಡಲು ಯತ್ನಿಸಬೇಡಿ' ಎಂಬ ವ್ಯಾನ್ಸ್ ಎಚ್ಚರಿಕೆ, ವಾಷಿಂಗ್ಟನ್‌ನ ನಿಲುವು ಕಠಿಣವಾಗಿಯೇ ಉಳಿದಿದೆ ಎಂಬ ಸಂದೇಶ ನೀಡುತ್ತದೆ.

ಆದರೆಪ್ರಶ್ನೆಯೇನಂದರೆಮಾತುಕತೆಯಿಂದನಿಜವಾದಶಾಂತಿಸಾಧ್ಯವೇ? ಇರಾನ್‌ನ ಅಣು ಹಾಗೂ ಕ್ಷಿಪಣಿ ಕಾರ್ಯಕ್ರಮ, ಮಧ್ಯಪ್ರಾಚ್ಯದ ಪ್ರತಿನಿಧಿ ಸಶಸ್ತ್ರ ಗುಂಪುಗಳಿಗೆ ಅದರ ಬೆಂಬಲ, ಹಾರ್ಮುಜ್ ಜಲಸಂಧಿಯಂತಹ ತಂತ್ರಾತ್ಮಕ ಮಾರ್ಗಗಳ ಭದ್ರತೆ ಇವೆಲ್ಲವೂ ಮಾತುಕತೆ ಮೇಜಿನ ಮೇಲೆ ಒಂದೇ ಸಮಯದಲ್ಲಿ ಬಗೆಹರಿಯಬೇಕಾದ ಗಂಭೀರ ವಿಷಯಗಳು. ಈ ಸಮಸ್ಯೆಗಳಿಗೆ ತಾತ್ಕಾಲಿಕ ಒಪ್ಪಂದ ಸಾಲದು; ಪರಸ್ಪರ ವಿಶ್ವಾಸ ಮತ್ತು ಸ್ಪಷ್ಟ ಭದ್ರತಾ ಖಾತರಿ ಅಗತ್ಯ. ಆದರೆ, ಜಾಗತಿಕ ಭಯೋತ್ಪಾದನೆಯ ಕೇಂದ್ರ ಬಿಂದು ಎನ್ನಿಸಿಕೊಂಡಿರುವ ಪಾಕ್ ಅನ್ನು ಶಾಂತಿ ಮಾತುಕತೆಗೆ ಆಯ್ಕೆ ಮಾಡಿಕೊಂಡಿರುವುದೇ ವಿಚಿತ್ರವಾಗಿದೆ.

ವ್ಯಾನ್ಸ್ ಅವರ ರಾಜತಾಂತ್ರಿಕ ಅನುಭವ ಸೀಮಿತವಾಗಿರುವುದು ಈ ಮಾತುಕತೆಗಳ ಯಶಸ್ಸಿನ ಬಗ್ಗೆ ಅನುಮಾನ ಮೂಡಿಸುತ್ತದೆ. ಆದರೆ ಟ್ರಂಪ್ ಆಡಳಿತವು ಅವರನ್ನು ಮುಂಚೂಣಿಗೆ ತಂದುಕೊಂಡಿರುವುದು, ಕಠಿಣ ನಿಲುವು ಮತ್ತು ಸಂಧಾನ ಮನೋಭಾವ ಎರಡನ್ನೂ ಸಮತೋಲನಗೊಳಿಸುವ ಪ್ರಯತ್ನವೆಂದು ಕಾಣುತ್ತದೆ. ಈ ಮಾತುಕತೆಗಳು ವಿಫಲವಾದರೆ ಪಶ್ಚಿಮ ಏಷ್ಯಾ ಮತ್ತೊಮ್ಮೆ ದೊಡ್ಡ ಮಟ್ಟದ ಅಸ್ಥಿರತೆಯತ್ತ ಜಾರಬಹುದು; ಯಶಸ್ವಿಯಾದರೆ ಅದು ಕೇವಲ ಯುದ್ಧವಿರಾಮವಲ್ಲ, ಹೊಸ ಶಾಂತಿ ಸಮೀಕರಣಕ್ಕೂ ದಾರಿ ಮಾಡಬಹುದು.

ಆದರೆ, ಪಾಕಿಸ್ತಾನದಲ್ಲಿ ನಡೆಯುತ್ತಿರುವ ಮಾತುಕತೆಗೆ ಮುನ್ನವೇ ಹಲವಾರು ಸಂದೇಹಗಳು, ವಿಘ್ನಗಳು ಕಾಣಿಸಿಕೊಳ್ಳುತ್ತಿವೆ. ಲೆಬನಾನ್ ಮೇಲಿನ ಇಸ್ರೇಲ್ ದಾಳಿ, ಮಾತುಕತೆಯ ದಿಕ್ಕು ಬದಲಿಸಿದೆ. ವ್ಯಾನ್ಸ್, ಕದನ ವಿರಾಮದಲ್ಲಿ ಲೆಬನಾನ್ ದಾಳಿ ವಿಚಾರ ಸೇರಿಲ್ಲ ಎಂದಿದ್ದರೆ, ಪಾಕಿಸ್ತಾನ ಸೇರಿದೆ ಎನ್ನುತ್ತಿದೆ. ಇರಾನ್ ಕೂಡ ಲೆಬನಾನ್ ಮೇಲೆ ದಾಳಿ ನಿಲ್ಲಿಸಿದರಷ್ಟೇ ಮಾತುಕತೆ ಅಂತ ಹೇಳುತ್ತಿದೆ. ಒಟ್ಟಾರೆಯಾಗಿ ಈ ಮಾತುಕತೆ ಎತ್ತ ಸಾಗುತ್ತಿದೆ ಎಂಬುದೇ ಅರಿವಿಲ್ಲದ ಸಂಗತಿಯಾಗಿದೆ.

ಹೀಗಾಗಿ ಈ ಎಲ್ಲ ಮಾತುಕತೆಗಳು ಕೇವಲ ಅಮೆರಿಕಾ-ಇರಾನ್ ಸಂಬಂಧಗಳ ವಿಷಯವಲ್ಲ; ಅವು ಜಾಗತಿಕ ಇಂಧನ ಭದ್ರತೆ, ಪಶ್ಚಿಮ ಏಷ್ಯಾದ ರಾಜಕೀಯ ಸಮತೋಲನ ಮತ್ತು ವಿಶ್ವಶಾಂತಿಯ ಭವಿಷ್ಯವನ್ನೇ ಸ್ಪರ್ಶಿಸುವ ಮಹತ್ವದ ಘಟ್ಟವಾಗಿವೆ.

ಹಸ್ತದಲ್ಲಿ ಸೂರ್ಯ ರೇಖೆ

ಪೂರ್ಣ ಪರಿಪೂರ್ಣ
ಪೂರ್ಣಪ್ರಜ್ಞ ಬೇಳೂರು
poornaprajnabelur@gmail.com



ಹಸ್ತ ಸಾಮುದ್ರಿಕಾ ಶಾಸ್ತ್ರದ ಪ್ರಕಾರ, ಹಸ್ತದಲ್ಲಿರುವ ಸೂರ್ಯ ರೇಖೆಯನ್ನು ಅತ್ಯಂತ ಶ್ರೇಷ್ಠವಾದ ರೇಖೆ ಎನ್ನಲಾಗುತ್ತದೆ. ಇದು ಎಲ್ಲಾ ಕಾಲದಲ್ಲೂ ಶುಭದಾಯಕ. ಮಂಗಳದಾಯಕ. ಯಶಸ್ಸನ್ನು ನೀಡುವಂತಹಾ ರೇಖೆ. ಸನ್‌ಲೈನ್ ಅಥವಾ ಅಪೋಲೋ ಲೈನ್ ಎಂದು ಕರೆಯಲಾಗುವ ಇದು ನಿಮ್ಮ ಹಸ್ತದ ಉಂಗುರ ಬೆರಳಿನ ಕೆಳಗೆ ನೇರವಾಗಿದೆ. ಉಂಗುರ ಬೆರಳಿನ ಕೆಳಗೆ ಉಬ್ಬಿರುವ ಪ್ರದೇಶವನ್ನು ಸೂರ್ಯ ಪರ್ವತ ಎನ್ನಲಾಗುತ್ತದೆ. ಆದರೆ....ಈ ರೇಖೆಯು ನೀವು ಎಣಿಸಿದಂತೆ ಉಂಗುರ ಬೆರಳಿನಿಂದ ಕೆಳಗೆ ಇಳಿದಿದ್ದಲ್ಲ!! ನಿಮ್ಮ ಆಯುಸ್ಸು ರೇಖೆ, ಹೃದಯ ರೇಖೆ ಅಥವಾ ಬುದ್ಧಿ ರೇಖೆಯಿಂದ ಪ್ರಾರಂಭವಾಗಿ ಉಂಗುರ ಬೆರಳಿನ ಕಡೆ ಸಾಗಿದೆ. ಈ ರೇಖೆ ನಿಮ್ಮ ಯಶಸ್ಸನ್ನು, ಅದೃಷ್ಟವನ್ನು, ಕೀರ್ತಿಯನ್ನು ಮತ್ತು ಸಾಧನೆಯನ್ನು ಸೂಚಿಸುತ್ತದೆ.

ಕೆಲವರಿಗೆ ಈ ರೇಖೆಯು ಮಣಿಕಟ್ಟಿನಿಂದ ಸಾಗಿರುವುದೂ ಇದೆ. ಅಥವಾ ಅಂಗೈ ಮಧ್ಯದಿಂದ ಸಾಗಿರುತ್ತದೆ. ಹೀಗೆ ಸಾಗಿದ ರೇಖೆಯು ನೋಡಲು ಸ್ಪಷ್ಟವಾಗಿ, ದಪ್ಪಗೆ, ಎಲ್ಲೂ ತಡೆಗಳಿಲ್ಲದೇ ನೇರವಾಗಿ ಉಂಗುರ ಬೆರಳಿನವರೆಗೆ ಅಂದರೆ ಸೂರ್ಯ ಪರ್ವತವನ್ನು ಏರಿ ಸಾಗಿದರೆ, ಅಂತಹವರು ಗೌರವ, ಕೀರ್ತಿ, ಅದೃಷ್ಟ ಮತ್ತು ಉನ್ನತ ಸ್ಥಾನವನ್ನು ಪಡೆದುಕೊಂಡೇ ಹುಟ್ಟಿರುತ್ತಾರೆ.


ಹೀಗೆ ಸಾಗಿದ ರೇಖೆಯ ದಾರಿಯಲ್ಲಿ ತ್ರಿಕೋನಗಳು, ಚತುಷ್ಕೋನಗಳು ಇದ್ದರೆ ಅವರನ್ನು ಜೀವನ ಪೂರ್ತಿ ಯಶಸ್ಸಿನ ದಾರಿಯಲ್ಲಿ ಸಾಗುವುದನ್ನು ಯಾರಿಗೂ ತಡೆಯಲು ಆಗದು. ಅಥವಾ ಸೂರ್ಯ ಪರ್ವತವು ಏರಿದ್ದರೂ ಅಂದರೆ ಉಬ್ಬಿದ್ದರೂ ಸಾಕು ಅಂತಹಾ ವ್ಯಕ್ತಿಯ ಜೀವನದಲ್ಲಿ ಸದಾ ಒಳಿತೇ ಆಗುತ್ತದೆ. ಸರ್ಕಾರಿ ಉದ್ಯೋಗ, ಕಲೆ, ರಾಜಕೀಯ ಮತ್ತು ವ್ಯವಹಾರಗಳಲ್ಲಿ ಅವರಿಗೆ ತುಂಬಾ ಶ್ರೇಯಸ್ಸು ದೊರೆಯುತ್ತದೆ. ಸೂರ್ಯ ಪರ್ವತದ ಮೇಲೆ ತ್ರಿಕೋನಗಳು, ಚತುಷ್ಕೋನಗಳು ಇದ್ದರೆ ಆಗ ಉನ್ನತ ಶ್ರೇಣಿಯನ್ನು ಪಡೆಯುತ್ತಾರೆ. ಅವರಿಗೆ ಪ್ರತಿಷ್ಠೆ ಮತ್ತು ಸನ್ಮಾನಗಳು ಹುಡುಕಿಕೊಂಡು ಬರುತ್ತವೆ.

ಅದೇ ದಪ್ಪವಾಗಿ ಇದ್ದರೆ ಅವರು ಹೆಚ್ಚು ಆಲೋಚನೆ ಮಾಡುವುದಿಲ್ಲ. ತಕ್ಷಣದ ತೀರ್ಮಾನಗಳನ್ನು ತೆಗೆದುಕೊಳ್ಳುವವರಾಗಿರುತ್ತಾರೆ. ಪ್ರತ್ಯುತ್ಪನ್ನ ಮತಿಗಳು, ಮಾಡಿದ್ದಕ್ಕೆ ಪಶ್ಚಾತ್ತಾಪ ಪಡದಿರುವವರು ಆಗಿರುತ್ತಾರೆ. ಸೂರ್ಯ ರೇಖೆಯು ಬುದ್ಧಿ ರೇಖೆಯಿಂದ ಹೊರಟಿದ್ದರೆ, ಅಂತಹಾ ವ್ಯಕ್ತಿಗಳು ತಮ್ಮ ಎಲ್ಲಾ ಕೆಲಸಗಳಿಗೆ ಬುದ್ಧಿಯನ್ನು ಉಪಯೋಗಿಸುತ್ತಾರೆ. ಹೆಚ್ಚು ಓದದಿದ್ದರೂ ಮಹಾ ಬುದ್ಧಿಶಾಲಿ ಗಳಾಗಿರುತ್ತಾರೆ. ಸದಾ ಪರನಿಂದಕರು, ಯಾರು ಯಾವ ಕೆಲಸವನ್ನು ಮಾಡಿ ದರೂ ಅದು ಸರಿಯಾಗಿಲ್ಲ ಎಂದು ನಿಂದಿಸುವವರೂ, ಕುಹಕಿಗಳೂ ಸಹಾ ಆಗಿರುತ್ತಾರೆ.

ಸೂರ್ಯ ರೇಖೆಯು ಶಿಲುಬೆಯಂತೆ ಇದ್ದರೆ, ಅಂತಹವರು ಕಠಿಣ ಪರಿಶ್ರಮಿಗಳು ಆಗಿರುತ್ತಾರೆ. ಪಕ್ಕದ ಕಿರುಬೆರಳಿನ ಕೆಳಗಿರುವ ಬುಧ ಪರ್ವತಕ್ಕೆ ವಾಲಿದ್ದರೆ, ಅವರು ಉತ್ತಮ ವಾಗ್ಮಿಗಳು, ಯಶಸ್ವೀ ಉದ್ಯಮಿಗಳೂ, ಉನ್ನತ ಆಡಳಿತಾಧಿಕಾರಿಗಳೂ ಆಗಿರುತ್ತಾರೆ. ತೋರು ಬೆರಳಿನ ಕೆಳಗಿರುವ ಗುರು ಪರ್ವತವನ್ನು ತಲುಪಿದರೆ, ಅಂತಹಾ ವ್ಯಕ್ತಿಗಳು ರಾಜಕೀಯದಲ್ಲಿ ಬಲಾಢ್ಯರಾಗಿ ರುತ್ತಾರೆ. ಕೆಲಸ ಮಾಡುವುದರಲ್ಲಿ ಮತ್ತು ಮಾಡಿಸುವುದರಲ್ಲಿ ಮುಂದೆ. ತುಂಬಾ ಮಹತ್ವಾಕಾಂಕ್ಷಿಗಳು ಆಗಿರುತ್ತಾರೆ.

ಮಂಗಳ ಪರ್ವತವನ್ನು ಸೂರ್ಯ ರೇಖೆಯು ಮುಟ್ಟಿದ್ದರೆ, ಅಂತಹಾ ವ್ಯಕ್ತಿಗಳು ಧೈರ್ಯಶಾಲಿಗಳು ಮತ್ತು ಯಾವುದೇ ಕೆಲಸಕ್ಕೆ ಮುನ್ನುಗ್ಗುವವರು ಆಗಿರುತ್ತಾರೆ. ತಾವು ಸಾಧಿಸಲು ಬಯಸಿದ್ದನ್ನು ಹಠ ಹಿಡಿದು ಸಾಧಿಸುತ್ತಾರೆ. ಸೂರ್ಯನ ಪರ್ವತದಿಂದ ಯಾವುದೇ ರೇಖೆಯು ಮಧ್ಯದ ಬೆರಳಿನ ಕೆಳಭಾಗದಲ್ಲಿರುವ ಶನಿ ಪರ್ವತಕ್ಕೆ ಸಾಗಿದ್ದರೆ ಅಥವಾ ಶನಿ ಪರ್ವತದಿಂದ ಸೂರ್ಯ ಪರ್ವತಕ್ಕೆ ಯಾವುದಾದರೂ ರೇಖೆ ಬಂದಿದ್ದರೆ ಅಂಥಹಾ ವ್ಯಕ್ತಿಗಳು ವಿಶೇಷ ವ್ಯಕ್ತಿಗಳಾಗಿರುತ್ತಾರೆ. ಅವರಿಗೆ ಅನೇಕ ಸಿದ್ಧಿಗಳು ಲಭ್ಯವಾಗುತ್ತವೆ. ಜನರನ್ನು ನೋಡಿದಾಕ್ಷಣದಲ್ಲೇ ಅವರ ಮನದಲ್ಲಿ ಇರುವುದು ತಿಳಿಯುತ್ತದೆ. ಹಾಗೂ ಅದನ್ನು ತಿಳಿದುಕೊಂಡು ತಮ್ಮ ಮತ್ತು ಅವರೊಂದಿಗಿನ ವ್ಯವಹಾರ, ಸಂಬಂಧಗಳನ್ನು ನಿರ್ಧರಿಸುತ್ತಾರೆ. ಇವರು ವಕೀಲರಾಗುತ್ತಾರೆ. ನ್ಯಾಯಾಧೀಶರಂತೆ ವರ್ತಿಸುತ್ತಾರೆ. ಪ್ರಾಮಾಣಿಕರೂ, ನಂಬಿಕೆಗೆ ಯೋಗ್ಯರೂ ಆಗಿರುತ್ತಾರೆ.

ಹೆಬ್ಬೆರಳ ಕೆಳಗಿರುವ ಶುಕ್ರಪರ್ವತದಿಂದ ಸೂರ್ಯ ರೇಖೆಯು ಹೊರಟಿದ್ದರೆ, ಅವರು ತುಂಬಾ ಐಷಾರಾಮಿ ಜೀವನವನ್ನು ನಡೆಸುವವರಾಗಿರುತ್ತಾರೆ. ಸೌಂದರ್ಯಾರಾಧಕರು, ಕಾಮವನ್ನು ಅತಿಯಾಗಿ ಬಯಸುವವರೂ ಆಗಿರುತ್ತಾರೆ. ಅದೇ ಅದರ ಪಕ್ಕದಲ್ಲಿ ಇರುವ ಚಂದ್ರ ಪರ್ವತದಿಂದ ಸೂರ್ಯರೇಖೆಯು ಹೊರಟಿದ್ದರೆ, ಅವರು ಸದಾ ಪ್ರಯಾಣ ಮಾಡುವವರೂ, ಹೆಚ್ಚು ಹೆಚ್ಚು ಭ್ರಮಾಲೋಕದಲ್ಲಿ ಬದುಕುವವರೂ, ಮಾನಸಿಕವಾಗಿ ತುಂಬಾ ಪ್ರಬಲರೂ ಆಗಿರುತ್ತಾರೆ. ಚಂದ್ರ ರೇಖೆಯಿಂದ ಹೊರಟ ಸೂರ್ಯ ರೇಖೆಯ ಮಧ್ಯೆ ಯಾವುದಾದರೂ ದ್ವೀಪ ರಚನೆಯಾಗಿದ್ದರೆ, ಕತ್ತರಿಸಿದ್ದರೆ, ಮಚ್ಚೆಗಳೇನಾದರೂ ಇದ್ದರೆ ಅಂತಹಾ ವ್ಯಕ್ತಿಗಳು ಮಾನಸಿಕವಾಗಿ ಅಸ್ವಸ್ಥರಾಗುತ್ತಾರೆ. ಸೂರ್ಯ ಪರ್ವತ ಅಥವಾ ಸೂರ್ಯ ರೇಖೆಯ ಮೇಲೆ ಗುಣಾಕಾರದ ಚಿಹ್ನೆ ಇದ್ದರೆ ಅಂತಹಾ ವ್ಯಕ್ತಿಗಳಿಗೆ ಪ್ರತಿಯೊಂದು ವ್ಯವಹಾರದಲ್ಲೂ ನಷ್ಟವೇ ಆಗುತ್ತದೆ. ಬಿಂದು ಅಥವಾ ವೃತ್ತವಿದ್ದರೆ ಅವರಿಗೆ ಕಣ್ಣಿನ ದೋಷ ಉಂಟಾಗುತ್ತದೆ.



ಸೂರ್ಯ ರೇಖೆಯು ನೇರವಾಗಿ ಮತ್ತು ಸ್ಪಷ್ಟವಾಗಿ ನೋಡಿದ ಕೂಡಲೇ ಎದ್ದು ಕಾಣುವಂತೆ ಇದ್ದರೆ ಅಂತಹಾ ವ್ಯಕ್ತಿಗಳು ಸಾರ್ವಜನಿಕ ಜೀವನದಲ್ಲಿ ತುಂಬಾ ಹೆಸರು ಗಳಿಸುತ್ತಾರೆ. ಸೇವಾ ಕಾರ್ಯಗಳಲ್ಲಿ ಸದಾ ಮುಂದಿರುತ್ತಾರೆ. ಆರ್ಥಿಕ ವಾಗಿ ಸಮೃದ್ಧರಾಗಿರುತ್ತಾರೆ. ಆದರೆ ಅವರು ಮಕ್ಕಳ ವಿಷಯದಲ್ಲಿ ಅದೃಷ್ಟಹೀನ ರಾಗಿರುತ್ತಾರೆ. ಇವರಿಗೆ ಮಕ್ಕಳು ಇದ್ದರೂ ತುಂಬಾ ಐಷಾರಾಮಿ ಗಳೂ, ದುರಹಂ ಕಾರಿಗಳೂ ಮತ್ತು ಸಕಲ ದುಷ್ಟ ಚಟಗಳಿಂದ ಕೂಡಿರುವವರೂ ಆಗಿರುತ್ತಾರೆ.

ಅಂಗಾದಿತ್ಯ ಮತ್ತು ಸೂರ್ಯ ರೇಖೆ

ನಿಮ್ಮ ಭವಿಷ್ಯವನ್ನು ನಕ್ಷತ್ರಗಳು, ಗ್ರಹಗಳು, ವಾರ, ತಿಥಿ, ಮಾಸ, ಯೋಗ, ಕರಣ ಮುಂತಾದವುಗಳೊಂದಿಗೆ ಹಸ್ತ ರೇಖೆಗಳೂ ಸಹಾ ರೂಪಿಸುತ್ತವೆ. ಅಂಗಾದಿತ್ಯನ ಸ್ಥಾನವು ಯಾವುದು ಎನ್ನುವುದರ ಮೇರೆಗೆ ಅವೆಲ್ಲಾ ನಿರ್ಧಾರಗಳಾಗುತ್ತವೆ. ಅಂಗಾದಿತ್ಯ ತಲೆಯ ಮೇಲಿದ್ದರೆ ಸೂರ್ಯ ರೇಖೆಯು ಪ್ರಜ್ವಲಿಸುತ್ತದೆ. ಅವರ ಕೆಲಸಗಳೆಲ್ಲಾ ಪ್ರಖರತೆಯಿಂದ ಕೂಡಿರುತ್ತದೆ. ಅದೇ ಅಂಗಾ ದಿತ್ಯನು ಮುಖದ ಮೇಲಿದ್ದರೆ ಅವರು ಹೊಳಪಿನಿಂದ ಸದಾ ಲವಲವಿಕೆಯಿಂದ ಕೂಡಿರುತ್ತಾರೆ. ಅದರಲ್ಲೂ ಸೂರ್ಯ ರೇಖೆ ಚನ್ನಾಗಿದ್ದರೆ ಅಂತಹಾ ವ್ಯಕ್ತಿಗಳು ಜೀವಮಾನ ಸಾಧನೆ ಮಾಡುತ್ತಾರೆ. ಅಂಗಾದಿತ್ಯನ ಸ್ಥಾನವು ಹೊಟ್ಟೆಯಾಗಿದ್ದರೆ, ಸೂರ್ಯ ರೇಖೆಯು ಸಹಾ ಸೂಕ್ತವಾದ ಸ್ಥಳದಲ್ಲಿ ಇದ್ದರೆ, ಅವರಿಗೆ ಸಂಪತ್ತಿನ ಧಾರೆಯೇ ಹರಿದು ಬರುತ್ತವೆ. ಹಿಂದೆ ಕೊಡಬೇಕಿದ್ದ ಸಾಲವೆಲ್ಲಾ ವಸೂಲಾಗುತ್ತದೆ.

ಕೆಲವು ಟಿಪ್ಪಣಿಗಳು

ಸೂರ್ಯ ರೇಖೆಯು ವಿಧಿ ರೇಖೆಯ ಸಹೋದರಿ

ಸೂರ್ಯ ರೇಖೆಯು ವಿಧಿ ರೇಖೆಯನ್ನು ಉತ್ತೇಜನಗೊಳಿಸುತ್ತದೆ.

ಮಣಿಕಟ್ಟಿನಿಂದ ಸೂರ್ಯ ರೇಖೆ ಪ್ರಾರಂಭವಾಗಿದ್ದರೆ, ಅತ್ಯಂತ ಚಿಕ್ಕ ವಯಸ್ಸಿನಲ್ಲೇ ಪ್ರಖ್ಯಾತರಾಗುತ್ತಾರೆ. ಹೃದಯ ರೇಖೆಯಿಂದ ಸೂರ್ಯ ರೇಖೆ ಶುರುವಾಗಿದ್ದರೆ, ಅವರು ಪ್ರೀತಿಸಿಯೇ ಮದುವೆಯಾಗುವುದು. 40 ವರ್ಷಗಳ ಬಳಿಕ ಪ್ರಸಿದ್ಧ ವ್ಯಕ್ತಿಗಳಾಗುತ್ತಾರೆ.

ಸೂರ್ಯ ರೇಖೆಯು ದಪ್ಪವಾಗಿದ್ದರೆ, ಬರಹಗಾರರು, ಸಂಗೀತಗಾರರು, ಕಲಾವಿದರು, ಶ್ರೀಮಂತರು ಆಗಿರುತ್ತಾರೆ.

ಎರಡು ಸೂರ್ಯ ರೇಖೆಗಳು ಇದ್ದರೆ ಇವರು ಸವ್ಯಸಾಚಿಗಳಾಗುತ್ತಾರೆ. ಎರಡು ಸಂಗತಿಗಳಲ್ಲಿ ಒಂದೇ ರೀತಿಯ ಅತ್ಯುನ್ನತ ಪ್ರಖ್ಯಾತಿಯನ್ನು ಪಡೆಯುತ್ತಾರೆ. ಲಾಟರಿಯಲ್ಲಿ, ಶೇರು ಹೂಡಿಕೆಯಲ್ಲಿ, ಜೂಜಿನಿಂದ, ಹೆಂಡತಿಯ ಕಡೆಯಿಂದ, ಅಪ್ಪನ ಅಥವಾ ಅಮ್ಮನ ಕಡೆಯಿಂದ ಪ್ರತ್ಯೇಕವಾದ ಆಸ್ತಿ ಲಭ್ಯವಾಗುತ್ತದೆ.

ಸೂರ್ಯ ರೇಖೆಯು ಇಲ್ಲದಿದ್ದರೆ ಅದು ಅವರ ದುರದೃಷ್ಟವನ್ನು ಸೂಚಿಸು ತ್ತದೆ. ಜೀವನವು ಸಾಮಾನ್ಯವಾಗಿ ಕೊರತೆಗಳ ಮಧ್ಯೆ ಸಾಗುತ್ತದೆ.

ಸೂರ್ಯ ರೇಖೆಯ ಮೇಲೆ ದ್ವೀಪಗಳಿದ್ದರೆ ಅಂತಹವರು ಖಿನ್ನತೆಗೆ ಒಳಗಾಗುತ್ತಾರೆ. ಸೂರ್ಯ ರೇಖೆಯು ಕತ್ತರಿಸಿದ್ದರೆ ಅಂತಹಾ ವ್ಯಕ್ತಿಗಳ ಬದುಕು ತೊಡಕುಗಳಿಂದ ಕೂಡಿರುತ್ತದೆ. ಸೂರ್ಯ ರೇಖೆಯ ಮೇಲಿನ ನಕ್ಷತ್ರಗಳು ಅವರ ಭವಿಷ್ಯವನ್ನೂ ಸೂಚಿಸುತ್ತವೆ. ಸೂರ್ಯ ರೇಖೆಯು ನೇರವಾಗಿ ದಪ್ಪ ಇದ್ದರೆ, ಅವರಿಗೆ ಬಂದ ಖ್ಯಾತಿಯು ಶಾಶ್ವತವಾಗಿ ಉಳಿಯುತ್ತದೆ.

ಸೂರ್ಯರೇಖೆಯ ಮಧ್ಯದಲ್ಲಿ ಎಲ್ಲಿಯಾದರೂ ಮಚ್ಚೆಗಳಿದ್ದರೆ, ನಿಮ್ಮ ಖ್ಯಾತಿಗೆ ಅಸೂಯೆ ಪಡುವ ಶತ್ರುಗಳನ್ನು ಸೂಚಿಸುತ್ತದೆ. ಸೂರ್ಯ ರೇಖೆಯು ಚಂದ್ರ ಪರ್ವತದ ಬಳಿ ಹೋದರೂ ಸಾಕು ಅದರ ಶಕ್ತಿಯು ನಿಮಗೇ ಅಂಟಿಕೊಳ್ಳುತ್ತದೆ. ಅವರು ಜನಪ್ರಿಯ ಭಾಷಣಕಾರನಾಗುತ್ತಾರೆ. ಗಾಯಕ, ಮತ್ತು ಚಿತ್ರ ಬಿಡಿಸುವುದರಲ್ಲಿ ಪರಿಣತರಾಗಿರುತ್ತಾರೆ.

ಸೂರ್ಯ ರೇಖೆಯ ಬುಡ ಮತ್ತು ತುದಿಗಳು ಕವಲೊಡೆದಿದ್ದರೆ ಅಥವಾ ಯಾವುದಾದರೊಂದು ಭಾಗ ಘಾಸಿಗೆ ಒಳಗಾಗಿದ್ದರೆ, ಆಗ ಸಂತೋಷಕ್ಕೆ ಮತ್ತು ಹಣಕ್ಕೆ ಯಾವುದೇ ಕೊರತೆಯಾಗುವುದಿಲ್ಲ.

ಸೂರ್ಯ ಮತ್ತು ಜೀವನ ರೇಖೆಗಳು ಸೇರಿದ್ದರೆ, ಅಂತಹಾ ವ್ಯಕ್ತಿಗಳು ಪ್ರಸಿದ್ಧರಾಗುತ್ತರೆ. ಸೂರ್ಯರೇಖೆಯು ಸರಪಳಿಯಂತೆ ರೂಪುಗೊಂಡಿದ್ದರೆ, ಶಿಕ್ಷಣದಲ್ಲಿ ಹಿನ್ನಡೆ ಉಂಟಾಗುತ್ತದೆ. ಸೂರ್ಯ ರೇಖೆಯ ಮೇಲಿರುವ ನಕ್ಷತ್ರಗಳು ಅವರ ಸಾಮರ್ಥ್ಯವನ್ನು, ಶಕ್ತಿಯನ್ನು, ಸಮೃದ್ಧಿ ಯನ್ನು ಹೀಗೆ ಎಲ್ಲವನ್ನೂ ಸೂಚಿಸುತ್ತದೆ. ಸೂರ್ಯ ರೇಖೆ ಮತ್ತು ವಿಧಿ ರೇಖೆಯು ಒಂದರ ಮೇಲೊಂದು ಕೂತಿದ್ದರೆ, ಮಹಡಿಗಳನ್ನು ಕಟ್ಟಲು ಸಾಧ್ಯವಾಗುವುದಿಲ್ಲ..

ಸೂರ್ಯ ರೇಖೆಯು ಹಾವು ಹರಿದಂತೆ ಇದ್ದರೆ, ಅಂತಹಾ ವ್ಯಕ್ತಿಗಳು ಮೊಸರನ್ನು ದೂರ ಇಡುತ್ತಾರೆ. ಶುಕ್ರ ರೇಖೆಯು ಸೂರ್ಯ ರೇಖೆಯನ್ನು ತುಂಡರಿಸಿದರೆ, ಅಂತಹಾ ವ್ಯಕ್ತಿಗಳು, ಪ್ರೇಮಕ್ಕೆ ಒಳಗಾಗುತ್ತಾರೆ.

ಜ್ಯೋತಿರಾವ್ ಫುಲೆ: ಭಾರತಕ್ಕೆ ದಾರಿ ದೀಪವಾಗಿರುವ ಮಹಾನ್ ಚೇತನ

ಪುಟ ೧➔ ತಮ್ಮ ಶಾಲಾ ದಿನಗಳಿಂದಲೂ, ಯುವ ಜ್ಯೋತಿರಾವ್ ಅವರು ತೀವ್ರ ಕುತೂಹಲಿಗಳಾಗಿದ್ದರು ಮತ್ತು ಅತೀವ ಓದುಗರಾಗಿದ್ದರು; ಅವರು ತಮ್ಮ ವಯಸ್ಸಿನ ಮಕ್ಕಳು ಓದಬೇಕೆಂದು ನಿರೀಕ್ಷಿಸಿದ್ದಕ್ಕಿಂತ ಹೆಚ್ಚಿನ ಪುಸ್ತಕಗಳನ್ನು ಓದುತ್ತಿದ್ದರು. ನಾವು ಎಷ್ಟು ಹೆಚ್ಚು ಪ್ರಶ್ನೆಗಳನ್ನು ಹುಟ್ಟುಹಾಕುತ್ತೇವೆಯೋ, ಅಷ್ಟು ಹೆಚ್ಚು ಜ್ಞಾನವು ಅವುಗಳಿಂದ ಹೊರಹೊಮ್ಮುತ್ತದೆ ಎಂದು ಅವರು ಹೇಳುತ್ತಿದ್ದರು. ಬಾಲ್ಯದಿಂದಲೇ ಅವರಿಗೆ ಲಭಿಸಿದ್ದ ವಿಮರ್ಶಾ ಮನೋಭಾವವು ಅವರ ಪ್ರಯಾಣದುದ್ದಕ್ಕೂ ಸ್ಥಿರವಾಗಿ ಉಳಿದಿತ್ತು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ತಮ್ಮ ಜೀವನದುದ್ದಕ್ಕೂ ಕಲಿಕೆ ಮತ್ತು ಶಿಕ್ಷಣವು ಮಹಾತ್ಮ ಫುಲೆ ಅವರ ಉದ್ದೇಶದ ಕೇಂದ್ರಬಿಂದುವಾಗಿತ್ತು. ಜ್ಞಾನವು ಕೇವಲ ಕೆಲವರ ಪಾಲಿನ ಸ್ವತ್ತಲ್ಲ, ಬದಲಾಗಿ ಅದು ಎಲ್ಲರಿಗೂ ಹಂಚಲ್ಪಡಬೇಕಾದ ಶಕ್ತಿ ಎಂಬುದನ್ನು ಅವರು ಬಹಳ ಸ್ಪಷ್ಟವಾಗಿ ಗುರುತಿಸಿದ್ದರು. ಕಲಿಕೆಯ ಅವಕಾಶವು ಅನೇಕರಿಗೆ ನಿರಾಕರಿಸಲ್ಪಟ್ಟಿದ್ದ ಕಾಲದಲ್ಲಿ, ಅವರು ಹೆಣ್ಣುಮಕ್ಕಳಿಗಾಗಿ ಮತ್ತು ಔಪಚಾರಿಕ ಶಿಕ್ಷಣದಿಂದ ಹೊರಗುಳಿದವರಿಗಾಗಿ ಶಾಲೆಗಳನ್ನು ತೆರೆದರು. ತಾಯಂದಿರ ಮೂಲಕ ಮಕ್ಕಳಲ್ಲಿ ಉಂಟಾಗುವ ಯಾವುದೇ ಸುಧಾರಣೆಯು ಅತ್ಯಂತ ಅಮೂಲ್ಯವಾದುದು. ಆದ್ದರಿಂದ, ಶಾಲೆಗಳನ್ನು ತೆರೆಯುವುದಾದರೆ, ಅವುಗಳನ್ನು ಮೊದಲು ಹೆಣ್ಣುಮಕ್ಕಳಿಗಾಗಿ ತೆರೆಯಬೇಕು ಎಂದು ಅವರು ಹೇಳುತ್ತಿದ್ದರು. ತರಗತಿಯು ನ್ಯಾಯ ಮತ್ತು ಸಮಾನತೆಯ ಸಾಧನವಾಗುವಂತಹ ಹೊಸ ಸಾಮಾಜಿಕ ಕಲ್ಪನೆಯನ್ನು ಸೃಷ್ಟಿಸಲು ಅವರು ಕೆಲಸ ಮಾಡಿದರು.



ಶಿಕ್ಷಣದಬಗ್ಗೆ ಅವರಿಗಿದ್ದ ದೂರದೃಷ್ಟಿಯು ನಮಗೆ ಹೆಚ್ಚಿನ ಸ್ಫೂರ್ತಿ ನೀಡುತ್ತದೆ. ಕಳೆದ ದಶಕದಲ್ಲಿ, ನಾವು ಸಂಶೋಧನೆ ಮತ್ತು ನಾವೀನ್ಯತೆಯನ್ನು ಭಾರತದ ಯುವಜನರ ಮೂಲಾಧಾರವನ್ನಾಗಿ ಮಾಡಲು ಕೆಲಸ ಮಾಡಿದ್ದೇವೆ. ಯುವ ಮನಸ್ಸುಗಳನ್ನು ಪ್ರಶ್ನಿಸಲು, ಅನ್ವೇಷಿಸಲು ಮತ್ತು ಆವಿಷ್ಕರಿಸಲು ಪ್ರೋತ್ಸಾಹಿಸುವ ಪರಿಸರ ವ್ಯವಸ್ಥೆಯನ್ನು ನಿರ್ಮಿಸಲು ಪ್ರಯತ್ನಿಸಲಾಗುತ್ತಿದೆ. ಜ್ಞಾನ, ಕೌಶಲ ಮತ್ತು ಅವಕಾಶಗಳಲ್ಲಿ ಹೂಡಿಕೆ ಮಾಡುವ ಮೂಲಕ, ಭಾರತವು ತನ್ನ ಯುವಜನತೆಯ ಸಮಸ್ಯೆಗಳನ್ನು ಬಗೆಹರಿಸುವವರನ್ನಾಗಿ ಮತ್ತು ರಾಷ್ಟ್ರೀಯ ಪ್ರಗತಿಯ ಚಾಲಕರನ್ನಾಗಿ ಸಬಲೀಕರಿಸುತ್ತಿದೆ.

ತಮ್ಮ ಜ್ಞಾನ ಮತ್ತು ಬುದ್ಧಿವಂತಿಕೆಯಿಂದಾಗಿ ಮಹಾತ್ಮ ಫುಲೆ ಅವರು ಕೃಷಿ, ಆರೋಗ್ಯ ಮತ್ತು ಗ್ರಾಮೀಣಾಭಿವೃದ್ಧಿಯಂತಹ ಕ್ಷೇತ್ರಗಳಲ್ಲಿ ಬಲವಾದ ತಿಳಿವಳಿಕೆಯನ್ನು ಬೆಳೆಸಿಕೊಂಡಿದ್ದರು. ನಮ್ಮ ರೈತರು ಮತ್ತು ಕಾರ್ಮಿಕರಿಗೆ ಆಗುವ ಅನ್ಯಾಯವು ನಮ್ಮ ಸಮಾಜವನ್ನು ದುರ್ಬಲಗೊಳಿಸುತ್ತದೆ ಎಂದು ಅವರು ಆಗಾಗ್ಗೆ ಹೇಳುತ್ತಿದ್ದರು. ಸಾಮಾಜಿಕ ಅಸಮಾನತೆಗಳು ಹೊಲಗಳಲ್ಲಿ ಅಥವಾ ಹಳ್ಳಿಗಳಲ್ಲಿ ದೈನಂದಿನ ಜೀವನದಲ್ಲಿ ಹೇಗೆ ವ್ಯಕ್ತವಾಗುತ್ತವೆ ಎಂಬುದನ್ನು ಅವರು ಕಂಡಿದ್ದರು. ಆದ್ದರಿಂದ, ಅವರು ಬಡವರು, ತುಳಿತಕ್ಕೊಳಗಾದವರು ಮತ್ತು ಸಮಾಜದ ಅಂಚಿನಲ್ಲಿರುವವರಿಗೆ ಘನತೆಯನ್ನು ಖಚಿತಪಡಿಸಿಕೊಳ್ಳಲು ತಮ್ಮನ್ನು ತೊಡಗಿಸಿಕೊಂಡರು. ಅದೇ ಸಮಯದಲ್ಲಿ, ಸಾಮಾಜಿಕ ಸಾಮರಸ್ಯವನ್ನು ಕಾಪಾಡಲು ಅವರು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡಿದರು.

ಮಹಾತ್ಮ ಫುಲೆ ಅವರು ಅಭಿಪ್ರಾಯಪಟ್ಟಂತೆ, ಸಮಾಜದಲ್ಲಿ ಎಲ್ಲರಿಗೂ ಸಮಾನ ಹಕ್ಕುಗಳು ಸಿಗುವವರೆಗೆ ನಿಜವಾದ ಸ್ವಾತಂತ್ರ್ಯ ಸಿಗುವುದಿಲ್ಲ. ಆದಕ್ಕಾಗಿ, ಅವರು ಈ ದೃಷ್ಟಿಕೋನವನ್ನು ಕಾರ್ಯರೂಪಕ್ಕೆ ತರುವಂತಹ ಸಂಸ್ಥೆಗಳನ್ನು ಕಟ್ಟಿದರು, ಸಮ ಸಮಾಜಕ್ಕೆ ಕೊಡುಗೆ ನೀಡಿದರು. ಅವರು ಸ್ಥಾಪಿಸಿದ 'ಸತ್ಯಶೋಧಕ ಸಮಾಜ'ವು ಆಧುನಿಕ ಭಾರತದ ಪ್ರಮುಖ ಸಮಾಜ ಸುಧಾರಣಾ ಚಳವಳಿಗಳಲ್ಲಿ ಒಂದಾಗಿದೆ. ಇದು ಸಮಾಜ ಸುಧಾರಣೆ, ಸಮುದಾಯ ಸೇವೆ ಮತ್ತು ಮಾನವ ಘನತೆಯನ್ನು ಹೆಚ್ಚಿಸುವಲ್ಲಿ ಮುಂಚೂಣಿಯಲ್ಲಿತ್ತು. ಇದು ಮಹಿಳೆಯರು, ಯುವಕರು ಮತ್ತು ಹಳ್ಳಿಗಳಲ್ಲಿ ವಾಸಿಸುವವರ ಪರಿಣಾಮಕಾರಿ ಧ್ವನಿಯಾಯಿತು. ನ್ಯಾಯ, ಪ್ರತಿಯೊಬ್ಬ ವ್ಯಕ್ತಿಯ ಗೌರವ ಮತ್ತು ಸಾಮೂಹಿಕ ಪ್ರಗತಿಯ ಮನೋಭಾವವನ್ನು ಕೇಂದ್ರದಲ್ಲಿ ಇರಿಸುವ ಮೂಲಕ ಸಮಾಜವನ್ನು ಬಲಪಡಿಸಬಹುದು ಎಂಬ ಮಹಾತ್ಮ ಫುಲೆ ಅವರ ಅಚಲ ನಂಬಿಕೆಯನ್ನು ಈ ಚಳವಳಿಯು ಪ್ರತಿಬಿಂಬಿಸಿತು.

ಅವರ ವೈಯಕ್ತಿಕ ಜೀವನವೂ ಸಹ ಧೈರ್ಯದ ಮಹಾನ್ ಪಾಠಗಳನ್ನು ಒಳಗೊಂಡಿದೆ. ಸದಾ ಜನರ ನಡುವೆ ಇರುತ್ತಾ, ಅವರಿಗಾಗಿ ಅಹೋರಾತ್ರಿ ಶ್ರಮಿಸಿದ್ದು ಫುಲೆ ಅವರ ಆರೋಗ್ಯದ ಮೇಲೆ ತೀವ್ರ ಪರಿಣಾಮ ಬೀರಿತು. ಆದರೆ ಎಂತಹ ಗಂಭೀರ ಆರೋಗ್ಯ ಸವಾಲುಗಳೂ ಅವರ ಸಂಕಲ್ಪವನ್ನು ಕುಗ್ಗಿಸಲು ಸಾಧ್ಯವಾಗಲಿಲ್ಲ. ಪಾರ್ಶ್ವವಾಯುವಿನಂತಹ ಕಠಿಣ ಸ್ಥಿತಿಗೆ ಒಳಗಾದ ನಂತರವೂ, ಅವರು ತಮ್ಮ ದೂರದೃಷ್ಟಿಯ ಗುರಿಗಳನ್ನು ಈಡೇರಿಸಲು ಕೆಲಸ ಮಾಡುವುದನ್ನು ಮುಂದುವರಿಸಿದರು. ಹೌದು, ಅವರ ದೇಹಕ್ಕೆ ಕಠಿಣ ಪರೀಕ್ಷೆ ಎದುರಾಗಿತ್ತು, ಆದರೆ ಸಮಾಜದ ಬಗೆಗಿನ ಅವರ ಬದ್ಧತೆ ಮಾತ್ರ ಕಿಂಚಿತ್ತೂ ಕದಲಲಿಲ್ಲ. ಇಂದಿಗೂ, ವಿಶೇಷವಾಗಿ ಸಂಘರ್ಷಗಳ ನಡುವೆ ಧೈರ್ಯವನ್ನು ಹುಡುಕುವ ಕೋಟ್ಯಂತರ ಜನರಿಗೆ ಅವರ ಜೀವನದ ಈ ಆಯಾಮವು ಅತ್ಯಂತ ಶಕ್ತಿಶಾಲಿ ಪ್ರೇರಣೆಯಾಗಿದೆ.

ಮಹಾತ್ಮ ಫುಲೆ ಅವರ ಸ್ಮರಣೆಯು ನಮ್ಮ ರಾಷ್ಟ್ರದ ಶ್ರೇಷ್ಠ ಸುಧಾರಕರಲ್ಲಿ ಒಬ್ಬರಾದ ಸಾವಿತ್ರಿಬಾಯಿ ಫುಲೆ ಅವರ ಉಲ್ಲೇಖವಿಲ್ಲದೆ ಎಂದಿಗೂ ಪೂರ್ಣಗೊಳ್ಳದು. ಭಾರತದ ಪ್ರವರ್ತಕ ಮಹಿಳಾ ಶಿಕ್ಷಕಿಯಾಗಿ, ಅವರು ಹೆಣ್ಣುಮಕ್ಕಳ ಶಿಕ್ಷಣದ ಕ್ರಾಂತಿಯಲ್ಲಿ ನಿರ್ಣಾಯಕ ಪಾತ್ರ ವಹಿಸಿದರು ಮತ್ತು ಅವರ ಕನಸುಗಳಿಗೆ ರೆಕ್ಕೆ ಕಟ್ಟಿದರು. ಮಹಾತ್ಮ ಫುಲೆ ಅವರ ನಿಧನದ ನಂತರವೂ ಸಾವಿತ್ರಿಬಾಯಿ ಅವರು ಸುಧಾರಣೆಯ ಆ ಜ್ಯೋತಿಯನ್ನು ಎತ್ತಿ ಹಿಡಿದರು. 1897ರಲ್ಲಿ ಪ್ಲೇಗ್ ಸಾಂಕ್ರಾಮಿಕ ಹರಡಿದಾಗ, ಅವರು ರೋಗಪೀಡಿತರ ಸೇವೆಗೆ ಎಷ್ಟರಮಟ್ಟಿಗೆ ಸಮರ್ಪಿಸಿಕೊಂಡರೆಂದರೆ, ಅವರು ಸ್ವತಃ ಅದೇ ಕಾಯಿಲೆಗೆ ತುತ್ತಾಗಿ ಕೊನೆಗೆ ತಮ್ಮ ಪ್ರಾಣವನ್ನೇ ಅರ್ಪಿಸಿದರು.


ನಮ್ಮ ಪುಣ್ಯಭೂಮಿಯು ಕಾಲಕಾಲಕ್ಕೆ ಮಹಾನ್ ಪುರುಷರು ಮತ್ತು ಮಹಿಳೆಯರ ಆಶೀರ್ವಾದಕ್ಕೆ ಪಾತ್ರವಾಗಿದೆ; ಇವರು ತಮ್ಮ ಉದಾತ್ತ ಆಲೋಚನೆ, ಅಪ್ರತಿಮ ತ್ಯಾಗ ಮತ್ತು ಕರ್ತವ್ಯನಿಷ್ಠೆಯ ಮೂಲಕ ಸಮಾಜವನ್ನು ಬಲಪಡಿಸಿದ್ದಾರೆ. ಇವರು ಬದಲಾವಣೆಗಾಗಿಯಾರೋಬರುತ್ತಾರೆಂದು ಕಾಯಲಿಲ್ಲ, ಬದಲಾಗಿ ತಾವೇ ಆ ಬದಲಾವಣೆಯ ಮೂಲಶಕ್ತಿಯಾದರು. ನೂರಾರು ವರ್ಷಗಳಿಂದ ನಮ್ಮ ನಾಡಿನಲ್ಲಿ ಸಾಮಾಜಿಕ ಸುಧಾರಣೆಯ ಕರೆಯು ಸಮಾಜದ ಒಳಗಿನಿಂದಲೇ ಮೊಳಗುತ್ತಾ ಬಂದಿದೆ. ಜನಸಾಮಾನ್ಯರ ಕಷ್ಟ-ಕಾರ್ಪಣ್ಯಗಳನ್ನು ಕಣ್ಣಾರೆ ಕಂಡು, ಅದನ್ನು 'ಹಣೆಬರಹ' ಎಂದು ಒಪ್ಪಿಕೊಳ್ಳಲು ನಿರಾಕರಿಸಿದ ಧೀಮಂತ ವ್ಯಕ್ತಿಗಳಿಂದ ಈ ಕ್ರಾಂತಿ ಉದ್ಭವಿಸಿದೆ. ಮಹಾತ್ಮ ಜ್ಯೋತಿರಾವ್ ಫುಲೆ ಅಂತಹ ಕ್ರಾಂತಿಕಾರಿ ಧ್ವನಿಗಳಲ್ಲಿ ಒಬ್ಬರು.

2022ರಲ್ಲಿ ಪುಣೆಗೆ ಭೇಟಿ ನೀಡಿದಾಗ ಅಲ್ಲಿನ ಅವರ ಭವ್ಯ ಪ್ರತಿಮೆಗೆ ನಾನು ಗೌರವ ಸಲ್ಲಿಸಿದ್ದನ್ನು ಪ್ರೀತಿಯಿಂದ ನೆನಪಿಸಿಕೊಳ್ಳುತ್ತೇನೆ. ನಾವು ಅವರ ದ್ವಿಶತಮಾನೋತ್ಸವದ ವರ್ಷದ ಆರಂಭವನ್ನು ಗುರುತಿಸುತ್ತಿರುವಾಗ, ಮಹಾತ್ಮ ಜ್ಯೋತಿರಾವ್ ಫುಲೆ ಅವರಿಗೆ ಸಲ್ಲಿಸುವ ಅತ್ಯಂತ ಸೂಕ್ತ ಗೌರವವೆಂದರೆ 'ನವೀಕರಣ'. ಅವರಿಗೆ ಹತ್ತಿರವಾದ ಶಿಕ್ಷಣದಂತಹ ವಿಷಯಗಳಿಗೆ ನಮ್ಮ ಬದ್ಧತೆಯನ್ನು ನವೀಕರಿಸುವುದು. ಅನ್ಯಾಯದ ಬಗ್ಗೆ ನಮ್ಮ ಸಂವೇದನಾಶೀಲತೆಯನ್ನು ನವೀಕರಿಸುವುದು. ಸಮಾಜವು ಒಳಗಿನಿಂದಲೇ ತನ್ನನ್ನು ತಾನು ಸುಧಾರಿಸಿಕೊಳ್ಳಬಲ್ಲದು ಎಂಬ ನಮ್ಮ ನಂಬಿಕೆಯನ್ನು ನವೀಕರಿಸುವುದು. ನೈತಿಕ ಸ್ಪಷ್ಟತೆ ಮತ್ತು ಸಾರ್ವಜನಿಕ ಉದ್ದೇಶದೊಂದಿಗೆ ಸೇರಿದಾಗ ಸಮುದಾಯದ ಶಕ್ತಿಯು ಭಾರತದಲ್ಲಿ ಅದ್ಭುತಗಳನ್ನು ಸಾಧಿಸಬಲ್ಲದು ಎಂದು ಅವರ ಜೀವನ ನಮಗೆ ಹೇಳುತ್ತದೆ. ಅದಕ್ಕಾಗಿಯೇ ಅವರು ಇಂದಿಗೂ ಲಕ್ಷಾಂತರ ಜನರಿಗೆ ಶಕ್ತಿ ನೀಡುತ್ತಾರೆ. ಅದಕ್ಕಾಗಿಯೇ ಅವರ ಮಾತುಗಳು ಮತ್ತು ಕೆಲಸಗಳು ಇಂದಿಗೂ ಭರವಸೆಯನ್ನು ನೀಡುತ್ತವೆ ಮತ್ತು ಅದಕ್ಕಾಗಿಯೇ, ಅವರು ಜನಿಸಿದ ಎರಡು ನೂರು ವರ್ಷಗಳ ನಂತರವೂ ಮಹಾತ್ಮ ಜ್ಯೋತಿರಾವ್ ಫುಲೆ ಅವರು ಕೇವಲ ಭೂತಕಾಲದ ವ್ಯಕ್ತಿಯಲ್ಲ, ಬದಲಾಗಿ ಭಾರತದ ಭವಿಷ್ಯಕ್ಕೆ ದಾರಿದೀಪವಾಗಿದ್ದಾರೆ.

ರಾಷ್ಟ್ರಹಿತ ಮರೆತ ಕಾಂಗ್ರೆಸಿನ ತುಷ್ಟೀಕರಣ ನೀತಿ

ಕಾಂಗ್ರೆಸಿನ ಅಲ್ಪಸಂಖ್ಯಾತ ತುಷ್ಟೀಕರಣನೀತಿಯಿಂದಾಗಿ ದೇಶಕ್ಕೆ ಬಹಳಷ್ಟು ಪ್ರತಿಕೂಲವಾಗಿದೆ.

ಒಳನೋಟ
ಹೆ.ಬಾ. ಮಲ್ಯ



ಭಯೋತ್ಪಾದನೆ ಮತಾಂತರಗಳು ಭಾರತಕ್ಕೆ ಮಾತ್ರ ಸೀಮಿತವಲ್ಲ, ಜಗತ್ತಿನ ಹೆಚ್ಚುಕಮ್ಮಿ ಎಲ್ಲಾ ದೇಶಗಳು ಈ ಪೀಡೆಗೆ ಒಳಗಾಗಿವೆ. ಜಗತ್ತಿನಲ್ಲಿ ಕಳೆದ ಎರಡುಸಹಸ್ರಮಾನಗಳಿಂದಈಬಗೆಯಅಶಾಂತಿನಿರ್ಮಾಣವಾಗಿರುವುದು ಕಂಡುಬರುತ್ತದೆ. ಇಸ್ಲಾಂ ಮತ್ತು ಕ್ರಿಶ್ಚಿಯಾನಿಟಿಗಳಿಂದ ಗ್ರೀಕ್, ರೋಮ್, ಈಜಿಪ್ಟ್ ಮೊದಲಾದ ನಾಗರಿಕತೆಗಳು ನಾಶವಾದಾಗ ಆ ದೇಶಗಳು ಕ್ರೈಸ್ತ ಮತ್ತು ಇಸ್ಲಾಮಿಕ್ ದೇಶಗಳಾದವು. ಜಿಹಾದ್ ಮತ್ತು ಕ್ರುಸೇಡ್ಸ್ ಯುರೋಪಿನಾದ್ಯಂತ ರಕ್ತದ ಕೋಡಿಯನ್ನು ಹರಿಸಿದ್ದು ಇತಿಹಾಸದಿಂದ ತಿಳಿದು ಬರುತ್ತದೆ. ನಂತರ ಪೋಪ್ ಹಾಗೂ ಕ್ರೈಸ್ತ ಅರಸೊತ್ತಿಗೆಗಳ ವಿರುದ್ಧ ಸಿಡಿದೆದ್ದ ಸಂಘರ್ಷದಿಂದ ಯುರೋಪಿನಲ್ಲಿ ಪ್ರಜಾಪ್ರಭುತ್ವದ ಹೆಸರಿನಲ್ಲಿ ನಡೆದ ಪರಿವರ್ತನೆಯು ಬಂಡವಾಳಶಾಹಿ ವ್ಯವಸ್ಥೆ ಹಾಗೂ ಕ್ರಮೇಣ ಸಾಮ್ರಾಜ್ಯವಾದಕ್ಕೆ ಜನ್ಮ ನೀಡಿತು. ನಂತರ ಇದರ ವಿರುದ್ಧ ಕಮ್ಯುನಿಸಂ ಹುಟ್ಟಿಕೊಂಡಿತು. ಬಂಡವಾಳಶಾಹಿ ಮತ್ತು ಕಮ್ಯುನಿಸಂ ಈ ಎರಡು ವ್ಯವಸ್ಥೆಗಳು ಕೂಡಾ ಮತಕ್ಕೆ ಸಮಾನವಾಗಿವೆ. ಹೀಗೆ ಈ ನಾಲ್ಕು ಸಿದ್ಧಾಂತಗಳ ಮೂಲ ಉದ್ದೇಶ ಒಂದೇ. ಜಗತ್ತಿನ ಮೇಲೆ ಬಲಾತ್ಕಾರದಿಂದ ತಮ್ಮ ಅಧಿಕಾರ ಹೇರುವುದು. ಈ ನಾಲ್ಕು ಸಿದ್ಧಾಂತಗಳು ಕಳೆದ ಅನೇಕ ಶತಮಾನಗಳಿಂದ ಜಗತ್ತಿನ ನೆಮ್ಮದಿಯನ್ನು ಹಾಳು ಮಾಡಿದ್ದು, ಭಾರತವೂ ಈ ನಾಲ್ಕು ಪೀಡೆಗಳಿಂದ ನಲುಗಿದೆ. ಭಾರತದ ಆತ್ಮಜಾಗೃತಿಗೆ, ಪುನರುತ್ಥಾನಕ್ಕೆ ಈ ನಾಲ್ಕು ಸಿದ್ಧಾಂತಗಳು ಅಡ್ಡಿಯಾಗಿ ನಿಂತಿವೆ.

1947ರಲ್ಲಿ ಬ್ರಿಟಿಷರಿಂದ ರಾಜಕೀಯ ಸ್ವಾತಂತ್ರ್ಯವೇನೊ ಸಿಕ್ಕಿತು. ಆದರೆ ಬಳಿಕವೂ ಭಾರತವು ಭಾರತವಾಗಿ ರೂಪುಗೊಳ್ಳಲಿಲ್ಲ. ಬ್ರಿಟಿಷರು ಬಿತ್ತಿದ ವಿಭಜನವಾದಿ ವಿಷಬೀಜ ಹಾಗೂ ಮೆಕಾಲೆ ಶಿಕ್ಷಣದಿಂದ ನಿರ್ಮಾಣವಾಗಿರುವ ಮಸ್ತಿಷ್ಕಕ್ಷಾಳನ (Brain washing)ದಿಂದ ಭಾರತೀಯರು ಭಾರತೀಯರಾಗಿ ಉಳಿದಿಲ್ಲ. ಬ್ರಿಟಿಷರು ಭಾರತದಲ್ಲಿ ತಮ್ಮ ಅಧಿಕಾರವನ್ನು ಶಾಶ್ವತವಾಗಿ ನೆಲೆಗೊಳಿಸಲು ಅನುಸರಿಸಿದ ಒಡೆದಾಳುವ ನೀತಿಯನ್ನು ಹಾಗೂ ಮುಸ್ಲಿಂತುಷ್ಟೀಕರಣ ನೀತಿಯನ್ನು ಸ್ವಾತಂತ್ರ್ಯೋತ್ತರದಲ್ಲಿ ಅಧಿಕಾರಕ್ಕೆ ಬಂದ ನೆಹರು ಕಾಂಗ್ರೆಸ್ ಅನುಸರಿಸಿ ಅಲ್ಪಸಂಖ್ಯಾತರ ತುಷ್ಟೀಕರಣಕ್ಕೆ 'ಜಾತ್ಯತೀತವಾದ', 'ಸೆಕ್ಯುಲರಿಸಂ' ಎಂಬ ಆಕರ್ಷಕ ಹೆಸರಿಟ್ಟಿತು.

ಸರ್ವಾಧಿಕಾರಿಗಳು ತಮ್ಮ ಅಧಿಕಾರವನ್ನು ಶಾಶ್ವತವಾಗಿ ಉಳಿಸಿಕೊಳ್ಳಲು ಒಂದು ಕಾಲ್ಪನಿಕ ಭೂತವನ್ನು ನಿರ್ಮಿಸಿ ಒಂದು ವರ್ಗದ ಜನರಲ್ಲಿ ಶಾಶ್ವತವಾಗಿ ಭಯವನ್ನು ಹುಟ್ಟಿಸುತ್ತಾರೆ. ಹಿಟ್ಲರ್ ಯಹೂದಿಗಳ ಬಗ್ಗೆ ಅಂತಹ ಭಯ ಹುಟ್ಟಿಸಿದ. ಕಮ್ಯುನಿಸ್ಟ್ ನಾಯಕರು ಬಂಡವಾಳಶಾಹಿ ಅಮೆರಿಕನ್ನರ ಬಗ್ಗೆ ಭಯ ಹುಟ್ಟಿಸಿದರೆ, ಬಂಡವಾಳಶಾಹಿ ಅಮೆರಿಕಾ ತನ್ನ ಹಿಡಿತ ಉಳಿಸಿಕೊಳ್ಳಲು ಕಮ್ಯುನಿಸ್ಟ್ ಭೂತದ ಬಗ್ಗೆ ಭಯ ಹುಟ್ಟಿಸಿತು. ಆದರೆ ಕಾಂಗ್ರೆಸ್ ಪಕ್ಷವು ತನ್ನ ವಿರೋಧಿಯಾಗಿ ಬಳಸಿಕೊಂಡುದು ರಾಷ್ಟ್ರೀಯ ಸ್ವಯಂಸೇವಕ ಸಂಘ, ಜನಸಂಘ (ಇಂದಿನ ಬಿಜೆಪಿ) ಹಾಗೂ ಅವುಗಳ ನಾಯಕರನ್ನು. ಆರೆಸ್ಸೆಸ್ ಕೋಮುವಾದಿಯೆಂದೂ, ಅದರ ನಾಯಕರು ಹಿಟ್ಲರ್ ಎಂದೂ, ಮುಸ್ಲಿಂ ವಿರೋಧಿಗಳೆಂದೂ, ಗಾಂಧಿಯನ್ನು ಅವರು ಕೊಂದಿದ್ದಾರೆಂದೂ, ಇನ್ನು ಮುಸ್ಲಿಮರನ್ನು ಅವರು ಬಿಡುವರೇನು ಎಂಬುದಾಗಿ ಸುಳ್ಳು ಆರೋಪಗಳನ್ನು ಮಾಡುತ್ತಾ ಮುಸ್ಲಿಮರಲ್ಲಿ ಆರೆಸ್ಸೆಸ್, ಬಿಜೆಪಿ ಬಗ್ಗೆ ಇನ್ನಿಲ್ಲದ ಭಯ ಹುಟ್ಟಿಸುತ್ತಾ ಬಂತು. ಇತ್ತೀಚೆಗೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು "ವಿಷ ಸರ್ಪವನ್ನು ಕೊಂದಂತೆ ಆರೆಸ್ಸೆಸ್, ಬಿಜೆಪಿ ಎಂಬ ವಿಷ ಸರ್ಪವನ್ನು ಕೊಲ್ಲಿ" ಎಂದು ಬಹಿರಂಗವಾಗಿ ಅಸ್ಸಾಂನ ರ‍್ಯಾಲಿಯೊಂದರಲ್ಲಿ ದ್ವೇಷ ಭಾಷಣ ಮಾಡಿದ್ದು ಎಲ್ಲರೂ ಗಮನಿಸಿದ್ದಾರೆ. ನಾಮಾವಶೇಷವಾಗುತ್ತಿರುವ ಕಾಂಗ್ರೆಸ್‌ನ ಅಸ್ತಿತ್ವವನ್ನು ಹೇಗಾದರೂ ಮಾಡಿ ಉಳಿಸಿಕೊಂಡು ಮತ್ತೆ ಅಧಿಕಾರಕ್ಕೆ ಬರುವಂತೆ ಮಾಡಲು ಕಾಂಗ್ರೆಸಿಗರು ಕೋಮು ದ್ವೇಷಕ್ಕೆ ಪ್ರಚೋದನೆ ನೀಡುವ ಕೆಲಸ ಮಾಡುತ್ತಿದ್ದಾರೆ.



ಪಾಕಿಸ್ತಾನ ನಿರ್ಮಾಣದ ನಂತರ ಭಾರತದಲ್ಲಿ ಉಳಿದ ಮುಸಲ್ಮಾನರ ಮನಸ್ಥಿತಿ ಹೆದರಿದ ಕುರಿಯಂತಾಗಿತ್ತು. ತಮ್ಮ ಬಗ್ಗೆ ಹಿಂದುಗಳಲ್ಲಿ ಆಕ್ರೋಶದ ಭಾವನೆ ಇದೆ ಎಂದು ಗುರುತಿಸಿದ ಮುಸ್ಲಿಮರು ಸ್ವಲ್ಪಕಾಲ ತೆಪ್ಪಗಿದ್ದರು.ಇಲ್ಲಿನ ಸರಕಾರ ಏನೇ ಷರತ್ತು ವಿಧಿಸಿದರೂ ಕೇಳುವ ಮನಸ್ಥಿತಿಯಲ್ಲಿದ್ದರು. ಅಂತಹ ಸಂದರ್ಭದಲ್ಲಿ ಭಾರತದ ನಾಯಕರು ಅವರನ್ನು ರಾಷ್ಟ್ರೀಯ ಮುಖ್ಯ ಪ್ರವಾಹದಲ್ಲಿ ತರುವ ಪ್ರಯತ್ನ ಆರಂಭಿಸಬೇಕಾಗಿತ್ತು. ಅವರ ಪೂರ್ವಜರು ಅರೇಬಿಯಾ, ಮಕ್ಕಾದಿಂದ ಬಂದವರಲ್ಲವೆಂದೂ, ಅಲ್ಲಿಂದ ಬಂದ ಹಿಡಿಯಷ್ಟು ಮಂದಿ ಕ್ರೂರಿ ದೊರೆಗಳ ಬಲವಂತದಿಂದಲೋ, ಆಮಿಷದಿಂದಲೋ ಮತಾಂತರವಾದವರು ಎಂದು ತಿಳಿಹೇಳಬೇಕಾಗಿತ್ತು. ಅವರಿಗೆ ಮರಳಿ ಹಿಂದೂ ಧರ್ಮಕ್ಕೆ ಬರಲು ಅಥವಾ ತಮ್ಮ ಮನೆಗಳಲ್ಲಿ ತಮ್ಮ ಮತವನ್ನು ಪಾಲಿಸಿಕೊಂಡು ಹೋಗಲು ಅಡ್ಡಿಯಿಲ್ಲವೆಂದು ತಿಳಿಸಿ ಹೇಳಬೇಕಾಗಿತ್ತು. ಭಾರತವು ಮೂಲತಃ ಹಿಂದೂಗಳ ದೇಶವೆಂದೂ, ಹಿಂದು ಧರ್ಮ, ಸಂಸ್ಕೃತಿ, ಭಾಷೆ, ಮಹಾಪುರುಷರು, ಗ್ರಂಥಗಳೇ ಇಲ್ಲಿ ಪ್ರಧಾನವೆಂದೂ, ಅವುಗಳಿಗೆ ಗೌರವ ನೀಡುತ್ತಾ ತಮ್ಮ ಮತೀಯ ಆರಾಧನಾ ಪದ್ಧತಿಯನ್ನು ಅನುಸರಿಸಿಕೊಂಡು ಹೋಗಲು ಅಡ್ಡಿಯಿಲ್ಲವೆಂದು ಭರವಸೆ ನೀಡಿ, ತಿಳಿಸಿಹೇಳಿದ್ದಲ್ಲಿ ಕ್ರಮೇಣ ಅವರಲ್ಲಿ ಒಂದು ಬಹು ದೊಡ್ಡ ಜನವರ್ಗ ಅರ್ಥ ಮಾಡಿಕೊಂಡು ಹಿಂದೂಗಳೊಡನೆ ಹೊಂದಿಕೊಂಡು ಬಾಳುವ ಸಾಧ್ಯತೆ ಇತ್ತು. ಆದರೆ ಕಾಂಗ್ರೆಸ್ ನಾಯಕರು ಹಾಗಾಗಲು ಬಿಡಲಿಲ್ಲ. ಅವರಿಗೆ ಹಿಂದು ಹಿತ, ರಾಷ್ಟ್ರಹಿತಕ್ಕಿಂತ ತಮ್ಮ ಸ್ವಾರ್ಥ, ಅಧಿಕಾರ ಲಾಲಸೆಗಳೇ ಮುಖ್ಯವಾದವು. ಹಿಂದೂ ರಾಷ್ಟ್ರೀಯತೆ ಬೆಳೆಯಲು ಬಿಟ್ಟರೆ ತಮ್ಮ ಬೇಳೆ ಬೇಯುವುದಿಲ್ಲ ಎಂಬುದು ಅವರ ಭಾವನೆಯಾಗಿತ್ತು. ಆದಕ್ಕಾಗಿ ಹಿಂದು ವಿರೋಧ, ಆರೆಸ್ಸೆಸ್ ವಿರೋಧ, ಬಿಜೆಪಿ ವಿರೋಧಗಳನ್ನೇ ತಮ್ಮ ಮುಖ್ಯ ಕಾರ್ಯಸೂಚಿಯನ್ನಾಗಿ ಮಾಡಿಕೊಂಡರು. ಜಾತಿವಾರು, ಭಾಷಾವಾರು, ಉತ್ತರ -ದಕ್ಷಿಣ, ಆರ್ಯ- ದ್ರಾವಿಡ, ಬ್ರಾಹ್ಮಣ- ದಲಿತ ಭೇದಭಾವಗಳಿಗೆ ಇಂಬು ಕೊಟ್ಟು ಹಿಂದು ಸಮಾಜ ದುರ್ಬಲವಾಗಿರುವಂತೆ ನೋಡಿಕೊಂಡರು.

ಚುನಾವಣೆಯಲ್ಲಿ ಗೆಲ್ಲಲು ಜನಗಳ ಮತಗಳೇ ಮುಖ್ಯ. ಆದಕ್ಕಾಗಿ ಅಲ್ಪಸಂಖ್ಯಾತರನ್ನು, ಅದರಲ್ಲೂ ಸಗಟು ಮತ ನೀಡುವ ಮುಸ್ಲಿಮರನ್ನು ಇನ್ನಿಲ್ಲದಂತೆ ತುಷ್ಟೀಕರಿಸಲು ಪ್ರಯತ್ನಶೀಲರಾದರು. ಜೊತೆಗೆ ಹಿಂದುಗಳಲ್ಲಿರುವ ಹಿಂದುಳಿದ ವರ್ಗಗಳವರ ಮನದಲ್ಲಿ ತಪ್ಪು ಭಾವನೆ ಬೆಳೆಸಿ ತಮ್ಮ ಮತಬ್ಯಾಂಕಿಗೆ ಸೇರಿಸಿಕೊಂಡರು. ಹೀಗೆ ಆರೆಸ್ಸೆಸ್ - ಬಿಜೆಪಿ ಏಕಾಂಗಿಯಾದವು.

ಆದರೆ ಸಂಘದ ನೂರು ವರ್ಷಗಳ ಸತತ ಪ್ರಯತ್ನ, ದೇಶ ಒಡೆಯುವವರ ವಿರುದ್ಧ ಹೋರಾಟದ ಫಲವಾಗಿ ಕ್ರಮೇಣ ಹಿಂದುಗಳಲ್ಲಿನ ಒಂದು ದೊಡ್ಡ ವರ್ಗವು ಹಿಂದು ಸಂಘಟನೆಯ ಬೆನ್ನಿಗೆ ನಿಂತಿತು. ವಾಜಪೇಯಿ, ಮೋದಿಯವರಂಥ ಆರೆಸ್ಸೆಸ್ ಪ್ರಚಾರಕರು ಪ್ರಧಾನಿಯಾಗುವ ಪರಿಸ್ಥಿತಿ ನಿರ್ಮಾಣವಾಯಿತು. ಆದರೆ ಕಾಂಗ್ರೆಸ್ ನಿರಂತರ ಬ್ರೈನ್ ವಾಶ್ ಮಾಡಿಟ್ಟಂತಹ ಮುಸ್ಲಿಂ ಸಮುದಾಯ ಅವರ ಸುಳ್ಳುಗಳನ್ನು ನಂಬಿ ಮತ್ತೆ ಸಂಘಟಿತವಾಯಿತು. 70 ವರ್ಷ ಸತತ ಅಧಿಕಾರದಲ್ಲಿದ್ದ ಕಾಂಗ್ರೆಸಿನ ಓಲೈಕೆಯಿಂದಾಗಿ ಧೈರ್ಯ ತುಂಬಿಕೊಂಡ ಮುಸ್ಲಿಂ ಸಮುದಾಯದ ಒಂದು ವರ್ಗವು ಹಿಂದು ವಿರೋಧ, ಆರೆಸ್ಸೆಸ್ ವಿರೋಧದಲ್ಲಿ ಬಹಿರಂಗವಾಗಿ ತೊಡಗಿತು. ಮದರಸಾಗಳಲ್ಲಿ ಕೂಡಾ ಹಿಂದು ದ್ವೇಷವನ್ನು ಹರಡಲಾಯಿತು. ಇದೀಗ ಭಾರತದ ಮುಸ್ಲಿಮರ ಒಂದು ಸಣ್ಣ ವರ್ಗ, ವಿಶೇಷವಾಗಿ ಶಿಕ್ಷಿತ ಎಳೆಪೀಳಿಗೆಯವರು ಉಗ್ರವಾದಿ ಮನಸ್ಥಿತಿ ಬೆಳೆಸಿಕೊಳ್ಳುತ್ತಿದ್ದಾರೆ.

ಸ್ವಾತಂತ್ರ್ಯೋತ್ತರದಲ್ಲಿ ಕಾಂಗ್ರೆಸ್ ಸರಕಾರವು ಜಮ್ಮು ಕಾಶ್ಮೀರಕ್ಕೆ 370 ವಿಧಿ ಮೂಲಕ ವಿಶೇಷ ಸ್ಥಾನಮಾನ ನೀಡಿತು. ಕಾಶ್ಮೀರಿ ಪಂಡಿತರ ನರಮೇಧದ ನೋಡಿಯೂ ಕ್ರಮ ತೆಗೆದುಕೊಳ್ಳಲಿಲ್ಲ. ಓರ್ವ ಬಿಂದ್ರನ್‌ವಾಲೆಯನ್ನು ಸೃಷ್ಟಿಸಿ ಪಂಜಾಬಿನ ಸಿಕ್ಖರು ಮತ್ತು ಹಿಂದುಗಳ ಮಧ್ಯೆ ಒಡಕು ಸೃಷ್ಟಿಸಿತು. ಪಂಜಾಬಿನಲ್ಲಾದ ಖಲಿಸ್ಥಾನಿ ಭಯೋತ್ಪಾದನೆ ಬಗ್ಗೆ ಎಲ್ಲರಿಗೂ ಗೊತ್ತಿದೆ. ನಂತರ ದಿಲ್ಲಿಯಲ್ಲಿ ಸಾವಿರಾರು ಸಿಕ್ಖರ ನರಮೇಧ ನಡೆಯಿತು. ಇದಕ್ಕೆ ಕಾಂಗ್ರೆಸ್ ನಾಯಕರೇ ಕಾರಣ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಹೀಗೆ ಪಾಕಿಸ್ತಾನ ವಿಭಜನೆ, ಹಿಂದು ಮಾರಣ ಹೋಮ, ಕಾಶ್ಮೀರಿ ಪಂಡಿತರ ನರಮೇಧ ಇವುಗಳಿಂದ ಕಾಂಗ್ರೆಸ್ ನಾಯಕರ ಕೈ ರಕ್ತಸಿಕ್ತವಾಗಿದೆ.

ಈಗ ಕಾಂಗ್ರೆಸ್ ಪಕ್ಷವು ಅಧಿಕಾರ ಕಳೆದುಕೊಂಡರೂ ಅದರ ತುಷ್ಟೀಕರಣದಿಂದಾಗಿ ಬೆಳೆದ ಇಸ್ಲಾಮಿಕ್ ಭಯೋತ್ಪಾದನೆಯು ಇನ್ನೂ ಸಮಸ್ಯೆಯಾಗಿಯೇ ಉಳಿದಿದೆ. ಪಾಕಿಸ್ತಾನ ಹಾಗೂ ವಿದೇಶಗಳಿಂದ ದೊಡ್ಡಮಟ್ಟದ ಹಣವೂ ಹರಿದು ಬರುತ್ತಿದೆ. ಜೊತೆಗೆ ಹಿಂದುಗಳ ಒಂದು ವರ್ಗ, ಅಂದರೆ ಕಾಂಗ್ರೆಸ್ ಮತ್ತು ಪ್ರಾದೇಶಿಕ ವಿರೋಧ ಪಕ್ಷಗಳ ಬೆಂಬಲವೂ ತಮಗಿದೆ ಎಂಬ ಭರವಸೆ ಈ ಭಯೋತ್ಪಾದಕರಿಗೆ ಇದೆ.

ಸದ್ಯ ಮೋದಿ ಸರಕಾರ ಇರುವುದರಿಂದ, ಅಮಿತ್ ಶಾ, ಅಜಿತ್ ದೋವಲ್‌ರಂತಹ ಸಮರ್ಥ ನಾಯಕರು ಇರುವುದರಿಂದ ಭಯೋತ್ಪಾದಕರನ್ನು ಮಟ್ಟ ಹಾಕಲಾಗುತ್ತಿದೆ. ಶಿಕ್ಷಣ ವ್ಯವಸ್ಥೆಯಲ್ಲಿ ಪರಿವರ್ತನೆ ತರಲಾಗುತ್ತಿದೆ. ಅಲ್ಪಸಂಖ್ಯಾತರೂ ಹಿಂದುಗಳೇ ಎಂಬುದಾಗಿ ಹಿಂದು ನಾಯಕರು ಹೇಳಿಕೆ ನೀಡುತ್ತಿದ್ದಾರೆ.

ಯಾವ ರೀತಿಯಲ್ಲಿ ಹಿಂದು ಸಮಾಜದ ಅಸಂಘಟನೆಯಿಂದ ಹಿಂದುಗಳಲ್ಲಿ ದೌರ್ಬಲ್ಯ ಆವರಿಸಿತೋ ಅದನ್ನು ಮೊದಲು ದೂರ ಮಾಡಬೇಕಾಗಿದೆ. ಹಿಂದು ಸಮಾಜದಲ್ಲಿ ಐಕ್ಯತೆ ಮೂಡಿಸಿ, ಗುಲಾಮಿ ಮಾನಸಿಕತೆಯಿಂದ, ಸ್ವಾರ್ಥಪರತೆಯಿಂದ ಅವರನ್ನು ಹೊರತರಬೇಕಾಗಿದೆ. ಅದಕ್ಕೆ ಇಂದು ವಾತಾವರಣ ಅನುಕೂಲಕರವಾಗಿದೆ. ಸರಕಾರವೂ ಅನುಕೂಲಕರವಾಗಿದೆ.

ಲೆಬನಾನ್ ಜತೆ ಐತಿಹಾಸಿಕ ಶಾಂತಿ ಒಪ್ಪಂದ: ನೆತನ್ಯಾಹು

ಹೆಜ್ಬೊಲ್ಲಾ ನಾಶವೇ ಇಸ್ರೇಲ್‌ನ ಗುರಿ

ಟೆಲ್ ಅವೀವ್: ಇರಾನ್‌ನೊಂದಿಗೆ ಘೋಷಿಸಲಾದ ಕದನ ವಿರಾಮವು ಲೆಬನಾನ್ ವಿಚಾರದಲ್ಲಿ ಪರಿಣಾಮ ಬೀರುವುದಿಲ್ಲ, ಹೆಜ್ಬೊಲ್ಲಾ ಮೇಲೆ ಇನ್ನಷ್ಟು ಪ್ರಖರ ದಾಳಿ ನಡೆಸುತ್ತೇವೆ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಎಚ್ಚರಿಕೆ ನೀಡಿದ್ದಾರೆ. ಒಂದು ವೇಳೆ ಲೆಬನಾನ್ ಮನವಿ ಮಾಡಿಕೊಂಡರೆ ಅದರೊಂದಿಗೆ ಶಾಂತಿ ಮಾತುಕತೆ ನಾವು ಸಿದ್ಧರಿದ್ದೇವೆ ಎಂದು ನೆತನ್ಯಾಹು ಹೇಳಿದ್ದಾರೆ.

ಹೆಜ್ಬೊಲ್ಲಾ ನಿಷ್ಕ್ರಿಯಗೊಳಿಸುವುದೇ ನಮ್ಮ ಗುರಿ. ಲೆಬನಾನ್ ಸರ್ಕಾರದೊಂದಿಗಿನ ಐತಿಹಾಸಿಕ ಶಾಂತಿ ಒಪ್ಪಂದ ಸಾಧಿಸಲು ನೇರ ಮಾತುಕತೆಗಳನ್ನು ಆರಂಭಿಸಲು ಸಚಿವ ಸಂಪುಟಕ್ಕೆ ಸೂಚನೆ ನೀಡಿದ್ದೇನೆ ಎಂದು ನೆತನ್ಯಾಹು ಹೇಳಿದ್ದಾರೆ. ಲೆಬನಾನ್ ಸರ್ಕಾರದ ಮನವಿ ಹಿನ್ನೆಲೆ, ಕಳೆದ ರಾತ್ರಿ ನೇರ ಮಾತುಕತೆಗಳನ್ನು ಆರಂಭಿಸಲು ಸಚಿವ ಸಂಪುಟಕ್ಕೆ ಸೂಚನೆ ನೀಡಿದ್ದೇನೆ. ಹೆಜ್ಬೊಲ್ಲಾ ಉಗ್ರ ಸಂಘಟನೆ ನಿಷ್ಕ್ರಿಯಗೊಳಿಸುವುದು ನಮ್ಮ ಮೊದಲ ಗುರಿ. ಎರಡನೆಯದು ಇಸ್ರೇಲ್ ಮತ್ತು ಲೆಬನಾನ್ ನಡುವಿನ ಐತಿಹಾಸಿಕ ಶಾಂತಿ ಒಪ್ಪಂದ ಎಂದು ಹೇಳಿದರು. ಇಸ್ರೇಲ್ ರಕ್ಷಣಾ ಪಡೆ (ಐಡಿಎಫ್) ಹಿಜ್ಬುಲ್ಲಾ ಅಡಗುದಾಣಗಳ ಮೇಲೆ ಹೊಸ ದಾಳಿಗಳನ್ನು ಪ್ರಾರಂಭಿಸಿದೆ. ಲೆಬನಾನ್‌ನಲ್ಲಿರುವ ಹೆಜ್ಬೊಲ್ಲಾ ಉಗ್ರ ಸಂಘಟನೆಯ ಉಡಾವಣಾ ಕೇಂದ್ರಗಳ ಮೇಲೆ ದಾಳಿ ಆರಂಭಿಸಲಾಗಿದೆ ಎಂದು ಐಡಿಎಫ್ ತನ್ನ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದೆ.




ಪರಿಹಾರವೆಂದ ಲೆಬನಾನ್: ದೇಶದ ಪ್ರಸ್ತುತ ಪರಿಸ್ಥಿತಿಗೆ ಯುದ್ಧ ವಿರಾಮವೇ ಏಕೈಕ ಪರಿಹಾರವೆಂದು ಲೆಬನಾನ್ ಅಧ್ಯಕ್ಷ ಜೋಸೆಫ್ ಔನ್ ಹೇಳಿದ್ದಾರೆ. ಕದನ ವಿರಾಮದ ಪ್ರಸ್ತಾವನೆ ಹಾಗೂ ಇಸ್ರೇಲ್ ಜತೆ ನೇರ ಮಾತುಕತೆಯ ಪ್ರಕ್ರಿಯೆ ಈಗಾಗಲೇ ಶುರುವಾಗಿದೆ ಮತ್ತು ಇದುವರೆಗೆ ಸಕಾರಾತ್ಮಕ ಪ್ರತಿಕ್ರಿಯೆ ದೊರೆತಿದೆ ಎಂದು ತಿಳಿಸಿದ್ದಾರೆ.

ಲೆಬನಾನ್‌ನಲ್ಲಿ ಶಾಂತಿ, ಸುರಕ್ಷತೆಗೆ ಭಾರತ ಕರೆ

ಲೆಬನಾನ್ ರಾಷ್ಟ್ರದಲ್ಲಿ ಸುಮಾರು 1,000ಕ್ಕೂ ಅಧಿಕ ಭಾರತೀಯರಿದ್ದಾರೆ. ಪ್ರದೇಶದಲ್ಲಿ ಶಾಂತಿ ಮತ್ತು ಸ್ಥಿರತೆಯನ್ನು ಕಾಯ್ದುಕೊಳ್ಳಲು ಭಾರತ ತನ್ನ ಬದ್ಧತೆಯನ್ನು ಹೊಂದಿದೆ. ಲೆಬನಾನ್ ಮೇಲಿನ ಇಸ್ರೇಲ್ ಸೇನೆಯ ದಾಳಿಗಳು ಆತಂಕಕಾರಿ. ಭಾರತೀಯರ ಸುರಕ್ಷತೆ ನಮ್ಮ ಮೊದಲ ಆದ್ಯತೆಯೆಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.





ಯುದ್ಧ ವಿರಾಮ ಏಕೈಕ

ಕದನ ವಿರಾಮ ಇನ್ನೂ ಅಸ್ಥಿರ!

ಕದನ ವಿರಾಮದ ಭವಿಷ್ಯ ಇನ್ನೂ ಅನಿಶ್ಚಿತವಾಗೇ ಉಳಿದುಕೊಂಡಿದೆ. ಯಾಕೆಂದರೆ ಹಲವು ಪ್ರಮುಖ ವಿಚಾರಗಳ ಬಗ್ಗೆ ರಾಷ್ಟ್ರಗಳ ನಡುವೆ ಯಾವುದೇ ಸ್ಪಷ್ಟತೆಯಿಲ್ಲ. ಪರಮಾಣು ಹಾಗೂ ಕ್ಷಿಪಣಿ ನಿರ್ಮಾಣ ಯೋಜನೆಯನ್ನು ಇರಾನ್ ಕೈಬಿಡುವುದು, ಹೆಚ್ಚುವರಿ ಯುರೇನಿಯಂ ಸಂಗ್ರಹಿಸುವುದನ್ನು ನಿಲ್ಲಿಸುವುದು ಅಮೆರಿಕ ಮತ್ತು ಇಸ್ರೇಲ್‌ನ ಪ್ರಮುಖ ಗುರಿಗಳಾಗಿವೆ. ಆದರೆ ತನ್ನ ಪರಮಾಣು ಬಾಂಬ್ ಯೋಜನೆ ಶಾಂತಿಯುತವಾಗಿದ್ದು, ಯುರೇನಿಯಂ ಸಂಸ್ಕರಣೆ ಹಕ್ಕನ್ನು ಉಳಿಸಿಕೊಳ್ಳುವುದು ಇರಾನ್ ಗುರಿಯಾಗಿದೆ. ಯುದ್ಧ ವಿರಾಮ ಘೋಷಿಸಲ್ಪಟ್ಟಿದ್ದರೂ, ಪರಿಸ್ಥಿತಿ ಇನ್ನೂ ಗಂಭೀರವಾಗಿದೆ ಮತ್ತು ಶಾಶ್ವತ ಶಾಂತಿ ಸಾಧಿಸಲು ಇನ್ನೂ ಬಹಳ ಪ್ರಯತ್ನ ಅಗತ್ಯವಿದೆ.

ಆಪರೇಷನ್ ರೋರಿಂಗ್ ಲಯನ್

ಇಸ್ರೇಲ್ ಸೇನೆ (ಐಡಿಎಫ್), ಇರಾನ್ ಮೇಲಿನ ತನ್ನ ಆಪರೇಷನ್ ರೋರಿಂಗ್ ಲಯನ್ ಅಂಕಿ ಸಂಖ್ಯೆಯನ್ನು ಶುಕ್ರವಾರ ಹಂಚಿಕೊಂಡಿದೆ.

1,000+
ಇಸ್ರೇಲ್ ಯುದ್ಧ ವಿಮಾನಗಳ ದಾಳಿ ಹಾರಾಟ

10,800+
ಇರಾನ್ ಮೇಲೆ ಇಸ್ರೇಲ್ ನಡೆಸಿದ ವೈಮಾನಿಕ ದಾಳಿ

6,700+
ಇರಾನ್ ಸೇನಾ ಮೂಲಸೌಕರ್ಯಗಳು, ವ್ಯವಸ್ಥೆಗಳ ನಾಶ

4,000+
ಗುರಿಗಳ ಮೇಲೆ ಇಸ್ರೇಲ್ ವೈಮಾನಿಕ ದಾಳಿ

18,000+
ಬಾಂಬ್‌ಗಳಿಂದ ಇರಾನ್ ಮೇಲೆ ದಾಳಿ

8,500+
ಇರಾನ್‌ನಲ್ಲಿ ನಡೆಸಿದ ಕಾರ್ಯಾಚರಣೆ ಹಾರಾಟ



ಇಸ್ರೇಲ್ ಮತ್ತು ಹೆಜ್ಬೊಲ್ಲಾ ನಡುವೆ ಗುಂಡಿನ ಚಕಮಕಿ

ಅಮೆರಿಕ ಮತ್ತು ಇರಾನ್ ನಡುವಿನ ಯುದ್ಧ ವಿರಾಮ ಅಸ್ಥಿರವಾದ ಹಿನ್ನೆಲೆ ಶುಕ್ರವಾರ ಉನ್ನತ ಮಟ್ಟದ ಮಾತುಕತೆಗೆ ಎರಡೂ ರಾಷ್ಟ್ರಗಳ ಸಂಧಾನಕಾರರು ಸಿದ್ಧತೆ ನಡೆಸುತ್ತಿದ್ದಾರೆ. ಈ ಅಸ್ಥಿರತೆಯ ಮಧ್ಯೆ ಇಸ್ರೇಲ್ ಮತ್ತು ಹೆಜ್ಬೊಲ್ಲಾ ನಡುವೆ ಗುಂಡಿನ ಚಕಮಕಿ ಏರ್ಪಟ್ಟಿದ್ದು, ಹಾರ್ಮುಜ್ ಜಲಸಂಧಿಯನ್ನು ತೆರೆಯದೆ ಇರಾನ್ ತನ್ನ ಹಿಡಿತ ಸಾಧಿಸಿದೆ. ಕದನ ವಿರಾಮ ಅನುಷ್ಠಾನಕ್ಕೆ ಹಲವು ಅಡೆತಡೆಗಳು ಇನ್ನೂ ಉಳಿದುಕೊಂಡಿವೆ. ಶಾಶ್ವತ ಕದನ ವಿರಾಮ ಒಪ್ಪಂದ ಮಾತುಕತೆಗೆ ಹಲವು ಸವಾಲುಗಳಿವೆ. ಇರಾನ್ ಮಾಧ್ಯಮಗಳ ಪ್ರಕಾರ, ಲೆಬನಾನ್ ಮೇಲೆ ಇಸ್ರೇಲ್ ದಾಳಿಗಳನ್ನು ನಿಲ್ಲಿಸದಿದ್ದರೆ ಮಾತುಕತೆ ನಡೆಯುವುದು ಸಂಶಯ.

ಇರಾನ್ ವಿರುದ್ಧ ಟ್ರಂಪ್ ಅಸಮಾಧಾನ

ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಹಾರ್ಮುಜ್ ಜಲಸಂಧಿಯಲ್ಲಿ ಹಡಗುಗಳ ಮುಕ್ತ ಸಂಚಾರವನ್ನು ನಿರ್ಬಂಧಿಸಿದ ಇರಾನ್ ಅನ್ನು ಟೀಕಿಸಿದ್ದಾರೆ. ಇರಾನ್ ತನ್ನ ಕರ್ತವ್ಯ ಸರಿಯಾಗಿ ನಿರ್ವಹಿಸುತ್ತಿಲ್ಲ. ಇದರಿಂದ ಜಾಗತಿಕ ತೈಲ ಪೂರೈಕೆಯ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ. ಹಡಗುಗಳ ಮುಕ್ತ ಸಂಚಾರಕ್ಕೆ ಇರಾನ್ ತಡೆಯೊಡ್ಡಿರುವುದು ಆರ್ಥಿಕ ಅಸ್ಥಿರತೆ ಉಂಟುಮಾಡುತ್ತಿದೆ ಎಂದು ಟ್ರಂಪ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಇರಾನ್ ಕದನ ವಿರಾಮ ಒಪ್ಪಂದಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿದೆ ಎಂದು ಟ್ರಂಪ್ ಆರೋಪಿಸಿದ್ದಾರೆ.

ಕುವೈತ್ ಮೇಲೆ ಡ್ರೋನ್ ದಾಳಿ ಆರೋಪ

ಈ ಮಧ್ಯೆ, ಕುವೈತ್ ಗುರುವಾರ ತಡರಾತ್ರಿ ಇರಾನ್ ಡ್ರೋನ್ ದಾಳಿ ನಡೆಸಿದೆಯೆಂದು ಆರೋಪಿಸಿದೆ. ಇರಾನ್ ಮತ್ತದರ ಸೇನಾ ಮೈತ್ರಿಗಳು ದಾಳಿ ನಡೆಸಿರುವುದಾಗಿ ಕುವೈತ್ ದೂರಿದೆ. ಆದರೆ ಈ ದಾಳಿಯಲ್ಲಿ ತಮ್ಮ ಪಾತ್ರವಿಲ್ಲವೆಂದು ಇರಾನ್ ಸೇನೆ (ಐಆರ್‌ಜಿಸಿ) ಸ್ಪಷ್ಟೀಕರಣವನ್ನು ನೀಡಿದೆ. ಈ ಹಿಂದಿನ ಕೆಲವೊಮ್ಮೆ ಐಆರ್‌ಜಿಸಿ ದಾಳಿ ನಡೆಸಿದ್ದರೂ ಅಧಿಕೃತವಾಗಿ ಒಪ್ಪಿಕೊಂಡಿಲ್ಲ.

ಇಸ್ರೇಲ್ -ಲೆಬನಾನ್ ಮಧ್ಯೆ ನೇರ ಮಾತುಕತೆ

ಇಸ್ರೇಲ್ ಮತ್ತು ಲೆಬನಾನ್ ನಡುವಿನ ನೇರ ಮಾತುಕತೆಗಳು ಶೀಘ್ರದಲ್ಲೇ ಆರಂಭವಾಗುವ ನಿರೀಕ್ಷೆಯಿದೆ. ಅಮೆರಿಕದ ವಾಷಿಂಗ್ಟನ್‌ನಲ್ಲಿ ಇಸ್ರೇಲ್ ಮತ್ತು ಲೆಬನಾನ್ ನಡುವಿನ ಶಾಂತಿ ಮಾತುಕತೆಗಳು ನಡೆಯಲಿವೆ. ಸಭೆಯಲ್ಲಿ ಅಮೆರಿಕದ ಅಧಿಕಾರಿಗಳ ಉಪಸ್ಥಿತಿ ಇರಲಿದೆ ಎಂದು ಮೂಲಗಳು ತಿಳಿಸಿವೆ. ಲೆಬನಾನ್ ಜತೆಗಿನ ಶಾಂತಿ ಸಭೆಯಲ್ಲಿ ಹೆಜ್ಬೊಲ್ಲಾ ಮೇಲಿನ ಯುದ್ಧ ವಿರಾಮ ಒಳಗೊಂಡಿಲ್ಲ ಎಂಬ ವಾದ ಇಸ್ರೇಲ್‌ನದ್ದಾಗಿದೆ. ಅಮೆರಿಕ-ಇರಾನ್ ಕದನ ವಿರಾಮ ಘೋಷಿಸಿದ ದಿನವೇ ಬೈರತ್ ಮೇಲೆ ಇಸ್ರೇಲ್ ವೈಮಾನಿಕ ದಾಳಿ ನಡೆಸಿದ್ದು, 300ಕ್ಕೂ ಅಧಿಕ ಜನರು ಬಲಿಯಾಗಿದ್ದರು. ಇದೇ ವೇಳೆ ದಾಳಿ ಕಡಿಮೆ ಮಾಡುವಂತೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರಿಗೆ ಅಮೆರಿಕ ಅಧ್ಯಕ್ಷ ಟ್ರಂಪ್ ಮನವಿ ಮಾಡಿದ್ದಾರೆ. ಉತ್ತರ ಇಸ್ರೇಲ್ ಕಡೆಗೆ ಲೆಬನಾನ್ ಹಾರಿಸಿದ ರಾಕೆಟ್‌ಗಳಿಗೆ ಇಸ್ರೇಲ್ ಪ್ರತಿದಾಳಿ ನಡೆಸಿದೆ. ಹಿಜ್ಬುಲ್ಲಾ ಮೇಲೆ ದಾಳಿ ಮುಂದುವರಿದರೆ ಕಠಿಣ ಪ್ರತಿಕ್ರಿಯೆ ನೀಡುತ್ತೇವೆ ಎಂದು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಗಾರ್ ಖಾಲಿಬಫ್ ಎಚ್ಚರಿಕೆ ನೀಡಿದ್ದಾರೆ.

ಅಮೆರಿಕದ ದುಬಾರಿ ಡ್ರೋನ್ ಹಾರ್ಮುಜ್ ಸಮೀಪ ಕಣ್ಮರೆ!

ಟೆಹ್ರಾನ್: ಪರ್ಷಿಯನ್ ಗಲ್ಫ್ ಮತ್ತು ಹಾರ್ಮುಜ್ ಜಲಸಂಧಿಯ ಮೇಲೆ ಕಣ್ಗಾವಲು ನಡೆಸುತ್ತಿದ್ದ ಅಮೆರಿಕ ಸೇನೆಯ 200 ದಶಲಕ್ಷ ಡಾಲರ್ ಮೌಲ್ಯದ ಎಂಕ್ಯೂ-4ಸಿ ಟ್ರಿಟನ್ ಡ್ರೋನ್ ಕಾಣೆಯಾಗಿದೆ. ಇದು ಕೊನೆಯದಾಗಿ ಇರಾನ್ ವಾಯು ಪ್ರದೇಶದಲ್ಲಿ ಕಾಣಿಸಿಕೊಂಡಿದ್ದು, ಅಮೆರಿಕ-ಇರಾನ್ ನಡುವಿನ ಕದನ ವಿರಾಮ ಘೋಷಣೆಯ ಬಳಿಕ ಘಟನೆ ನಡೆದಿದೆ. ಡ್ರೋನ್ ಪತನಗೊಂಡಿತೋ ಅಥವಾ ಇರಾನಿಯನ್ನರು ಹೊಡೆದುರುಳಿಸಿದ್ದಾರೋ ಎಂಬ ಬಗ್ಗೆ ಯಾವುದೇ ಮಾಹಿತಿ ಲಭ್ಯವಾಗಿಲ್ಲ. ಅಮೆರಿಕದ ದುಬಾರಿ ಎಂಕ್ಯೂ-4ಸಿ ಟ್ರಿಟನ್ ಡ್ರೋನ್, ಪರ್ಷಿಯನ್ ಗಲ್ಫ್ ಮತ್ತು ಹಾರ್ಮುಜ್‌ನ ಮೇಲೆ ಸುಮಾರು 3 ಗಂಟೆಗಳ ಕಾಲ ಕಣ್ಗಾವಲು ನಡೆಸಿದ ಬಳಿಕ ಇಟಲಿಯ ಸಿಗೊನೆಲ್ಲಾ ನೌಕಾನೆಲೆಗೆ ಹೋಗುತ್ತಿತ್ತು ಎಂದು ವರದಿಯಾಗಿದೆ. ಆದರೆ ಅದು ಸಿಗೊನೆಲ್ಲಾ ಸೇನಾನೆಲೆಯನ್ನು ತಲುಪಿಲ್ಲ. ಡ್ರೋನ್ ಕಾಣೆಯಾಗುವ ಮುನ್ನ ಸಹಾಯಕ್ಕಾಗಿ ತುರ್ತು ಪರಿಸ್ಥಿತಿ ಕೋಡ್ 7700 ಕಳುಹಿಸಿತ್ತು. ಹಾರ್ಮುಜ್‌ನಲ್ಲಿ ಅಮೆರಿಕ ಮತ್ತು ಇರಾನ್ ಕದನ ವಿರಾಮ ಒಪ್ಪಂದಕ್ಕೆ ಒಪ್ಪಿಕೊಂಡ 2 ದಿನಗಳ ಬಳಿಕ ಡ್ರೋನ್ ಕಾಣೆಯಾಗಿದೆ. ಇದು ಸುಮಾರು 50,000 ಅಡಿ ಎತ್ತರದಲ್ಲಿ 24 ಗಂಟೆಗಳಿಗೂ ಅಧಿಕ ಕಾಲ 13,705 ಕಿ.ಮೀ. ದೂರದವರೆಗೆ ಕಣ್ಗಾವಲು ಸಾಮರ್ಥ್ಯವನ್ನು ಹೊಂದಿದೆ. 2025ರ ವರದಿಯ ಪ್ರಕಾರ, ಇಂತಹ 20 ಡ್ರೋನ್‌ಗಳನ್ನು ಹೊಂದಿರುವ ಅಮೆರಿಕ ನೌಕಾಪಡೆ ಇನ್ನೂ 7 ಖರೀದಿಸಲಿದೆ.

ಲೆಬನಾನ್ ಜತೆ ಸಂಬಂಧ ಮರುಸ್ಥಾಪನೆಗೆ ಪ್ರಯತ್ನ: ನೆತನ್ಯಾಹು

ಲೆಬನಾನ್ ಜೊತೆ ಶೀಘ್ರ ಮಾತುಕತೆ ಆರಂಭಿಸಲು ಸಿದ್ಧರಿದ್ದೇವೆ. ಹೆಜ್ಬೊಲ್ಲಾ ಉಗ್ರ ಸಂಘಟನೆಯನ್ನು ನಿಷ್ಕ್ರಿಯಗೊಳಿಸುವುದೇ ನಮ್ಮ ಪ್ರಮುಖ ಗುರಿ. ಇಸ್ರೇಲ್ ಮತ್ತು ಲೆಬನಾನ್ ನಡುವೆ ಸಂಬಂಧ ಪುನಃಸ್ಥಾಪನೆಗೆ ಪ್ರಯತ್ನಿಸುತ್ತೇವೆ ಎಂದು ನೆತನ್ಯಾಹು ಹೇಳಿದ್ದಾರೆ.

ಹಾರ್ಮುಜ್ ಜಲಸಂಧಿ: ವಿವಾದಗಳ ಕೇಂದ್ರಬಿಂದು

ಹಾರ್ಮುಜ್ ಜಲಸಂಧಿ ಮೇಲಿನ ಇರಾನ್ ನಿಯಂತ್ರಣವು ಜಾಗತಿಕ ಆರ್ಥಿಕತೆ, ಇಂಧನ ಪೂರೈಕೆ, ವ್ಯಾಪಾರದ ಮೇಲೆ ಪ್ರಭಾವ ಬೀರಿದೆ. ಜಾಗತಿಕ ತೈಲ ಪೂರೈಕೆಯ ಸುಮಾರು ಶೇ.20ರಷ್ಟು ಭಾಗ ಈ ಮಾರ್ಗದಲ್ಲಿ ಸಾಗುತ್ತದೆ. ಜಾಗತಿಕ ಮಟ್ಟದಲ್ಲಿ ತೈಲ ಬೆಲೆ ಶೇ.30ಕ್ಕಿಂತ ಅಧಿಕ (ಬ್ರೆಂಟ್ ಕಚ್ಚಾ ತೈಲ ಬ್ಯಾರೆಲ್‌ಗೆ 97 ಡಾಲರ್) ಏರಿಕೆ ಕಂಡಿದೆ. ಹಾರ್ಮುಜ್ ಮುಚ್ಚಿರುವುದರಿಂದ ಷೇರು ಮಾರುಕಟ್ಟೆ ಕುಸಿತ ಕಂಡಿದೆ.



ಕಿರುಸುದ್ಧಿ

ಮಹಾಭಿಯೋಗ ಭೀತಿ: ನ್ಯಾ.ವರ್ಮಾ ರಾಜೀನಾಮೆ

ಹೊಸದಿಲ್ಲಿ: ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ಯಶವಂತ್ ವರ್ಮಾ ವಿರುದ್ಧ ಲೋಕಸಭಾ ಸ್ಪೀಕರ್ ಆರಂಭಿಸಿದ್ದ ಮಹಾಭಿಯೋಗ ಪ್ರಕ್ರಿಯೆ ಆರಂಭಿಸುವ ಭೀತಿಯಿಂದ ಅವರೇ ರಾಜೀನಾಮೆ ನೀಡಿದ್ದಾರೆ. ಯಶವಂತ ವರ್ಮಾ ರಾಜೀನಾಮೆ ನೀಡಿರುವುದರಿಂದ ಅವರನ್ನು ವಜಾಗೊಳಿಸುವ ಪ್ರಕ್ರಿಯೆ ನಿರರ್ಥಕವೆಂದು ಹಿರಿಯ ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ತಮ್ಮ ರಾಜೀನಾಮೆ ಪತ್ರವನ್ನು ನ್ಯಾಯಮೂರ್ತಿ ವರ್ಮಾ ಸಲ್ಲಿಸಿದ್ದಾರೆ. ದಿಲ್ಲಿ ಹೈಕೋರ್ಟ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದ ಸಮಯದಲ್ಲಿಯೇ ಅವರ ದಿಲ್ಲಿ ನಿವಾಸದಲ್ಲಿ ಸುಟ್ಟ ಕರೆನ್ಸಿ ನೋಟುಗಳು ಪತ್ತೆಯಾಗಿ ವಿವಾದಕ್ಕೆ ಸಿಲುಕಿಕೊಂಡಿದ್ದರು.

ಮಥುರಾ: ನದಿಯಲ್ಲಿ ದೋಣಿ ಮುಳುಗಿ 10 ಭಕ್ತರ ಸಾವು

ಲಖನೌ: ಉತ್ತರ ಪ್ರದೇಶದ ಮಥುರಾದ ಕೇಶಿ ಘಾಟ್ ಬಳಿ ಯಮುನಾ ನದಿಯಲ್ಲಿ ಶುಕ್ರವಾರ ದೋಣಿ ಮುಳುಗಿ ಕನಿಷ್ಠ 10 ಜನರು ಪ್ರಾಣ ಕಳೆದುಕೊಂಡಿದ್ದಾರೆ. ಸ್ಥಳೀಯ ಅಧಿಕಾರಿಗಳು ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆಯನ್ನು ಪ್ರಾರಂಭಿಸಿದ್ದಾರೆ. ಪೊಲೀಸ್ ಅಧಿಕಾರಿಗಳ ಪ್ರಕಾರ, 22 ಮಂದಿಯನ್ನು ನದಿಯಿಂದ ರಕ್ಷಿಸಲಾಗಿದ್ದು, ಚಿಕಿತ್ಸೆಗಾಗಿ ಹತ್ತಿರದ ಆಸ್ಪತ್ರೆಗಳಿಗೆ ಕರೆದೊಯ್ಯಲಾಗಿದೆ. ಮಥುರಾ ಗ್ರಾಮೀಣ ಪೊಲೀಸ್ ವರಿಷ್ಠಾಧಿಕಾರಿ ಸುರೇಶ್ ಚಂದ್ರ ರಾವತ್ ಈ ಘಟನೆಯನ್ನು ದೃಢಪಡಿಸಿದ್ದು, ಕೇಶಿ ಘಾಟ್ ಬಳಿಯ ಯಮುನಾ ನದಿಯಲ್ಲಿ ದೋಣಿ ಮುಳುಗಿದೆ.

ಪ.ಬಂಗಾಳ ಸಿಎಂ ದೀದಿ ಬಳಿ ಸ್ವಂತ ಕಾರು, ಮನೆ ಇಲ್ಲ!

ಕೋಲ್ಕತ್ತಾ: ಈ ಬಾರಿಯ ವಿಧಾನಸಭೆ ಚುನಾವಣೆಗೆ ಭವಾನೀಪುರ ವಿಧಾನಸಭಾ ಕ್ಷೇತ್ರದಿಂದ ಪಶ್ಚಿಮಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ತಮ್ಮ ನಾಮಪತ್ರ ಸಲ್ಲಿಸಿದ್ದಾರೆ. ಮಮತಾ ಬ್ಯಾನರ್ಜಿ ಅವರು ದೀರ್ಘಕಾಲ ರಾಜಕೀಯದಲ್ಲಿದ್ದರೂ ಮನೆ, ಕಾರು ಅಥವಾ ಯಾವುದೇ ಪ್ರಮುಖ ಸ್ಥಿರ ಆಸ್ತಿ ಹೊಂದಿಲ್ಲವೆಂದು ಅವರ ಚುನಾವಣಾ ಅಫಿಡವಿಟ್‌ನಲ್ಲಿ ಉಲ್ಲೇಖವಾಗಿದೆ. ದೇಶದ ಅತ್ಯಂತ ಕಡಿಮೆ ಆಸ್ತಿ ಹೊಂದಿರುವ ಮುಖ್ಯಮಂತ್ರಿಗಳಲ್ಲಿ ಒಬ್ಬರಾಗಿ ಗುರುತಿಸಲ್ಪಟ್ಟಿರುವ ಮಮತಾ ಬ್ಯಾನರ್ಜಿ ಅವರ ಒಟ್ಟು 15.4 ಲಕ್ಷ ರೂ ಮೌಲ್ಯದ ಆಸ್ತಿಯನ್ನು ಘೋಷಿಸಿದ್ದಾರೆ.



ಪಾಕ್ ಬೆಂಬಲಿತ 11 ಶಂಕಿತ ಉಗ್ರರ ಬಂಧನ

ಹೊಸದಿಲ್ಲಿ: ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಹಾಗೂ ಖಾಲಿಸ್ತಾನಿ ಉಗ್ರ ಸಂಘಟನೆ ಬಬ್ಬರ್ ಖಾಲ್ಸಾ ಇಂಟರ್‌ನ್ಯಾಶನಲ್ ಬೆಂಬಲ ಹೊಂದಿದೆ ಎನ್ನಲಾದ ಅಂತಾರಾಜ್ಯ ಗೂಢಚರ ಹಾಗೂ ಭಯೋತ್ಪಾದಕ ಜಾಲವನ್ನು ದೆಹಲಿ ಪೊಲೀಸ್ ವಿಶೇಷ ದಳ ಭೇದಿಸಿದ್ದು, ದಿಲ್ಲಿ, ಪಂಜಾಬ್‌ನಲ್ಲಿ ಒಟ್ಟು 11 ಮಂದಿಯನ್ನು ಬಂಧಿಸಿದೆ.

ಬಂಧಿತರು ದೇಶದ ವಿವಿಧ ಸಂವೇದನಾಶೀಲ ರಕ್ಷಣಾ ಮತ್ತು ಭದ್ರತಾ ಕೇಂದ್ರಗಳ ಸುತ್ತ ನಿಗಾ ಸಾಧನಗಳನ್ನು ಅಳವಡಿಸಿ, ಅದರ ನೇರ ದೃಶ್ಯಗಳನ್ನು ಪಾಕಿಸ್ತಾನದಲ್ಲಿರುವ ಹ್ಯಾಂಡ್ಲರ್‌ಗಳಿಗೆ ರವಾನಿಸುತ್ತಿದ್ದರೆಂಬುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಆರೋಪಿಗಳು ಎನ್‌ಕ್ರಿಪ್ಟ್ ಮಾಡಿದ ಮೆಸೇಜಿಂಗ್ ಆಪ್‌ಗಳ ಮೂಲಕ ಪಾಕ್ ಮೂಲದ ಸಂಚಾಲಕರೊಂದಿಗೆ ಸಂಪರ್ಕದಲ್ಲಿದ್ದು, ರಾಷ್ಟ್ರ ಭದ್ರತೆಗೆ ಧಕ್ಕೆ ಉಂಟುಮಾಡುವ ಚಟುವಟಿಕೆಗಳಿಗೆ ಸೂಚನೆ ಪಡೆಯುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಾಥಮಿಕ ತನಿಖೆಯಲ್ಲಿ ಆರು ಮಂದಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ ನಂತರ ಜಾಲದ ವಿಸ್ತೃತ ಸಂಪರ್ಕಗಳು ಪತ್ತೆಯಾಗಿದ್ದು, ಒಟ್ಟು 11 ಮಂದಿಯನ್ನು ಬಂಧಿಸಲಾಗಿದೆ. ಕಾರ್ಯಾಚರಣೆಯಲ್ಲಿ ಒಂಬತ್ತು ಸೌರಶಕ್ತಿ ಆಧಾರಿತ ಸಿಸಿಟಿವಿ ಘಟಕಗಳನ್ನು ವಶಪಡಿಸಿಕೊಳ್ಳಲಾಗಿದೆ.

ಈ ಸಾಧನಗಳನ್ನು ಸಂವೇದನಾಶೀಲ ಸೈನಿಕ ಹಾಗೂ ಭದ್ರತಾ ಕೇಂದ್ರಗಳ ಬಳಿ ಅಳವಡಿಸಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬಂಧಿತರಲ್ಲಿ ಕೆಲವರು ಪಂಜಾಬ್‌ನಲ್ಲಿ ಸಕ್ರಿಯವಾಗಿದ್ದ ಉಗ್ರ ಹಾಗೂ ಶಸ್ತ್ರಾಸ್ತ್ರ ಕಳ್ಳಸಾಗಣೆ ಘಟಕಗಳೊಂದಿಗೆ ಸಂಪರ್ಕ ಹೊಂದಿದ್ದರೆಂಬ ಶಂಕೆಯೂ ವ್ಯಕ್ತವಾಗಿದೆ.

ಸಿಡಬ್ಲ್ಯುಸಿ ಸಭೆ: ಮಹಿಳಾ ಮೀಸಲು ಕಾಯ್ದೆ ಬಗ್ಗೆ ಚರ್ಚೆ

ಹೊಸದಿಲ್ಲಿ: ಮಹಿಳಾ ಮೀಸಲಾತಿ ಕಾನೂನು, ಕ್ಷೇತ್ರ ಮರುವಿಂಗಡಣೆ ಮತ್ತು ಪಶ್ಚಿಮ ಏಷ್ಯಾ ಸಂಘರ್ಷದ ಬಗ್ಗೆ ಕೇಂದ್ರ ಸರ್ಕಾರದ ಕ್ರಮದ ಬಗ್ಗೆ ಚರ್ಚಿಸಲು ಕಾಂಗ್ರೆಸ್ ಕಾರ್ಯಕಾರಿ ಸಮಿತಿ(ಸಿಡಬ್ಲ್ಯುಸಿ) ಶುಕ್ರವಾರ ಸಭೆ ನಡೆಸಿದೆ.

ಕಾಂಗ್ರೆಸ್‌ನ ಇಂದಿರಾ ಭವನದ ಪ್ರಧಾನ ಕಚೇರಿಯಲ್ಲಿ ನಡೆದ ಈ ಸಭೆಯಲ್ಲಿ, ಮಹಿಳಾ ಮೀಸಲಾತಿ ಕಾಯ್ದೆಯನ್ನು ಶೀಘ್ರವಾಗಿ ಅನುಷ್ಠಾನಗೊಳಿಸಲು ತಿದ್ದುಪಡಿ ಮಾಡುವ ಪ್ರಸ್ತಾಪವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಚುನಾವಣಾ ಕಾರ್ಯತಂತ್ರವಾಗಿ ಬಳಸಿಕೊಂಡಿದ್ದಾರೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಪಶ್ಚಿಮಬಂಗಾಳ ಮತ್ತು ತಮಿಳುನಾಡು ಚುನಾವಣೆಗಳಲ್ಲಿ ರಾಜಕೀಯ ಲಾಭ ಪಡೆಯಲು ಮಹಿಳಾ ಮೀಸಲಾತಿ ಕಾನೂನು ಮತ್ತು ಕ್ಷೇತ್ರ ಮರುವಿಂಗಡಣೆ ಸಂಬಂಧಿಸಿದ ಮಸೂದೆಗಳನ್ನು ಅಂಗೀಕರಿಸಲು ಸರ್ಕಾರವು ಸಂಸತ್ತಿನ ವಿಶೇಷ ಅಧಿವೇಶನವನ್ನು ಕರೆದಿದೆ ಎಂದು ಕಾಂಗ್ರೆಸ್ ಆರೋಪಿಸಿದೆ. ಇದು ಮಾದರಿ ನೀತಿ ಸಂಹಿತೆಯ ಸಂಪೂರ್ಣ ಉಲ್ಲಂಘನೆ ಎಂದು ಆರೋಪಿಸಿದೆ.

ತರಾತುರಿಯಲ್ಲಿ ಕ್ಷೇತ್ರ ಮರುವಿಂಗಡಣೆ ಪ್ರಕ್ರಿಯೆಗೆ ಒತ್ತಾಯಿಸುವುದರಿಂದ ದೇಶದ ಬೆಳವಣಿಗೆಗೆ ಅಪಾಯಕಾರಿ ಪರಿಣಾಮಗಳು ಉಂಟಾಗುತ್ತವೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಎಂದು ಆರೋಪಿಸಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಹಿರಿಯ ನಾಯಕ ರಾಹುಲ್ ಗಾಂಧಿ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ ಪ್ರಿಯಾಂಕಾ ವಾದ್ರಾ, ಕೆ.ಸಿ. ವೇಣುಗೋಪಾಲ, ಜೈರಾಮ್ ರಮೇಶ್, ಸಚಿನ್ ಪೈಲೆಟ್, ಕರ್ನಾಟಕದ ಸಿಎಂ ಸಿದ್ದರಾಮಯ್ಯ, ತೆಲಂಗಾಣ ಸಿಎಂ ಎ. ರೇವಂತ್ ರೆಡ್ಡಿ ಇದ್ದರು.

ಅಂತಿಮ ಪಟ್ಟಿಗೆ 84 ಲಕ್ಷ ಮತದಾರರು ಸೇರ್ಪಡೆ

ಲಖನೌ: ಉತ್ತರ ಪ್ರದೇಶದಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಪೂರ್ಣಗೊಂಡಿದ್ದು, ಚುನಾವಣಾ ಆಯೋಗವು ಅಂತಿಮ ಮತದಾರರ ಪಟ್ಟಿ ಬಿಡುಗಡೆ ಮಾಡಿದೆ.

ಕರಡು ಪಟ್ಟಿಯಲ್ಲಿ ಇದ್ದ ಮತದಾರರ ಸಂಖ್ಯೆಗಿಂತ 84 ಲಕ್ಷ ಮಂದಿ ಹೆಚ್ಚುವರಿ ಮತದಾರರು ಅಂತಿಮ ಮತಪಟ್ಟಿಯಲ್ಲಿ ಸೇರ್ಪಡೆಯಾಗಿದ್ದಾರೆ. ಈ ಮೂಲಕ ಒಟ್ಟು ಮತದಾರರ ಸಂಖ್ಯೆ 13.39 ಕೋಟಿಗೆ ಏರಿಕೆಯಾಗಿದೆ. ಇಲ್ಲಿನ ಲೋಕಭವನ ಮಾಧ್ಯಮ ಕೇಂದ್ರದಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಉತ್ತರ ಪ್ರದೇಶದ ಮುಖ್ಯ ಚುನಾವಣಾ ಅಧಿಕಾರಿ ನವದೀಪ್ ರಿನ್ವಾ, ಎಸ್‌ಐಆರ್ ಪ್ರಕ್ರಿಯೆಯನ್ನು 2025ರ ಅಕ್ಟೋಬರ್ 27ರಿಂದ 2026ರ ಏಪ್ರಿಲ್ 10ರವರೆಗೆ ನಡೆಸಲಾಗಿದೆ. ರಾಜ್ಯದಾದ್ಯಂತ ಎಲ್ಲಾ 75 ಜಿಲ್ಲೆಗಳು, 403 ವಿಧಾನಸಭಾ ಕ್ಷೇತ್ರಗಳು ಮತ್ತು ಮತದಾನ ಕೇಂದ್ರಗಳನ್ನು ಒಳಗೊಂಡಿದೆ.

75 ಜಿಲ್ಲಾ ಚುನಾವಣಾ ಅಧಿಕಾರಿಗಳು (ಡಿಇಒಗಳು), 403 ಚುನಾವಣಾ ನೋಂದಣಿ ಅಧಿಕಾರಿಗಳು (ಇಆರ್‌ಒಗಳು), 12,758 ಸಹಾಯಕ ಇಆರ್‌ಒಗಳು (ಎಇಆರ್‌ಒಗಳು), 18,026 ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಮೇಲ್ವಿಚಾರಕರು ಮತ್ತು 1,77,516 ಬಿಎಲ್‌ಒಗಳ ಕೊಡುಗೆಯೊಂದಿಗೆ 166 ದಿನಗಳ ಈ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿದೆ ಎಂದು ಅವರು ಹೇಳಿದರು. ಜ.6ರಂದು ಪ್ರಕಟವಾದ ಕರಡು ಮತದಾರರ ಪಟ್ಟಿಯಲ್ಲಿ 6.88 ಕೋಟಿ ಪುರುಷ ಮತದಾರರು, 5.67 ಕೋಟಿ ಮಹಿಳಾ ಮತದಾರರು ಮತ್ತು 4,119 ತೃತೀಯ ಲಿಂಗಿ ಮತದಾರರು ಸೇರಿದಂತೆ 12,55,56,025 ಮತದಾರರಿದ್ದಾರೆ ಎಂದು ರಿನ್ವಾ ಹೇಳಿದರು.

ಗಗನಯಾನ ಯೋಜನೆ: ಏರ್ ಡ್ರಾಪ್ ಟೆಸ್ಟ್ ಯಶ

ಹೊಸದಿಲ್ಲಿ: ಭಾರತೀಯ ಬಾಹ್ಯಾಕಾಶ ಇತಿಹಾಸದಲ್ಲೇ ಅತ್ಯಂತ ಮಹತ್ವಾಕಾಂಕ್ಷೆಯ ಮಾನವ ಸಹಿತ ಗಗನಯಾನ್ ಯೋಜನೆ ಅಂಗವಾಗಿ ಎರಡನೇ ಇಂಟಿಗ್ರೇಟೆಡ್ ಏರ್ ಡ್ರಾಪ್ ಪರೀಕ್ಷೆಯನ್ನು (ಐಎಡಿಟಿ-02) ಆಂಧ್ರಪ್ರದೇಶದ ಶ್ರೀಹರಿಕೋಟಾ ಬಾಹ್ಯಾಕಾಶ ಕೇಂದ್ರದಲ್ಲಿ ಶುಕ್ರವಾರ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಯಶಸ್ವಿಯಾಗಿ ಪೂರೈಸಿದೆ. 2027ರ ಮಾನವ ಸಹಿತ ಗಗನಯಾನ ಯೋಜನೆಯ ಕ್ಯಾಪ್ಸೂಲ್ ಅನ್ನು ಗಗನಯಾತ್ರಿಗಳಿಗೆ ಯಾವುದೇ ಅಪಾಯವಾಗದಂತೆ ಸುರಕ್ಷಿತವಾಗಿ ಭೂಮಿಯತ್ತ ಕೆಳಗಿಳಿಸುವ ಪರೀಕ್ಷೆ ಇದಾಗಿದ್ದು, 2ನೇ ಹಂತದ ಪರೀಕ್ಷೆಯನ್ನು ಶುಕ್ರವಾರ ಇಸ್ರೋ ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಗಗನಯಾತ್ರಿಗಳು ಕುಳಿತುಕೊಳ್ಳುವ ಕ್ಯಾಪ್ಸೂಲ್ ಭೂಕಕ್ಷೆಯಿಂದ ಭೂಮಿಯತ್ತ ಮರಳುವ ವೇಳೆ ಭಾರೀ ವೇಗದಿಂದ ಧುಮುಕುವುದು ಸಾಮಾನ್ಯ. ಈ ಸಂದರ್ಭ ಕ್ಯಾಪ್ಸೂಲ್ ಯಾವುದೇ ಸಮಸ್ಯೆಯಿಲ್ಲದೆ, ಗಗನಯಾತ್ರಿಗಳಿಗೆ ಅಪಾಯವಿಲ್ಲದೆ ಭೂಮಿಗೆ ಮರಳುವುದನ್ನು ಖಚಿತಪಡಿಸಲು ಪರೀಕ್ಷೆಗಳನ್ನು ನಡೆಸುತ್ತದೆ.

ಮಹಾವೀರ ಚಕ್ರ ಪುರಸ್ಕೃತ ಯೋಧನಿಗೆ ದೇಶದ ವಂದನೆ

ಕಾರ್ಗಿಲ್ ಯೋಧ ಕರ್ನಲ್ ಸೋನಂ ವಾಂಗ್ಚುಕ್ ನಿಧನ

ಲೇಹ್: ಕಾರ್ಗಿಲ್ ಯುದ್ಧದ ಶೌರ್ಯಗಾಥೆಗೆ ಪ್ರತೀಕವಾಗಿದ್ದ ಮಹಾವೀರ ಚಕ್ರ ಪುರಸ್ಕೃತ ನಿವೃತ್ತ ಕರ್ನಲ್ ಸೋನಂ ವಾಂಗ್ಚುಕ್ ಅವರು ಹೃದಯಾಘಾತದಿಂದ ಶುಕ್ರವಾರ ನಿಧನರಾದರು. ಅವರಿಗೆ 61 ವರ್ಷ ವಯಸ್ಸಾಗಿತ್ತು. ಅವರು ಲಡಾಖ್‌ನಲ್ಲಿ ಕೊನೆಯುಸಿರೆಳೆದಿದ್ದಾರೆ ಎಂದು ಸೇನಾ ಮೂಲಗಳು ತಿಳಿಸಿವೆ.



ಕಾರ್ಗಿಲ್ ಯುದ್ಧದ ಸಮಯದಲ್ಲಿ ಅಸಾಧಾರಣ ಸಾಹಸ ತೋರಿದ ವಾಂಗ್ಚುಕ್ ಅವರನ್ನು ಭಾರತೀಯ ಸೇನೆಯಲ್ಲಿ 'ಲಯನ್ ಆಫ್ ಲಡಾಖ್' ಎಂದೇ ಕರೆಯಲಾಗುತ್ತಿತ್ತು. 1999ರ ಕಾರ್ಗಿಲ್ ಸಮರದ ವೇಳೆ ಬಟಾಲಿಕ್ ವಲಯದ ಚೋರ್ಬಟ್ ಲಾ ಪ್ರದೇಶದಲ್ಲಿ ಪಾಕಿಸ್ತಾನಿ ಅತಿಕ್ರಮಣಕಾರರ ವಿರುದ್ಧ ನಡೆಸಿದ ಧೈರ್ಯಶಾಲಿ ಕಾರ್ಯಾಚರಣೆಗೆ ಅವರಿಗೆ ಮಹಾವೀರ ಚಕ್ರ ಪ್ರದಾನಿಸಲಾಗಿತ್ತು.


ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಸಂತಾಪ ಸೂಚಿಸಿ, 'ಕರ್ನಲ್ ಸೋನಂ ವಾಂಗ್ಚುಕ್ ಭಾರತೀಯ ಸೇನೆಯ ಅತ್ಯಂತ ಶೌರ್ಯಶಾಲಿ ಅಧಿಕಾರಿಗಳಲ್ಲಿ ಒಬ್ಬರು. ಅವರ ಧೈರ್ಯ, ನಾಯಕತ್ವ ಮತ್ತು ಕರ್ತವ್ಯನಿಷ್ಠೆ ಸದಾ ಸ್ಮರಣೀಯ' ಎಂದು ಹೇಳಿದ್ದಾರೆ.

ಭಾರತೀಯ ಸೇನೆಯೂ ಅಧಿಕೃತವಾಗಿ ಸಂತಾಪ ಸೂಚಿಸಿ, 'ರಾಷ್ಟ್ರಕ್ಕಾಗಿ ಅಪಾರ ಸೇವೆ ಸಲ್ಲಿಸಿದ ವೀರ ಯೋಧನನ್ನು ನಾವು ಕಳೆದುಕೊಂಡಿದ್ದೇವೆ. ದುಃಖದ ಈ ಘಳಿಗೆಯಲ್ಲಿ ಅವರ ಕುಟುಂಬದೊಂದಿಗೆ ನಾವಿದ್ದೇವೆ' ಎಂದು ತಿಳಿಸಿದೆ. ಲಡಾಖ್‌ನ ಹೆಮ್ಮೆಯ ಪುತ್ರನಾಗಿದ್ದ ವಾಂಗ್ಚುಕ್ ಅವರ ನಿಧನಕ್ಕೆ ರಾಜಕೀಯ, ಸೇನಾ ಮತ್ತು ಸಾಮಾಜಿಕ ವಲಯಗಳಿಂದ ಶ್ರದ್ಧಾಂಜಲಿಗಳ ಮಹಾಪೂರವೇ ಹರಿದುಬಂದಿದೆ.

ಸೈಬರ್ ಅಪರಾಧ ತಡೆಯಲು ಚಿಂತನೆ | ಆನ್‌ಲೈನ್ ವಹಿವಾಟುಗಳಿಗೆ ಕಿಲ್ ಸ್ವಿಚ್ ವ್ಯವಸ್ಥೆ

ಆನ್‌ಲೈನ್ ಪಾವತಿ 1 ಗಂಟೆ ತಡ?

ಹೊಸದಿಲ್ಲಿ: ದೇಶದಲ್ಲಿ ವೇಗವಾಗಿ ಹೆಚ್ಚುತ್ತಿರುವ ಡಿಜಿಟಲ್ ಪಾವತಿ ಮೋಸ ಗಳನ್ನು ತಡೆಯಲು, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ಮಹತ್ವದ ಕ್ರಮಗಳನ್ನು ಕೈಗೊಳ್ಳಲು ಮುಂದಾಗಿದೆ. ಆನ್‌ಲೈನ್ ವಹಿವಾಟುಗಳಲ್ಲಿ ತಪ್ಪಾಗಿ ಹಣ ವರ್ಗಾವಣೆ ಆಗಿದ್ದರೆ ತಕ್ಷಣ ನಿಲ್ಲಿಸಲು ಕಿಲ್ ಸ್ವಿಚ್ ವ್ಯವಸ್ಥೆ ಪರಿಚಯಿಸುವ ಪ್ರಸ್ತಾವನೆ ಮುಂದಿಟ್ಟಿದೆ.



ಡಿಜಿಟಲ್ ಪಾವತಿಗಳ ಬಳಕೆ ಹೆಚ್ಚಿದಂತೆ, ಮೋಸಪ್ರಕರಣಗಳ ಸಂಖ್ಯೆಯೂ ಗಣನೀಯವಾಗಿ ಏರಿಕೆಯಾಗಿದ್ದು, ಇದನ್ನು ನಿಯಂತ್ರಿಸುವುದು ಆರ್‌ಬಿಐಗೆ ದೊಡ್ಡ ಸವಾಲಾಗಿದೆ. 2021ರಿಂದ 2025ರವರೆಗೆ ಡಿಜಿಟಲ್ ಮೋಸ ಪ್ರಕರಣಗಳು ಲಕ್ಷಾಂತರ ಸಂಖ್ಯೆಯಲ್ಲಿ ಹೆಚ್ಚಾಗಿರುವುದಾಗಿ ವರದಿಗಳು ಸೂಚಿಸುತ್ತವೆ.

ಕಿಲ್ ಸ್ವಿಚ್ ಎಂದರೆ ಏನು? ಆರ್‌ಬಿಐ ಸೂಚಿಸಿರುವ ಕಿಲ್ ಸ್ವಿಚ್ ವ್ಯವಸ್ಥೆ ಮೂಲಕ, ಗ್ರಾಹಕರು ಮೋಸದ ಅನುಮಾನ ಬಂದ ಕೂಡಲೇ ತಮ್ಮ ಖಾತೆಯ ಎಲ್ಲಾ ಡಿಜಿಟಲ್ ಪಾವತಿಗಳನ್ನು ತಕ್ಷಣ ಸ್ಥಗಿತಗೊಳಿಸಬಹುದು. ಇದರಿಂದ ಹಣ ಕಳುವಾಗುವುದನ್ನು ತಡೆಯಲು ಸಾಧ್ಯವಾಗಲಿದೆ.

ಮೋಸಗಳ ವಿರುದ್ಧ ಕಠಿಣ ಕ್ರಮ

ಬ್ಯಾಂಕ್ ಖಾತೆಗಳ ದುರುಪಯೋಗ, ನಕಲಿ ಕಾಲ್ ಸೆಂಟರ್‌ಗಳು, ಡೀಪ್‌ಫೇಕ್ ತಂತ್ರಜ್ಞಾನಗಳ ಮೂಲಕ ನಡೆಯುವ ಮೋಸಗಳನ್ನು ತಡೆಯಲು ಆರ್‌ಬಿಐ ಬಹುಮುಖ ಕ್ರಮಗಳನ್ನು ರೂಪಿಸಿದೆ. ಈ ಕ್ರಮಗಳು ಗ್ರಾಹಕರಿಗೆ ಹೆಚ್ಚಿನ ನಿಯಂತ್ರಣ ಮತ್ತು ಸುರಕ್ಷತೆ ನೀಡುವ ಉದ್ದೇಶ ಹೊಂದಿವೆ.


ಒಂದು ಗಂಟೆ ವಿಳಂಬ ಯೋಜನೆ: ಇದರ ಜೊತೆಗೆ, 10,000 ರೂ.ಗಿಂತ ಹೆಚ್ಚಿನ ಮೊತ್ತದ ವಹಿವಾಟುಗಳಿಗೆ ಒಂದು ಗಂಟೆಯ ವಿಳಂಬ ನೀಡುವ ಯೋಜನೆಯನ್ನೂ ಆರ್‌ಬಿಐ ಪರಿಗಣಿಸಿದೆ. ಈ ಅವಧಿಯಲ್ಲಿ ಗ್ರಾಹಕರು ತಮ್ಮ ವ್ಯವಹಾರವನ್ನು ಮರುಪರಿಶೀಲಿಸಿ ರದ್ದುಪಡಿಸುವ ಅವಕಾಶ ಸಿಗುತ್ತದೆ.

ಹಿರಿಯ ನಾಗರಿಕರಿಗೆ ಹೆಚ್ಚುವರಿ ಭದ್ರತೆ: ಹಿರಿಯ ನಾಗರಿಕರು ಮತ್ತು ದಿವ್ಯಾಂಗರಿಗೆ ಹೆಚ್ಚುವರಿ ರಕ್ಷಣೆ ನೀಡಲು, 50,000 ರೂ. ಗಿಂತ ಹೆಚ್ಚಿನ ವಹಿವಾಟುಗಳಿಗೆ 'ನಂಬಿಕಸ್ತ ವ್ಯಕ್ತಿ ' ಅನುಮತಿ ಪಡೆಯುವ ವ್ಯವಸ್ಥೆಯನ್ನೂ ಆರ್‌ಬಿಐ ಯೋಚಿಸಿದೆ.

ಸಾರ್ವಜನಿಕರಿಂದ ಅಭಿಪ್ರಾಯ ಆಹ್ವಾನ: ಈ ಎಲ್ಲಾ ಕ್ರಮಗಳ ಬಗ್ಗೆ ಆರ್‌ಬಿಐ ಸಾರ್ವಜನಿಕರಿಂದ ಅಭಿಪ್ರಾಯಗಳನ್ನು ಆಹ್ವಾನಿಸಿದ್ದು, ನಂತರ ಅಂತಿಮ ಮಾರ್ಗಸೂಚಿಗಳನ್ನು ಪ್ರಕಟಿಸುವ ನಿರೀಕ್ಷೆಯಿದೆ.

೦೮
ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಶನಿವಾರ, 11 ಏಪ್ರಿಲ್ 2026
ಹುಬ್ಬಳ್ಳಿ

ಕಿರುಸುದ್ದಿ



ಜೂ. ಹಾಕಿ ತಂಡಕ್ಕೆ ವೈಟ್ ಕೋಚ್

ಹೊಸದಿಲ್ಲಿ: ಭಾರತೀಯ ಮಹಿಳೆಯರ ಜೂನಿಯರ್ ಹಾಕಿ ತಂಡಕ್ಕೆ ಟೀಮ್ ವೈಟ್ ಅವರನ್ನು ಮುಖ್ಯ ತರಬೇತುದಾರರನ್ನಾಗಿ ಮಾಡಲಾಗಿದೆ. ಶುಕ್ರವಾರದಂದು ಈ ಬಗ್ಗೆ ಭಾರತೀಯ ಹಾಕಿ ಸಂಸ್ಥೆ ಅಧಿಕೃತವಾಗಿ ತಿಳಿಸಿದ್ದು, ಆಸ್ಟ್ರೇಲಿಯಾದ ಹೈಪರ್ಫಾರ್ಮನ್ಸ್ ತರಬೇತುದಾರರಾದ ವೈಟ್ ಅವರ ನೇತೃತ್ವದಲ್ಲಿ ನಮ್ಮ ತಂಡ ಇನ್ನಷ್ಟು ಸದೃಢಗೊಳ್ಳಲಿದೆ ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ಕಳೆದ ಹಾಕಿ ಇಂಡಿಯನ್ ಲೀಗ್ ಪಂದ್ಯಾವಳಿಯಲ್ಲಿ ತಮಿಳು ನಾಡು ತಂಡದ ತರಬೇತುದಾರರಾಗಿದ್ದ ಅವರು, ಬೆಲ್ಜಿಯಂ ತಂಡಕ್ಕೆ ತರಬೇತಿ ನೀಡಿದ್ದರು. ಅವರದ್ದೇ ನೇತೃತ್ವದಲ್ಲಿ ಅಲ್ಲಿನ ಅಂಡರ್-21 ತಂಡವು 2025ರ ವಿಶ್ವಕಪ್ ಪಂದ್ಯಾವಳಿಯಲ್ಲಿ ಕಂಚಿನ ಪದಕ ಗೆದ್ದುಕೊಂಡಿತು. 2001ರಿಂದ 2004ರವರೆಗೂ ಅವರು ಬೆಲ್ಜಿಯಂ ಮಹಿಳಾ ಹಾಕಿ ತಂಡದ ತರಬೇತುದಾರರ ತಂಡದಲ್ಲಿದ್ದರು. ಅಲ್ಲದೆ, ಆಸ್ಟ್ರೇಲಿಯಾ ಜೂನಿಯರ್ ತಂಡದ ಮುಖ್ಯ ಕೋಚ್ ಕೂಡ ಅವರು ಆಗಿದ್ದರು. ಕೋಚ್ ಆದ ಬಗ್ಗೆ ಮಾತನಾಡಿರುವ ಅವರು, ಇತ್ತೀಚಿಗೆ ನಾನು ಹಾಕಿ ಇಂಡಿಯಾ ಲೀಗ್ ಪಂದ್ಯಾವಳಿಯಲ್ಲಿ ತಮಿಳುನಾಡು ತಂಡದ ಭಾಗವಾಗಿದ್ದೆ, ನಾನು ಭಾರತದಲ್ಲಿ ಕಾಲ ಕಳೆದಿದ್ದೇನೆ. ಅಲ್ಲಿನ ಹಾಕಿ ಉತ್ಸಾಹ ಮೆಚ್ಚುವಂಥದ್ದು, ಭಾರತದಲ್ಲಿ ಜನರು ಕೌಶಲ ಹೊಂದಿದ್ದಾರೆ. ತಂಡವನ್ನು ಸದೃಢಗೊಳಿಸಿ ಚಾಂಪಿಯನ್ ಆಗಿಸುವುದೇ ನನ್ನ ಉದ್ದೇಶ ಎಂದು ಹೇಳಿದ್ದಾರೆ.

ಹೈರಾಕ್ಸ್ ಸ್ಪರ್ಧೆಗೆ ಕೌರ್, ಸಿಂಧು



ಬೆಂಗಳೂರು: ಭಾರತದ ಅತಿ ದೊಡ್ಡ ಫಿಟ್ನೆಸ್ ರೇಸ್ ಆಗಿ ಹೊರಹೊಮ್ಮುತ್ತಿರುವ ಆಲ್ಫಾಹ್ಯೂಮನ್ ಹೈರಾಕ್ಸ್ ಬೆಂಗಳೂರು ಸ್ಪರ್ಧೆಗೆ ಈ ಬಾರಿ ತಾರೆಯರ ಕಳೆ ಸೇರ್ಪಡೆಯಾಗಿದೆ. ಎರಡು ಬಾರಿ ಒಲಿಂಪಿಕ್ ಪದಕ ವಿಜೇತೆ ಪಿ. ವಿ. ಸಿಂಧು ಹಾಗೂ ಭಾರತೀಯ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಈ ಸ್ಪರ್ಧೆಯಲ್ಲಿ ಭಾಗವಹಿಸಲು ಸಿದ್ಧರಾಗಿದ್ದಾರೆ. ಶನಿವಾರ ಮತ್ತು ಭಾನುವಾರದಂದು ಬೆಂಗಳೂರು ಅಂತಾರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ನಡೆಯಲಿರುವ ಈ ಸ್ಪರ್ಧೆಯಲ್ಲಿ 8,200ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸಲಿದ್ದಾರೆ. ಇದು ಭಾರತದಲ್ಲಿ ಮೊದಲ ಎರಡು ದಿನಗಳ ಹೈರಾಕ್ಸ್ ಸ್ಪರ್ಧೆಯಾಗಿದ್ದು, ಮುಂಬೈ ಮತ್ತು ದೆಹಲಿಯ ಬಳಿಕ ಬೆಂಗಳೂರು ಮೂರನೇ ನಗರವಾಗಿ ಆತಿಥ್ಯ ವಹಿಸುತ್ತಿದೆ. ಹೈರಾಕ್ಸ್ ಸ್ಪರ್ಧೆಯ ವಿನ್ಯಾಸ ಜಾಗತಿಕ ಮಟ್ಟದಲ್ಲಿ ಒಂದೇ ರೀತಿಯಾಗಿದೆ. 8 ಬಾರಿ 1 ಕಿಮೀ ಓಟದ ಜೊತೆಗೆ 8 ವಿಧದ ಶಾರೀರಿಕ ವ್ಯಾಯಾಮಗಳನ್ನು ಒಳಗೊಂಡಿದೆ. ಸ್ಕೀ ಎರ್ಗ್, ಸ್ಲೆಡ್ ಪುಶ್, ಸ್ಲೆಡ್ ಪುಲ್, ಬರ್ಪಿ ಬ್ರಾಡ್ ಜಂಪ್ಸ್, ರೋಯಿಂಗ್, ಫಾರ್ಮರ್ಸ್ ಕ್ಯಾರಿ, ಸ್ಯಾಂಡ್‌ಬ್ಯಾಗ್ ಲಂಜಸ್ ಮತ್ತು ವಾಲ್ ಬಾಲ್ಸ್ ಮೊದಲಾದ ವ್ಯಾಯಾಮಗಳು ಸ್ಪರ್ಧಿಗಳ ಸಾಮರ್ಥ್ಯವನ್ನು ಪರೀಕ್ಷಿಸುತ್ತವೆ. ಆಲ್ಫಾಹ್ಯೂಮನ್ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋಹಿತ್ ಕುಮಾರ್ ಮಾತನಾಡಿ, ದೇಹದ ಕಾರ್ಯವೈಖರಿಯನ್ನು ಅರ್ಥಮಾಡಿಕೊಳ್ಳುವುದು ಉತ್ತಮ ಪ್ರದರ್ಶನದ ಮೂಲ. ನಿದ್ರೆ ಮತ್ತು ಪುನಶ್ಚೇತನದ ಮಾಹಿತಿಯನ್ನು ಉಪಯೋಗಿಸಿ ಜನರು ಆರೋಗ್ಯ ಸುಧಾರಿಸಬಹುದು ಎಂದು ಹೇಳಿದರು.

ಬಿಲ್ಲಿ ಜೀನ್ ಕಪ್: ಭಾರತಕ್ಕೆ ಸೋಲು

ಹೊಸದಿಲ್ಲಿ: ಇಂಡೋನೇಷ್ಯಾ ವಿರುದ್ಧದ ಪಂದ್ಯದಲ್ಲಿ ಸೋತ ನಂತರ ಭಾರತ ಮಹಿಳೆಯರ ತಂಡವು ಬಿಲ್ಲಿ ಜೀನ್ ಕಿಂಗ್ ಕಪ್ ಪಂದ್ಯಾವಳಿ ಪ್ಲೇಆಫ್‌ಗೇರುವ ಅವಕಾಶ ಕಳೆದುಕೊಂಡಿದೆ. ದಿಲ್ಲಿಯಲ್ಲಿ ಶುಕ್ರವಾರದಂದು ನಡೆದ ಪಂದ್ಯದಲ್ಲಿ ಭಾರತ ಎದುರಾಳಿ ಇಂಡೋನೇಷ್ಯಾದೊಂದಿಗೆ ಸೋತಿತು. ಬುಧವಾರ ನಡೆದಿದ್ದ ನ್ಯೂಜಿಲೆಂಡ್ ವಿರುದ್ಧದ ಪಂದ್ಯದಲ್ಲಿ ಗೆದ್ದಿದ್ದ ಭಾರತ ಪ್ಲೇಆಫ್‌ಗೇರುವ ಅವಕಾಶ ಉಳಿಸಿಕೊಂಡಿತು. ಆದರೆ ಶುಕ್ರವಾರ 3-0ರಿಂದ ಸೋತು ಹೊರನಡೆಯಿತು. ಆರಂಭಿಕ ಪಂದ್ಯದಲ್ಲಿ ಸಹಜಾ, ಜಾನಿಸ್ ವಿರುದ್ಧ 6-2, 6-1ರಿಂದ ಗೆದ್ದರು. ನಂತರ ವೈಷ್ಣವಿ, ಪ್ರೀಕ್ಸಾ ಅವರೊಂದಿಗೆ ಸೋತರು. ಮೂರನೇ ಪಂದ್ಯದಲ್ಲಿ ಜುನಿಲ್ ಮತ್ತು ಅಲ್ದಿಲ್ಲಾ ಅಂಕಿತಾ ಹಾಗೂ ರುತುಜಾ ಅವರನ್ನು ಸೋಲಿಸಿದೆ.

ಕುಸಿದ ಆರ್‌ಸಿಬಿಗೆ ನಾಯಕ ಆಸರೆ | ರಾಜಸ್ಥಾನಕ್ಕೆ ಸ್ಪರ್ಧಾತ್ಮಕ ಗುರಿ

ರಜತ್ ಪಾಟಿದಾರ್ ಆರ್ಭಟ

ಗುವಾಹಟಿ: ಒಂದುಬದಿಯಲ್ಲಿ ವಿಕೆಟ್ ಬಿದ್ದರೂ ಮತ್ತೊಂದು ಬದಿಯಲ್ಲಿ ಗಟ್ಟಿಯಾಗಿ ನಿಂತುಕೊಂಡ ಆರ್‌ಸಿಬಿ ತಂಡದ ನಾಯಕ ರಜತ್ ಪಾಟಿದಾರ್(63) ಆರ್‌ಸಿಬಿ ತಂಡವನ್ನು ಕುಸಿಯಲು ಬಿಡಲಿಲ್ಲ, ಅತ್ಯಂತ ಅವಶ್ಯ ಸಮಯದಲ್ಲಿ ತಮ್ಮ ಅರ್ಧ ಶತಕದೊಂದಿಗೆ ರಾಜಸ್ಥಾನಕ್ಕೆ ಸ್ಪರ್ಧಾತ್ಮಕ ಗುರಿ ಕೊಟ್ಟರು.

ರನ್ ಗಳಿಸಿದ್ದರೂ ವಿಕೆಟ್‌ಗಳನ್ನು ಬೇಗನೆ ಕಳೆದುಕೊಂಡ ಆರ್‌ಸಿಬಿ ತಂಡವನ್ನು ರಾಜಸ್ಥಾನ ಅಂದುಕೊಂಡ ಮೊತ್ತದಲ್ಲಿ ಕಟ್ಟಿಹಾಕಲಿಲ್ಲ, ಏಳು ಬೀಳುಗಳ ಮಧ್ಯೆ ಮತ್ತೊಮ್ಮೆ ಮಿಂಚಿದ ಆರ್‌ಸಿಬಿ ಕಟ್ಟಿಹಾಕಬಹುದಾದ ಗುರಿ ನಿರ್ಮಿಸಿದ ನಂತರ ಶುಕ್ರವಾರದ ಗೆದ್ದವರ ನಡುವಿನ ಪಂದ್ಯ ಮೊದಲ ಇನ್ನಿಂಗ್ಸ್ ಭಾರೀ ಪೈಪೋಟಿಗೆ ಸಾಕ್ಷಿಯಾಯಿತು. ಪಾಟಿದಾರ್ ಅವರ ನಾಯಕನಾಟದ ಬಲದೊಂದಿಗೆ 20 ಓವರ್‌ವರೆಗೂ ಬ್ಯಾಟಿಂಗ್ ಮಾಡಿದ ರಾಯಲ್ ಬೆಂಗಳೂರು 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 201 ರನ್ ಗಳಿಸಿದೆ.

ಕೊಹ್ಲಿ ಕಿಕ್-ಸ್ಟಾರ್ಟ್: ಮೊದಲು ಬ್ಯಾಟಿಂಗ್‌ಗಿಳಿದ ಬೆಂಗಳೂರು ಮೊದಲನೇ ಎಸೆತದಲ್ಲೇ ಫಿಲಿಪ್ ಸಾಲ್ಟ್ ಅವರ ವಿಕೆಟ್ ಕಳೆದುಕೊಂಡಿತು. ಮೂರನೇ ಕ್ರಮಾಂಕದಲ್ಲಿ ಬಂದ ದೇವದತ್ತ ಪಡಿಕ್ಕಲ್ ಎಂದಿನಂತೆ ಸ್ಫೋಟಕ ಬ್ಯಾಟಿಂಗ್‌ಗೆ ಮುಂದಾದರು. ಇತ್ತ ಕೊಹ್ಲಿ ಮೊದಲಿಗೆ ಎರಡು ಬಾರಿ ಜೀವದಾನ ಪಡೆದರು. ಮುಂದಿನ 10 ಬಾಲ್‌ಗಳಲ್ಲಿ 7 ಬೌಂಡರಿ ಬಾರಿಸಿದ ಅವರು, 32 ರನ್ ಗಳಿಸಿದರು. ಕ್ರಮೇಣ ಆರ್‌ಸಿಬಿ ದಂಡಿಸಲಾರಂಭಿಸಿತು. ತೀರಾ ಅಬ್ಬರಿಸುವ ಹೊತ್ತಲ್ಲಿ ಅನಿರೀಕ್ಷಿತವಾಗಿ ಬಂದ ರವಿ ಬಿಷ್ಣೋಯ್ ತಮ್ಮ ಕರಾರುವಾಕ್ ಗೂಗ್ಲಿಯೊಂದಿಗೆ ಕೊಹ್ಲಿ ವಿಕೆಟ್ ಪಡೆದರು. ಇದಕ್ಕೂ ಮುನ್ನವೇ ಪಡಿಕ್ಕಲ್ 14 ರನ್‌ಗೆ ವಿಕೆಟ್ ಒಪ್ಪಿಸಿದ್ದರು.

ನಾಲ್ಕನೇ ಕ್ರಮಾಂಕಕ್ಕೆ ಬಡ್ತಿ ಪಡೆದ ಕೃಣಾಲ್ ಪಾಂಡ್ಯ ಸೆಟ್ ಆಗುವ ಔಪಚಾರಿಕತೆ ಮುಗಿಸಿಕೊಳ್ಳುವಷ್ಟರಲ್ಲಿ 1 ರನ್ ಮಾತ್ರ ಗಳಿಸಿ ವಿಕೆಟ್ ಒಪ್ಪಿಸಿದರು. ಆರ್‌ಆರ್ 62 ರನ್‌ಗಳಿಗೆ 4 ವಿಕೆಟ್ ಕಬಳಿಸಿತು. ಮಧ್ಯಮ ಕ್ರಮಾಂಕದಲ್ಲಿ ಬಂದ ಜಿತೇಶ್ ಶರ್ಮಾ, 5 ರನ್‌ಗೆ ವಿಕೆಟ್ ಒಪ್ಪಿಸಿದರು. ಆರ್‌ಸಿಬಿ 80 ರನ್ ದಾಟುವ ಮೊದಲೇ 5 ವಿಕೆಟ್ ಕಳೆದುಕೊಂಡಿತು. ಕಳೆದ ಪಂದ್ಯದಲ್ಲಿ ವಿಸ್ಫೋಟಕ ಬ್ಯಾಟಿಂಗ್ ಮಾಡಿದ್ದ ಟೀಮ್ ಡೆವಿಡ್ 13 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಪಾಟಿದಾರ್ ನಾನ್‌ಸ್ಟ್ರೈಕ್‌ನಲ್ಲಿ ನಿಂತವರೆ ನಿಂತರು ಇನ್ನುಳಿದ ಬ್ಯಾಟಿಗರು ವಿಕೆಟ್ ಒಪ್ಪಿಸುತ್ತಾ ಬಂದರು.



ಆರ್‌ಸಿಬಿ ಪಡೆಗೆ ಜೋಶ್

GST shall be paid separately as per prevailing Government Order. The increase in GST shall not be paid in the extended period of contract for which the contractor alone is responsible for delay as determined by the authority while granting the extension of time.

ಸಹಿ/-
ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ, ಗದಗ ವಿಭಾಗ ಗದಗ

ವಾ.ಸಾ.ಇ./ಗದಗ/16/2026-27/ದೇಶಪಾಂಡೆಪಬ್ಲಿಸಿಟಿ

ಮೈಸೂರು ವಿಶ್ವವಿದ್ಯಾನಿಲಯ

(ನ್ಯಾಕ್ ಸಂಸ್ಥೆಯ ಮರು ಮಾನ್ಯತೆಯಲ್ಲಿ 'ಎ' ಗ್ರೇಡ್ ಪಡೆದಿದೆ) (ಎನ್.ಐ.ಆರ್.ಎಫ್.-2024: ರಾಜ್ಯ ಸಾರ್ವಜನಿಕ ವಿಶ್ವವಿದ್ಯಾನಿಲಯ ವರ್ಗದಲ್ಲಿ 19ನೇ ಸ್ಥಾನ, ವಿಶ್ವವಿದ್ಯಾನಿಲಯ ವರ್ಗದಲ್ಲಿ 54ನೇ ಸ್ಥಾನ ಮತ್ತು ಒಟ್ಟಾರೆ ವರ್ಗದಲ್ಲಿ 86ನೇ ಸ್ಥಾನ) ಕುಲಸಚಿವ (ಪರೀಕ್ಷಾಂಗ)ರವರ ಕಛೇರಿ, ವಿಶ್ವವಿದ್ಯಾನಿಲಯ ಕಾರ್ಯಸೌಧ ಕ್ರಾಫರ್ಡ್ ಭವನ, ಮೈಸೂರು-570005

ಸಂಖ್ಯೆ: GL6/190/2023-24 ದಿನಾಂಕ: 09.04.2026

ಮರು ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ವಿಶ್ವವಿದ್ಯಾನಿಲಯದ ಆರೋಗ್ಯ ಕೇಂದ್ರಗಳಿಗೆ ಔಷಧಿಗಳನ್ನು ಖರೀದಿಸಲು ವಾರ್ಷಿಕ ದರ ಒಪ್ಪಂದದ ಪ್ರಕಾರ ಒಂದು ವರ್ಷದ ಅವಧಿಗೆ ಕರ್ನಾಟಕ ಪಾರದರ್ಶಕ ಅಧಿನಿಯಮ 2000ರ ಪ್ರಕಾರ ಕರ್ನಾಟಕ ಸರ್ಕಾರದ **e-procurement portal** ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಇಂಡೆಂಟ್ ಸಂಖ್ಯೆ **:UOM/2025-26/IND0063/Call-2** ಹಾಗೂ ಮರು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:15.04.2026 ಸಂಜೆ 5:30.ರವರೆಗೆ.

ಸೂಚನೆ: ಹೆಚ್ಚಿನ ವಿವರಗಳನ್ನು ದೂರವಾಣಿ ಸಂಖ್ಯೆ: 0821-2419361/222ರಲ್ಲಿ ಅಥವಾ ವೆಬ್ ಸೈಟ್ **(http://kppp.karnataka.gov.in)**ರಲ್ಲಿ ಪಡೆಯಬಹುದಾಗಿದೆ.

ವಾಸಾಸಂಇ/ಮೈಸೂರು/ಶಿರಡಿಸಾಯಿ/44/2026-27

ಸಹಿ/- ಕುಲಸಚಿವರು

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ (ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ವಿಜನಿನಿ, ಭದ್ರಾ ಮೇಲ್ದಂಡೆ ಯೋಜನೆ ವಿಭಾಗ, ನಂ.7, ಹಿರಿಯೂರು ಕ್ಯಾಂಪ್, ಚಿತ್ರದುರ್ಗ. ದೂರವಾಣಿ ಸಂ:08194-200187 Email ID:ubpeediv07@gmail.com

ಸಂ:ಕಾ.ಇಂ/ವಿ.ಜ.ನಿ.ನಿ/ಭಮೇಯೋ/ವಿ.ಸಂ.07/ಹಿ/ಕ್ಯಾಂ.ಚಿ/2026-27/ 2 & 3 ದಿನಾಂಕ:08.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ನಂ.148 ಎಂಬೇಸಿ ಸ್ಕ್ವೇರ್, ಇನ್‌ಫ್ಯಾಂಟ್ರಿ ರಸ್ತೆ ಬೆಂಗಳೂರು 560001 ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ಕಾರ್ಯಪಾಲಕ ಇಂಜಿನಿಯರ್, ವಿಜನಿನಿ ಭದ್ರಾ ಮೇಲ್ದಂಡೆ ಯೋಜನಾ, ವಿಭಾಗ ನಂ.07, ಹಿರಿಯೂರು ಕ್ಯಾಂಪ್:ಚಿತ್ರದುರ್ಗ ಕಛೇರಿ ವ್ಯಾಪ್ತಿಯ ಈ ಕೆಳಕಂಡ ಕಾಮಗಾರಿಗಳ ದ್ವಿ-ಲಕೋಟೆ ಪದ್ಧತಿಯಲ್ಲಿ Karnataka Public Procurement Portalನ https://kppp.karnataka.gov.in ಪೋರ್ಟಲ್‌ನಲ್ಲಿ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ. ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ/ಇ.ಎಂ.ಡಿ ಮೊತ್ತ/ಗುತ್ತಿಗೆದಾರರ ಅರ್ಹತೆ/ಟೆಂಡರ್ ನಿಯಮ/ಟೆಂಡರ್ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ https://kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕದವರೆಗೆ ಸಂಪರ್ಕಿಸಬಹುದು. ಹೆಚ್ಚಿನ ವಿವರಗಳಿಗಾಗಿ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ಸಮಯದಲ್ಲಿ ಖುದ್ದಾಗಿ ಅಥವಾ ದೂರವಾಣಿ ಸಂ:08194-200187 ರಲ್ಲಿ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಟೆಂಡರ್‌ನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಕಾಮಗಾರಿಗಳ ವಿವರ ಈ ಕೆಳಕಂಡಂತಿದೆ.

ಕ್ರ. ಸಂ.	ಇಂಡೆಂಟ್ ಸಂಖ್ಯೆ	ಲೆಕ್ಕಶೀರ್ಷಿಕೆ	ಟೆಂಡರ್ ಗಿಟ್ಟ ಮೊತ್ತ ರೂ.ಲಕ್ಷಗಳಲ್ಲಿ	ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ	ಬಿಡ್ಡನ್ನು ತೆರೆಯುವ ದಿನಾಂಕ
1	VJNL/2025-26/BD/ WORK_INDENT 497	4701 V.V.Sagara	41,69,280.73	17.04.2026 @ 5.00 PM	18.04.2026 @ 5.30 PM
2	VJNL/2025-26/BD/ WORK_INDENT 496	4701 V.V.Sagara	41,44,032.78	17.04.2026 @ 5.00 PM	18.04.2026 @ 5.30 PM

DIPR/CHITRADURGA/KSMCA/17/2026-27

ಸಹಿ/- ಕಾರ್ಯಪಾಲಕ ಇಂಜಿನಿಯರ್ ವಿ.ಜ.ನಿ.ನಿ,
ಭ.ಮೇ.ಯೋ, ವಿಭಾಗ ನಂ.07, ಹಿರಿಯೂರು.

ಇಂದಿನ ಉತ್ಪನ್ನವಾರು ದರ — ಹುಬ್ಬಳ್ಳಿ

ಉತ್ಪನ್ನಗಳು	₹ಕನಿಷ್ಠ(ಕ್ವಿಂ)	₹ಗರಿಷ್ಠ(ಕ್ವಿಂ)
ಅಲಸಂದೆ ಕಾಳು	1956	5521
ಕಡಲೆಕಾಳು	2050	5665
ಉದ್ದಿನಬೇಳೆ	14600	14600
ಉದ್ದಿನಕಾಳು	1001	7310
ಚಪ್ಪರದವರೆ	3971	3971
ತೆಂಗಿನಕಾಯಿ	24000	28000
ಹೆಸರುಕಾಳು	509	7468
ಹುರುಳಿ ಕಾಳು	2356	4201
ಜೋಳ	1516	4239
ಮೆಕ್ಕೆಜೋಳ	1516	1825
ಮಡಿಕೆ (ಮಟಕಿ)	5526	13139
ಮೆಂತ್ಯ	7059	7059
ಸಾಸುವೆ	3659	8650
ಈರುಳ್ಳಿ	500	2100
ಆಲೂಗಡ್ಡೆ	1400	1900
ಅಕ್ಕಿ	2100	5323
ಕುಸುಬೆ	5511	5511
ಸಾಮೆ/ಸಾವಿ	4236	4236
ಸೋಯಾಬಿನ್	3010	5546
ತೊಗರಿ	4120	5729
ಗೋಧಿ	2176	2529

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ

#1, ಸಿದ್ದಯ್ಯ ಪುರಾಣಿಕ್ ರಸ್ತೆ, ಕೆ.ಹೆಚ್.ಬಿ ಕಾಲೋನಿ, ಮಾಗಡಿ ರಸ್ತೆ, ಬೆಂಗಳೂರು 560079, ದೂರವಾಣಿ : +91-80-29619801 ಮಿಂಚ್ ಅಂಚೆ : md.ksmscl@gmail.com

No: KSMSCL/EQPT/HFW/CH/TND/47/2025-26 Date: 10.04.2026

ಟೆಂಡರ್ ಪ್ರಕಟಣೆ

ಉಲ್ಲೇಖ : ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ:
1. KSMSCL/EQPT/HFW/CH/TND/47/2025-26 (IND 0374) Date: 18.03.2026.
2. KSMSCL/EQPT/HFW/NCD/PD/TND/48/2025-26 (IND 0375) Date: 18.03.2026.
3. KSMSCL/EQPT/HFW/PMABHIM/IPHL/TND/49/2025-26 (IND 0376) Date: 18.03.2026.
4. KSMSCL/EQPT/HFW/MH/15TH FC /TND/50/2025-26 (IND 0377) Date: 18.03.2026.

e-ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ಈ ಕೆಳಕಂಡ ರಾಷ್ಟ್ರ ವ್ಯಾಪ್ತಿ ಇ-ಟೆಂಡರ್ ಕರೆಯಲಾಗಿದೆ.

1. ಮಕ್ಕಳ ಆರೋಗ್ಯ ಕಾರ್ಯಕ್ರಮದ ಅಡಿಯಲ್ಲಿ ಉಪಕರಣಗಳ ಪೂರೈಕೆಗೆ ಸಂಬಂಧಿಸಿದ ಟೆಂಡರ್ - IND 0374
2. NCD ಕಾರ್ಯಕ್ರಮದ ಅಡಿಯಲ್ಲಿ ಉಪಕರಣಗಳ ಪೂರೈಕೆಗೆ ಸಂಬಂಧಿಸಿದ ಟೆಂಡರ್ - IND 0375
3. PMABHIM ಕಾರ್ಯಕ್ರಮದ ಅಡಿಯಲ್ಲಿ ಉಪಕರಣಗಳ ಪೂರೈಕೆಗೆ ಸಂಬಂಧಿಸಿದ ಟೆಂಡರ್ - IND 0376
4. ತಾಯಿ ಆರೋಗ್ಯ ಕಾರ್ಯಕ್ರಮದ ಅಡಿಯಲ್ಲಿ ಉಪಕರಣಗಳ ಪೂರೈಕೆಗೆ ಸಂಬಂಧಿಸಿದ ಟೆಂಡರ್ - IND 0377

ತಾಂತ್ರಿಕ ವಿವರಣೆ, ಇ.ಎಮ್.ಡಿ, ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಈ-ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ: **https://kppp.karnataka.gov.in** ನಲ್ಲಿ ದಿನಾಂಕ: **04.02.2026** ರಿಂದ ಟೆಂಡಗಳನ್ನು ದಾಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.

ಸಹಿ/- ಪ್ರಧಾನ ವ್ಯವಸ್ಥಾಪಕರು (ಆ&ಸ)
ಕೆ.ಎಸ್.ಎಂ.ಎಸ್.ಸಿ.ಎಲ್, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/144/ಆಕಾರ್/2026-27

ಕ್ರಿಮಿ.ನಂ. 171/2026
ಮಾನ್ಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ.ನ್ಯಾಯಾಲಯ, ಹಾವೇರಿ ಇವರ ನ್ಯಾಯಾಲಯಕ್ಕೆ

ಅರ್ಜಿದಾರ : ಮಲ್ಲಿಕಸಾಬ ತಂದೆ ಹಜರತಸಾಬ ಕಳ್ಳಿಮನಿ, ವಯಾ : 47 ವರ್ಷ, ಉದ್ಯೋಗ: ವ್ಯಾಪಾರ ಸಾ॥ ಲಕ್ಷರಮುಲ್ಲಾ, ಸವಣೂರ ತಾ॥ ಸವಣೂರ ಜಿ॥ಹಾವೇರಿ.
ವಿರುದ್ಧ
ಎದುರುಗಾರರು : ಮೆ॥ ಕಮೀಷನರ ವ ಜನನ ಮತ್ತು ಮರಣ ನೊಂದಣಾಧಿಕಾರಿಗಳು, ನಗರಸಭೆ, ಹಾವೇರಿ ತಾ॥ ಜಿ॥ ಹಾವೇರಿ

ಇಸ್ತಿಯಾರ ಪ್ರಕಟಣೆ

ಅರ್ಜಿದಾರರ ತಂದೆಯಾದ ಹಜರತಸಾಬ ತಂದೆ ಅಲ್ಲಾವುದ್ದೀನಸಾಬ ಕಳ್ಳಿಮನಿ ಇವರು **ದಿನಾಂಕ: 20-08-1982** ರಂದು ಸೂಲಮಟ್ಟಿ ಓಣಿ ಹಾವೇರಿಯ ಮನೆಯಲ್ಲಿ ಮರಣ ಹೊಂದಿರುತ್ತಾರೆ. ಮರಣ ನೋಂದಣಿ ಪುಸ್ತಕದಲ್ಲಿ ಇವರ ಮರಣ ದಿನಾಂಕವನ್ನು ನೋಂದಾಯಿಸಿಕೊಂಡು ಉತಾರ ಪೂರೈಸುವ ಕುರಿತು. ಎದುರುಗಾರರ ವಿರುದ್ಧ ಆದೇಶ ಪಡೆಯುವ ಕುರಿತು ಮಾನ್ಯ ನ್ಯಾಯಾಯಲದಲ್ಲಿ ಅರ್ಜಿ ದಾಖಲಿಸಿದ್ದು ಇರುತ್ತದೆ. ಸದರಿ ಅರ್ಜಿಗೆ ಯಾರಾದರೂ ತಕರಾರು ಮಾಡುವವರು ಇದ್ದರೆ ಅಂತವರು **ದಿನಾಂಕ: 16/04/2026** ಮುಂಜಾನೆ 10-30 ಕ್ಕೆ ಮಾನ್ಯ ನ್ಯಾಯಾಲಯಕ್ಕೆ ತಾವಾಗಲಿ ಅಥವಾ ತಮ್ಮ ಪರ ವಕೀಲರ ಮೂಲಕವಾಗಲಿ ಹಾಜರಾಗಿ ತಮ್ಮ ತಕರಾರು ಸಲ್ಲಿಸಬೇಕು. ಇಲ್ಲದೇ ಇದ್ದಲ್ಲಿ ಮುಂದಿನ ಆದೇಶ ಮಾಡಲಾಗುವದು. ಈ ದಿವಸ ದಿನಾಂಕ 10/04/2026 ರಂದು ನ್ಯಾಯಾಲಯದ ಮುಖಾಂತರ ನೋಟೀಸ ಕೊಡಲ್ಪಟ್ಟಿರುತ್ತದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶ್ರೀ, ಬಿ. ಎಮ್. ರೋಣ
ಶಿರಸ್ತೆದಾರರು,
ಮಾನ್ಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಲಯ ಹಿರೇಕೆರೂರ

ಸಹಿ/-
ಅರ್ಜಿದಾರರ ಪರ ವಕೀಲರು
ಸ್ಥಳ : ಹಾವೇರಿ.
ದಿನಾಂಕ : 10/04/2026

ವ್ಯವಹಾರ ನ್ಯಾಯಾಧೀಶರು, ಹಾನಗಲ್ಲ ಇವರ ನ್ಯಾಯಾಲಯದಲ್ಲಿ

ಮೂಲ ದಾವಾ ನಂ:- 190/2015

ವಾದಿ:-ಮಂಗಳಾ ಕೋಂ ಕಾಶಿನಾಥ ಗೌಳಿ, ಆನವಟ್ಟಿ ಗ್ರಾಮ, ಸೊರಬ-ತಾಲೂಕ.
ವಿರುದ್ಧ
ಪ್ರತಿವಾದಿಯರು:- ಚಂದ್ರಶೇಖರಪ್ಪ ನಿಂಗಪ್ಪ ಗೌಳಿ, ಮತ್ತು ಇತರರು.

ನಾಗರೀಕ ಪ್ರಕ್ರಿಯಾ ಸಂಹಿತೆಯ ಆದೇಶ 5 ನಿಯಮು 20(1)(ಎ) ನೆದ್ದರ ಕೆಳಗೆ ಪ್ರಕಟಿಸುವ ದಾವಾ ಸಮನ್ಸ

ವಾದಿಯು, ಪರಮೇಶ್ವರಪ್ಪ, ಮಹದೇವಪ್ಪ ಯಲಿಯ ವಿರುದ್ಧ ಈ ದಾವೆಯನ್ನು ದಾಖಲಿಸಿದ್ದು, ಈ ಪರಮೇಶ್ವರಪ್ಪ ಮಹದೇವಪ್ಪ ಯಲಿಯು ಮೃತನಾಗಿದ್ದು, ಆತನ ವಾರಸುದಾರರ ಪೈಕಿ ಒಬ್ಬನಾದ, ರಕ್ಷಾ ಪರಮೇಶ್ವರಪ್ಪ ಯಲಿ. ವಯಾ-20 ವರ್ಷ. ಉದ್ಯೋಗ-ಮನೆಕೆಲಸ.ಶಿಳವಳ್ಳಿ -ಗ್ರಾಮ. ಹಾನಗಲ್ಲ-ತಾಲೂಕ. ಆದ ನಿಮ್ಮನ್ನು 5(ಸಿ), ಪ್ರತಿವಾದಿಯೆಂದು ಸೇರಿಸಿದ್ದು, ನೀವು **ದಿನಾಂಕ:15-06-2026ರಂದು ಮುಂಜಾನೆ 11ಘಂಟೆಗೆ** ವಾದಿಯ ಕೋರಿಕೆ/ಮಾಗಣೆಗೆ ಉತ್ತರಿಸುವದಕ್ಕಾಗಿ ಖುದ್ದಾಗಿ ಅಥವಾ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಬೇಕೆಂದು ಈ ಮೂಲಕ ಸಮನ್ಸನ್ನು ಹೊರಡಿಸಲಾಗಿರುತ್ತದೆ. ಈ ಮೇಲೆ ನಮೂದಿಸಿದ ದಿನಾಂಕ ಮತ್ತು ಸಮಯಕ್ಕೆ ಸರಿಯಾಗಿ ಹಾಜರಾಗಲು ನೀವು ತಪ್ಪಿದಲ್ಲಿ, ನಿಮ್ಮ ಗೈರು ಹಾಜರಿಯಲ್ಲಿ ದಾವೆಯ ಸುನಾವಣೆಯನ್ನು ಮಾಡಿ, ತೀರ್ಮಾನಿಸಲಾಗುವದು.

ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ 2026ನೇ ಎಪ್ರಿಲ್ 7ನೇ ದಿನದಂದು ಇದನ್ನು ಕೊಡಲಾಯಿತು.

ಸಹಿ/-ಬಸವರಾಜ ಹಳಕಟ್ಟಿ
ಶಿರಸ್ತೆದಾರರು.
ವ್ಯವಹಾರ ನ್ಯಾಯಾದೀಶರ ನ್ಯಾಯಾಲಯ, ಹಾನಗಲ್ಲ,

ಸಹಿ/-ದಳವಾಯಿ,
ವಾದಿ ಪರ ವಕೀಲರು.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗುಂಡ್ಲುಪೇಟೆ-571 111, ಚಾಮರಾಜನಗರ ಜಿಲ್ಲೆ

ಇ-ಮೇಲ್ : apmcgundlupet1997@gmail.com
ದೂರವಾಣಿ ಸಂಖ್ಯೆ:08229-222215
ಕೃ.ಸಂ.ಉ.ಮಾ.ಸ(ಗುಂಪೇ): 05: 2026-27
ದಿನಾಂಕ:06/04/2026

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗುಂಡ್ಲುಪೇಟೆ ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹದ ಪಾರದರ್ಶಕತೆ ಕಾಯಿದೆ 1999 ಮತ್ತು ನಿಯಮ 2000 ಹಾಗೂ ತತ್ಸಂಬಂಧವಾಗಿ ಹೊರಡಿಸಿರುವ ಸರ್ಕಾರದ ಆದೇಶ, ಸುತ್ತೋಲೆಗಳಂತೆ ಈ ಕೆಳಕಂಡ ಕಾಮಗಾರಿಗೆ ಎರಡು ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರುಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ಗಳಲ್ಲಿ ನೊಂದಾಯಿತ ಹಾಗೂ Standard Tender Documents KW-4 Clause 3 (with latest amendments)ನಲ್ಲಿ ಅರ್ಹರಿರುವ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಅಡಿಯಲ್ಲಿ ಸಲ್ಲಿಸಲು ಆಹ್ವಾನಿಸಲಾಗಿದೆ.

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ ರೂ.ಗಳಲ್ಲಿ	ಇ.ಎಂ.ಡಿ ಮೊಬಲಗು ರೂ. ಶೇ.1.50 ರಂತೆ ಅಥವಾ ಕನಿಷ್ಟ (ಇ ಪೇಮೆಂಟ್)	ಕೆಲಸ ಪೂರೈಸಲು ನಿಗಧಿಪಡಿಸಿದ ಅವಧಿ (ಮಳೆಗಾಲ ಹೊರತುಪಡಿಸಿ)	ಅರ್ಹ ಗುತ್ತಿಗೆದಾರರ ದರ್ಜೆ	ಇ ಪ್ರೊಸೆಸಿಂಗ್ ಫೀ(ಇ ಪೇಮೆಂಟ್)
1	ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗುಂಡ್ಲುಪೇಟೆ 2025-26ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿ ಅನುಮೋದಿತ ಸಮಿತಿಯ ಮುಖ್ಯ ಮಾರುಕಟ್ಟೆ ಮತ್ತು ತೆರಕಣಾಂಬಿ ಉಪ ಮಾರುಕಟ್ಟೆ ಪ್ರಾಂಗಣಗಳಲ್ಲಿ ಸಿ.ಸಿ.ರಸ್ತೆ, ಸಿ.ಸಿ.ಚರಂಡಿ ಮತ್ತು ಡೆಕ್‌ಸ್ಲ್ಯಾಬ್‌ಗಳನ್ನು ನಿರ್ಮಿಸುವ ಕಾಮಗಾರಿ, (ಐಟಂವಾರು ಟೆಂಡರ್)	4,14,22,518=65	6,22,000=00	6 ತಿಂಗಳು	ಕೆ.ಡಬ್ಲ್ಯೂ-4 ಕ್ಲಾಸ್-3ರಲ್ಲಿ ಅರ್ಹರಿರುವ ಮತ್ತು ಲೋ.ಇ.ಯಲ್ಲಿ ನೋಂದಾಯಿತ ಸಿವಿಲ್ ಗುತ್ತಿಗೆದಾರರು	ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಂತೆ

ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ

1. ಫ್ರೀ ಬಿಡ್ ಮೀಟಿಂಗ್ ದಿನಾಂಕ: 15.04.2026 ಬೆಳಿಗ್ಗೆ: 12.00 ಘಂಟೆಗೆ
2. ಭರ್ತಿ ಮಾಡಿದ ತಾಂತ್ರಿಕ ಮತ್ತು ಆರ್ಥಿಕ ಟೆಂಡರ್ ದಾಖಲೆಗಳನ್ನು ಸ್ವೀಕರಿಸುವ ಕೊನೆ ದಿನಾಂಕ: 21.04.2026 ಮತ್ತು ವೇಳೆ: ಸಂಜೆ 5.00 ಗಂಟೆ
3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 23.04.2026 ಮತ್ತು ವೇಳೆ : ಮಧ್ಯಾಹ್ನ 5.00 ಗಂಟೆ
4. ಆರ್ಥಿಕ ಬಿಡ್ ತೆರೆಯುವ ದಿನಾಂಕ: 27.04.2026 ಮತ್ತು ವೇಳೆ : ಮಧ್ಯಾಹ್ನ 3.00 ಗಂಟೆ

Tender documents may be downloaded from Government of Karnataka e-Procurement website
https://kppp.karnataka.gov.in//portal/portal-home under login for Contractors

ಟೆಂಡರುಗಳನ್ನು ತೆರೆಯುವ ಸ್ಥಳ : ಕಾರ್ಯದರ್ಶಿಯವರ ಕಛೇರಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆ
ಪತ್ರ ವ್ಯವಹಾರದ ವಿಳಾಸ : ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆ

ಸಹಿ/-ಕಾರ್ಯದರ್ಶಿ,
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗುಂಡ್ಲುಪೇಟೆ

ಸಹಿ/- ಅಧ್ಯಕ್ಷರು
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗುಂಡ್ಲುಪೇಟೆ

ಸಂ.ವಾಸಾಸಂಇ: ಚಾ.ನಗರ:32;2026-27

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ

ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಧಾರವಾಡ
ಫೋ: 0836-2213838 Email: eedharwad@gmail.com

ನಂ.ಎಚ್.ಡಿಎಂಸಿ/66/07/02/2026-27 ದಿನಾಂಕ:- 10-04-2026

ಅಲ್ಪಾವಧಿ/ಪೂರ್ಣಾವಧಿ ಇ-ಟೆಂಡರ್ ಅಧಿಸೂಚನೆ

ಜಾಹಿರಾತು ನಂ:- ದಿನಾಂಕ:

ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಿವಿಧ ಯೋಜನೆ ಅನುದಾನದಡಿಯಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999-2000ರ ನಿಯಮದನ್ವಯ ಕರ್ನಾಟಕ ಪಬ್ಲಿಕ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, PWD ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರು ಈ ಕೆಳಕಂಡ ಕಾಮಗಾರಿಗಳ ಟೆಂಡರ್‌ನಲ್ಲಿ ಭಾಗವಹಿಸಬಹುದು.

ಪಾಲಿಕೆ ಹಾಗೂ ವಾರ್ಡ ಸದಸ್ಯರ ಅನುದಾನ :-

1) ಇಂಡೆಂಟ ನಂ. 42526/27.35 ಲಕ್ಷ/ಸಾಮಾನ್ಯ **2)** ಇಂಡೆಂಟ ನಂ. 48787/5.00ಲಕ್ಷ/ಸಾಮಾನ್ಯ **3)** ಇಂಡೆಂಟ ನಂ. 48794/ 25.00ಲಕ್ಷ/ಸಾಮಾನ್ಯ **4)** ಇಂಡೆಂಟ ನಂ. 48303/14.00ಲಕ್ಷ/ಸಾಮಾನ್ಯ **5)** ಇಂಡೆಂಟ ನಂ. 53110/6.20ಲಕ್ಷ/ಸಾಮಾನ್ಯ
6) ಇಂಡೆಂಟ ನಂ. 57163/22.00ಲಕ್ಷ/ಪ್ರವರ್ಗ-1 **7)** ಇಂಡೆಂಟ ನಂ. 57160/10.00ಲಕ್ಷ/ಸಾಮಾನ್ಯ **8)** ಇಂಡೆಂಟ ನಂ. 57162/ 10.00ಲಕ್ಷ/ಪರಿಶಿಷ್ಟ ಜಾತಿ **9)** ಇಂಡೆಂಟ ನಂ. 57161/8.00ಲಕ್ಷ/ಪ್ರವರ್ಗ-2ಎ **10)** ಇಂಡೆಂಟ ನಂ. 57190/6.00ಲಕ್ಷ/ಸಾಮಾನ್ಯ **11)** ಇಂಡೆಂಟ ನಂ. 57165/7.50ಲಕ್ಷ/ಸಾಮಾನ್ಯ **12)** ಇಂಡೆಂಟ ನಂ. 57166/40.00ಲಕ್ಷ/ಸಾಮಾನ್ಯ **13)** ಇಂಡೆಂಟ ನಂ. 56772/ 18.00ಲಕ್ಷ/ಸಾಮಾನ್ಯ **14)** ಇಂಡೆಂಟ ನಂ. 56758/4.80ಲಕ್ಷ/ಸಾಮಾನ್ಯ **15)** ಇಂಡೆಂಟ ನಂ. 57191/7.90ಲಕ್ಷ/ಸಾಮಾನ್ಯ
16) ಇಂಡೆಂಟ ನಂ. 57196/3.50ಲಕ್ಷ/ಪರಿಶಿಷ್ಟ ಪಂಗಡ **17)** ಇಂಡೆಂಟ ನಂ. 57197/5.70ಲಕ್ಷ/ಸಾಮಾನ್ಯ **18)** ಇಂಡೆಂಟ ನಂ. 57210/3.36ಲಕ್ಷ/ಸಾಮಾನ್ಯ **19)** ಇಂಡೆಂಟ ನಂ. 57212/1.70ಲಕ್ಷ/ಸಾಮಾನ್ಯ **20)** ಇಂಡೆಂಟ ನಂ. 57259/25.20ಲಕ್ಷ/ಪ್ರವರ್ಗ-2ಎ **21)** ಇಂಡೆಂಟ ನಂ. 57258/10.00ಲಕ್ಷ/ಪರಿಶಿಷ್ಟ ಜಾತಿ **22)** ಇಂಡೆಂಟ ನಂ. 52330/16.00ಲಕ್ಷ/ಸಾಮಾನ್ಯ **23)** ಇಂಡೆಂಟ ನಂ. 57256/94.30ಲಕ್ಷ/ಪರಿಶಿಷ್ಟ ಜಾತಿ **24)** ಇಂಡೆಂಟ ನಂ. DMA/2026-27/SE7670/47.72ಲಕ್ಷ/ಸಾಮಾನ್ಯ

ಒಟ್ಟು **24** ಕಾಮಗಾರಿಗಳು ಮೊತ್ತ **ರೂ. 419.23** ಲಕ್ಷಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಕಾರ್ಯನಿರ್ವಾಹಕ ಅಭಿಯಂತರರು ಧಾರವಾಡ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂಖ್ಯೆ: **0836-2213838** ರಿಂದ ಮಾಹಿತಿ ಪಡೆಯಬಹುದು ಮತ್ತು ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ **http://www.kppp.karnataka.gov.in** ರಲ್ಲಿ ಪಡೆಯಬಹುದು. ಒಂದು ವೇಳೆ ಸದರಿ ಟೆಂಡರ್‌ನಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಇ-ಪ್ರೊಕ್ಯೂರಮೆಂಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರಕಾರ ಇ-ಪ್ರೊಕ್ಯೂರಮೆಂಟ್‌ನಲ್ಲಿ ಅ.ನಂ. 1 ರಿಂದ 24 ರವರೆಗೆ ದಿನಾಂಕ: **13-04-2026** ರಿಂದ ಪಡೆಯಬಹುದಾಗಿದೆ.

ಈ ಮೇಲಿನ ಕಾಮಗಾರಿಗಳಿಗೆ (1 ರಿಂದ 21)
1) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ : **02/05/2026 ಸಂಜೆ 04.00 ಗಂಟೆ**
2) ಟೆಂಡರ್ ತೆರೆಯುವ ದಿನಾಂಕ : **04/05/2026 ಬೆಳಗ್ಗೆ 10.30 ಗಂಟೆ**

ಈ ಮೇಲಿನ ಕಾಮಗಾರಿಗಳಿಗೆ (22 ರಿಂದ 24)
1) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ : **23/04/2026 ಸಂಜೆ 04.00 ಗಂಟೆ**
2) ಟೆಂಡರ್ ತೆರೆಯುವ ದಿನಾಂಕ : **24/04/2026 ಸಂಜೆ 04.30 ಗಂಟೆ**
3) ಆರ್ಥಿಕ ಬಿಡ್ ತೆರೆಯುವ ದಿನಾಂಕ : **29/04/2026 ಬೆಳಗ್ಗೆ 10.30 ಗಂಟೆ**

ಸಹಿ/-
ಕಾರ್ಯನಿರ್ವಾಹಕ ಅಭಿಯಂತರರು
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಧಾರವಾಡ

ವಾ.ಸಾ.ಇ./ಧಾರವಾಡ/43/2026-27/ದೇಶಪಾಂಡೆಪಬ್ಲಿಸಿಟಿ

ತಾಲೂಕಾ ಆಸ್ಪತ್ರೆ ಜೋಯಿಡಾ-581186

E-mail:- talukahospitaljoidaa@gmail.com Ph. No:- 08383-282703

ಸಂ.ತಾಆಜೋ/ಪಥ್ಯಾಹಾರ/347/2025-26 ದಿ: 09/04/2026

-: ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಅಧಿಸೂಚನೆ :-

ಉತ್ತರ ಕನ್ನಡ ಜಿಲ್ಲೆಯ ರಾಜ್ಯ ವಲಯದ ತಾಲೂಕಾ ಆಸ್ಪತ್ರೆ ಜೋಯಿಡಾದಲ್ಲಿ 2026-27 ನೇ ಸಾಲಿಗೆ ಒಳರೋಗಿಗಳಿಗೆ ಸಿದ್ಧಪಡಿಸಿದ ಪಥ್ಯಾಹಾರ (ಕಡಿಜಠಿಚಿಡಿಜಜ ಒಜಚಿಟ) ಪದಾರ್ಥಗಳು ಹಾಗೂ ಬ್ರೆಡ್ ಪದಾರ್ಥಗಳನ್ನು ಸರಬರಾಜು ಮಾಡಲು ಇ-ಪ್ರೊಕ್ಯೂರಮೆಂಟ್ ಪ್ಲಾಟಫಾರ್ಮನಲ್ಲಿ ಟೆಂಡರ್ ಕರೆಯಲಾಗಿದೆ. ಟೆಂಡರ್ ಅವಧಿಯು ಆದೇಶ ನೀಡುವ ದಿನಾಂಕದಿಂದ 31/03/2027 ರ ವರೆಗೆ ಅಥವಾ ಈ ಕಛೇರಿಯ ಮುಂದಿನ ಆದೇಶದ ವರೆಗೆ ಮಾತ್ರ ಇರುತ್ತದೆ. ಒಟ್ಟ ಟೆಂಡರಿನ ಅಂದಾಜು ಮೌಲ್ಯ 12 ತಿಂಗಳಿಗೆ ರೂ. 13,41,720/- ಇದ್ದು ಟೆಂಡರ್ ವಿವರಗಳು ಈ ಕೆಳಗಿನಂತಿರುತ್ತದೆ. ದ್ವಿ-ಲಕೋಟೆ ಪದ್ಧತಿಯಲ್ಲಿ ಸಿದ್ಧಪಡಿಸಿದ ಪಥ್ಯಾಹಾರ (Prepared Meal) ಹಾಗೂ ಬ್ರೆಡ್ ಪೂರೈಕೆಗಾಗಿ Karnataka Public Procurement Portal (https://kppp.karnataka.gov.in)

1	ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ	ಸಂ:ತಾಆಜೋ/ಪಥ್ಯಾಹಾರ/347/2025-26,ದಿನಾಂಕ: 09/04/2026
2	ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ	ಕ್ರ.ಸಂ. / ವಿವರ / ಟೆಂಡರ್ ಬಿಡ್ ಮೊತ್ತ (ರೂ. ಗಳಲ್ಲಿ) 1 / Group-A Prepaied Meal / ರೂ. 12,06,720/- 2 / Group-B Bread / ರೂ. 1,35,000/-
3	KPPP-Portal ನಲ್ಲಿ ಟೆಂಡರ್ ಅರ್ಜಿ ಸಲ್ಲಿಸಲು ಪ್ರಾರಂಭಿಸುವ ದಿನಾಂಕ	10/04/2026
4	KPPP-Portal ನಲ್ಲಿ ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ಪ್ರಾರಂಭಿಸುವ ದಿನಾಂಕ & ಸಮಯ	ದಿನಾಂಕ: 24-04-2026ರ ಸಂಜೆ 04-00 ವರೆಗೆ
5	KPPP-Portal ನಲ್ಲಿ ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ	ದಿನಾಂಕ: 27-04-2026ರ ಮಧ್ಯಾಹ್ನ 03-00 ಗಂಟೆಗೆ
6	ಮಾದರಿ ಸಲ್ಲಿಸುವ ದಿನಾಂಕ (Sample Submission Date)	30/04/2026 0 5 11:00 ಅಥವಾ ತಾಂತ್ರಿಕ ಬಿಡ್‌ನಲ್ಲಿ ಅರ್ಹ ಇರುವ ಸಂಸ್ಥೆಗಳಿಗೆ ದಿನಾಂಕ ಮತ್ತು ಸಮಯ ಇ-ಮೇಲ್ ಮೂಲಕ ಸೂಚಿಸಲಾಗುವುದು.
7	KPPP-Portal ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ & ಸಮಯ	ದಿನಾಂಕ : 04/05/2026 ರ ಅಪರಾಹ್ನ 3:00 ಗಂಟೆಗೆ ಅಥವಾ ಟೆಂಡರ್ ಅಂಗೀಕಾರ ಸಮಿತಿಯ ಅನುಮೋದನೆಯ ನಂತರ (KPPP-Portal ನಲ್ಲಿ)
8	ಇಎಮ್‌ಡಿ (ಶೇ. 2.5%)	ಅನುಬಂಧ-I ರ ನಮೂನೆಯಲ್ಲಿ EMD Declaration ಸಹಿಯೊಂದಿಗೆ ಸಲ್ಲಿಸುವದು.
9	ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ 9 ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ	ಆಡಳಿತ ವೈದ್ಯಾಧಿಕಾರಿಗಳು, ತಾಲೂಕಾ ಆಸ್ಪತ್ರೆ, ಜೋಯಿಡಾ (ಉ.ಕ) ದೂ.ಸಂ. : 08383-282703 Email ID: talukahospitaljoida@gmail.com

ಸಹಿ/- ಆಡಳಿತ ವೈದ್ಯಾಧಿಕಾರಿ,
ತಾಲೂಕಾ ಆಸ್ಪತ್ರೆ, ಜೋಯಿಡಾ

ಮೆ॥ ಜೆ.ಎಮ್.ಎಫ್.ಸಿ. ನವಲಗುಂದ ಇವರ ನ್ಯಾಯಾಲಯದಲ್ಲಿ ನವಲಗುಂದ

ಕ್ರಿಮಿನಲ್ ಮಿಸಲೇನಿಯಸ್ ನಂ : 111/2026

ಅರ್ಜಿದಾರ:-ಭೀಮರಡ್ಡಿ ತಂದೆ ವೆಂಕರಡ್ಡಿ ಯಲ್ಲರಡ್ಡಿಯವರ ವಯಾ:45 ವರ್ಷ ಉದ್ಯೋಗ :ಶೇತಕಿ, ಸಾ॥ ಹೆಬ್ಬಾಳ ತಾ॥ ನವಲಗುಂದ ಜಿ॥ ಧಾರವಾಡ
ವಿರುದ್ಧ
ಎದುರುಗಾರರು : ತಹಶೀಲ್ದಾರ ಸಾಹೇಬರು ನವಲಗುಂದ ತಾ॥ ನವಲಗುಂದ.

ಸಾರ್ವಜನಿಕ ಪ್ರಕಟಣೆ

ಅರ್ಜಿದಾರನ ತಾಯಿಯಾದ **ಕಮಲವ್ವ ಕೊಂ ವೆಂಕರಡ್ಡಿ ಯಲ್ಲರಡ್ಡಿಯವರ** ಇವರು ದಿ.**29/07/2016** ರಂದು ಹೆಬ್ಬಾಳ ಗ್ರಾಮ ದಲ್ಲಿ ಪೋತಿಯಾಗಿದ್ದು ಸದರೀಯವರ ಮರಣದ ದಿನಾಂಕವನ್ನು ಮೆ॥ ತಹಶಿಲ್ದಾರ ಸಾಹೇಬರು ನವಲಗುಂದ ಇವರ ಮರಣ ದಾಖಲಾತಿಗಳ ಕುರಿತು ಅರ್ಜಿದಾರರು ಮೆ॥ ರಜಿಸ್ಟರ್‌ದಲ್ಲಿ ದಾಖಲಿಸುವ ಹುಕುಂ ಪಡೆಯುವ ಜೆ.ಎಮ್.ಎಫ್.ಸಿ. ನವಲಗುಂದ ಇವರ ನ್ಯಾಯಾಲಯದಲ್ಲಿ ಕ್ರಿಮಿನಲ್ ಮಿಸಲೇನಿಯಸ್ ನಂ. 111/2026 ನೇದ್ದನ್ನು ದಾಖಲಿಸಿದ್ದು, ಯಾರದಾದರೂ ಏನಾದರೂ ತಕರಾರು ವಗೈರೆ ಇದ್ದಲ್ಲಿ ಈ ಪ್ರಕರಣದ ಮುದ್ದತ್ತಿನ ದಿನಾಂಕವಾದ **12/05/2026 ರಂದು ಮುಂಜಾನೆ 11-00 ಗಂಟೆಗೆ** ಮೇಲ್ಕಾಣಿಸಿದ ನ್ಯಾಯಾಲಯದಲ್ಲಿ ಸ್ವತಃ ಅಥವಾ ನಿಮ್ಮಿಂದಾ ಮಾಹಿತಿ/ಅಧಿಕಾರ ಪಡೆದ ವಕೀಲರ ಮುಖಾಂತರ ಹಾಜರಾಗಿ ತಮ್ಮ ತಕರಾರುಗಳನ್ನು ಸಲ್ಲಿಸತಕ್ಕದ್ದು, ಇಲ್ಲದಿದ್ದಲ್ಲಿ ಯಾರದೂ ತಕರಾರು ಇರುವುದಿಲ್ಲಾ ಅಂತಾ ಪರಿಗಣಿಸಿ ಏಕ್‌ತರ್ಫಿಯಾಗಿ ಪ್ರಕರಣವನ್ನು ಇತ್ಯರ್ಥಪಡಿಸಲಾಗುವುದು.

ನ್ಯಾಯಾಲಯದ ಆದೇಶದ ಮೇರೆಗೆ.
ಶಿರಸ್ತೇದಾರರು,
ದಿವಾಣಿ ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ ನವಲಗುಂದ
ನವಲಗುಂದ
ದಿನಾಂಕ:02/04/2026
ಅರ್ಜಿದಾರರ ಪರ ನ್ಯಾಯವಾದಿ
(ಶ್ರೀ ಎಸ್.ವಿ.ಮರಡ್ಡಿ) ವಕೀಲರು,
ನವಲಗುಂದ

ಮಾನ್ಯ ದಿವಾಣಿ ನ್ಯಾಯಾಧೀಶರು ಜೆ.ಎಮ್.ಎಫ್.ಸಿ. ನ್ಯಾಯಾಲಯ ಕಲಘಟಗಿ, ಇವರ ನ್ಯಾಯಾಲಯದಲ್ಲಿ

ಅಸಲ ದಾವಾ ನಂ. : 81/2025

ವಾದಿ:-ಶ್ರೀ ಪ್ರಶಾಂತ ತಂದೆ ಲಕ್ಷ್ಮೀಕಾಂತ ಕಡ್ಲಿ,
ವಿರುದ್ಧ
ಪ್ರತಿವಾದಿ:- ಶ್ರೀ ಉಮೇಶಗೌಡ ತಂದೆ ಧರ್ಮಗೌಡ ಪಾಟೀಲ.
ಪ್ರತಿವಾದಿ:-ಉಮೇಶಗೌಡ ತಂದೆ ಧರ್ಮಗೌಡ ಪಾಟೀಲ ಸಾ॥ ಆನಂದ ನಗರ ಹುಬ್ಬಳ್ಳಿ, ತಾ॥ಹುಬ್ಬಳ್ಳಿ, ಜಿ॥ ಧಾರವಾಡ.

ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 5 ನಿಯಮು 20 ರಡಿ ಸಮನ್ಸ

ಇದರಲ್ಲಿ, ವಾದಿಯು ಮಾನ್ಯ ನ್ಯಾಯಾಲಯದಲ್ಲಿ ನಿಮ್ಮ ವಿರುದ್ಧ ನಿರ್ದಿಷ್ಟ ಕಾನೂನು ಅಡಿಯಲ್ಲಿ ಪರಿಹಾರ ಕಂಡು ಕೊಳ್ಳಲು ದಾವಾ ದಾಖಲ ಮಾಡಿದ್ದು ಇರುತ್ತದೆ. ಸದರ ಮೇಲ್ಕಂಡ ದಾವೆಯು **ದಿನಾಂಕ : 27/04/2026 ರಂದು** ಪ್ರತಿವಾದಿಯಾದ **ಶ್ರೀ ಉಮೇಶಗೌಡ ತಂದೆ ಧರ್ಮಗೌಡ ಪಾಟೀಲ,** ನಿಮ್ಮ ಹಾಜರಾತಿಗಾಗಿ ನಿಗದಿ ಪಡಿಸಿದ್ದು ಇರುತ್ತದೆ. ಕಾರಣ ಸದರಿ ದಿನಾಂಕ ದಂದು ಸರಿಯಾಗಿ ಮುಂಜಾನೆ **10-45 ಗಂಟೆಗೆ** ಮಾನ್ಯ ನ್ಯಾಯಾಲಯದ ಮುಂದೆ ಖುದ್ದಾಗಿ ಅಥವಾ ಅಧಿಕಾರ ಪಡೆದ ವಕೀಲರ ಮೂಲಕ ಹಾಜರಾಗಿ ನಿಮ್ಮ ತಕರಾರು ವ ಅಭ್ಯಂತರಗಳನ್ನು ದಾಖಲ ಮಾಡತಕ್ಕದ್ದು. ತಪ್ಪಿದ್ದಲ್ಲಿ ತಮ್ಮನ್ನು ಏಕತರ್ಫಿ ಅಂತಾ ಪರಿಗಣಿಸಿ ಮುಂದಿನ ಆದೇಶ ಮಾಡಲಾಗುವುದು.

ನ್ಯಾಯಾಲಯದ ಆದೇಶದ ಮೇರೆಗೆ.
ಶಿರೇಸ್ತೆದಾರರು
ಮಾನ್ಯ ದಿವಾಣಿ ನ್ಯಾಯಾಧೀಶರ
ಜೆ.ಎಮ್.ಎಫ್.ಸಿ ನ್ಯಾಯಾಲಯ ಕಲಘಟಗಿ
ಸ್ಥಳ : ಕಲಘಟಗಿ
ದಿನಾಂಕ : 10/04/2026
ಎಂ. ಜಿ. ಹೂಗಾರ
ವಾದಿಯ ಪರ ವಕೀಲರು.

ಕಿರುಸುದ್ದಿ

ಲವ್ ಜಿಹಾದ್ ಯತ್ನ ಆರೋಪ: ಪ್ರತಿಭಟನೆ

◆ **ಹುಬ್ಬಳ್ಳಿ:** ಮುಸ್ಲಿಂ ಯುವಕ ಹಿಂದು ಯುವತಿಯನ್ನು ಲವ್ ಜಿಹಾದ್ ಪ್ರಯತ್ನಿಸಿದ್ದಾನೆ. ಆತನನ್ನು ಬಂಧಿಸಬೇಕು ಎಂದು ಆಗ್ರಹಿಸಿ ಹಿಂದು ಪರ ಸಂಘಟನೆಗಳು ರಾತ್ರಿ ಅಶೋಕ ನಗರ ಪೊಲೀಸ್ ಠಾಣೆ ಎದುರು ಪ್ರತಿಭಟನೆ ನಡೆಸಿದರು. ಇಲ್ಲಿಯ ಅಶೋನಗರ ಪೊಲೀಸ್ ಠಾಣೆ ಎದುರು ಸಮಾವೇಶಗೊಂಡ ೩೦ಕ್ಕೂ ಹೆಚ್ಚು ಪ್ರತಿಭಟನಾಕಾರರು ಸಮೀರ್ ಬೂದಿಹಾಳ ಎಂಬಾತನ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಸಮೀರ್ ಬೂದಿಹಾಳ ಗಾಂಜಾ ವ್ಯಸನಿಯಾಗಿದ್ದು, ಹಿಂದು ಯುವತಿಯರಿಗೆ ಗಾಂಜಾ ಹೊಡೆಯುವುದು ಕಲಿಸಿ, ಲೈಂಗಿಕ ದೌರ್ಜನ್ಯ ವೆಸಗಿದ್ದಾನೆ. ಆತನ ಮೊಬೈಲ್ ವಶಕ್ಕೆ ಪಡೆದಿದ್ದು, ಅದರಲ್ಲಿ ಗಾಂಜಾ, ಮಾದಕ ವಸ್ತುಗಳ ಸೇವನೆ ಫೋಟೋ, ವಿಡಿಯೋ ಸಿಕ್ಕಿವೆ. ಇಷ್ಟೆಲ್ಲ ಪರೇಡ್ ಮಾಡಿದರು ಗಾಂಜಾ ಹೇಗೆ ಬಂತು ಎಂದು ಪ್ರಶ್ನಿಸಿದರು. ಆತನನ್ನು ತಕ್ಷಣ ಬಂಧಿಸಬೇಕು ಎಂದು ಆಗ್ರಹಿಸಿದರು. ಸ್ಥಳಕ್ಕೆ ಎಸಿಪಿ ಶಿವಾನಂದ ಚಲವಾದಿ ಭೇಟಿ ನೀಡಿ ಪ್ರತಿಭಟನಾಕಾರರ ಮನವೊಲಿಸಿದರು. ಸಮೀರ್ ವಿರುದ್ಧ ಪ್ರಕರಣ ದಾಖಲಿಸಿದ ಮೇಲೆ ಪ್ರತಿಭಟನೆ ಹಿಂಪಡೆದರು. ಆರೋಪಿಯನ್ನು ಕಠಿಣ ಶಿಕ್ಷೆಗೆ ಒಳಪಡಿಸದಿದ್ದರೆ ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಕೆ ನೀಡಿದರು.

ಸತ್ಯ ಶೀಘ್ರ ಬಯಲಾಗಲಿ: ಯತ್ನಾಳ

◆ **ವಿಜಯಪುರ:** ಕೂಡಲಸಂಗಮ ಬಸವಜಯ ಮೃತ್ಯುಂಜಯ ಸ್ವಾಮೀಜಿ ಪ್ರಕರಣ ಕೋರ್ಟ್‌ನಲ್ಲಿದೆ. ಶೀಘ್ರ ಸತ್ಯ ಬಯಲಾಗಲಿ ಎಂದು ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾವೇನು ಹಸ್ತಕ್ಷೇಪ ಮಾಡಲ್ಲ, ಅದು ಏನೇನಿದೆ ಕ್ಲೀಯರ್ ಆಗಿ ತನಿಖೆ ಆಗಬೇಕು. ಯಾರು ತಪ್ಪಿತಸ್ಥರಿದ್ದಾರೆ ಅವರಿಗೆ ಶಿಕ್ಷೆ ಆಗಲಿ. ನಾವು ಯಾರಿಗೂ ಬೆಂಬಲ ಕೊಡಲ್ಲ, ಯಾರಿಗೂ ವಿರೋಧ ಮಾಡಲ್ಲ. ಸ್ವಾಮೀಜಿಗಳು ಏನೇನಾಗಿದೆ ಎಂದು ದೂರಲ್ಲಿ ನೀಡಿದ್ದಾರೆ. ಅದಕ್ಕಾಗಿ ತನಿಖೆ ಆಗಿ ಕಪ್ಪ ಚುಕ್ಕೆ ಕ್ಲೀನ್ ಆಗಿ ಹೋಗಲಿ ಎಂದರು. ಸ್ವಾಮೀಜಿಗಳ ಮೇಲೆ ದೂರು ದಾಖಲಿಸಿದವರು ನಾಪತ್ತೆ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಅದು ಫೇಕ್ ಇರಬೇಕು. ಯಾರು ದೂರು ದಾಖಲಿಸಿದ್ದಿರಿ ಅವರು ಧೈರ್ಯವಾಗಿ ಮುಂದೆ ಬನ್ನಿ. ಮೊದಲು ಇದು 11 ಕೋಟಿ ರೂ.ಗೆ ಬೇಡಿಕೆ ಇತ್ತು. ನಂತರ 3 ಕೋಟಿಗೆ ಬಂದಿದೆ. ಇದು ಬೆಂಗಳೂರಿನಲ್ಲಿ ಒಂದು ಜಾಲ ಇದೆ ಎಂದು ಕಿಡಿಕಾರಿದರು.




ಈಜಲು ಹೋಗಿ ಯುವಕ ಸಾವು

◆ **ಹುನಗುಂದ:** ಸ್ನೇಹಿತರೊಂದಿಗೆ ಈಜಲು ಹೋಗಿ ಈಜು ಬಾರದೇ ಗರಸು ತಗೆದ ಆಳವಾದ ನೀರು ತುಂಬಿದ ಹೊಂಡದಲ್ಲಿ ಮುಳುಗಿ ಯುವಕನೋರ್ವ ಮೃತಪಟ್ಟ ಘಟನೆ ಬುಧವಾರ ಬೆಳಗ್ಗೆ 11-30ರ ಸುಮಾರಿಗೆ ಹುನಗುಂದ ತಾಲೂಕಿನ ಕಮದತ್ತ ಗ್ರಾಮದ ಬಳಿಯ ಡಮಾನಿ ಸೇತುವೆ ಪಕ್ಕದ ಜಮೀನೊಂದರಲ್ಲಿ ನಡೆದಿದೆ. ತಾಲೂಕಿನ ಕಮದತ್ತ ಗ್ರಾಮದ ಗುರಯ್ಯ ಉರ್ಫ ರಾಜು ಶರಣಯ್ಯ ಅಗ್ನಿಮಠ (18) ಗರಸು ತಗೆದ ಆಳವಾದ ಹೊಂಡದಲ್ಲಿ ಈಜಲು ಹೋಗಿ ಮೃತಪಟ್ಟ ದುರ್ದೈವಿ ಯುವಕನಾಗಿದ್ದಾನೆ. ಬೆಂಗಳೂರಿನಿಂದ ಕೂಡಲಸಂಗಮದ ಸಂಗಮೇಶ್ವರರ ಜಾತ್ರೆಗೆಂದು ಬಂದಿದ್ದ ಜಾತ್ರೆ ಮುಗಿಸಿ ಬುಧವಾರ ಸಂಜೆ ಮತ್ತೆ ಬೆಂಗಳೂರಿಗೆ ಹೋಗುವ ಮುಂಚೆ ಹೊಲಕ್ಕೆ ಹೋಗಿ ಬಂದರಾಯಿತೆಂದು ಸ್ನೇಹಿತರೊಂದಿಗೆ ಈಜಲು ಹೋಗಿ ಮೃತಪಟ್ಟಿದ್ದಾನೆ. ಸಾವಿನ ಸುದ್ದಿ ತಿಳಿದು ಸ್ಥಳಕ್ಕೆ ಬಂದ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು. ಸುದ್ದಿ ತಿಳಿದು ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ಸಹಾಯಕ ಠಾಣಾಧಿಕಾರಿ ಪ್ರಕಾಶ ಚಿತ್ತರಗಿ ನೇತೃತ್ವದ ತಂಡ ಬೋಟು ಮುಖಾಂತರ ಕಾರ್ಯಾಚರಣೆ ಕೈಕೊಂಡು ಯುವಕ ಶವವನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾದರು. ದ್ವಿತೀಯ ಪಿಯುಸಿ ಪರೀಕ್ಷೆ ಬರೆದು ಒಳ್ಳೆಯ ಫಲಿತಾಂಶಕ್ಕಾಗಿ ಕಾಯುತ್ತಿದ್ದ ಗುರಯ್ಯ ಉರ್ಫ ರಾಜು ಶರಣಯ್ಯ ಅಗ್ನಿಮಠ ಫಲಿತಾಂಶ ಮುನ್ನವೇ ವಿಧಿ ಆಟಕ್ಕೆ ಯುವಕ ಬಲಿಯಾಗಿದ್ದು ದುರಂತ. ಅಗ್ನಿಶಾಮಕ ಲೀಡಿಂಗ್ ಫೈಟರ್ ಭೀಮಪ್ಪ ವಣಿಕ್ಯಾಳ, ಸಿಬ್ಬಂದಿಗಳಾದ ವೈ. ಎಲ್.ಗೌಡರ, ಯಾಸಿನ್, ದೊಡ್ಡೇಶ, ದಯಾನಂದ, ರವಿಚಂದ್ರ, ಬಸವರಾಜ ಪಾಲ್ಗೊಂಡಿದ್ದರು.



ನ್ಯಾಯವಾದಿ ಸಾವು

◆ **ಕುಷ್ಟಗಿ:** ಕೇಸ್ ನಡೆಸುವಾಗ ಹೃದಯಾಘಾತ ಸಂಭವಿಸಿ ಸ್ಥಳದಲ್ಲೇ ಕುಸಿದು ಬಿದ್ದು ನ್ಯಾಯವಾದಿ ನಿಂಗಪ್ಪ ಸುದ್ದಿ ತಾವರಗೇರಾ ಎಂಬವರು ಮೃತಪಟ್ಟ ಘಟನೆ ಇಲ್ಲಿನ ನ್ಯಾಯಾಲಯದಲ್ಲಿ ಶುಕ್ರವಾರ ಬೆಳಗ್ಗೆ ನಡೆದಿದೆ. ತಾಲೂಕಿನ ತಾವರಗೇರಾ ಪಟ್ಟಣದ ನ್ಯಾಯವಾದಿ ನಿಂಗಪ್ಪ ಸುದ್ದಿ (50) ಮೃತರು. ಸ್ಥಳೀಯ ನ್ಯಾಯಾಲಯದಲ್ಲಿ ಕೇಸ್ ನಡೆಸುವ ವಾದ ವೇಳೆ ಆಕಸ್ಮಿಕವಾಗಿ ಹೃದಯಾಘಾತ ಸಂಭವಿಸಿ ಕುಸಿದು ಬಿದ್ದು ಪರಿಣಾಮ ಮೃತಪಟ್ಟಿದ್ದಾರೆ. ಮೃತರಿಗೆ ತಾಯಿ, ಪತ್ನಿ, ಓರ್ವ ಪುತ್ರ, ಒಬ್ಬರು ಪುತ್ರಿ ಸೇರಿ ಅಪಾರ ಬಂಧುಗಳನ್ನು ಅಗಲಿದ್ದಾರೆ. ನ್ಯಾಯವಾದಿ ನಿಧನ ಹಿನ್ನೆಲೆಯಲ್ಲಿ ತಾಲೂಕು ವಕೀಲರ ಸಂಘ ಸಂತಾಪ ಸೂಚಿಸಿದೆ.



ಪಿಯುಸಿ ಫಲಿತಾಂಶ | ಮಾತೋಶ್ರೀ ಅವ್ವಾಜಿ ಹರ್ಷ

ಎಸ್‌ಬಿಆರ್‌ನ ಅಮೋಘ ಸಾಧನೆ

◆ **ಕಲಬುರಗಿ:** ಶರಣಬಸವೇಶ್ವರ ಸಂಯುಕ್ತ ವಸತಿ ಪದವಿಪೂರ್ವ ಕಾಲೇಜು (ಎಸ್.ಬಿ.ಆರ್) 2026ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿದೆ. ವಿದ್ಯಾರ್ಥಿಗಳು ಗಣನೀಯ ಅಂಕಗಳನ್ನು ಗಳಿಸಿ ಕಾಲೇಜಿನ ಖ್ಯಾತಿ ಹೆಚ್ಚಿಸಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಸಿಮ್ರನ್ ಬಾನು 596/600 (99.33%) ಅಂಕಗಳನ್ನು ಪಡೆದು ರಾಜ್ಯಕ್ಕೆ 4ನೇ ರ್‍ಯಾಂಕ್ ಹಾಗೂ ಕಲ್ಯಾಣ ಕರ್ನಾಟಕಕ್ಕೆ 1ನೇ ರ್‍ಯಾಂಕ್ ಗಳಿಸಿ ಗಮನ ಸೆಳೆದಿದ್ದಾರೆ. ಕನ್ನಡದಲ್ಲಿ 100, ಇಂಗ್ಲಿಷ್‌ನಲ್ಲಿ 98, ಭೌತಶಾಸ್ತ್ರದಲ್ಲಿ 100, ರಸಾಯನಶಾಸ್ತ್ರದಲ್ಲಿ 99, ಗಣಿತದಲ್ಲಿ 99 ಹಾಗೂ ಜೀವಶಾಸ್ತ್ರದಲ್ಲಿ 100 ಅಂಕಗಳನ್ನು ಗಳಿಸಿದ್ದಾರೆ.

ಕಾಲೇಜಿನ ಎರಡನೇ ಸ್ಥಾನವನ್ನು ಕ್ಷಿತಿ ಪಾಟೀಲ (592/600, 98.67%) ಪಡೆದಿದ್ದು, ಗೌತಮ್ ಎಂ ಮತ್ತು ಸಹನಾ ಹಳ್ಳಿ (591/600, 98.50%) ತಲಾ ಮೂರನೇ ಸ್ಥಾನ ಪಡೆದಿದ್ದಾರೆ. ವೆಂಕಟೇಶ ಕುಲಕರ್ಣಿ (587/600), ಐಶ್ವರ್ಯ ಶಿವರಾಜ, ಬಸವರಾಜೇಶ್ವರಿ ಎಚ್ ಹಾಗೂ ಸಿಂಚನಾ ಎಸ್ (ಪ್ರತಿ ಇಬ್ಬರು 584/600) ಉತ್ತಮ ಸಾಧನೆ ಮಾಡಿದ್ದಾರೆ.

ಈ ಬಾರಿ ಒಟ್ಟು 612 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್‌ನಲ್ಲಿ ಉತ್ತೀರ್ಣರಾಗಿದ್ದು, 80 ವಿದ್ಯಾರ್ಥಿಗಳು 95% ಕ್ಕಿಂತ ಹೆಚ್ಚು ಹಾಗೂ 360 ವಿದ್ಯಾರ್ಥಿಗಳು 90% ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ. ಒಟ್ಟು 86 ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ 100ಕ್ಕೆ 100 ಅಂಕಗಳನ್ನು ಪಡೆದು ವಿಶೇಷ ಸಾಧನೆ ಮಾಡಿದ್ದಾರೆ.

ಗಣಿತದಲ್ಲಿ 31, ಕನ್ನಡದಲ್ಲಿ 21, ಜೀವಶಾಸ್ತ್ರದಲ್ಲಿ 16, ಭೌತಶಾಸ್ತ್ರದಲ್ಲಿ 10, ರಸಾಯನಶಾಸ್ತ್ರದಲ್ಲಿ 4, ವಿದ್ಯುನ್ಮಾನಶಾಸ್ತ್ರದಲ್ಲಿ 2 ಹಾಗೂ ಗಣಕ ವಿಜ್ಞಾನದಲ್ಲಿ 2 ವಿದ್ಯಾರ್ಥಿಗಳು ಪೂರ್ಣ ಅಂಕಗಳನ್ನು ಪಡೆದಿದ್ದಾರೆ.

ವಿದ್ಯಾರ್ಥಿ ಚನ್ನಬಸವ ಕೊರಳ್ಳಿ ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ ಮತ್ತು ಜೀವಶಾಸ್ತ್ರ ವಿಷಯಗಳಲ್ಲಿ ತಲಾ 100 ಅಂಕಗಳನ್ನು ಪಡೆದು ಗಮನಾರ್ಹ ಸಾಧನೆ ಮಾಡಿದ್ದಾರೆ. ಒಟ್ಟಾರೆ ಫಲಿತಾಂಶದಲ್ಲಿಯೂ ಕಾಲೇಜು ಮೇಲುಗೈ ಸಾಧಿಸಿದ್ದು, ಹೆಚ್ಚಿನ ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.



> ಎಸ್.ಬಿ.ಆರ್.ನಲ್ಲಿ ನಿರಂತರವಾಗಿ ಘಟಕ ಪರೀಕ್ಷೆಗಳನ್ನು ನಡೆಸಲಾಗುತ್ತದೆ ಇದರಿಂದ ವಿದ್ಯಾರ್ಥಿಗಳು ಸತತ ಅಭ್ಯಾಸದಲ್ಲಿ ನಿರತರಾಗಿರುತ್ತಾರೆ.ಹೀಗಾಗಿ ಲಿಖಿತ ಪರೀಕ್ಷೆಯಲ್ಲಿ ಅತೀ ಹೆಚ್ಚಿನ ಅಂಕಗಳನ್ನು ಪಡೆಯಲು ಸಾಧ್ಯವಾಗಿದೆ.
> ■ ಮಾತೋಶ್ರೀ ಡಾ.ದಾಕ್ಷಾಯಿಣಿ ಅವ್ವಾಜಿ ಅಧ್ಯಕ್ಷರು, ಶರಣಬಸವೇಶ್ವರ ವಿದ್ಯಾವರ್ಧಕ ಸಂಘ

> ಗುಣಮಟ್ಟದ ಶಿಕ್ಷಣದ ಜೊತೆಗೆ ಸಂಸ್ಕಾರವನ್ನು ಕಲಿಸಲಾಗುತ್ತದೆ. ವರ್ಷದಿಂದ ವರ್ಷಕ್ಕೆ ಗರಿಷ್ಠ ಫಲಿತಾಂಶ ಪಡೆದುಕೊಂಡು ಎಸ್.ಬಿ.ಆರ್ ಇಂದು ಒಂದು ಬ್ರ್ಯಾಂಡ್ ಆಗಿದೆ. ಭವಿಷ್ಯದಲ್ಲಿ ನಡೆಯುವ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳನ್ನು ಪಡೆಯಲಿ.
> ■ ಬಸವರಾಜ ದೇಶಮುಖ, ಕಾರ್ಯದರ್ಶಿ, ಶರಣಬಸವೇಶ್ವರ ಸಂಸ್ಥಾನ

ಪಿಯುಸಿ ಪರೀಕ್ಷೆ ಫಲಿತಾಂಶ

ಬೆಸ್ಟ್ ಕಾಲೇಜಿನ ವಿದ್ಯಾರ್ಥಿಗಳ ಸಾಧನೆ

◆ **ಬಳ್ಳಾರಿ:** ದ್ವಿತೀಯ ಪಿಯುಸಿ 2026ರ ವಾರ್ಷಿಕ ಪರೀಕ್ಷೆಯಲ್ಲಿ ನಗರದ ಪ್ರತಿಷ್ಠಿತ ಬೆಸ್ಟ್ ಕಾಲೇಜಿನ ವಿದ್ಯಾರ್ಥಿಗಳು ಸಾಧನೆ ಮಾಡಿದ್ದು, ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿ ಪಿ.ವೆಂಕಟಸಾಯಿ 600ಕ್ಕೆ 594 ಅಂಕಗಳನ್ನು ಪಡೆಯುವ ಮೂಲಕ ರಾಜ್ಯಕ್ಕೆ 6ನೇ ರ್‍ಯಾಂಕ್ ಹಾಗೂ ಅಖಂಡ ಬಳ್ಳಾರಿ ಜಿಲ್ಲೆಗೆ ಪ್ರಥಮ ರ್‍ಯಾಂಕ್ ಪಡೆಯುವ ಮೂಲಕ ಗಮನ ಸೆಳೆದಿದ್ದಾನೆ.

ಬಳ್ಳಾರಿ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಅತ್ಯುತ್ತಮ ಅಂಕಗಳನ್ನು ಪಡೆಯುವ ಮೂಲಕ ಸಾಧನೆ ಮಾಡಿದ್ದಾರೆ. ಇದರಲ್ಲಿ 188 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 292 ಪ್ರಥಮ ದರ್ಜೆ, ಹಾಗೂ 59 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಪಿ.ವೆಂಕಟ ಸಾಯಿ 594, ರಾಮ ಲೋಹಿತ್ 588, ಕಾಸಾ ಭವಿಷ್ಯ 587, ಜೆ.ಡಿ.ಬಸವರಾಜ್ 585, ದಿನೇಶ್ ರೆಡ್ಡಿ 585, ಅನುಶ್ರೀ 583, ಸೃಜನ್ 577, ದೀಪ ಅಲ್ಲಂ ಪ್ರಭು 576, ಸ್ಫೂರ್ತಿ 575, ಶ್ರಾವಂತಿ 572, ಜ್ಯೋತಿ 571 ಅಂಕಗಳನ್ನು ಪಡೆದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಸಾತ್ವಿಕಾ 591, ಆಕಾಂಕ್ಷ 576, ಅಫಿನ್ 571, ಸಂಜನಾ 571, ಜಯಶ್ರೀ 571, ಅತಿಹೆಚ್ಚು ಅಂಕಗಳನ್ನು ಪಡೆದು ಉತ್ತಮ ಸಾಧನೆ ಮಾಡಿದ್ದಾರೆ. ಗಣಕ ವಿಭಾಗದಲ್ಲಿ 9 ವಿದ್ಯಾರ್ಥಿಗಳು, ಗಣಿತಶಾಸ್ತ್ರದಲ್ಲಿ 12, ಭೌತಶಾಸ್ತ್ರದಲ್ಲಿ 9, ಜೀವಶಾಸ್ತ್ರದಲ್ಲಿ 8, ರಸಾಯನಶಾಸ್ತ್ರದಲ್ಲಿ 9, ಗಣಕ ಶಾಸ್ತ್ರ 3, ಕನ್ನಡದಲ್ಲಿ 4, ಲೆಕ್ಕಶಾಸ್ತ್ರದಲ್ಲಿ 3, ವ್ಯವಹಾರ ಅಧ್ಯಯನ 4, ಸಂಸ್ಕೃತದಲ್ಲಿ 26, ಅರ್ಥಶಾಸ್ತ್ರದಲ್ಲಿ 3 ವಿದ್ಯಾರ್ಥಿಗಳು 100ಕ್ಕೆ 100 ಅಂಕಗಳನ್ನು ಪಡೆದು ಸಾಧನೆ ಮಾಡಿದ್ದಾರೆ ಎಂದು ಕಾಲೇಜು ಪ್ರಾಚಾರ್ಯ ಕೆ.ವೆಂಕಟೇಶ್ವರ ರಾವ್ ಅವರು ತಿಳಿಸಿದ್ದಾರೆ.

ಮಕ್ಕಳ ಸಾಧನೆಗೆ ಬೆಸ್ಟ್ ಸಂಸ್ಥೆಯ ಅಧ್ಯಕ್ಷ ಕೊನಂಕಿ ರಾಮಪ್ಪ, ಉಪಾಧ್ಯಕ್ಷ ಕೊನಂಕಿ ತಿಲಕ್ ಕುಮಾರ್, ಕಾರ್ಯದರ್ಶಿ ಮನ್ನೆ ಶ್ರೀನಿವಾಸಲು, ಕಾಲೇಜು ಉಪ ಪ್ರಾಚಾರ್ಯ ಜಿ.ಶ್ರೀನಿವಾಸ್ ರೆಡ್ಡಿ ಸೇರಿದಂತೆ ಉಪನ್ಯಾಸಕರು, ಸಿಬ್ಬಂದಿಗಳು, ಪಾಲಕರು ಅಭಿನಂದನೆ ಸಲ್ಲಿಸಿದ್ದಾರೆ.



ಪಿಯುಸಿ ಫಲಿತಾಂಶ: ಬಿವಿವಿ ಸಂಘಕ್ಕೆ ಮೂರು ರ್‍ಯಾಂಕ್

◆ **ಬಾಗಲಕೋಟೆ:** ಪಿಯುಸಿ ಫಲಿತಾಂಶದಲ್ಲಿ ರಾಜ್ಯ ಮಟ್ಟದಲ್ಲಿ ಮೂರು ರ್‍ಯಾಂಕ್ ಪಡೆಯುವುದರ ಮೂಲಕ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ.

ಕಲಾ ವಿಜ್ಞಾನ ಮತ್ತು ವಾಣಿಜ್ಯ ಸ್ವತಂತ್ರ ಪದವಿ ಪೂರ್ವ ಮಹಾವಿದ್ಯಾಲಯದ ವಿದ್ಯಾರ್ಥಿಗಳಾದ ಸಾಕ್ಷಿ ಮಠಪತಿ 600 ಅಂಕಕ್ಕೆ 593 ಅಂಕಗಳನ್ನು ಪಡೆದು ರಾಜ್ಯಕ್ಕೆ ಏಳನೇ ಸ್ಥಾನ, ವೀಣಾ ಹಿರೇಮಠ 589 ಅಂಕಗಳಿಂದ ರಾಜ್ಯಕ್ಕೆ 11ನೇ ಸ್ಥಾನ ಮತ್ತು ಬಸವೇಶ್ವರ ವಿಜ್ಞಾನ ಪದವಿ ಪೂರ್ವ ಮಹಾವಿದ್ಯಾಲಯದ ಅನುಷಾ ಅಕ್ಕೇರಿ 589 ಅಂಕಗಳಿಂದ ರಾಜ್ಯಕ್ಕೆ 11ನೇ ಸ್ಥಾನ ಪಡೆದುಕೊಂಡು ಬಿವಿವಿ ಸಂಘಕ್ಕೆ ಕೀರ್ತಿ ತಂದಿದ್ದಾರೆ.



ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಬಿ.ವ್ಹಿ.ವ್ಹಿ ಸಂಘದ ಕಾರ್ಯಾಧ್ಯಕ್ಷರಾದ, ವೀರಣ್ಣ ಸಿ ಚರಂತಿಮಠ, ಗೌರವ ಕಾರ್ಯದರ್ಶಿಗಳಾದ ಮಹೇಶ್ ಎನ್. ಅಥಣಿ, ಕಾಲೇಜು ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷರಾದ ಗುರುಬಸವ ಸೂಳಿಭಾವಿ, ಆಡಳಿತ ಅಧಿಕಾರಿಗಳಾದ ವ್ಹಿ. ಆರ್. ಶಿರೋಳ, ಡಾ.ವ್ಹಿ.ಎಸ್ ಕಟಗಿಹಳ್ಳಿಮಠ, ಪದನಿಮಿತ್ತ ಕಾರ್ಯದರ್ಶಿಗಳಾದ ಡಾ.ಎಸ್ ಎಮ್ ಗಾಂವ್ಕರ್ ಹಾಗೂ ಪ್ರಾಚಾರ್ಯರು ಮತ್ತು ಸಿಬ್ಬಂದಿ ವರ್ಗ ಅಭಿನಂದಿಸಿದ್ದಾರೆ.

ಆದರ್ಶ ಪಿಯು ಕಾಲೇಜು ಉತ್ತಮ ಸಾಧನೆ



◆ **ಹುಬ್ಬಳ್ಳಿ:** ನಗರದ ಆದರ್ಶ ಪಿಯು ವಿಜ್ಞಾನ ಕಾಲೇಜ್ ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ.

21 ವಿದ್ಯಾರ್ಥಿಗಳು ಡಿಸ್ಟಿಕ್ಷನ್‌ನಲ್ಲಿ, 40 ವಿದ್ಯಾರ್ಥಿಗಳು ಫಸ್ಟ್ ಕ್ಲಾಸ್, 4 ವಿದ್ಯಾರ್ಥಿಗಳು ಸೆಕೆಂಡ್ ಕ್ಲಾಸ್, ಶೇ. 98ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಗಣಿತ ಶಾಸ್ತ್ರದಲ್ಲಿ 3 ವಿದಾರ್ಥಿಗಳು ಶೇ.100ರಷ್ಟು ಹಾಗೂ ಕನ್ನಡ 1 ವಿದ್ಯಾರ್ಥಿ ಶೇ.100ರಷ್ಟು ಅಂಕ ಪಡೆದಿದ್ದಾರೆ.

ವಿದ್ಯಾರ್ಥಿನಿ ಜಯಲಕ್ಷ್ಮಿ ಬೆಂಚಿನಮರಡಿ (574 ಅಂಕ), ರಕ್ಷಣ ಶೆಟ್ಟಿ (569) ವಿಸ್ಮಯ ಎಸ್ (563), ಧನುಷ ಕುಲಕರ್ಣಿ(561), ಕೌಶಿಕ್ ಕೊರ್ಲಹಳ್ಳಿ(560), ಚೇತನಾ ಸಂಬಯ್ಯಮಠ(559), ಮಂಜುನಾಥ ಯಲುವಿಗೆ(559), ಮೈತ್ರಿ ಬಿರಾದಾರ(548), ಭುವನ್ ಧರಣಿ(546), ಪ್ರಥಮೇಶ ಮೆಣಸಿನಕಾಯಿ(542), ಯಶವಂತಯ್ಯ ವಡೇಯರ(542), ವಾತ್ಸಲ್ಯ ಬೆಳಗಲಿ(530), ಪದ್ಮಶ್ರೀ ಟಿಕಾರೆ(530), ಅನುಷ್ಕಾ ರಾವ್(528), ಪೃಥ್ವಿಕ್ ಕುರ್ಲಿ(527), ಸೃಷ್ಟಿ ತಿಪ್ಪಣ್ಣವರ(525), ಸಂಜನಾ ಅರ್ಕಸಾಲಿ(523), ಅಭಿಷೇಕ ಮಾನೆ(511), ಐಶ್ವರ್ಯ ಕೊಳಕಿ(511) ಅಂಕಗಳ ಗಳಿಸಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಕಾಲೇಜ್ ಅಧ್ಯಕ್ಷರು, ನಿರ್ದೇಶಕರು, ಪ್ರಾಂಶುಪಾಲರು, ಉಪನ್ಯಾಸಕರು ಅಭಿನಂದನೆ ಸಲ್ಲಿಸಿದ್ದಾರೆ.

ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯದ ಸಾಧನೆ

◆ **ಬಾಗಲಕೋಟೆ:** 2025-26ನೇ ಸಾಲಿನ ಶೈಕ್ಷಣಿಕ ವರ್ಷದ ದ್ವಿತೀಯ ಪಿಯುಸಿಯ ಫಲಿತಾಂಶ ಪ್ರಕಟವಾಗಿದ್ದು, ಮಹಾವಿದ್ಯಾಲಯದ ಕುಮಾರ ಮಂಥನ ಮಹಾವೀರ ಪೋರವಾಲ 580 (ಶೇಕಡಾ 96.67%) ಅಂಕಗಳನ್ನು ಪಡೆದು ಮಹಾವಿದ್ಯಾಲಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ.

ಮಹಾವಿದ್ಯಾಲಯದ ಶೇಕಡಾವಾರು ಫಲಿತಾಂಶ 88.10% ಆಗಿದ್ದು, ಒಟ್ಟು 168 ವಿದ್ಯಾರ್ಥಿಗಳಲ್ಲಿ 148 ವಿದ್ಯಾರ್ಥಿಗಳು ತೇರ್ಗಡೆಗೊಂಡಿದ್ದು, 34 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ, 69 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ, 39 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಮತ್ತು 6 ವಿದ್ಯಾರ್ಥಿಗಳು ತೃತೀಯ ಶ್ರೇಣಿಯಲ್ಲಿ ಪಾಸಾಗಿದ್ದಾರೆ.



ನಮ್ಮ ಮಹಾವಿದ್ಯಾಲಯದಲ್ಲಿ ಗರಿಷ್ಠ ಅಂಕಗಳನ್ನು ಪಡೆದ ವಿದ್ಯಾರ್ಥಿಗಳು, ಮಂಥನ ಮಹಾವೀರ ಪೋರವಾಲ 580/600(96.67%) ಲೆಕ್ಕಶಾಸ್ತ್ರಕ್ಕೆ 100/100, ಅಂಕ ಪಡೆದು ಕಾಲೇಜಿಗೆ ಪ್ರಥಮ ಸ್ಥಾನ, ಶೃತಿ ರಮೇಶ ಕಂಬಾರ 578/600(96.33%) ದ್ವಿತೀಯ, ಕ್ರಿಷಾ ರಾಜೇಶ ಪಟೇಲ್ 576/600(96.00%)ತೃತೀಯ, ಲಕ್ಷ ಶಿವಕುಮಾರ ಅಗರವಾಲ 576/600(96.00%) ತೃತೀಯ, ರಂಜಿತಾ ತೇಜುನಾಥ ದೊಡಮನಿ 574/600(95.67%) ನಾಲ್ಕು, ಶ್ರಾವಣಿ ಎಂ. ಅಂಗಡಿ 571/600(95.17%) 5ನೇ ಸ್ಥಾನ ಪಡೆದಿದ್ದಾರೆ.

ಸಾಧನೆಗೈದ ವಿದ್ಯಾರ್ಥಿಗಳನ್ನು ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಸಿ ಚರಂತಿಮಠ, ಕಾಲೇಜುಗಳ ಆಡಳಿತಮಂಡಳಿಕಾರ್ಯಾಧ್ಯಕ್ಷರಾದ ಗುರುಬಸವ ಎಸ್. ಸೂಳಿಭಾವಿ, ಸಂಘದ ಗೌರವಾನ್ವಿತ ಸದಸ್ಯರು, ಆಡಳಿತಾಧಿಕಾರಿಗಳು ಹಾಗೂ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ.ಜಗನ್ನಾಥ ವ್ಹಿ. ಚವ್ಹಾಣ, ಪ.ಪೂ. ವಿಭಾಗದ ಸಂಯೋಜಕರು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯವರು ಅಭಿನಂದಿಸಿದ್ದಾರೆ.

ಬ.ನೀ.ಕುಲಿಗೋಡ ಕಾಲೇಜಿನಲ್ಲಿ ಬಾಲಕಿಯರದ್ದೇ ಮೇಲುಗೈ

ವಿಜ್ಞಾನ-ವಾಣಿಜ್ಯ ವಿಭಾಗದಲ್ಲಿ 100%ರಷ್ಟು ಫಲಿತಾಂಶ

◆ **ಮುಗಳಖೋಡ:** ಪಟ್ಟಣದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ಬ.ನೀ.ಕುಲಿಗೋಡ ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯದ ದ್ವಿತೀಯ ಪಿಯುಸಿ ಫಲಿತಾಂಶ ಹೊರಬಿದ್ದಿದ್ದು, ಕಾಲೇಜಿನ ವಿಜ್ಞಾನ ಮತ್ತು ವಾಣಿಜ್ಯ ವಿಭಾಗದ ಫಲಿತಾಂಶ ನೂರಕ್ಕೆ ನೂರರಷ್ಟು ಆಗಿದೆ.

ಶಿಕ್ಷಣ ವಿಭಾಗದಲ್ಲಿ ಶೇ.65, ಕಲಾ ವಿಭಾಗದಲ್ಲಿ ಶೇ.81.42 ಆಗಿದ್ದು ಮಹಾವಿದ್ಯಾಲಯದಿಂದ ಒಟ್ಟು 221 ಜನ ವಿದ್ಯಾರ್ಥಿಗಳು ಪರೀಕ್ಷೆ ಬರೆದು 192 ಜನ ವಿದ್ಯಾರ್ಥಿಗಳು ತೇರ್ಗಡೆ ಹೊಂದಿ ಒಟ್ಟು ಕಾಲೇಜಿನ ಫಲಿತಾಂಶ ಶೇ.87.27ರಷ್ಟಾಗಿದೆ.

ವಿಜ್ಞಾನ ವಿಭಾಗದಲ್ಲಿ ಗೌರವ್ವಾ ತುಪ್ಪದ 600ಕ್ಕೆ 570 ಅಂಕ ಪಡೆದು ಪ್ರಥಮ, ರೂಪಾ ಮಾವಿಗೊಂಡ 561 ಅಂಕ ಪಡೆದು ದ್ವಿತೀಯ ಹಾಗೂ ಐಶ್ವರ್ಯ ಕಾಜಿಬೀಳಗಿ 560 ಅಂಕ ಪಡೆದು ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ.



ವಾಣಿಜ್ಯ ವಿಭಾಗದಲ್ಲಿ ವಿದ್ಯಾ ಪಾಟೀಲ 547 ಅಂಕ ಪಡೆದು ಪ್ರಥಮ, ಅಮೃತಾ ಮಠಪತಿ 530 ಅಂಕ ಪಡೆದು ದ್ವಿತೀಯ, ಅಕ್ಷತಾ ಸಪ್ತಸಾಗರ 521 ಅಂಕ ಪಡೆದು ತೃತೀಯ ಹಾಗೂ ಕಲಾ ವಿಭಾಗದಲ್ಲಿ ಭಾಗ್ಯಶ್ರೀ ಬಾಳೋಜಿ 573 ಅಂಕ ಪಡೆದು ಪ್ರಥಮ, ಅರ್ಷಿತಾ ನಾಯಿಕ 547 ಅಂಕ ಪಡೆದು ದ್ವಿತೀಯ, ಪ್ರೀತಿ ಯಡವಣ್ಣವರ 545 ಅಂಕ ಪಡೆದು ತೃತೀಯ ಸ್ಥಾನ ಮತ್ತು ಶಿಕ್ಷಣ ವಿಭಾಗದಲ್ಲಿ ಪವಿತ್ರಾ ಹೂವಿನತೋಟ 567 ಅಂಕ ಪಡೆದು ಪ್ರಥಮ, ಅಮೂಲ್ಯಾ ತಾರದಾಳ 540 ಅಂಕ ಪಡೆದು ದ್ವಿತೀಯ, ಔಧೂತ ಕಾಂಬಳೆ 494 ಅಂಕ ಪಡೆದು ತೃತೀಯ ಸ್ಥಾನ ಪಡೆದು ಕಾಲೇಜನ ಕೀರ್ತಿ ಹೆಚ್ಚಿಸಿದ್ದಾರೆ.

ಒಟ್ಟು 192 ಜನ ವಿದ್ಯಾರ್ಥಿಗಳಲ್ಲಿ 31 ಶ್ರೇಷ್ಠತೆ, 100 ಪ್ರಥಮ ದರ್ಜೆ, 53 ದ್ವಿತೀಯ ದರ್ಜೆ, 8 ವಿದ್ಯಾರ್ಥಿಗಳು ತೃತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಉತ್ತೀರ್ಣರಾದ ಎಲ್ಲ ವಿದ್ಯಾರ್ಥಿಗಳಿಗೆ ಸಂಸ್ಥೆಯ ಅಧ್ಯಕ್ಷರಾದ ಸಂಜಯ್ ಕುಲಿಗೋಡ ಹಾಗೂ ಕೆಪಿಸಿಸಿ ಅಸಂಘಟಿತ ಕಾರ್ಮಿಕ ವರ್ಗದ ರಾಜ್ಯ ಉಪಾಧ್ಯಕ್ಷ ಡಾ.ಸಿ.ಬಿ.ಕುಲಿಗೋಡ, ಸಂಸ್ಥೆಯ ಉಪಾಧ್ಯಕ್ಷ ಪ್ರಕಾಶ್ ಆದಪ್ಪಗೋಳ, ಕಾರ್ಯದರ್ಶಿ ಪರಪ್ಪ ಖೇತಗೌಡರ ಸೇರಿದಂತೆ ಸಂಸ್ಥೆಯ ಆಡಳಿತ ಮಂಡಳಿ, ಪ್ರಾಚಾರ್ಯರು, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿ ವೃಂದದವರು ಶುಭ ಹಾರೈಸಿದ್ದಾರೆ.

ಎಸ್.ಆರ್.ಪಾಟೀಲ ಶಿಕ್ಷಣ ಪ್ರತಿಷ್ಠಾನದ ಸಾಧನೆ

◆ **ಬೀಳಗಿ:** ತಾಲೂಕಿನ ಬಾಡಗಂಡಿಯ ಎಸ್.ಆರ್.ಪಾಟೀಲ ಶಿಕ್ಷಣ ಪ್ರತಿಷ್ಠಾನ (ರಿ) ಬಾಪೂಜಿ ಸ್ವತಂತ್ರ ಪದವಿ ಪೂರ್ವ ವಿದ್ಯಾಲಯ 2025-26ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ವಿಜ್ಞಾನ ವಿಭಾಗದಲ್ಲಿ ಲಕ್ಷ್ಮೀ ಗೋಪಾಲ ಬಿರಾದಾರ 600ಕ್ಕೆ 590 ಅಂಕ ಪಡೆದು ರಾಜ್ಯಕ್ಕೆ 10ನೇ ರ್‍ಯಾಂಕ್, ಲಕ್ಷ್ಮೀ ಲಕ್ಷ್ಮಣ ಬಿರಾದಾರ 600ಕ್ಕೆ 589 ಅಂಕ ಪಡೆದು ರಾಜ್ಯಕ್ಕೆ 11ನೇ ರ್‍ಯಾಂಕ್ ಹಾಗೂ ಪವನಕುಮಾರ ಮುಲ್ಲೂರ 587 ಅಂಕ ಪಡೆದು ರಾಜ್ಯಕ್ಕೆ 13ನೇ ರ್‍ಯಾಂಕ್ ಗಳಿಸಿದ್ದಾರೆ.

163 ವಿದ್ಯಾರ್ಥಿಗಳಲ್ಲಿ ಎಲ್ಲಾ ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದು ಜೊತೆಗೆ 98 ವಿದ್ಯಾರ್ಥಿಗಳು ಡಿಸ್ಟಿಂಕ್ಷನ ಪಡೆದಿದ್ದಾರೆ ಹಾಗೂ ವಾಣಿಜ್ಯ ವಿಭಾಗದಲ್ಲಿ ಸಮ್ಮರೀನ ರಿಯಾಜಹ್ಮದ ಬಾಗವಾನ ಹಾಗೂ ಹರೀಶ ಗಂಗೂರ 600 ಕ್ಕೆ 584 ಅಂಕ ಗಳಿಸಿದ್ದಾರೆ.

14 ವಿದ್ಯಾರ್ಥಿಗಳಲ್ಲಿ 13 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ ಮತ್ತು ಶೇ.100 ಫಲಿತಾಂಶ ತಮ್ಮದಾಗಿಸಿಕೊಂಡಿದ್ದಾರೆ.



ಈ ಎಲ್ಲಾ ವಿದ್ಯಾರ್ಥಿಗಳ ಸಾಧನೆಗೆ ಮೆಚ್ಚಿ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರು ಹಾಗೂ ಮಾಜಿ ಸಚಿವರಾದ ಎಸ್.ಆರ್.ಪಾಟೀಲ ಹಾಗೂ ಸಂಸ್ಥೆಯ ಕಾರ್ಯದರ್ಶಿ ಎಂ.ಎನ್.ಪಾಟೀಲ, ಸಲಹೆಗಾರ ಎಚ್.ಬಿ. ಧರ್ಮಣ್ಣವರ, ಪ್ರಾಚಾರ್ಯ ಶಿವಬೋಧ ಶೆಟ್ಟಿ ಹಾಗೂ ಎಲ್ಲ ಸಿಬ್ಬಂದಿ ವರ್ಗದವರು ಹರ್ಷ ವ್ಯಕ್ತಪಡಿಸಿದ್ದಾರೆ.

ಅರ್ಜುನ ಕಾಲೇಜ್ ವಿದ್ಯಾರ್ಥಿಗಳ ಅಮೋಘ ಸಾಧನೆ

◆ **ಧಾರವಾಡ:** 2025-26 ನೇ ಶೈಕ್ಷಣಿಕ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯ ಮೊದಲ ಆವೃತ್ತಿಯಲ್ಲಿ ಅರ್ಜುನ ಸಂಸ್ಥೆಯ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆಗೈದಿದ್ದಾರೆ.

ಇದರೊಂದಿಗೆ ರಾಜ್ಯಕ್ಕೆ ಕ್ರಮವಾಗಿ ದರ್ಶನ್ ಭಟ್ 600ಕ್ಕೆ 592 ಅಂಕಗಳನ್ನು ಗಳಿಸುವುದರ ಮೂಲಕ 8ನೇ ಸ್ಥಾನ ಮತ್ತು ಪ್ರಣತಿ ಮೆಣಸುಮನೆ 600ಕ್ಕೆ 591 ಅಂಕಗಳನ್ನು ಗಳಿಸುವುದರ ಮೂಲಕ 9ನೇ ಸ್ಥಾನವನ್ನು ಪಡೆದು ಸಂಸ್ಥೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ.

ಇದರ ಜೊತೆಯಾಗಿ ಉಳಿದ ವಿದ್ಯಾರ್ಥಿಗಳಾದ ಅನ್ಮೋಲ್ ಪ್ರಭು (588), ಅನ್ನಪೂರ್ಣ ನಾಯ್ಕ್(585), ಆದರ್ಶ ಆರ್ ಭಟ್ (585), ವಿನೀತ್ ಚೌಹಾನ್ (585), ಅನನ್ಯ ಶಾಸ್ತ್ರಿ (584), ಮಾನ್ಯ ಹೆಗಡೆ (584), ಚಿನ್ಮಯ್ ಶಾನಭಾಗ (584),ಪ್ರೀತಮ್ ಚವಾಣ (584), ಸುಧನ್ವಾ ದೇಶಪಾಂಡೆ (582), ಅನನ್ಯ ಪೂಜಾರ್ (581), ಇಶಾನ ಶಾನಭಾಗ (580), ನಿಧಿ ಹಬ್ಬು (579), ಸಂಜನಾ ಪಂಡಿತ್ (579), ಆದರ್ಶ ಎ ಭಟ್(578), ಸಿಂಚನಾ ಭಟ್ (578), ವಿಘ್ನೇಶ್ವರ (578), ರೇಣುಕಾ ಪಾಟೀಲ(577), ಸಾಧನಾ ದೇಶಪಾಂಡೆ(577), ದರ್ಶನ್ ನಾಯ್ಕ್ (576), ಕೇದಾರ ಜೋಶಿ (576), ಸಮೀಕ್ಷಾ ಹೆಗಡೆ (576), ಅನೀಶ್ ನಾಯ್ಕ್ (575), ಪ್ರೀತಂ ಯಡಹಳ್ಳಿ (574), ಸುಶಾಂತ್ ಎಂ ನಾಯ್ಕ್ (574), ಆಕಾಶ್ ಎಂ ರಾಥೋಡ್ (573), ಸೃಜನ್ ಪಾಟೀಲ್(573), ಸಚಿನ್ ಜೋಶಿ (572) ಸತೀಶ್ ಹೆಗಡೆ (572),ಯಶಸ್ವಿನಿ ನೆಗಲೂರು (572), ಅನುಜ್ಞಾ ಗಾಂವ್ಕರ್ (571), ಸುಚೇತ್ ಭಟ್ (571), ಅಪೂರ್ವ ಹೆಗಡೆ (570). ಹೀಗೆ ಪರೀಕ್ಷೆ ಬರೆದ ಒಟ್ಟಾರೆ 151 ವಿದ್ಯಾರ್ಥಿಗಳಲ್ಲಿ ಶೇಕಡ 95ಕ್ಕಿಂತ ಹೆಚ್ಚು 34 ವಿದ್ಯಾರ್ಥಿಗಳು, ಶೇಕಡ 90ಕ್ಕಿಂತ ಹೆಚ್ಚು 79 ವಿದ್ಯಾರ್ಥಿಗಳು ಮತ್ತು ಡಿಸ್ಟಿಂಕ್ಷನ್ ನಲ್ಲಿ 108 ವಿದ್ಯಾರ್ಥಿಗಳು ತೇರ್ಗಡೆ ಹೊಂದಿ ಸಂಸ್ಥೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ.



ಸಾಧನೆಗೈದ ವಿದ್ಯಾರ್ಥಿಗಳನ್ನು ಸಂಸ್ಥೆಯ ಆಡಳಿತ ಮಂಡಳಿ, ಪ್ರಾಚಾರ್ಯರು ಹಾಗೂ ಸಿಬ್ಬಂದಿ ವರ್ಗದವರು ಹರ್ಷ ವ್ಯಕ್ತಪಡಿಸುವುದರ ಮೂಲಕ ಅಭಿನಂದಿಸಿದ್ದಾರೆ, ಜೊತೆಗೆ ಮುಂದಿನ ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕಾಗಿ ಶುಭ ಹಾರೈಸಿದ್ದಾರೆ.

ಇಷ್ಟೇ ಅಲ್ಲದೆ ನಮ್ಮ ಸಂಸ್ಥೆಯ ವಿದ್ಯಾರ್ಥಿ ಮತ್ತು ಶಿಕ್ಷಕರ ಸತತ ಪ್ರಯತ್ನದಿಂದ ವಿಷಯವಾರು ಸಂಸ್ಕೃತ ವಿಷಯದಲ್ಲಿ 11 ವಿದ್ಯಾರ್ಥಿಗಳು, ಭೌತಶಾಸ್ತ್ರದಲ್ಲಿ 4, ರಸಾಯನಶಾಸ್ತ್ರದಲ್ಲಿ 1, ಗಣಿತಶಾಸ್ತ್ರದಲ್ಲಿ 20, ಗಣಕಶಾಸ್ತ್ರದಲ್ಲಿ 9. ಜೀವಶಾಸ್ತ್ರದಲ್ಲಿ 2 ಮತ್ತು ಸಂಖ್ಯಾಶಾಸ್ತ್ರದಲ್ಲಿ 5 ವಿದ್ಯಾರ್ಥಿಗಳು 100ಕ್ಕೆ 100ಅಂಕಗಳನ್ನು ಗಳಿಸಿದ್ದಾರೆಂದು ತಿಳಿಸಲು ಹರ್ಷವೆನಿಸುತ್ತದೆ.

ಜೊಲ್ಲೆ ಶಿಕ್ಷಣ ಸಂಸ್ಥೆಯ ಬಸವಜ್ಯೋತಿ ಕಾಲೇಜಿನ ಸಾಧನೆ



◆ **ಚಿಕ್ಕೋಡಿ:** ತಾಲೂಕಿನ ಯಕ್ಸಂಬಾ ಪಟ್ಟಣದ ಜೊಲ್ಲೆ ಶಿಕ್ಷಣ ಸಂಸ್ಥೆಯ ಬಸವಜ್ಯೋತಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಪದವಿ ಪೂರ್ವ ಮಹಾವಿದ್ಯಾಲಯಕ್ಕೆ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.82.51 ಫಲಿತಾಂಶ ಬಂದಿದೆ. ಒಟ್ಟು 201 ವಿದ್ಯಾರ್ಥಿಗಳಲ್ಲಿ ವಿಶೇಷ ಶ್ರೇಣಿಯಲ್ಲಿ 15, ಪ್ರಥಮ ಶ್ರೇಣಿಯಲ್ಲಿ 113, ದ್ವಿತೀಯ ಶ್ರೇಣಿಯಲ್ಲಿ 62 ಮತ್ತು ತೃತೀಯ ಶ್ರೇಣಿಯಲ್ಲಿ 23 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಅಕ್ಷತಾ ಯಾದಗೂಡೆ ಶೇ. 91.8, ಅಮೃತಾ ಮಾಳಿ ಶೇ.90.5, ವಾಣಿಜ್ಯ ವಿಭಾಗದಲ್ಲಿ ಪ್ರಾಜಕ್ತಾ ಮಗದುಮ್ಮ ಶೇ.96, ತನುಶ್ರೀ ಪೂಜಾರಿ ಶೇ. 90.33, ಸುಕೇತ ನಾಯಿಕ ಶೇ.89.66, ಕಲಾ ವಿಭಾಗದಲ್ಲಿ ಪ್ರಗತಿ ಪಾಂಡವ ಶೇ. 92, ಆರತಿ ಕಾಂಬಳೆ ಶೇ.88.3, ಅದಿತಿ ಕಾಂಬಳೆ ಶೇ.87 ಅಂಕಗಳನ್ನು ಪಡೆದುಕೊಂಡಿದ್ದಾರೆ.



ನಾರಗೊಂಡ ಕಾಲೇಜಿನ ಸಾಧನೆ

◆ **ಹಾರೂಗೇರಿ:** ಸಮೀಪವಿರುವ ಹಾರೂಗೇರಿ ಕ್ರಾಸ್‌ನ ಎಸ್.ಎಂ. ನಾರಗೊಂಡ ಸಿಬಿಎಸ್‌ಸಿ ಅಂತಾರಾಷ್ಟ್ರೀಯ ಆಂಗ್ಲ ಮಾಧ್ಯಮ ಶಾಲೆ ಹಾಗೂ ಎಸ್.ಎಂ.ನಾರಗೊಂಡ ವಿಜ್ಞಾನ ಪದವಿ ಪೂರ್ವ ವಿದ್ಯಾಲಯದ ಪಿಯುಸಿ ಫಲಿತಾಂಶವು ಅತ್ಯಂತ ಹೆಮ್ಮೆ ತರುವಂತಾಗಿದ್ದು ವಿದ್ಯಾರ್ಥಿಗಳು ಹೆಚ್ಚಿನ ಗುಣಮಟ್ಟದ ಅಂಕಗಳನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಸಂಸ್ಥೆಯ ಕಾರ್ಯಾಧ್ಯಕ್ಷ ವಿವೇಕ್ ನಾರಗೊಂಡ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಜ್ಞಾನ ವಿಭಾಗದಲ್ಲಿ ರಾಮಗೌಡ ಬಂಡಿಗಣಿ 98.66, ಸುರಜ ವಾಗ್ಮೋಡೆ 98.33, ದರ್ಶನ್ ತೇರದಾಳ 98 , ಕಿರಣ್ ಮೇತ್ರಿ 96,ರಿಷಿಕಾ ಶಿಂಗೆ 95.66 ಪ್ರತಿಶತದೊಂದಿಗೆ ಸ್ಥಾನಗಳಿಸಿ ಕಾಲೇಜಿನ ಕೀರ್ತಿ ಹೆಚ್ಚಿಸಿದ್ದಾರಲ್ಲದೆ, ಒಟ್ಟು 100ಕ್ಕೆ 100 ರಷ್ಟು ಫಲಿತಾಂಶ ಬಂದಿದ್ದು, ಗಣಿತ ವಿಷಯದಲ್ಲಿ ಇಬ್ಬರು ವಿದ್ಯಾರ್ಥಿಗಳು 100ಕ್ಕೆ100 ಅಂಕ ಗಳಿಸಿದ್ದಾರೆ. ಇವರ ಈ ಸಾಧನೆಗೆ ಸಂಸ್ಥಾಪಕ ಅಧ್ಯಕ್ಷ ಶ್ರೀಶೈಲ ಎಂ. ನಾರಗೊಂಡ, ಕಾರ್ಯಾಧ್ಯಕ್ಷ ವಿವೇಕ್ ನಾರಗೊಂಡ, ಪ್ರಾಚಾರ್ಯ ಪ್ರಶಾಂತ ಎಲ್. ಎಚ್. ಉಪನ್ಯಾಸಕರಾದ ಶ್ರೀಕಾಂತ್ ಮಡ್ಯಾಗೋಳ್, ಶಿವಕುಮಾರ ಕೃಷ್ಣ ಅಭಿಜಿತ್, ಮಹಾಂತೇಶ ಮುಗಳಖೋಡ ಮುಂತಾದವರು ಅಭಿನಂದನೆಯನ್ನು ಸಲ್ಲಿಸಿದ್ದಾರೆ.





ಕಿರುಸುದ್ದಿ

ಡಿಡಿಪಿಯುಗೆ ನೋಟಿಸ್

◆ **ಗದಗ:** ಗುರುವಾರ ಪ್ರಕಟಗೊಂಡ ಪಿಯುಸಿ ಫಲಿತಾಂಶ ಕುರಿತು ಮಾಧ್ಯಮಗಳಿಗೆ ತಪ್ಪು ಮಾಹಿತಿ ಹಾಗೂ ಜಿಲ್ಲೆಯಲ್ಲಿ ರ್‍ಯಾಂಕ್ ಗಳಿಸಿದ ವಿದ್ಯಾರ್ಥಿಗಳ ಕುರಿತು ಸಮರ್ಪಕ ಮಾಹಿತಿ ನೀಡದ ಡಿಡಿಪಿಯು ಎಸ್. ಬಿ. ಮಸನಾಯಕ ಅವರಿಗೆ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ಅವರು ಶುಕ್ರವಾರ ಕಾರಣ ಕೇಳಿ ನೋಟಿಸ್ ನೀಡಿದ್ದಾರೆ.

2025-26ನೇ ಸಾಲಿನ ಪಿಯುಸಿ ಫಲಿತಾಂಶ ಗುರುವಾರ ಮಧ್ಯಾಹ್ನ 3.30 ಕ್ಕೆ ಪ್ರಕಟಗೊಂಡಿತ್ತು. ಆದರೆ ಫಲಿತಾಂಶ ವಿವರ, ಜಿಲ್ಲೆಯಲ್ಲಿ ಹಾಜರಾದ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಸಂಖ್ಯೆ ಕುರಿತು ಸಂಜೆ 8 ಗಂಟೆಯಾದರೂ ಡಿಡಿಪಿಯು ಅವರಿಗೆ ಮಾಹಿತಿ ಇರಲಿಲ್ಲ. ಮಾಧ್ಯಮದವರು ಮಾಹಿತಿ ಕೇಳಿದ ಸಂದರ್ಭದಲ್ಲಿ ನಿರ್ಲಕ್ಷ್ಯ ತೋರಿದ್ದರು. ಜತೆಗೆ ಜಿಲ್ಲೆಯೂ ಫಲಿತಾಂಶದಲ್ಲಿ 30ನೇ ಸ್ಥಾನಕ್ಕೆ ಕುಸಿದಿದ್ದರೂ ಸಹ ಗದಗ ಜಿಲ್ಲೆ 25ನೇ ಸ್ಥಾನ ಪಡೆದಿದೆ ಎಂದು ತಪ್ಪು ಮಾಹಿತಿ ನೀಡಿದ್ದರು. ಗುರುವಾರ ಫಲಿತಾಂಶದ ದಿನವೂ ಸಹ ಡಿಡಿಪಿಯು ಕಚೇರಿಗೆ ತೆರಳಿ ಫಲಿತಾಂಶದ ದಾಖಲೆ ಕೇಳಿದ್ದ ವಾರ್ತಾ ಮತ್ತು ಸಾರ್ವಜನಿಕ ಇಲಾಖೆ ಸಿಬ್ಬಂದಿಗೂ ಸಹ ಫಲಿತಾಂಶ ಮಾಹಿತಿ ನೀಡಿರಲಿಲ್ಲ.

ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ಅವರು ಈ ಕುರಿತು ಮಾಹಿತಿ ನೀಡಿ, ದ್ವಿತೀಯ ಪಿಯು ಫಲಿತಾಂಶ ಕುರಿತು ಡಿಡಿಪಿಯು ಸಮಗ್ರ ಮಾಹಿತಿ ನೀಡಬೇಕು. ಈ ಕುರಿತು ಅವರೇ ಅಂತಿಮ. ಅವರು ತಪ್ಪು ಮಾಹಿ ನೀಡಿದರೆ ತಪ್ಪು ಸಂದೇಶ ರವಾನಿಸಿದಂತೆ ಆಗುತ್ತದೆ. ಕರ್ತವ್ಯ ಲೋಪ ಎಸಗಿದ ಡಿಡಿಪಿಯು ಮಸನಾಯಕ ಅವರಿಗೆ ಕಾರಣ ಕೇಳಿ ನೋಟಿಸ್ ನೀಡಿದ್ದೇನೆ ಎಂದಿದ್ದಾರೆ.

ಎಫ್‌ಐಡಿ ಸಂಖ್ಯೆ ಕಡ್ಡಾಯ

◆ **ಗದಗ:** ರೈತರು ರಸಗೊಬ್ಬರ ಖರೀದಿಸಲು ಇನ್ನು ಮುಂದೆ ಎಫ್‌ಐಡಿ ಸಂಖ್ಯೆಗಳನ್ನು ಕಡ್ಡಾಯವಾಗಿ ಹೊಂದಿರಬೇಕು. ಅಲ್ಲದೇ ತಮ್ಮ ಎಲ್ಲಾ ಜಮೀನುಗಳನ್ನು ಸಹ ಎಫ್‌ಐಡಿಗೆ ಕಡ್ಡಾಯವಾಗಿ ಜೋಡಿಸಿರಬೇಕು ಎಂದು ಜಂಟಿ ಕೃಷಿ ನಿರ್ದೇಶಕಿ ಚೇತನಾ ಪಾಟೀಲ ಹೇಳಿದರು. ನಗರದ ಕೃಷಿ ಸಂಶೋಧನಾ ಕೇಂದ್ರದಲ್ಲಿ ಮುಂಗಾರು ಪೂರ್ವ ಕೃಷಿ ಪರಿಕರ ಮಾರಾಟಗಾರರ ಸಭೆ ಹಾಗೂ ಯೂರಿಯಾ ವಿತರಣಾ ತಂತ್ರಾಂಶದ ಕುರಿತು ಜರುಗಿದ ಜಾಗೃತಿ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ರೈತನ ಹಿಡುವಳಿ ಹಾಗೂ ಬೆಳೆ ಆಧಾರದ ಮೇಲೆ ರಸಗೊಬ್ಬರವನ್ನು ಕೆ-ಕಿಸಾನ್ ತಂತ್ರಜ್ಞಾನ ಹಾಗೂ ಪಿಒಎಸ್ ಮಷಿನ್ ಮೂಲಕವೇ ವಿತರಣೆ ಮಾಡಲಾಗುವುದು. ಇದರಿಂದ ಕಾಳಸಂತೆಯಲ್ಲಿ ರಸಗೊಬ್ಬರ ಮಾರಾಟಕ್ಕೆ ಕಡಿವಾಣ ಹಾಕಲು ಹಾಗೂ ರೈತರು ಅನವಶ್ಯಕವಾಗಿ ಹೆಚ್ಚುವರಿ ರಸಗೊಬ್ಬರ ಬಳಸದಂತೆ ನಿಯಂತ್ರಿಸಿ ಮಣ್ಣಿನ ಫಲವತ್ತತೆ ಕಾಯ್ದುಕೊಳ್ಳಲು ಸಹಾಯವಾಗುತ್ತದೆ ಎಂದರು. ರಸಗೊಬ್ಬರ ವ್ಯಾಪಾರಸ್ಥರ ಸಂಘದ ಕಾರ್ಯದರ್ಶಿ ಸಂಜಯ್ ರೊದ್ದಂ, ಉಪ ಕೃಷಿ ನಿರ್ದೇಶಕಿ ಸ್ಫೂರ್ತಿ ಜಿ.ಎಸ್., ಜಿಲ್ಲಾ ವಿಚಕ್ಷಣಾ ಅಧಿಕಾರಿ ಮೇಘನಾ ನಾಡಗೇರ, ಕೃಷಿ ಸಂಶೋಧನಾ ಕೇಂದ್ರದ ಮುಖ್ಯಸ್ಥೆ ಕಲಾವತಿ ಹಾಗೂ ಕೃಷಿ ಪರಿಕರ ಮಾರಾಟಗಾರರ ಸಂಘದ ಉಪಾಧ್ಯಕ್ಷ ಪ್ರಕಾಶ ಕಗದಾಳ ಭಾಗವಹಿಸಿದ್ದರು.

ದತ್ತಿ ಉಪನ್ಯಾಸ ಇಂದು

◆ **ಗದಗ:** ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಏ.11 ರಂದು ಸಂಜೆ 6.30ಕ್ಕೆ ತೋಂಟದ ಸಿದ್ಧಲಿಂಗ ಶ್ರೀಗಳ ಕನ್ನಡ ಭವನ, ಕಸಾಪ ಕಾರ್ಯಾಲಯದಲ್ಲಿ ಕಾಯಕ ಜೀವಿ ಸದಾನಂದ ಪಿಳ್ಳಿ ಸ್ಮರಣಾರ್ಥ ದತ್ತಿ ಉಪನ್ಯಾಸ ಹಾಗೂ ಸನ್ಮಾನ ಕಾರ್ಯಕ್ರಮ ಏರ್ಪಡಿಸಲಾಗಿದೆ. ವಿಶ್ವಗುರು ಬಸವಣ್ಣ ಕರ್ನಾಟಕದ ಸಾಂಸ್ಕೃತಿಕ ನಾಯಕ ವಿಷಯವಾಗಿ ಜಿಲ್ಲಾ ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಸುಧಾ ಹುಚ್ಚಣ್ಣವರ ಮಾತನಾಡುವರು. ಅಧ್ಯಕ್ಷತೆ ಜಿಲ್ಲಾ ಕಸಾಪ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ವಹಿಸುವರು. ಪ್ರಶಸ್ತಿ ಪುರಸ್ಕೃತ ಪತ್ರಕರ್ತ ಶಿವಾನಂದ ಹಿರೇಮಠ ಅವರನ್ನು ಸನ್ಮಾನಿಸಲಾಗುವದು. ಬಸವರಾಜ ಪಿಳ್ಳಿ ಭಾಗವಹಿಸಿವರು. ದತ್ತಿದಾನಿ ಸುರೇಖಾ ಪಿಳ್ಳಿ ಉಪಸ್ಥಿತರಿರುವರು ಎಂದು ಕಿಶೋರಬಾಬು ನಾಗರಕಟ್ಟಿ, ದತ್ತಪ್ರಸನ್ನ ಪಾಟೀಲ, ಡಿ.ಎಸ್. ಬಾಪುರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾರುಕಟ್ಟೆ ಧಾರಣೆ — ಗದಗ (ಕ್ವಿಂಟಲ್)

ಗೆಜ್ಜೆ ಶೇಂಗಾ	5009-6610
ಅಜವಾನ	7669-9069
ಅಲಸಂದಿ	3877-6228
ಕಡಲೆ	1459-5521
ಹವೀಜ	7069-7069
ಹೆಸರು	1302-6689
ಜೋಳ	1933-4165
ಗೋವಿನಜೋಳ	1104-1785
ಹುರಳಿ	4482-4482
ಸಾಸವಿ	4202-4202
ಕುಸಬಿ	4519-5829
ಎಳ್ಳು	4428-4428
ಮಡಕಿ	10505-10505
ಸೂರ್ಯಕಾಂತಿ	4882-5422
ತೊಗರಿ	3509-5989
ಹತ್ತಿ ಕಾಳು	9497-9497
ಗೋಧಿ	1411-5521



ನರಗುಂದ: ಕೊಣ್ಣೂರ ಗ್ರಾಮದ ಕೊಳಚೆ ನೀರೆಲ್ಲವೂ ಎಸ್ಸಿ ಕಾಲೋನಿಗೆ ಬಂದು ಸೇರಿ ಗಬ್ಬೆದ್ದು ನಾರುತ್ತಿದ್ದು, ಎಸ್ಸಿ ಕಾಲೋನಿಯಲ್ಲಿ ನಿಲ್ಲುವ ಚರಂಡಿ ಗಲೀಜು ನೀರು ಹರಿದು ಹೋಗುವಂತೆ ತಾತ್ಕಾಲಿಕವಾಗಿ ಮಾರ್ಗವನ್ನು ಮಾಡಬೇಕು. ಶಾಶ್ವತ ಚರಂಡಿಯನ್ನು ನಿರ್ಮಿಸಬೇಕೆಂದು ಡಿಎಸ್‌ಎಸ್ (ಚಂದ್ರಕಾಂತ ಕಾದ್ರೋಳ್ಳಿ ಬಣ) ತಾಲೂಕು ಅಧ್ಯಕ್ಷ ಕಿರಣ ಜೋಗಣ್ಣವರ ಆಗ್ರಹಿಸಿದ್ದಾರೆ.

ಎನ್‌ಎಸ್‌ಎಸ್‌ನಿಂದ ಉತ್ತಮ ನಾಗರಿಕರಾಗಲು ಸಾಧ್ಯ

◆ **ನರಗುಂದ:** ಶಿಕ್ಷಣದ ಜೊತೆಗೆ ಸೇವೆ ಮಾಡುತ್ತಿರುವ ಸ್ವಯಂಸೇವಕರು ಮುಂದೆ ಸಮಾಜದಲ್ಲಿ ಉತ್ತಮ ನಾಗರಿಕರಾಗಲು ಸಾಧ್ಯ ಎಂದು ಎಸ್ ವೈ.ಎಸ್. ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಮಹೇಶಗೌಡ ಪಾಟೀಲ ಹೇಳಿದರು.

ಶುಕ್ರವಾರ ಶ್ರೀ ಯಡೆಯೂರ ಸಿದ್ದಲಿಂಗೇಶ್ವರ ಬಿಇಡಿ ಕಾಲೇಜಿನ 2026-27ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯ ಚಟುವಟಿಕೆಗಳ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಗದಗ ಜಿಲ್ಲೆಯ ಎಎಸ್‌ಎಸ್ ವಾಣಿಜ್ಯ ಮಹಾವಿದ್ಯಾಲಯದ ಬಾಹುಬಲಿ ಪಿ. ಜೈನರ್ ಮಾತನಾಡಿ, ಎನ್‌ಎಸ್‌ಎಸ್ ಎನ್ನುವುದು ನಾನು ಸೇವೆಗೆ ಸಿದ್ದ ಎನ್ನುವುದನ್ನು ಸೂಚಿಸುತ್ತದೆ. ಕಡೆಂಗೋಡ್ಲು ಶಂಕರಭಟ್ಟ ಅವರು ಬರೆದ ಸಾಲುಗಳಾದ ಅನುಭವವು ಸವಿಯಲ್ಲ, ಅದರ ನೆನಪೇ ಸವಿಯು ಎನ್ನುವುದನ್ನು ಉಲ್ಲೇಖಿಸಿ ರಾಷ್ಟ್ರೀಯ ಸೇವಾ ಯೋಜನೆಯ ಅವಕಾಶಗಳನ್ನು ಸದಾ ಬಳಸಿಕೊಳ್ಳಬೇಕು. ಇದರಿಂದ ನಮ್ಮ ಜೀವನದಲ್ಲಿ ಹೆಚ್ಚು ಅವಕಾಶಗಳನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ ಎಂದರು. ಧಾರವಾಡ ಜಿಲ್ಲೆಯ ಎನ್‌ಎಸ್‌ಎಸ್ ನೋಡಲ್ ಅಧಿಕಾರಿ ಜಯಾನಂದ ಹಟ್ಟಿ, ಪ್ರಾಂಶುಪಾಲ ಆರ್.ಬಿ. ಪಾಟೀಲ ಮಾತನಾಡಿದರು. ಎಂ.ಪಿ. ಕ್ಯಾತನಗೌಡ್ರ, ಎಸ್.ಎ. ಬಾರಕೇರ, ಎಂ.ಇ .ವಿಶ್ವಕರ್ಮ,ನಿರಂಜನಗೌಡ ಮತ್ತು ಸುಮಾ ಗುಗ್ಗರಿ ಸ್ವಾಗತಿಸಿದರು. ಭರತ್ ಬುಧನ್ನವರ ವಂದಿಸಿದರು. ಪ್ರವೀಣ ಚಲವಾದಿ ಮತ್ತು ನೀಲಾಂಬಿಕಾ ಹೂಗಾರ ನಿರೂಪಿಸಿದರು. ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹಾಗೂ ಪ್ರಥಮ ಮತ್ತು ದ್ವಿತೀಯ ವರ್ಷದ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು. ಲಕ್ಷ್ಮೀ ತಳವಾರ ಹಾಗೂ ಸಂಗಡಿಗರು ಪ್ರಾರ್ಥಿಸಿದರು.



ನರಗುಂದ: ಶ್ರೀ ಯಡೆಯೂರ ಸಿದ್ದಲಿಂಗೇಶ್ವರ ಬಿಇಡಿ ಕಾಲೇಜಿನ 2026-27ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯ ಚಟುವಟಿಕೆಗಳ ಕಾರ್ಯಕ್ರಮವನ್ನು ಎಸ್ ವೈ.ಎಸ್. ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಮಹೇಶಗೌಡ ಪಾಟೀಲ ಅವರು ಉದ್ಘಾಟಿಸಿದರು.

ಸಾಲು ಮರದ ತಿಮ್ಮಕ್ಕ ವೃಕ್ಷೋದ್ಯಾನವನ ಲೋಕಾರ್ಪಣೆ | ಎಚ್‌ಕೆಪಾ ಅಭಿಮತ

ಕೆರೆಯ ಅಭಿವೃದ್ಧಿಗೆ ಶಾಸಕರ ಪ್ರಯತ್ನ

◆ **ರೋಣ:** ತಾಲೂಕಿನ ಜಿಗಳೂರ ಕೆರೆಯ ಅಭಿವೃದ್ಧಿಗೆ ಶಾಸಕ ಜಿ.ಎಸ್.ಪಾಟೀಲ ಅವರು ಮತ್ತೆ 1 ಕೋಟಿ ರೂ.ಗಳ ಅನುದಾನವನ್ನು ತರುವ ಜಿಗಳೂರ ಕೆರೆಯನ್ನು ಸುಂದರ ಪ್ರವಾಸಿ ತಾಣವನ್ನಾಗಿ ರೂಪಿಸಬೇಕು ಎಂದು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದಾರೆ ಎಂದು ಸಚಿವ ಡಾ. ಎಚ್.ಕೆ.ಪಾಟೀಲ ಹೇಳಿದರು.

ಅವರು ಶುಕ್ರವಾರ ತಾಲೂಕಿನ ಜಿಗಳೂರ ಬಳಿಯಿರುವ ಕೆರೆ ತಟದಲ್ಲಿ ನಿರ್ಮಿಸಲಾದ ಸಾಲು ಮರದ ತಿಮ್ಮಕ್ಕ ವೃಕ್ಷೋದ್ಯಾನವನ ಲೋಕಾರ್ಪಣೆಗೊಳಿಸುವ ಮೂಲಕ ಮಾತನಾಡಿದರು. ಗದಗ ಜಿಲ್ಲೆ ಅನೇಕ ಪ್ರವಾಸಿ ತಾಣಗಳನ್ನು ಹೊಂದಿದ್ದರೂ ಸಹ ಅವುಗಳನ್ನು ಗುರುತಿಸುವಲ್ಲಿ ಸ್ವಲ್ಪ ಮಟ್ಟಿಗೆ ನಾವುಗಳು ಹಿಂದೆ ಬಿದ್ದದ್ದು ಕಾರಣವಾಗಿರಬಹುದು. ಆದರೆ ನಾನು ಪ್ರವಾಸೋದ್ಯಮ ಸಚಿವನಾದ ಮೇಲೆ ಕಪ್ಪತ್ತಗುಡ್ಡ,ಲಕ್ಕುಂಡಿ, ಗಜೇಂದ್ರಗಡ, ಸೂಡಿ ಹೀಗೆ ಅನೇಕ ಗ್ರಾಮಗಳಲ್ಲಿರುವ ಪ್ರಾಚೀನ ದೇವಸ್ಥಾನಗಳ ರಕ್ಷಣೆ, ಅವುಗಳನ್ನು ವನ ನಿರ್ಮಿಸುವ ಕಾರ್ಯಕ್ಕೆ ಮುಂದಾಗಿದ್ದು, ಲಕ್ಕುಂಡಿಯನ್ನು ವಿಶ್ವ ಪಾರಂಪರಿಕ ತಾಣವಾಗಿ ಮಾಡಲಾಗಿದೆ ಎಂದರು.

ಶಾಸಕ ಜಿ.ಎಸ್.ಪಾಟೀಲ ಮಾತನಾಡಿ, ರೋಣದಲ್ಲಿ ಕುಟುಂಬ ಸಮೇತ ವೀಕ್ಷಿಸುವ ಸುಂದರ ತಾಣಗಳಿಲ್ಲ ಎಂಬ ಕೊರಗು ಇನ್ಮುಂದೆ ಇರುವುದಿಲ್ಲ, ಈಗಾಗಲೇ ಉದ್ಯಾನವನ ಲೋಕಾರ್ಪಣೆಗೊಂಡಿದ್ದು, ಕೆರೆ ಅಭಿವೃದ್ಧಿಗೆ ಮತ್ತೆ 1 ಕೋಟಿ ರೂ ಬಿಡುಗಡೆಗೊಂಡಿದೆ. ಉದ್ಯಾನವನದಲ್ಲಿ ಬಸವಣ್ಣ ಹಾಗೂ ಬುದ್ಧನ ಪ್ರತಿಮೆಯನ್ನು ನಿರ್ಮಿಸಲಾಗಿದೆ. ಇನ್ನು ಹಲವು ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೂಡಾ ಹಮ್ಮಿಕೊಂಡಿದ್ದು, ಕೆರೆಯ ಮತ್ತಷ್ಟು ಜಾಗದಲ್ಲಿ ಬೋಟಿಂಗ್ ವ್ಯವಸ್ಥೆ ಮಾಡಲು ಸೂಚನೆ ನೀಡಿದ್ದು ಶೀಘ್ರ ಕಾಮಗಾರಿ ಆರಂಭವಾಗಲಿದೆ ಎಂದರು.

> ಶಾಸಕ ಜಿ.ಎಸ್.ಪಾಟೀಲ ಅವರು ಸಚಿವ ಸ್ಥಾನಕ್ಕೆ ಅತ್ಯಂತ ಅರ್ಹ ವ್ಯಕ್ತಿಯಾಗಿದ್ದಾರೆ ಎನ್ನುವುದರಲ್ಲಿ ಸಂಶಯವಿಲ್ಲ. ಅವರ ಚಿಂತನೆಗಳು, ಸಂಘಟನೆ,ಅಭಿವೃದ್ಧಿ ಮತ್ತು ಬಡವರ ಪರವಾದ ಕಾಳಜಿಯುಳ್ಳ ಧೀಮಂತ ನಾಯಕ. ಹೀಗಾಗಿ ಅವರು ಸಚಿವ ಸ್ಥಾನಕ್ಕೆ ಯೋಗ್ಯ ವ್ಯಕ್ತಿ.
> ■ **ಡಾ. ಎಚ್.ಕೆ.ಪಾಟೀಲ, ಸಚಿವ**

ತಾಲೂಕಿನಲ್ಲಿರುವ ಕಾರ್ಮಿಕರ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು ಎಂಬ ಉದ್ದೇಶದಿಂದ 38 ಕೋಟಿ ವೆಚ್ಚದ ವಸತಿ ನಿಲಯದ ಕಟ್ಟಡಕ್ಕೆ ಭೂಮಿಪೂಜೆಯನ್ನು ನೆರವೇರಿಸಲಾಗಿದೆ. 6 ಎಕರೆ ವಿಶಾಲವಾದ ಜಾಗದಲ್ಲಿ ಸುಂದರ ಕಟ್ಟಡ ನಿರ್ಮಾಣವಾಗಲಿದ್ದು, ಕಾರ್ಮಿಕರು ತಮ್ಮ ಮಕ್ಕಳ ಶಿಕ್ಷಣಕ್ಕೆ ಪ್ರಮುಖ ಆದ್ಯತೆಯನ್ನು ನಿಡಬೇಕು,ಕಾರ್ಮಿಕರ ಹಿತಕ್ಕಾಗಿ ಸರಕಾರ ಅನೇಕ ಮಹತ್ತರವಾದ ಯೋಜನೆಗಳನ್ನು ಜಾರಿಗೊಳಿಸಿದೆ ಎಂದರು.

ಮಾಜಿ ಸಚಿವ ಬಿ.ಆರ್.ಯಾವಗಲ್ಲ, ಮಾಜಿ ಶಾಸಕರಾದ ರಾಮಣ್ಣ ಲಮಾಣಿ,ರಾಮಕೃಷ್ಣ ದೊಡ್ಡಮನಿ,ಜಿ.ಎಸ್.ಗಡ್ಡದೇವರಮಠ,ಟಿ.ಈಶ್ವರ, ಐ.ಎಸ್.ಪಾಟೀಲ,ಸಂಗನಗೌಡ ಪಾಟೀಲ, ವೀರಣ್ಣ ಶೆಟ್ಟರ, ವಿ.ಬಿ.ಸೋಮನಕಟ್ಟಿಮಠ, ಯೂಸುಪ್ ಇಟಗಿ, ಬಾವಾಸಾಬ ಬೆಟಗೇರಿ, ಅಂದಪ್ಪ ಬಿಚ್ಚೂರ ಸೇರಿದಂತೆ ಅರಣ್ಯ ಮತ್ತು ಕಾರ್ಮಿಕ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.



ವಿನಾಕಾರಣ ಅಲೆದಾಡಿಸದಿರಿ

ಕಾರ್ಮಿಕರ ಮಕ್ಕಳ ಮದುವೆಗೆ ಧನ ಸಾಹಾಯ ಸೇರಿದಂತೆ ಪಿಂಚಣಿ, ಅಫಘಾತದಲ್ಲಿ ಗಾಯಗೊಂಡರೆ ಅಥವಾ ಮರಣ ಹೊಂದಿದರೆ ಪರಿಹಾರ, ಮಕ್ಕಳ ಶಿಕ್ಷಣಕ್ಕೆ ವಿಶೇಷ ಆದ್ಯತೆಯನ್ನು ನಿಡಲಾಗಿದೆ. ಕಾರ್ಮಿಕರು ಸರ್ಕಾರದ ಯೋಜನೆಗಳ ಲಾಭವನ್ನು ಪಡೆದುಕೊಳ್ಳಬೇಕು. ಮುಖ್ಯವಾಗಿ ಇಲಾಖೆಯ ಅಧಿಕಾರಿಗಳು ಕಾರ್ಮಿಕರಿಗೆ ಸಿಗಬೇಕಾದ ಯೋಜನೆಗಳ ಕುರಿತು ಮಾಹಿತಿ ನಿಡಬೇಕು ಮತ್ತು ವಿನಾಕಾರಣ ಕಾರ್ಮಿಕರನ್ನು ಕಚೇರಿಗಳಿಗೆ ಅಲೇದಾಡಿಸಬಾರದು ಎಂದು ಶಾಸಕ ಜಿ.ಎಸ್.ಪಾಟೀಲ ಹೇಳಿದರು.

- ಜಿಗಳೂರ ಕೆರೆ ತಟದಲ್ಲಿ ನಿರ್ಮಾಣವಾದ ವೃಕ್ಷೋದ್ಯಾನವನದಲ್ಲಿ ಅನೇಕ ಕಾಮಗಾರಿ ಮುಗಿದಿವೆ
- ಅರಣ್ಯ ಇಲಾಖೆಯವರು ಪ್ರೇಕ್ಷಣೀಯ ಸ್ಥಳವನ್ನಾಗಿ ಮಾಡುವಲ್ಲಿ ಪರಿಶ್ರಮ ಪಟ್ಟಿದ್ದು ಸಾರ್ವಜನಿಕರು ಸದ್ಬಳಕೆ ಮಾಡಿಕೊಳ್ಳಬೇಕು
- ಮಕ್ಕಳಿಗೆ ಆಟ ಆಡುವ ಪರಿಕರಗಳನ್ನು ಸಹ ಜೊಡಿಸಲಾಗಿದ್ದು,ಶಾಲಾ ವಿದ್ಯಾರ್ಥಿಗಳಿಗೆ ಇದೊಂದು ಪಿಕನಿಕ್ ಸ್ಪಾಟಾಗಿ ಗುರುತಿಸಿಕೊಳ್ಳಲಿದೆ ಎಂದು ಅಭಿಮತ ವ್ಯಕ್ತಪಡಿಸಿದ ಸಚಿವ ಡಾ. ಎಚ್.ಕೆ.ಪಾಟೀಲ

ಹಾಳಾಗುತ್ತಿರುವ ಮಳೆ ಮಾಪನಾ ಕೇಂದ್ರ

◆ **ನರಗುಂದ:** ನಿರ್ವಹಣೆ ಮಾಡುವಲ್ಲಿ ನಿರ್ಲಕ್ಷತನ ತೋರಿದ್ದರಿಂದ ಮಳೆ ಮಾಪನ ಕೇಂದ್ರ ಮುಳ್ಳು ಕಂಟೆಗಳಿಂದ ತುಂಬಿಕೊಂಡು ಪಾಳುಬಿದ್ದ ಆವರಣವಾಗಿದೆ. ಅಲ್ಲದೇ ಅದರ ನಾಮಫಲಕವು ಸಹಿತ ಜಂಗ್(ತುಕ್ಕು) ಹಿಡಿದು ಹಾಳಾಗಿದೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.

ಮಳೆ ಮಾಪನ ಕೇಂದ್ರದ ಬಗ್ಗೆ ಇಷ್ಟೊಂದು ನಿರ್ಲಕ್ಷ್ಯ ವಹಿಸದರೇ ಮಳೆ ಮಾಪನ ಯಂತ್ರೋಪಕರಣಗಳು ಅಲ್ಲಿಯೇ ತುಕ್ಕು ಹಿಡಿದು ಹಾಳಾಗುತ್ತವೆ. ಮಳೆಯ ಪ್ರಮಾಣ ಸರಿಯಾಗಿ ತಿಳಿಯದೇ ಹೋದಾಗ ರೈತರು ಸರ್ಕಾರದ ಅನೇಕ ಸೌಲಭ್ಯಗಳಿಂದ ವಂಚಿತರಾಗಲಿದ್ದಾರೆ. ತಾಲೂಕಿನಲ್ಲಿ ರೈತರು ಬೆಳೆದ ಬೆಳೆಗಳು ಅತಿವೃಷ್ಟಿಯಿಂದ ಪ್ರತಿವರ್ಷವೂ ಹಾಳಾಗುತ್ತಿವೆ. ರೈತರು ಪ್ರತಿವರ್ಷ ಬೆಳೆವಿಮೆ ತುಂಬುತ್ತಾ ಬರುತ್ತಿದ್ದಾರೆ. ಮಳೆ ಮಾಪನಾ ಕೇಂದ್ರದ ವ್ಯವಸ್ಥೆ ಸರಿಯಿಲ್ಲದೇ ಹೋದರೆ, ರೈತರು ಬೆಳೆದ ಬೆಳೆಗೆ ಸಮರ್ಪಕ ಆದಾಯ ಬರದೇ ಸಾಲದ ಸೂಳಿಯಲ್ಲಿಯೇ ಸಿಲುಕುತ್ತಾ ಜೀವನ ಮಾಡಬೇಕಾಗುತ್ತದೆ. ತಹಶೀಲ್ದಾರ್ ಕಾರ್ಯಾಲಯದ ಆವರಣದಲ್ಲಿನ ಮಳೆ ಮಾಪನ ಕೇಂದ್ರದ ವ್ಯವಸ್ಥೆ ಸರಿಪಡಿಸದೇ ಇದ್ದರೆ ಅದು ಹಾಳಾಗಲಿದೆ. ಎಲ್ಲ ಆಡಳಿತ ವ್ಯವಸ್ಥೆಯು ಸರಿಯಾಗಿದ್ದರೆ ಸಾರ್ವಜನಿಕರಿಗೆ ಅನುಕೂಲವಾಗಲಿದೆ ಎಂಬುದು ಜನರ ಆಶಯವಾಗಿದೆ.

> ಈ ಮೊದಲು ಗ್ರಾಮಲೆಕ್ಕಾಧಿಕಾರಿಗಳೇ ಮಳೆ ಮಾಪನಾ ಕೇಂದ್ರದ ನಿರ್ವಹಣೆಯನ್ನು ಮಾಡುತ್ತಿದ್ದರು. ಆದರೀಗ ಮಳೆ ಮಾಪನ ಕೇಂದ್ರದ ನಿರ್ವಹಣೆಯನ್ನು ಜಿಲ್ಲಾಡಳಿತ ಮಾಡಬೇಕೆಂದು ಸರಕಾರ ಆದೇಶ ನೀಡಿದೆ. ಇದರ ಸ್ಥಿತಿಗತಿ ಬಗ್ಗೆ ಜಿಲ್ಲಾಡಳಿತಕ್ಕೆ ತಿಳಿಸುತ್ತೇವೆ.
> ■ **ಶ್ರೀಶೈಲ ತಳವಾರ, ತಹಶೀಲ್ದಾರ್, ನರಗುಂದ**

> ಮಳೆ ಮಾಪನ ಯಂತ್ರ ತುಕ್ಕು ಹಿಡಿದು ಹಾಳಾಗಿ ಹೋಗುತ್ತಿದೆ. ತಾಲೂಕಿನಲ್ಲಿ ಬಿದ್ದ ಮಳೆ ಪ್ರಮಾಣ ತಿಳಿಯದೇ ಅಂದಾಜು ದಾಖಲು ಮಾಡುವ ವ್ಯವಸ್ಥೆ ಇದೆ ಎಂಬ ಅನುಮಾನ ಮೂಡುತ್ತಿದೆ. ಕೂಡಲೇ ವ್ಯವಸ್ಥೆ ಸರಿಪಡಿಸಲಿ.
> ■ **ಎಸ್.ಎಸ್. ಪಾಟೀಲ, ಜಿಲ್ಲಾಧ್ಯಕ್ಷ, ಭಾರತೀಯ ಕಿಸಾನ ಸಂಘ, ನರಗುಂದ**



ಜಿಲ್ಲೆಯಲ್ಲಿ ಕನ್ನಡ ಅನುಷ್ಠಾನ ಪರಿಣಾಮಕಾರಿಯಾಗಲಿ

◆ **ಗದಗ:** ಜಿಲ್ಲೆಯಲ್ಲಿ ಕನ್ನಡ ಭಾಷೆಯ ಅನುಷ್ಠಾನ ಪರಿಣಾಮಕಾರಿಯಾಗಬೇಕು. ಪ್ರತಿ ತಿಂಗಳು 5 ನೇ ತಾರಿಖಿನೊಳಗಾಗಿ ಎಲ್ಲ ಇಲಾಖೆಯುವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕನ್ನಡ ಅನುಷ್ಠಾನ ವರದಿಯನ್ನು ಸಲ್ಲಿಸಬೇಕು ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್‌ಸೂಚಿಸಿದರು.

ನಗರದಜಿಲ್ಲಾಧಿಕಾರಿಗಳಕಚೇರಿಸಭಾಂಗಣದಲ್ಲಿ ಶುಕ್ರವಾರ ಜರುಗಿದ ಜಿಲ್ಲಾ ಮಟ್ಟದ ಕನ್ನಡ ಜಾಗೃತಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ರಾಜ್ಯ ಸರ್ಕಾರದ ಇಲಾಖೆಗಳು, ಉದ್ಯಮಗಳು ಅಥವಾ ಸ್ವಾಯತ್ತ ಸಂಸ್ಥೆಗಳು, ಸಹಕಾರ ಮತ್ತು ಸಾರ್ವಜನಿಕ ಉದ್ಯಮಗಳು , ಶೈಕ್ಷಣಿಕ ಸಂಸ್ಥೆಗಳು, ಬ್ಯಾಂಕ್‌ಗಳು, ಹಣಕಾಸು ಸಂಸ್ಥೆಗಳು, ಖಾಸಗಿ ಕೈಗಾರಿಕೆಗಳು ಮತ್ತು ವಿಶ್ವ ವಿದ್ಯಾಲಯಗಳು ಕನ್ನಡ ಭಾಷೆಯಲ್ಲಿಯೇ ಪತ್ರ ವ್ಯವಹಾರ ಮಾಡಬೇಕು. ಪ್ರತಿ ತಿಂಗಳು ಜರುಗುವ ಕೆಡಿಪಿ ಸಭೆ ಅಜೆಂಡಾದಲ್ಲಿ ಕನ್ನಡ ಅನುಷ್ಠಾನದ ವರದಿ ಬಗ್ಗೆಯೂ ಚರ್ಚೆಯಾಗಬೇಕು ಎಂದರು.

ಕನ್ನಡ ಭಾಷಾ ಅನುಷ್ಠಾನಗೊಳಿಸಲು ಪ್ರತಿ ತಾಲೂಕಿನಲ್ಲಿ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತಾಲೂಕು ಮಟ್ಟದ ಸಮಿತಿ ಸಭೆ ಕರೆದು ತಾಲೂಕಿನಾದ್ಯಂತ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಕೈಗೊಳ್ಳಬೇಕು. ಬೇರೆ ರಾಜ್ಯಗಳಿಂದ ಕರ್ನಾಟಕ ರಾಜ್ಯಕ್ಕೆ ಆಗಮಿಸಿದ ಬ್ಯಾಂಕ್ ನೌಕರರಿಗೆ ಕನ್ನಡ ಭಾಷಾ ತರಬೇತಿಯನ್ನು ಹಮ್ಮಿಕೊಂಡು ಅವರು ಕಡ್ಡಾಯವಾಗಿ ತರಬೇತಿಗೆ ಹಾಜರಾಗುವ ಹಾಗೆ ನೋಡಿಕೊಳ್ಳಬೇಕೆಂದು ನಿರ್ದೇಶನ ನೀಡಿದರು.

ಇದೇ ಸಂದರ್ಭದಲ್ಲಿ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರಗಳಿಂದ ಅನುಮತಿ ಮತ್ತು ಮಂಜೂರಾತಿಯೊಂದಿಗೆ ಕಾರ್ಯನಿರ್ವಹಿಸುತ್ತಿರುವ ವಾಣಿಜ್ಯ, ಕೈಗಾರಿಕೆ ಹೋಟೆಲ್‌ಗಳು, ಸಾರಿಗೆ ವಿಭಾಗಗಳಲ್ಲಿ ಕನ್ನಡ ಭಾಷೆಯ ನಾಮಫಲಕಗಳ ಪ್ರದರ್ಶನದ ಕುರಿತು ಚರ್ಚಿಸಲಾಯಿತು.

ಡಿವೈಎಸ್‌ಪಿ ಮುರ್ತುಜಾ ಖಾದ್ರಿ, ಜಿ.ಪಂ. ಉಪಕಾರ್ಯದರ್ಶಿ ಸಿ.ಆರ್.ಮುಂಡರಗಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಕಾರ್ಯದರ್ಶಿ ಕಿಶೋರ ಬಾಬು, ಕನ್ನಡ ಜಾಗೃತಿ ಸಮಿತಿಯ ಅಧಿಕಾರೇತರ ಸದಸ್ಯ ಅಶೋಕ ಬರಗುಂಡಿ, ರಾಜಶೇಖರ ದಾನರೆಡ್ಡಿ, ಮುತ್ತು ಬಿಳಿಎಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಬಸವರಾಜ ಬಳ್ಳಾರಿ, ಲೀಡ್ ಬ್ಯಾಂಕ್ ಮ್ಯಾನೇಜರ್ ಸಂತೋಷ್ , ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ಡಾ.ನಂದಾ ಹಣಬರಟ್ಟಿ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶ ಆರ್.ಎಸ್.ಬುರುಡಿ, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಉಪನಿರ್ದೇಶಕ ಎಂ.ಎಂ.ತುಂಬರಮಟ್ಟಿ ಇದ್ದರು.



ವಿಶ್ವಶಾಂತಿಗಾಗಿ ನವಕಾರ ಮಹಾ ಮಂತ್ರ ಜಪ

◆ **ಗದಗ:** ಸ್ಥಳೀಯ ಜೈನ ಸಮಾಜದವರು ಒಗ್ಗೂಡಿ ವಿಶ್ವ ಶಾಂತಿ ಹಾಗೂ ಸರ್ವ ಜನ ಹಿತಕ್ಕಾಗಿ ನವಕಾರ ಮಹಾ ಮಂತ್ರ ಜಪವನ್ನು ಭಕ್ತಿಪೂರ್ವಕ ನೆರವೇರಿಸಿದರು.

ಗಜೇಂದ್ರಗಡ ಪಟ್ಟಣದ ಬಸವೇಶ್ವರ ವೃತ್ತದ ಬಳಿಯ ಜೈನ ಭವನದಲ್ಲಿ ಸಾಮೂಹಿಕ ನವಕಾರ ಮಹಾ ಮಂತ್ರ ಜಪಿಸಿದ ಜನ ಶಾಂತಿ, ಸಹನೆ, ಆತ್ಮಶುದ್ಧಿಯ ಸಂದೇಶ ಸಾರಲಾಯಿತು.

ಈ ಸಂದರ್ಭದಲ್ಲಿ ಜೈನ ಧರ್ಮದ ಧರ್ಮ ಗುರುಗಳು ತತ್ವಗಳು ಹಾಗೂ ಅಹಿಂಸೆಯ ಮಹತ್ವ ಜತೆಗೆ ವಿಶ್ವದಲ್ಲಿ ಶಾಂತಿ ನೆಲೆಸಲಿ, ಮಾನವಕುಲ ಸುಖ ಸಂವೃದ್ಧಿಯಿಂದ ಜೀವಿಸಲಿ ಹಾರೈಕೆಯೊಂದಿಗೆ ಪ್ರಾರ್ಥನೆ ಸಲ್ಲಿಸಿದರು.

ಅಜಿತ್ ಕುಮಾರ ಬಾಗಮಾರ ಮಾತನಾಡಿ, ಯುವಕರು,ಮಹಿಳೆಯರು ಧಾರ್ಮಿಕ ಭಾವನೆಗಳನ್ನು ವ್ಯಕ್ತಪಡಿಸಿದರು. ಸಮೂಹ ಜಪ ಕಾರ್ಯಕ್ರಮಗಳು ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಬೆಳೆಸಲು ಸಹಕಾರಿ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ

ಸಮಾಜ ಹಿರಿಯರಾದ, ಉದ್ಯಮಿ ರಿಕಬಚಂದ್ ಬಾಗಮಾರ, ಪವನ್ ಬಾಗಮಾರ, ಪ್ರಕಾಶ ಬಾಗಮಾರ, ಗೌತಮ ಬಾಗಮಾರ, ವರ್ಧಮಾನ ಬಾಗಮಾರ, ಶ್ರೇಹಂಸ್ ಬಾಗಮಾರ, ಶೀಥಲ ಬಾಗಮಾರ, ಸಂಜಯ್ ಬಾಗಮಾರ, ಪಿಯುಶ್ ಬಾಗಮಾರ, ದರ್ಶನ್ ಬಾಗಮಾರ, ಯುಗ್ ಬಾಗಮಾರ ಸೇರಿದಂತೆ ಅನೇಕರು ಇದ್ದರು.



ಪ್ರವಾಸೋದ್ಯಮಕ್ಕೆ ಹೋಟೆಲ್ ಒಡೆಯರ ಸಂಘದ ಕೊಡುಗೆ ಅಪಾರ: ಎಚ್‌ಕೆಪಾ

◆ **ಗದಗ:** ಶೈಕ್ಷಣಿಕ, ಕೈಗಾರಿಕೆ, ಕ್ರೀಡಾಕೂಟ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಹೋಟೆಲ್ ಒಡೆಯರ ಸಂಘ ದೊಡ್ಡ ಕೊಡುಗೆ ನೀಡಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್ .ಕೆ.ಪಾಟೀಲ ಹೇಳಿದರು.

ನಗರದಲ್ಲಿ ನೂತನ ಹೋಟೆಲ್ ಒಡೆಯರ ಸಂಘದ ಕಟ್ಟಡ ಉದ್ಘಾಟಿಸಿ ಮಾತನಾಡಿ, ಪ್ರವಾಸೋದ್ಯಮ ಕ್ಷೇತ್ರಕ್ಕೆ ಜಿಲ್ಲೆಯ ಹೋಟೆಲ್ ಗಳ ಕೊಡುಗೆ ಅಪಾರವಾಗಿದೆ. ಜೊತೆಗೆ ಹೋಟೆಲ್ ನಲ್ಲಿ ಕೆಲಸ ಮಾಡುವವರು ಬಹುದೊಡ್ಡ ಸೇವೆ ನೀಡುತ್ತಿದ್ದಾರೆ. ಇಬ್ಬರು ಹೈಕೋರ್ಟ್ ಜಡ್ಜ್ ಗಳನ್ನು ನೀಡಿದ ಕೀರ್ತಿ ಹೋಟೆಲ್ ಒಡೆಯರ ಸಂಘಕ್ಕೆ ಸಲ್ಲುತ್ತದೆ. ಡಾ.ಉಮಾ ಹಾಗೂ ಜಸ್ಟಿಸ್ ಅಡಿಗ ಎನ್ನುವ ಇಬ್ಬರು ಹೈಕೋರ್ಟ್ ಜಡ್ಜ್ ಆಗಿ ಸೇವೆ ಸಲ್ಲಿಸುತ್ತಿದ್ದು, ಇವರು ಹೋಟೆಲ್ ಉದ್ಯಮ ಕುಟುಂಬದಿಂದ ಬಂದವರಾಗಿದ್ದಾರೆ ಎಂದು ಸ್ಮರಿಸಿದರು.

ರಾಜ್ಯ ಹೋಟೆಲ್ ಒಡೆಯರ ಸಂಘದ ಅಧ್ಯಕ್ಷ ಜಿ.ಕೆ ಶೆಟ್ಟಿ ಮಾತನಾಡಿ, ಸಚಿವ ಡಾ. ಎಚ್.ಕೆ ಪಾಟೀಲ ಪ್ರವಾಸೊದ್ಯಮ ಇಲಾಖೆ ಸಚಿವರಾದ ನಂತರ ಜಿಲ್ಲೆಯ ಪ್ರವಾಸಿ ತಾಣಗಳು ಸಾಕಷ್ಟು ಅಭಿವೃದ್ಧಿ ಹೊಂದಿವೆ. ಇದರಿಂದ ಹೋಟೆಲ್‌ಗಳ ಶ್ರೇಯೋಭಿವೃದ್ಧಿ ಆಗುತ್ತಿದೆ. ಉದಯರಾಗ ಮತ್ತು ಸಂಧ್ಯಾರಾಗ ಕಾರ್ಯಕ್ರಮಕ್ಕೆ ಉಪಹಾರ ವ್ಯವಸ್ಥೆ ಮಾಡಲು ಸಚಿವರು ಸಲಹೆ ನೀಡಿದ್ದಾರೆ. ನಮ್ಮ ಸಂಘ ಸಚಿವರ ಸಲಹೆ ಸ್ವೀಕರಿಸಿ ಉಪಹಾರ ನೀಡಲು ಸಿದ್ಧವಿದೆ ಎಂದರು.

ವಿಧಾನ ಪರಿಷತ್ ಸದಸ್ಯ ಎಸ್. ವಿ. ಸಂಕನೂರ, ಎಚ್.ವಿಶ್ವನಾಥ ಶೆಟ್ಟಿ, ಕೆ. ಸುಧಾಕರ ರಾವ್, ಬಿ. ರಾಜೀವ ಶೆಟ್ಟಿ ಇದ್ದರು.



ಸಹನಾಗೆ 87.66 ರಷ್ಟು ಅಂಕ

◆ **ಗದಗ:** ಗದಗ ನಗರದ ಸರ್ಕಾರಿ ಪದವಿಪೂರ್ವ ಕಾಲೇಜಿನ ವಾಣಿಜ್ಯ ವಿಭಾಗದ ವಿದ್ಯಾರ್ಥಿನಿ ಸಹನಾ ಮಲ್ಲಿಕಾರ್ಜುನ ಹೂಗಾರ ಪಿಯುಸಿ ಪರೀಕ್ಷೆಯಲ್ಲಿ 600 ಕ್ಕೆ 526 (ಶೇ.87.66) ಅಂಕ ಗಳಿಸಿದ್ದಾಳೆ. ವಿದ್ಯಾರ್ಥಿನಿಯು ಗದಗ ತಾಲೂಕಿನ ಕಿರೀಟಗೇರಿ ಗ್ರಾಮದವಳಾಗಿದ್ದಾಳೆ.



ದ್ವಿತೀಯ ಪಿಯುಸಿ: ಶೇ.67ರಷ್ಟು ಫಲಿತಾಂಶ

◆ **ಮುಂಡರಗಿ:** ಇಲ್ಲಿಯ ಶ್ರೀ ಜ.ಅ.ವಿದ್ಯಾ ಸಮಿತಿಯ ಎಂ.ಎಸ್. ಡಂಬಳ ಮಹಿಳಾ ಪದವಿ ಪೂರ್ವ ಕಾಲೇಜ್ ಮುಂಡರಗಿ 2025-26 ನೇ ಸಾಲಿನ ದ್ವಿತೀಯ ಪಿಯುಸಿ ಫಲಿತಾಂಶವು ಪ್ರಕಟವಾಗಿದ್ದು, ಕಾಲೇಜಿನ ಫಲಿತಾಂಶವು ಶೇ.67ರಷ್ಟಾಗಿದೆ.





ಕಾಲೇಜು ಮಟ್ಟದಲ್ಲಿ ಸುಮಿತ್ರ ಕಟ್ಟಿಮನಿ ಶೇ 94.66 ಪ್ರಥಮ, ಲಕ್ಷ್ಮೀದೇವಿ ಡಂಬಳ ಶೇ.94 ದ್ವಿತೀಯ ಹಾಗೂ ಅಪ್ಸನ ಹಾತಲಗೇರಿ ಶೇ.92.5ರಷ್ಟು ಅಂಕಗಳಿಸಿ ತೃತೀಯ ಸ್ಥಾನ ಗಳಿಸಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಶ್ರೀ ಜಗದ್ಗುರು ನಾಡೋಜ ಡಾ. ಅನ್ನದಾನೀಶ್ವರ ಸ್ವಾಮೀಜಿ ಹಾಗೂ ಡಾ. ಮಲ್ಲಿಕಾರ್ಜುನ ಮಹಾ ಶಿವಯೋಗಿಗಳು ಹರ್ಷವ್ಯಕ್ತಪಡಿಸಿದ್ದಾರೆ.

ಶೇ.83.77ರಷ್ಟು ಫಲಿತಾಂಶ

◆ **ಮುಂಡರಗಿ:** 2025-26ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿಸ್ಥಳೀಯ ಸರ್ಕಾರಿ ಪದವಿ ಪೂರ್ವ ಕಾಲೇಜ್‌ನ ದ್ವಿತೀಯ ಪಿಯುಸಿ ಫಲಿತಾಂಶವು ಶೇ. 83.77 ರಷ್ಟಾಗಿದೆ. ಕಾಲೇಜಿನ ವಿಭಾಗವಾರು ಕಲಾ ವಿಭಾಗದಲ್ಲಿಐಶ್ವರ್ಯ ಚೌಡಕಿ ಶೇ.96.83 (ಪ್ರಥಮ), ವಾಣಿಜ್ಯ ವಿಭಾಗದಲ್ಲಿ ಸುಸ್ಮಿತಾ ಹಮ್ಮಿಗಿ ಶೇ.88.16 (ಪ್ರಥಮ), ವಿಜ್ಞಾನ ವಿಭಾಗದಲ್ಲಿ ನಿವೇದಿತಾ ಗೌಡರ ಶೇ.93.66 (ಪ್ರಥಮ) ಸ್ಥಾನ ಪಡೆದುಕೊಂಡಿದ್ದಾರೆ.





ಪರೀಕ್ಷೆಯಲ್ಲಿ ಶೇ.92ರಷ್ಟು ಫಲಿತಾಂಶ

◆ **ಲಕ್ಷ್ಮೇಶ್ವರ:** ಶಿಗ್ಲಿ ಗ್ರಾಮದ ಪರಮೇಶ್ವರಪ್ಪ ಮ ಬಳಿಗಾರ ಸರ್ಕಾರಿ ಸ್ವತಂತ್ರ ಪದವಿಪೂರ್ವ ಕಾಲೇಜಿನ ದ್ವಿತೀಯ ಪಿಯುಸಿಯ ಒಟ್ಟು ಫಲಿತಾಂಶ ಶೇ.92 ರಷ್ಟಾಗಿದೆ. ಕಲಾ ವಿಭಾಗದಲ್ಲಿ ದೀಪಾ ಪಾಟೀಲ ಶೇ.96, ನಾಗರತ್ನ ಕೊಪ್ಪದ ಶೇ.96, ಮಾಲತಿ ದೊಡ್ಡಮನಿ ಶೇ.95, ವಾಣಿಜ್ಯ ವಿಭಾಗದಲ್ಲಿ ಅಶ್ವಿನಿ ಪೂಜಾರ ಶೇ.92, ಗೌರಮ್ಮ ಅಂಗಡಿ ಶೇ.92, ಸಹನಾ ಮಲ್ಲಿಗವಾಡ ಶೇ.88, ವಿಜ್ಞಾನ ವಿಭಾಗದಲ್ಲಿ ನಂದೀಶ ಅಂಗಡಿ ಶೇ.85, ಸಮರ್ಥ ದೇವಾಂಗಮಠ ಶೇ. 82, ಅಕ್ಷತಾ ತಿರಕಣ್ಣವರ ಶೇ.82ರಷ್ಟು ಅಂಕ ಗಳಿಸಿದ್ದಾರೆ. ಕಾಲೇಜು ಅಭಿವೃದ್ಧಿ ಸಮಿತಿ, ಪ್ರಾಚಾರ್ಯರು, ಉಪನ್ಯಾಸಕರು, ಪಾಲಕರು ಹರ್ಷ ವ್ಯಕ್ತಪಡಿಸಿದ್ದಾರೆ.




ಶೇ.81.82ರಷ್ಟು ಫಲಿತಾಂಶ

◆ **ನರಗುಂದ:** ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಚಿಕ್ಕನರಗುಂದ ಸರ್ಕಾರಿ ಪದವಿಪೂರ್ವ ಕಾಲೇಜಿನ ಫಲಿತಾಂಶ ಶೇ.81.82ರಷ್ಟು ಆಗಿದೆ ಎಂದು ಕಾಲೇಜಿನ ಪ್ರಾಂಶುಪಾಲರು ತಿಳಿಸಿದ್ದಾರೆ. ಕಲಾ ವಿಭಾಗದಲ್ಲಿ ಮಲ್ಲವ್ವ ಗಣೇಶಿ 90.33, ಕವನಾ ಅಂಗಡಿ87.33, ಮೇಘಾ ಗಾಣಿಗೇರ 85.5, ಆಕಾಶ ಹಡಪದ 85.33, ವಿಜ್ಞಾನ ವಿಭಾಗದಲ್ಲಿ ಆಲಿಯಾ ಮೊಮಿನ್ 81.83, ಲಕ್ಷ್ಮೀ ನರಸನ್ನವರ 79.66, ಕವಿತಾ ಕಲಹಾಳ 77.16 ರಷ್ಟು ಅಂಕ ಪಡೆದಿದ್ದಾರೆ. ಕಾಲೇಜಿನ ಪ್ರಾಚಾರ್ಯ ಎಸ್.ಇಂದಿರಾಣಿ ಮತ್ತು ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರು ಹರ್ಷವ್ಯಕ್ತಪಡಿಸಿದ್ದಾರೆ.

ದ್ವಿತೀಯ ಪಿಯು ಪರೀಕ್ಷೆಯಲ್ಲಿ ರಕ್ಷಿತಾ ಸಾಧನೆ

▶ ಶಿವಲಿಂಗಯ್ಯ ಹೊತಗಿಮಠ

◆ **ಲಕ್ಷ್ಮೇಶ್ವರ:** ಸಾಧನೆ ಮಾಡಲು ಆತ್ಮವಿಶ್ವಾಸ ಛಲ ಎಂಬುದು ಇದ್ದರೆ ಏನು ಬೇಕಾದರೂ ಸಾಧಿಸಬಹುದು ಎಂಬುದಕ್ಕೆ ಸಾಕ್ಷಿಯೆ ಲಕ್ಷ್ಮೇಶ್ವರದ ಪ್ರತಿಭಾವಂತೆ ವಿದ್ಯಾರ್ಥಿನಿ ರಕ್ಷಿತಾ ಎಂ. ಸಂಗನಪೇಟ. ಮೂಡಬಿದರಿಯ ಆಳ್ವಾಸ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿಯಾದ ಇವಳು ವಿಜ್ಞಾನ ವಿಭಾಗದಲ್ಲಿ ರಾಜ್ಯಕ್ಕೆ ದ್ವಿತೀಯ ರ್‍ಯಾಂಕ್ ಪಡೆಯುವುದರ ಮೂಲಕ ಸಾಧನೆ ಮಾಡಿದ್ದಾಳೆ.

ರಕ್ಷಿತಾ ಪಟ್ಟಣದ ಪುರಸಭೆಯ ಉಮಾ ವಿದ್ಯಾಲಯ ಹೈಸ್ಕೂಲಿನ ಗಣಿತ ಶಿಕ್ಷಕ ಎಂ.ಬಿ. ಸಂಗನಪೇಟ ಅವರ ಪುತ್ರಿ. ಪ್ರಾಥಮಿಕ ಶಿಕ್ಷಣ 1ರಿಂದ 3 ನೇ ತರಗತಿ ಎಸ್ ಟಿ ಪಿ ಎಂ ಪಿ, ಶಾಲೆ 4 ರಿಂದ 10 ನೇ ತರಗತಿ ಯೂನಿಕ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಅಭ್ಯಾಸ ಮಾಡಿರುವ ಇವಳು ಎಸ್‌ಎಸ್‌ಎಲ್‌ಸಿಯಲ್ಲಿ ಶೇ.99ರಷ್ಟು ಅಂಕಗಳನ್ನು ಗಳಿಸಿ ಜಿಲ್ಲೆಗೆ ತೃತೀಯ ಸ್ಥಾನ ಗಳಿಸಿದ್ದಳು. ಸದ್ಯ ಪಿಯುಸಿ ವಿಜ್ಞಾನದಲ್ಲಿ ಕನ್ನಡ 100, ಇಂಗ್ಲಿಷ್ 98, ಜೀವಶಾಸ್ತ್ರ 100, ರಸಾಯನಶಾಸ್ತ್ರ 100, ಗಣಿತ 100, ಭಾತಶಾಸ್ತ್ರ 100 ಒಟ್ಟು 598 ಅಂಕಗಳನ್ನು ಗಳಿಸಿದ್ದಾಳೆ.



ವೈದ್ಯೆಯಾಗುವ ಮಹದಾಸೆ

ವೈದ್ಯೆಯಾಗುವ ಮಹದಾಸೆ ಹೊಂದಿದ್ದೇನೆ. ಪರೀಕ್ಷೆ ಸಮಯದಲ್ಲಿ ಭಯವಿಲ್ಲದೆ ಪರೀಕ್ಷೆ ಬರಿಯಬೇಕು. ಅಭ್ಯಾಸ ಮಾಡುವ ಸಮಯದಲ್ಲಿ ಸರಿಯಾಗಿ ಮಾಡಬೇಕು, ಅಂದಿನ ಪಾಠಗಳನ್ನು ಅಂದೆ ಓದಿದರೆ ಒಳ್ಳೆಯದು. ಆಳ್ವಾಸ ಆಡಳಿತ ಮಂಡಳಿ, ಉಪನ್ಯಾಸಕರ, ಸಹಪಾಠಿಗಳ ಪ್ರೋತ್ಸಾಹ ಹೆಚ್ಚಿನ ಅಂಕಗಳನ್ನು ಗಳಿಸಿ ಸಾಧನೆ ಮಾಡಲು ಪ್ರೇರಣೆಯಾಗಿದೆ ಎಂದು ವಿದ್ಯಾರ್ಥಿನಿ ರಕ್ಷಿತಾ ಎಂ. ಸಂಗನಪೇಟ ಹೇಳಿದ್ದಾಳೆ.

> ಮಗಳ ಸಾಧನೆ ಬಗ್ಗೆ ಹೆಮ್ಮೆ ಇದೆ. ಅವಳ ಆಸೆಯಂತೆ ವೈದ್ಯಕೀಯ ಕೋರ್ಸ್‌ಗೆ ಹಚ್ಚಲು ನಮ್ಮ ಸಂಪೂರ್ಣ ಸಹಕಾರವಿದೆ. ಅವಳ ಅಣ್ಣನಂತೆ ವೈದ್ಯಕೀಯ ಕೋರ್ಸ್ ಮಾಡಲು ಅವಳು ಉತ್ಸುಕಳಾಗಿದ್ದಾಳೆ.
> ■ **ಎಂ.ಬಿ. ಸಂಗನಪೇಟ ಹಾಗೂ ಸುಮಾ ಸಂಗನಪೇಟ, ತಂದೆ-ತಾಯಿ**

ಕಿರುಸುದ್ದಿ

ಕಲಬುರಗಿಗಿಂದು ಸಿಎಂ ಸಿದ್ದರಾಮಯ್ಯ

ಕಲಬುರಗಿ: ರಾಜ್ಯದ ಮುಖ್ಯಮಂತ್ರಿಗ ಸಿದ್ದರಾಮಯ್ಯ ಅವರು ಬೀದರ ಏರ್‌ಬೇಸ್‌ದಿಂದ ಹೆಲಿಕ್ಯಾಪ್ಟರ್ ಮೂಲಕ ಏಪ್ರಿಲ್ 11ರಂದು ಶನಿವಾರ ಮಧ್ಯಾಹ್ನ 3.25 ಗಂಟೆಗೆ ಚಿತ್ತಾಪುರ ತಾಲೂಕಿನ ಸೂಗೂರ (ಎನ್) ಗ್ರಾಮದ ಹೆಲಿಪ್ಯಾಡ್‌ಗೆ ಆಗಮಿಸಿ,



ಜಿಲ್ಲೆಯ ಚಿತ್ತಾಪುರ ತಾಲೂಕಿನ ಶ್ರೀ ಕ್ಷೇತ್ರ, ಸೂಗೂರ(ಎನ್)ದಲ್ಲಿ ಸಚ್ಚಿದಾನಂದ, ನಿತ್ಯ ನಿರಂಜನ ಮೂರ್ತಿ, ಸ್ವಯಂಸಿದ್ಧ ಶರಣರು, ಮಹಾತ್ಮ ಶ್ರೀ ಭೋಜಲಿಂಗೇಶ್ವರ ಸಿದ್ಧ ಸಂಸ್ಥಾನ ಮಠದ ಶ್ರೀ ಕ್ಷೇತ್ರ ಸೂಗೂರ (ಎನ್) ವತಿಯಿಂದ ಆಯೋಜಿಸಿರುವ ಶ್ರೀ ಭೋಜಲಿಂಗೇಶ್ವರರ ನೂತನ ದೇವಸ್ಥಾನ ಲೋಕಾರ್ಪಣೆ, ಮೂರ್ತಿ ಪ್ರತಿಷ್ಠಾಪನೆ, ನೂತನ ಬೆಳ್ಳಿ ರಥೋತ್ಸವ ಚಾಲನೆ ಹಾಗೂ ಕಲ್ಯಾಣ ಮಂಟಪದ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸುವರು. ನಂತರ ಅಂದು ಸಂಜೆ 4.10 ಗಂಟೆಗೆ ಚಿತ್ತಾಪುರ ತಾಲೂಕಿನ ಸೂಗೂರ (ಎನ್) ಗ್ರಾಮದ ಹೆಲಿಪ್ಯಾಡ್‌ದಿಂದ ರಸ್ತೆ ಮೂಲಕ ಹೊರಟು ಸಂಜೆ 4.30 ಗಂಟೆಗೆ ಚಿತ್ತಾಪುರ ತಾಲೂಕಿನ ಶ್ರೀ ಕ್ಷೇತ್ರ, ನಾಲವಾರಕ್ಕೆ ಆಗಮಿಸಿ, ಸದ್ಗುರು ಶ್ರೀ ಕೋಡಿಸಿದ್ದೇಶ್ವರ ಮಹಾಸಂಸ್ಥಾನ ಮಠಕ್ಕೆ ಭೇಟಿ ನೀಡುವರು. ಸಂಜೆ 5 ಗಂಟೆಗೆ ಚಿತ್ತಾಪುರ ತಾಲೂಕಿನ ಶ್ರೀ ಕ್ಷೇತ್ರ, ನಾಲವಾರದಿಂದ ರಸ್ತೆ ಮೂಲಕ ಹೊರಟು ಸಂಜೆ 5.10 ಗಂಟೆಗೆ ಚಿತ್ತಾಪುರ ತಾಲೂಕಿನ ಸೂಗೂರ (ಎನ್) ಗ್ರಾಮದ ಹೆಲಿಪ್ಯಾಡ್‌ಗೆ ಆಗಮಿಸಿ, ಅಲ್ಲಿಂದ ಹೆಲಿಕ್ಯಾಪ್ಟರ್ ಮೂಲಕ ಸಂಜೆ 5.45 ಗಂಟೆಗೆ ಕಲಬುರಗಿ ವಿಮಾನ ನಿಲ್ದಾಣಕ್ಕೆ ಆಗಮಿಸಿ, ಸಂಜೆ 6 ಗಂಟೆಗೆ ಕಲಬುರಗಿ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದ ಮೂಲಕ ಬೆಂಗಳೂರಿಗೆ ಪ್ರಯಾಣಿಸುವರು.

ನೈಋತ್ಯ ರೈಲ್ವೆಗೆ ಪ್ರಧಾನ ವ್ಯವಸ್ಥಾಪಕರಾಗಿ ಪಿ.ಅನಂತ್

ಹುಬ್ಬಳ್ಳಿ: ನೈಋತ್ಯ ರೈಲ್ವೆಗೆ ನೂತನ ಪ್ರಧಾನ ವ್ಯವಸ್ಥಾಪಕರಾಗಿ ಪಿ.ಅನಂತ್ ಅವರು ಗುರುವಾರ ಅಧಿಕಾರ ಸ್ವೀಕರಿಸಿದರು.



ಈ ಹಿಂದೆ ಪ್ರಧಾನ ವ್ಯವಸ್ಥಾಪಕರಾಗಿದ್ದ ಮುಕುಲ್ ಸರನ್ ಮಥೂರ್ ಅವರು ನಿವೃತ್ತಿಗೊಂಡ ಹಿನ್ನೆಲೆಯಲ್ಲಿ ಅವರ ಉತ್ತರಾಧಿಕಾರಿಯಾಗಿ ಪಿ.ಅನಂತ್ ಅವರು ಈ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ. ಭಾರತೀಯ ರೈಲ್ವೆ ಮೆಕ್ಯಾನಿಕಲ್ ಎಂಜಿನಿಯರ್‌ಗಳ ಸೇವೆಯ (ಐಆರ್‌ಎಸ್‌ಎಂಇ) 1989ರ ಬ್ಯಾಚ್‌ನ ಅಧಿಕಾರಿಯಾಗಿರುವ ಅನಂತ್ ಅವರು ಮೆಕ್ಯಾನಿಕಲ್ ಎಂಜಿನಿಯರಿಂಗ್‌ನಲ್ಲಿ ಪದವಿ ಪಡೆದಿದ್ದಾರೆ. ಭಾರತೀಯ ರೈಲ್ವೆಯ ವಿವಿಧ ವಿಭಾಗಗಳಲ್ಲಿ ಮೂರು ದಶಕಗಳಿಗೂ ಹೆಚ್ಚು ಕಾಲ ಅತ್ಯಂತ ವಿಶಿಷ್ಟ ಹಾಗೂ ಸಮರ್ಥ ಸೇವೆ ಸಲ್ಲಿಸಿದ ಅನುಭವ ಇವರಿಗಿದೆ. ಆಗ್ನೇಯ ರೈಲ್ವೆಯಲ್ಲಿ ದೀರ್ಘಕಾಲ ಸೇವೆ ಸಲ್ಲಿಸಿರುವ ಇವರು, 2002 ರಿಂದ 2008 ರವರೆಗೆ ರೈಲ್ವೆ ಮಂಡಳಿಯಲ್ಲಿ ಮಾನವಶಕ್ತಿ ಯೋಜನೆ ವಿಭಾಗದ ನಿರ್ದೇಶಕ ಕಾರ್ಯನಿರ್ವಹಿಸಿ ಪ್ರಮುಖ ಸಾಂಸ್ಥಿಕ ನಿರ್ಧಾರಗಳಲ್ಲಿ ಭಾಗಿಯಾಗಿದ್ದರು.

ಸಮಗಾರ ಸಮುದಾಯಕ್ಕೆ ಬೇಕಿದೆ ಸರ್ಕಾರದ ಸ್ಪಂದನೆ

ಸಂಕಷ್ಟದಲ್ಲಿ ಪಾದರಕ್ಷೆ ತಯಾರಿಸುವವರ ಬದುಕು

▸ ಸಿದ್ದಯ್ಯ ಹೆಸರೂರು

ದಿಗಂತ ವಿಶೇಷ

ಮಸ್ಕಿ: ಆಧುನೀಕರಣದ ಭರಾಟೆಯಲ್ಲಿ ಚರ್ಮದಿಂದ ತಯಾರಿಸಿದ ಪಾದರಕ್ಷೆಗಳನ್ನು ಧರಿಸುವವರ ಸಂಖ್ಯೆಯು ಕಡಿಮೆಯಾಗಿದೆ. ಚಮ್ಮಾರಿಕೆ ಕುಲ ಕಸುಬು ನಂಬಿಕೊಂಡು ಬದುಕುತ್ತಿರುವ ಬಡ ಕುಟುಂಬಗಳ ಬದುಕು ಆಧುನಿಕತೆಯ ಹೊಡೆತಕ್ಕೆ ಸತ್ಯ ಶುದ್ಧಿ ಕಾಯಕ ಮಾಡುವ ಸಮಗಾರ ಸಮುದಾಯವು ಇಂದು ಆರ್ಥಿಕ ಸಂಕಷ್ಟದಲ್ಲಿದೆ.

ಹೊಸ ಶೈಲಿಯ ವಿವಿಧ ನಮೂನೆಯ ಚಪ್ಪಲಿಗಳನ್ನು ಶೋ ರೂಂ ಅಂಗಡಿಗಳಲ್ಲಿ ದೊಡ್ಡ ಮೊತ್ತಕ್ಕೆ ಖರೀದಿಸುವ ಜನ, ಅದೇ ಚಪ್ಪಲಿ ಹರಿದು ಹೋದಾಗ ಚಮ್ಮಾರರ ಹತ್ತಿರ ಹೊಲಿಸಿಕೊಳ್ಳಲು ಬರುತ್ತಾರೆ. ಒಂದೆರಡು ರೂಪಾಯಿಗೂ ಚೌಕಾಸಿ ಮಾಡುತ್ತಾರೆ. ಬೂಟುಗಳನ್ನು ಪಾಲಿಸು ಮಾಡಿ ಹೊಳೆಯುವಂತೆ ಮಾಡುವ ಈ ಚಮ್ಮಾರರ ಬದುಕು ಮಾತ್ರ ಇಂದಿಗೂ ಮಸುಕಾಗಿದೆ.

ಚಮ್ಮಾರ/ಸಮಗಾರ ಸಮುದಾಯ ತಯಾರಿಸಿದ ಚರ್ಮದ ಚಪ್ಪಲಿಗಳಿಗೆ ಸರಿಯಾದ ಮಾರುಕಟ್ಟೆ ವ್ಯವಸ್ಥೆಯಿಲ್ಲ, ಬೀದಿ ಬದಿಗಳಲ್ಲಿ ಹರಿದ ಚಪ್ಪಲಿಗಳನ್ನು ಸರಿ ಮಾಡುವ ಕಾಯಕದಿಂದಲೇ ಅನೇಕ ಕುಟುಂಬಗಳು ಇಂದಿಗೂ ಜೀವನ ನಡೆಸುತ್ತಿವೆ.

ಸಮಗಾರ ಸಮುದಾಯದ ಜನರಿಗೆ ಸರ್ಕಾರವು ಆರ್ಥಿಕ ಸಹಾಯ ನೀಡಬೇಕಿದೆ. ಅವರ ಮಕ್ಕಳ ಶಿಕ್ಷಣಕ್ಕೆ ಸಹಾಯವಾಗುವ ಯೋಜನೆಗಳನ್ನು ಹೆಚ್ಚು ಜಾರಿಗೆ ತರಬೇಕಿದೆ. ಚರ್ಮದ ಕುಟೀರಗಳನ್ನು ಬಡ ಚಮ್ಮಾರರಿಗೆ ಉಚಿತವಾಗಿ ನೀಡಬೇಕಾಗಿದೆ.

12ನೇಯ ಶತಮಾನದಲ್ಲಿ ಜಗಜ್ಯೋತಿ ಬಸವಣ್ಣನವರು ಶರಣ ಹರಳಯ್ಯನವರು ತಯಾರಿಸಿದಂತ ಚಮ್ಮಾವುಗೆಗಳು ಪೃಥ್ವಿ ಸಮಬಾರದು ಸರಿಯಲ್ಲ ನೋಡಾ ಎಂದು ಗೌರವಿಸಿದ್ದರು. ಇಂತಹ ಸಮಗಾರ ಸಮುದಾಯವು ಇಂದು ಸರ್ಕಾರದ ಮತ್ತು ಇಲಾಖೆಯ ಸಹಾಯದ ನಿರೀಕ್ಷೆಯಲ್ಲಿದೆ. ಆದ್ದರಿಂದ ಸರ್ಕಾರ ಮತ್ತು ಇಲಾಖೆಯು ಇನ್ನಾದರೂ ಸಮಗಾರ ಸಮುದಾಯದ ಅಭಿವೃದ್ಧಿಯ ಬಗ್ಗೆ ಹೆಚ್ಚಿನ ಗಮನ ಹರಿಸಬೇಕಿದೆ.



ಸರ್ಕಾರದ ಯೋಜನೆಗಳನ್ನು ಆ ಸಮಗಾರ ಸಮುದಾಯಕ್ಕೆ ನೀಡಲೆಂದು ಸರ್ಕಾರ ಈಗಾಗಲೇ ಕೆಲವು ಯೋಜನೆಗಳನ್ನು ಜಾರಿಗೆ ತಂದಿದ್ದು, ಜಿಲ್ಲೆಯಲ್ಲಿ ಈ ಸಮುದಾಯದ ಸೌಲಭ್ಯ ವಂಚಿತ ಸ್ಥಳದಲ್ಲಿ ಜಾಗೃತಿ ಮೂಡಿಸುವ ಕಾರ್ಯ ಮಾಡುತ್ತೇವೆ.
■ ಪ್ರವೀಣ್ ಕುಮಾರ್, ಉಪ ನಿರ್ದೇಶಕರು (ಡಿ.ಡಿ) ಸಮಾಜ ಕಲ್ಯಾಣ ಇಲಾಖೆ ರಾಯಚೂರು

ಜಿಲ್ಲೆಯಲ್ಲಿ ಸಮಗಾರ ಸಮುದಾಯದವರು ಸಮೀಕ್ಷೆ ಸಮೀಕ್ಷೆ ನಡೆಸಿ ಆ ಸಮುದಾಯಕ್ಕೆ ಸಿಗಬೇಕಾದ ಸೌಲಭ್ಯಗಳ ಕುರಿತು ಜಾಗೃತಿ ಮೂಡಿಸುವ ಕಾರ್ಯವಾಗಬೇಕು ಹಾಗೂ ಈ ಸಮುದಾಯಕ್ಕೆ ಸರ್ಕಾರದ ಸೌಲಭ್ಯಗಳನ್ನು ಸಂಬಂಧಿಸಿದ ಅಧಿಕಾರಿಗಳು ಆದಷ್ಟು ಬೇಗನೆ ಒದಗಿಸಬೇಕು.
■ ಸಂತೋಷ ಹಿರೇದಿನ್ನಿ, ಕರ್ನಾಟಕ ರೈತ ಸಂಘದ ಮಸ್ಕಿ ತಾಲೂಕು ಅಧ್ಯಕ್ಷ

ಪಟ್ಟಣದ ಚಮ್ಮಾರಿಕೆ ಕೆಲಸ ಮಾಡುವ ಜಗದೀಶ ಸಮಗಾರ, ಸುಮಾರು 20 ವರ್ಷಗಳಿಂದ ಚಪ್ಪಲಿ ಹೊಲಿಯುವ ಕಾಯಕ ಮಾಡಿಕೊಂಡು ಬಂದಿದ್ದೇವೆ. ಮುಂಜಾನೆಯಿಂದ ಸಂಜೆಯವರೆಗೆ ಕೆಲಸ ಮಾಡಿದರೂ 200 ರೂ. ಸಿಗುವುದು ಕಷ್ಟ, ಇದರ ಮಧ್ಯೆ ಜನರು ಒಂದೆರಡು ರೂಪಾಯಿಗಳಿಗೆ ಚೌಕಾಸಿ ಮಾಡುತ್ತಾರೆ. ಆದರೂ ಬದುಕಿನ ಬಂಡಿ ಸಾಗಿಸಬೇಕಲ್ಲ, ಬೇರೆ ಕೆಲಸ ಗೊತ್ತಿಲ್ಲ, ಈ ಉದ್ಯೋಗ ಮಾಡಿಕೊಂಡೆ ಜೀವನಾ ಮಾಡ್ತಿದ್ದಿವಿ ಎಂದರು.

ಸರ್ಕಾರ ಚರ್ಮ ಕುಶಲಕರ್ಮಿಗಳ ಸಬಲೀಕರಣಕ್ಕಾಗಿ ಕೆಲವೊಂದು ಯೋಜನೆಗಳನ್ನು ಕೈಗೊಂಡಿರುವುದು ಶ್ಲಾಘನೀಯ ಹೆಜ್ಜೆ. ಅವರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ದಾರಿದೀಪವಾಗಲಿದೆ. ಇಂತಹ ಜನಪರ ಕಾರ್ಯಗಳು ಇನ್ನಷ್ಟು ವಿಸ್ತರಿಸಬೇಕಿದೆ.

ದಾವಣಗೆರೆಯಲ್ಲಿ ಅಲ್ಪಸಂಖ್ಯಾತ ಸಮಾಜಕ್ಕೆ ಮುಂದಿನ ದಿನಗಳಲ್ಲಿ ನ್ಯಾಯ

ಕಾಂಗ್ರೆಸ್ ಗೆಲುವು ಖಚಿತ: ಸಚಿವ ಸತೀಶ ಜಾರಕಿಹೊಳಿ

ಬೆಳಗಾವಿ: ಬಾಗಲಕೋಟೆ ಉಪ ಚುನಾವಣೆಯಲ್ಲಿ ನೂರಕ್ಕೆ ನೂರರಷ್ಟು ಉಮೇಶ ಮೇಟಿ ಗೆದ್ದೆ ಗೆಲ್ಲುತ್ತಾರೆ ಅದರಲ್ಲಿ ಯಾವುದೇ ಸಂದೇಹ ಬೇಡ. ಆದರೆ, ಎಷ್ಟು ಅಂತರದಿಂದ ಗೆಲ್ಲುತ್ತಾರೆಂದು ಈಗಲೇ ಖಚಿತವಾಗಿ ಹೇಳಲು ಸಾಧ್ಯವಿಲ್ಲವೆಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಶುಕ್ರವಾರ ಬೆಳಗಾವಿ ನಗರದ ಕಾಂಗ್ರೆಸ್ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಒಂದು ಕ್ಷೇತ್ರವನ್ನು ಮತ್ತೊಂದು ಕ್ಷೇತ್ರಕ್ಕೆ ಹೋಲಿಕೆ ಮಾಡಲು ಆಗುವುದಿಲ್ಲ, ಶಿಗ್ಗಾವಿ ಗೆದ್ದ ಹಾಗೆ ಬಾಗಲಕೋಟೆ ಗೆಲ್ಲುತ್ತೇವೆ ಎನ್ನುವುದು ತಪ್ಪು. ಬಾಗಲಕೋಟೆ ವಿಧಾನಸಭೆ ಕ್ಷೇತ್ರಕ್ಕೆ ಕಾಲಿಟ್ಟ ನಂತರ ನಮಗೆ ಅಲ್ಲಿನ ಸಮಸ್ಯೆಗಳು ಕಂಡವು. ಮಾಜಿ ಸಚಿವ ಎಚ್.ವೈ.ಮೇಟಿ ಅವರ ನಿಧನದಿಂದ ತೆರವಾಗಿರುವ ಬಾಗಲಕೋಟೆ ಸ್ಥಾನವನ್ನು ಮರಳಿ ಪಡೆಯುವುದು ಕಾಂಗ್ರೆಸ್‌ಗೆ ಅತ್ಯಂತ ಮುಖ್ಯವಾಗಿತ್ತು.

ಬಾಗಲಕೋಟೆಯಲ್ಲಿ ತಳಮಟ್ಟದಲ್ಲಿ ಕಾರ್ಯಕರ್ಯತರನ್ನು ಒಗ್ಗೂಡಿಸಿ ಚುನುವಣೆ ಗೆಲ್ಲಲು ಪ್ರಯತ್ನಿಸಿದ್ದೇವೆ. ಬಾಗಲಕೋಟೆ, ದಾವಣಗೆರೆ ಎರಡು ನಮ್ಮ ಕ್ಷೇತ್ರಗಳಾಗಿದ್ದು, ಎರಡು ಕ್ಷೇತ್ರಗಳಲ್ಲಿ ನಾವು ಗೆಲ್ಲುವುದು ಅನಿವಾರ್ಯತೆ ಇತ್ತು. ಎರಡಲ್ಲಿ ಒಂದು ಕ್ಷೇತ್ರವನ್ನು ಗೆಲ್ಲದಿದ್ದರೆ ಬಿಜೆಪಿಯವರು ನಮ್ಮನ್ನು ಎರಡು ವರ್ಷ ನಿದ್ದೆ ಮಾಡಲು ಬಿಡುತ್ತಿರಲಿಲ್ಲ, ಅದಕ್ಕಾಗಿಯೇ ನಾವು, ನಮ್ಮ ನಾಯಕರು ಸೇರಿ ಚುನಾವಣೆ ಗೆಲ್ಲಲು ಆಸಕ್ತಿ ತೋರಿದ್ದೇವೆ ಎಂದರು.

ದಾವಣಗೆರೆಯಲ್ಲಿ ಅಲ್ಪಸಂಖ್ಯಾತರಿಗೆ ಟಿಕೆಟ್ ನೀಡಬೇಕೆಂಬ ಒತ್ತಾಯ, ಬಂಡಾಯದ ಕುರಿತು ಮಾತನಾಡಿದ ಅವರು, ದಾವಣಗೆರೆ ಯಲ್ಲಿ ಅಲ್ಪಸಂಖ್ಯಾತರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಅದೇ ಸಮಾಜಕ್ಕೆ ಟಿಕೆಟ್ ನೀಡಬೇಕಿತ್ತು. ಆದರೆ, ದಾವಣಗೆರೆಯಲ್ಲಿ ಇಷ್ಟು ದಿನ ಕಾಂಗ್ರೆಸ್‌ನ ಹಿರಿಯ ನಾಯಕ ಶಾಮನೂರು ಶಿವಶಂಕರಪ್ಪ ಅವರೇ ಪ್ರತಿನಿಧಿಸುತ್ತಿದ್ದರು. ಅವರ ಅಗಲಿಕೆ ಹಿನ್ನೆಲೆಯಲ್ಲಿ ಅವರ ಕುಟುಂಬಸ್ಥರಿಗೆ ಟಿಕೆಟ್ ನೀಡಲಾಗಿದೆ. ಅಲ್ಪಸಂಖ್ಯಾತ ಸಮಾಜಕ್ಕೆ ಮುಂದಿನ ದಿನಗಳಲ್ಲಿ ನ್ಯಾಯ ಒದಗಿಸುವ ಕೆಲಸ ಮಾಡುತ್ತಾರೆಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ವಾಕರಸಾ ಸಂಸ್ಥೆಯ ಉಪಾಧ್ಯಕ್ಷ ಸುನೀಲ್ ಹಣಮನ್ನವರ್, ಬೆಳಗಾವಿ ಗ್ರಾಮೀಣ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ವಿನಯ ನಾವಲಗಟ್ಟಿ ಸೇರಿದಂತೆ ಇತರರು ಇದ್ದರು.



ಲವ್ ಜಿಹಾದ್‌ಗೆ ಯತ್ನಿಸುವವರ ವಿರುದ್ಧ ಕ್ರಮಕೈಗೊಳ್ಳಿ: ಟೆಂಗಿನಕಾಯಿ



ಹುಬ್ಬಳ್ಳಿ: ನಗರದಲ್ಲಿ ಹಿಂದು ಯುವತಿಯರನ್ನು ಅನ್ಯ ಸಮುದಾಯದ ಯುವಕರು ಯಾಮಾರಿಸಿ ದೌರ್ಜನ್ಯ ಎಸಗುವ ಪ್ರಕರಣಗಳು ಪದೇ ಪದೆ ನಡೆಯುತ್ತಿದ್ದು, ಪೊಲೀಸ್ ಇಲಾಖೆ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಶಾಸಕ ಮಹೇಶ ಟೆಂಗಿನಕಾಯಿ ಆಗ್ರಹಿಸಿದರು.

ಶುಕ್ರವಾರ ಲವ್ ಜಿಹಾದ್ ಯತ್ನ ಆರೋಪದ ಪ್ರಕರಣದ ಸಂತ್ರಸ್ತೆ ಮನೆಗೆ ಭೇಟಿ ನೀಡಿ, ಆವಳ ಕುಟುಂಬಸ್ಥರಿಗೆ ಸಾಂತ್ವನ ನೀಡಿ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಇಂತಹ ಪ್ರಕರಣಗಳು ಇಂದಿನಿಂದಿಲ್ಲ, ಹಿಂದಿನಿಂದಲೂ ಇದೆ. ಕೆಲವರು ಮರ್ಯಾದೆಗೆ ಅಂಜಿ ಸಹಿಸಿಕೊಂಡು ಬದುಕುತ್ತಿದ್ದಾರೆ. ಅಮಾಯಕ ಹಿಂದು ಯುವತಿಯರನ್ನು ಗುರಿಯಾಗಿಸಿಕೊಂಡು ಲವ್ ಜಿಹಾದ್‌ಗೆ ಯತ್ನಿಸುವವರ ವಿರುದ್ಧ ಕಠಿಣ ಕ್ರಮಕೈಗೊಳ್ಳಲು ಪೊಲೀಸ್ ಇಲಾಖೆ ಮುಂದಾಗಬೇಕು. ಇಲ್ಲದಿದ್ದರೆ, ಪ್ರಕರಣವನ್ನು ಸಿಬಿಐಗೆ ಒಪ್ಪಿಸಬೇಕೆಂದು ಒತ್ತಾಯಿಸಬೇಕಾಗುತ್ತದೆ ಎಂದು ಎಚ್ಚರಿಕೆ ನಿಡಿದರು.

ಉದ್ಯೋಗಾಕಾಂಕ್ಷಿಗಳ ಪ್ರತಿಭಟನೆಗೆ ಕೋರ್ಟ್ ಅವಕಾಶ

ಧಾರವಾಡ: ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಸರ್ಕಾರಿ ಹುದ್ದೆಗಳ ಭರ್ತಿಗಾಗಿ ಉದ್ಯೋಗಾಕಾಂಕ್ಷಿಗಳು ಕೊನೆಗೂ ನ್ಯಾಯಾಲಯದ ಮೂಲಕ ಪ್ರತಿಭಟನೆಗೆ ಅವಕಾಶ ಪಡೆದುಕೊಂಡಿದ್ದಾರೆ.

ಇಲ್ಲಿಯ ಜಿಲ್ಲಾಧಿಕಾರಿ ಕಚೇರಿ ಎದುರು ಏ.8ರಂದು ಹಮ್ಮಿಕೊಂಡಿದ್ದ ಆಕಾಂಕ್ಷಿಗಳ ಪ್ರತಿಭಟನೆಗೆ ಪೊಲೀಸ್ ಇಲಾಖೆಯು ಪರವಾನಗಿ ನೀಡಿರಲಿಲ್ಲ. ಹೀಗಾಗಿ ಉದ್ಯೋಗಾಕಾಂಕ್ಷಿಗಳು ಅಖಿಲ ಕರ್ನಾಟಕ ವಿದ್ಯಾರ್ಥಿ ಸಂಘಟನೆ ಮುಖ್ಯಸ್ಥ ಕಾಂತಕುಮಾರ ನೇತೃತ್ವದಲ್ಲಿ ಹೈಕೋರ್ಟ್ ಮೊರೆ ಹೋಗಿದ್ದರು.

ಶುಕ್ರವಾರ ಅರ್ಜಿ ವಿಚಾರಣೆಗೆ ಬಂದು, ಶರತ್ತು ಬದ್ಧ ಪ್ರತಿಭಟನೆಗೆ ನ್ಯಾಯಮೂರ್ತಿ ಅಶೋಕ ಕಿಣಗಿ ಅವರಿದ್ದ ಏಕಸದಸ್ಯ ಪೀಠವು ಅವಕಾಶ ನೀಡಿದೆ.

100 ಜನರಿಗೆ ಮಾತ್ರ ಅವಕಾಶ. ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆಯಿಂದಾಗಿ ಪೊಲೀಸ ಆಯುಕ್ತ ಎನ್.ಶಶಿಕುಮಾರ ಅವರ ಮನವಿ ಮೇರೆಗೆ ಹುಬ್ಬಳ್ಳಿಯ ನೆಹರೂ ಮೈದಾನದಲ್ಲಿ 100 ಜನರಿಗೆ ಮಾತ್ರ ಪ್ರತಿಭಟನೆಗೆ ಅವಕಾಶ ದೊರೆತಿದೆ.

ಸಂಘಟನೆಯು ಮೊದಲೇ ಪೊಲೀಸರಿಗೆ ನೀಡಿದ ಪಟ್ಟಿಯಲ್ಲಿದ್ದವರಿಗೆ ಮಾತ್ರ ಪ್ರತಿಭಟನೆಯಲ್ಲಿ ಭಾಗಿಯಾಗಲು ಸೂಚಿಸಿ ಆದೇಶಿಸಲಾಗಿದೆ.

ವಿಚಾರಣೆ ವೇಳೆ ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ನಡೆಸುವ ವಿಚಾರವಾಗಿ ಚರ್ಚೆ ನಡೆಯಿತು. ಈ ಕುರಿತು ನ್ಯಾಯಾಲಯದ ಗಮನ ಸೆಳೆದ ಪೊಲೀಸ್ ಆಯುಕ್ತ ಎನ್. ಶಶಿಕುಮಾರ, ಸಾವಿರಾರು ವಿದ್ಯಾರ್ಥಿಗಳು ಹಾಗೂ ಆಕಾಂಕ್ಷಿಗಳು ಇರುವ ಜಾಗದಿಂದ ಕೆಲವೇ ದೂರದಲ್ಲಿ ಜಿಲ್ಲಾಧಿಕಾರಿ ಕಚೇರಿ ಇದೆ.

ಕಾನೂನು ಸುವ್ಯವಸ್ಥೆ ಸಮಸ್ಯೆಯಾಗುತ್ತದೆ. ಈ ಹಿಂದಿನ ಎರಡು ಪ್ರತಿಭಟನೆಗಳಲ್ಲಿ ಅಹಿತಕರ ಘಟನೆಗಳು ನಡೆದಿವೆ. ಸುಮಾರು 17 ಸಿಬ್ಬಂದಿಗೆ ಪೆಟ್ಟುಗಳಾಗಿವೆ. ಅಲ್ಲದೇ, ಆರು ಪ್ರಕರಣಗಳು ಸಹ ಪ್ರತಿಭಟನಾಕಾರರ ವಿರುದ್ಧ ದಾಖಲಾಗಿವೆ ಎಂದರು.

6.43 ಲಕ್ಷ ರೂ. ಮೌಲ್ಯದ ಗಾಂಜಾ ವಶ: ಓರ್ವನ ಬಂಧನ



ಕಲಬುರಗಿ: ನಗರದ ವಿಶ್ವವಿದ್ಯಾಲಯ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಿಷೇಧಿತ ಗಾಂಜಾ ಸಾಗಣೆ ಮಾಡಲು ಯತ್ನಿಸುತ್ತಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಖಚಿತ ಮಾಹಿತಿ ಮೇರೆಗೆ ನಡೆಸಿದ ಕಾರ್ಯಾಚರಣೆಯಲ್ಲಿ ಆರೋಪಿಯಿಂದ 6 ಕೆಜಿ 450 ಗ್ರಾಂ ತೂಕದ ಗಾಂಜಾವನ್ನು ವಶಪಡಿಸಿಕೊಳ್ಳಲಾಗಿದೆ. ಜಪ್ತಿ ಮಾಡಿದ ಗಾಂಜಾದ ಮೌಲ್ಯ ರೂ. 6,43,300 ಎಂದು ಅಂದಾಜಿಸಲಾಗಿದೆ.

ಆರೋಪಿಯನ್ನು ವಶಕ್ಕೆ ಪಡೆದು, ಗಾಂಜಾ ಹಾಗೂ ಇತರೆ ವಸ್ತುಗಳನ್ನು ಪೊಲೀಸರು ಜಪ್ತಿ ಮಾಡಿಕೊಂಡಿದ್ದಾರೆ. ಆರೋಪಿಯ ವಿರುದ್ಧ ಪ್ರಕರಣ ದಾಖಲಿಸಲಾಗಿದ್ದು, ವಿಶ್ವವಿದ್ಯಾಲಯ ಠಾಣೆ ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಬಳ್ಳಾರಿ ಕೇಂದ್ರ ಕಾರಾಗೃಹಕ್ಕೆ ಎಸ್ಪಿ, ಎಎಸ್ಪಿ ತಂಡ ಭೇಟಿ

ಬಳ್ಳಾರಿ: ನಗರದ ಕೇಂದ್ರ ಕಾರಾಗೃಹಕ್ಕೆ ಬೆಳ್ಳಂಬೆಳಗ್ಗೆ ಎಸ್ಪಿ ಡಾ. ಸುಮನ್ ಡಿ.ಪೆನ್ನೇಕರ್, ಎಎಸ್ಪಿ ನವೀನ್ ಕುಮಾರ್ ಅವರ ನೇತೃತ್ವದ ತಂಡ ದಿಢೀರ್ ದಾಳಿ ನಡೆಸಿ, ತಪಾಸಣೆ ನಡೆಸಿದರು.

ಕಾರಾಗೃಹದಲ್ಲಿ ಅಶಿಸ್ತಿನ ಘಟನೆಗಳು, ಕೆಲ ಕೈದಿಗಳ ದುರ್ನಡತೆ ಕುರಿತು ದೂರುಗಳು, ಆರೋಪ ಪ್ರತ್ಯಾರೋಪಗಳು ಕೇಳಿ ಬಂದ ಹಿನ್ನೆಲೆಯಲ್ಲಿ ಸುಮಾರು 200ಕ್ಕೂ ಪೊಲೀಸ್ ಸಿಬ್ಬಂದಿಗಳೊಂದಿಗೆ ಕಾರಾಗೃಹದ ಮೇಲೆ ದಾಳಿ ನಡೆಸಿ ಬಿಗ್ ಶಾಕ್ ನೀಡಿದರು.

ಈ ವೇಳೆ ಜೈಲಿನ ಕೈದಿಗಳು, ಕೆಲಕಾಲ ಕಕ್ಕಾ ಬಿಕ್ಕಿಯಾದರು. ಸುಮಾರು 3 ಗಂಟೆಗೂ ಹೆಚ್ಚು ಕಾಲ, ಜೈಲಿನ ಪ್ರತಿ ಬ್ಯಾರಕಗಳು, ಶೌಚಾಲಯಗಳು, ಕೈದಿಗಳು ಓಡಾಡುವ ಆವರಣ ಸೇರಿದಂತೆ ನಾನಾ ಕಡೆ ತಪಾಸಣೆ ನಡೆಸಿದರು.

ಈ ವೇಳೆ ಯಾವುದೇ ಮಾದಕ ವಸ್ತುಗಳು, ಮಾರಕಾಸ್ತ್ರಗಳು ಪತ್ತೆಯಾಗಿಲ್ಲ, ಆದರೆ, ಅಧಿಕಾರಿಗಳಿಗೆ ಕಂಡು ಬಂದ ಕೆಲ ಅನುಮಾನಾಸ್ಪದ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ. ಇಲಾಖೆಯ ವತಿಯಿಂದ ಸಾಕ್ಷ್ಯವಾಗಿ ದಾಖಲಿಸಿಕೊಳ್ಳಲಾಗಿದ್ದು, ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಹಿಂದೆ ಕಾರಾಗೃಹದಲ್ಲಿ ಕೆಲ ಕೈದಿಗಳು ಅಶಿಸ್ತಿನಿಂದ ನಡೆದುಕೊಂಡಿರುವುದು, ಭದ್ರತಾ ವ್ಯವಸ್ಥೆಯನ್ನು ಮತ್ತಷ್ಟು ಬಿಗಿಗೊಳಿಸಲು ಹಾಗೂ ಕೈದಿಗಳಿಗೆ ಎಚ್ಚರಿಕೆ ನೀಡುವ ದೃಷ್ಟಿಯಿಂದ ಈ ಕಾರ್ಯಾಚರಣೆ ನಡೆದಿದೆ ಎಂದು ತಿಳಿದು ಬಂದಿದೆ.

ಈ ಕುರಿತು ಎಸ್ಪಿ ಡಾ.ಸುಮನ್ ಡಿ.ಪೆನ್ನೇಕರ್ ಅವರು ಮಾತನಾಡಿ, ಇದು ಯಾವುದೇ ನಿರ್ದಿಷ್ಟ ಉದ್ದೇಶದ ದಾಳಿಯಲ್ಲ, ಭದ್ರತಾ ದೃಷ್ಟಿಯಿಂದ ಕಾರಾಗೃಹದಲ್ಲಿ ಕಾಲಕಾಲಕ್ಕೆ ನಡೆಸುವ ಸಾಮಾನ್ಯ ರೂಟೀನ್ ಚೆಕ್ ಅಷ್ಟೇ ಎಂದು ಸ್ಪಷ್ಟಪಡಿಸಿದರು.

ಮಲ್ಲಿಕಾರ್ಜುನ ಖರ್ಗೆ ಬಂಧನಕ್ಕೆ ಆಗ್ರಹ


ದಾಂಡೇಲಿ: ಬಿಜೆಪಿ ಮತ್ತು ಆರ್‌ಎಸ್‌ಎಸ್ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿರುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಕೂಡಲೇ ಬಂಧಿಸಬೇಕೆಂದು ಮಾಜಿ ಶಾಸಕ ಹಾಗೂ ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಸುನೀಲ ಹೆಗಡೆ ಆಗ್ರಹಿಸಿದ್ದಾರೆ. ಅವರು ಶುಕ್ರವಾರ ನಗರದಲ್ಲಿ ಮಾಧ್ಯಮಕ್ಕೆ ಪ್ರತಿಕ್ರಿಯಿಸಿ ಮಾತನಾಡಿದರು.



ಮಲ್ಲಿಕಾರ್ಜುನ ಖರ್ಗೆ ಅವರು ತಮ್ಮ ಚುನಾವಣಾ ಭಾಷಣದ ವೇಳೆ, ಒಂದೇ ಕೋಮಿನ ಜನರ ಓಲೈಕೆಗಾಗಿ ಬಿಜೆಪಿ ಮತ್ತು ಆರ್‌ಎಸ್‌ಎಸ್ ಹಾವುಗಳು ಇದ್ದ ಹಾಗೆ, ಇವುಗಳನ್ನು ನಮಾಜ್ ಮಾಡುವಂತಹ ಸಂದರ್ಭದಲ್ಲಿಯೂ ನಮಾಜ್ ನಿಲ್ಲಿಸಿ ಕೊಲ್ಲಬೇಕೆಂದು ಮಾತಾಡಿದ್ದಾರೆ. ಇದು ಕಾಂಗ್ರೆಸ್ ಪಕ್ಷದ ಸಂಸ್ಕೃತಿಯಾಗಿದೆ. ಮಲ್ಲಿಕಾರ್ಜುನ ಖರ್ಗೆ ಅವರ ಈ ಹೇಳಿಕೆಯಿಂದಾಗಿ ಕೋಮುಗಲಭೆ ಹರಡುವ ಸಂದರ್ಭಗಳು ಬರಬಹುದು. ಇದು ದೇಶದ್ರೋಹಿ ಹೇಳಿಕೆಯಾಗಿದೆ. ಈ ನಿಟ್ಟಿನಲ್ಲಿ ಇವರನ್ನು ಕೂಡಲೇ ಬಂಧಿಸಬೇಕೆಂದು ಸುನೀಲ ಹೆಗಡೆಯವರು ಆಗ್ರಹಿಸಿದ್ದಾರೆ.

ಖರ್ಗೆ ಹೇಳಿಕೆ ವಿವಾದ ಬೇಡ: ದೇಶಪಾಂಡೆ

ಹಳಿಯಾಳ: ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ನೀಡಿದ ಹೇಳಿಕೆಯನ್ನು ನಾವು ವಿಶಾಲ ಮತ್ತು ಸಮತೋಲನದ ದೃಷ್ಟಿಯಿಂದ ಅರ್ಥಮಾಡಿಕೊಳ್ಳುವುದು ಅಗತ್ಯವಾಗಿದೆ. ಈ ಹೇಳಿಕೆಯನ್ನು ಬಿಜೆಪಿ ಅನವಶ್ಯಕವಾಗಿ ವಿವಾದಾತ್ಮಕವಾಗಿಸಲು ಯತ್ನಿಸುತ್ತಿರುವುದನ್ನು ಖಂಡಿಸುವುದಾಗಿ ಮಾಜಿ ಸಚಿವ, ಶಾಸಕ ಆರ್.ವಿ.ದೇಶಪಾಂಡೆ ಹೇಳಿದ್ದಾರೆ. ಈ ಕುರಿತಾಗಿ ಹೇಳಿಕೆ ನೀಡಿರುವ ಅವರು ಖರ್ಗೆ ಅವರ ಉದ್ದೇಶ ಸಮಾಜದಲ್ಲಿ ದ್ವೇಷ ಅಥವಾ ವೈಮನಸ್ಸನ್ನು ಉಂಟು ಮಾಡುವುದಲ್ಲ ಎಂಬುದು ಸ್ಪಷ್ಟ. ಸರ್ವರಿಗೂ ಸಮಪಾಲು ಸಮಬಾಳು ಎನ್ನುವ ತತ್ವಕ್ಕೆ ಕಾಂಗ್ರೆಸ್ ಪಕ್ಷ ಬದ್ಧವಾಗಿದ್ದು, ಬುದ್ಧ, ಬಸವ ಅವರ ತತ್ವಗಳನ್ನು ಅಳವಡಿಸಿಕೊಂಡಿದೆ. ದೇಶದ ಏಕತೆ, ಶಾಂತಿ ಮತ್ತು ಸಾಮರಸ್ಯವನ್ನು ಕಾಪಾಡುವುದು ಎಲ್ಲ ರಾಜಕೀಯ ಪಕ್ಷಗಳ ಹಾಗೂ ನಾಗರಿಕರ ಜವಾಬ್ದಾರಿ ಎಂದು ನಾನು ಬಲವಾಗಿ ನಂಬಿದ್ದೇನೆ. ಪರಸ್ಪರ ಗೌರವ, ಸಹಿಷ್ಣುತೆ ಮತ್ತು ಸಂವಾದದ ಮೂಲಕ ನಾವು ಇನ್ನಷ್ಟು ಬಲವಾದ ಮತ್ತು ಸಮಗ್ರ ಭಾರತವನ್ನು ನಿರ್ಮಿಸಬೇಕಿದೆ ಎಂದು ಹೇಳಿದ್ದಾರೆ.



ಕೆಡಿಸಿಸಿ ಬ್ಯಾಂಕ್‌ಗೆ ರೂ. 27.35 ಕೋಟಿ ನಿಕ್ಕಿ ಲಾಭ: ಹೆಬ್ಬಾರ

ಶಿರಸಿ: ಜಿಲ್ಲೆಯ ಪ್ರತಿಷ್ಠಿತ ಮಧ್ಯವರ್ತಿ ಬ್ಯಾಂಕ್ ಕೆಡಿಸಿಸಿ ಬ್ಯಾಂಕ್ 2025-26ನೇ ಸಾಲಿನಲ್ಲಿ 27.35 ಕೋಟಿ ನಿಕ್ಕಿ ಲಾಭ ಗಳಿಸಿದೆ ಎಂದು ಬ್ಯಾಂಕ್ ಅಧ್ಯಕ್ಷ ಶಿವರಾಮ ಹೆಬ್ಬಾರ ಹೇಳಿದರು.

ಶುಕ್ರವಾರ ಬ್ಯಾಂಕ್‌ನ ಪ್ರಧಾನ ಕಚೇರಿಯಲ್ಲಿ ಸುದ್ದಿಗೋಷ್ಠಿ ಆಯೋಜಿಸಿ ಮಾಹಿತಿ ನೀಡಿದ ಅವರು, ಬ್ಯಾಂಕಿನ ಶೇರು ಬಂಡವಾಳವು 145.11ಕೋಟಿ ರೂ.ಗಳಿಂದ 156.85ಕೋಟಿ ರೂ.ಗಳಿಗೆ ಏರಿಕೆ ಕಂಡಿದೆ. ನಿಧಿಗಳು 351.44ಕೋಟಿ ಗಳಿಂದ 382.37ಕೋಟಿ ರೂ. ಗಳಾಗಿವೆ. ಠೇವುಗಳು 3569.45ಕೋಟಿ ಗಳಿಂದ 4191.41ಕೋಟಿಗೆ ಏರಿಕೆಯಿಗಿದೆ. ಒಟ್ಟೂ ಆದಾಯ 411.27ಕೋಟಿ ರೂ.ಗಳಿಗಿದೆ. ಸಾಲಬಾಕಿ 3384.85ಕೋಟಿ ರೂ.ಗಳಷ್ಟಿದ್ದು ದುಡಿಯುವ ಬಂಡವಾಳ 5269.46 ಕೋಟಿ ರೂ. ತಲುಪಿದೆ ಎಂದರು.

ನಮ್ಮ ಜಿಲ್ಲೆಯನ್ನು ತೋಟಗಾರಿಕಾ ಜಿಲ್ಲೆಯೆಂದು ಘೋಷಿಸಿರುವ ಹಿನ್ನೆಲೆಯಲ್ಲಿ ತೋಟಗಾರಿಕಾ ಬೆಳೆಗಳ ಬಗ್ಗೆಯೂ ಸಹ ಸಾಲ ನೀಡಲಾಗುತ್ತಿದೆ. 31.3.2026ಕ್ಕೆ ಇದ್ದಂತೆ ವ್ಯವಸಾಯ ಸಾಲ ವಸೂಲಿ ಪ್ರಮಾಣ ಶೇ.99.18 ಆಗಿದೆ ಎಂದರು.



ಜಿಲ್ಲೆಯಲ್ಲಿ ಕೃಷಿಯನ್ನು ಉತ್ತೇಜಿಸುವ ಕಾರಣಕ್ಕೆ ಅರ್ಹ ಗ್ರಾಹಕರಿಗೆ ಕೃಷಿಭೂಮಿ ಖರೀದಿ ಬಗ್ಗೆ 30ಲಕ್ಷ ರೂ.ಗಳವರೆಗೆ ಬ್ಯಾಂಕ್‌ನಿಂದ ನೇರ ಸಾಲ ವಿತರಣೆ ಮಾಡಲಾಗುತ್ತಿದೆ. 31.3.2026ಕ್ಕೆ ಇದ್ದಂತೆ 133 ಗ್ರಾಹಕರಿಗೆ 3303.22ಲಕ್ಷ ಸಾಲ ಮಂಜೂರಿ ನೀಡಲಾಗಿದೆ ಎಂದರು.

ಕಳೆದ ಬಾರಿಗಿಂತ ಎನ್‌ಪಿಎ ಪ್ರಮಾಣದಲ್ಲಿ ಕೊಂಚ ಏರಿಕೆ ವಿಷಯಕ್ಕೆ ಸ್ಪಷ್ಟೀಕರಣ ನೀಡಿದ ಹೆಬ್ಬಾರ್, ಸಾಲ ವಸೂಲಾತಿ ಸಮಯದ ವೇಳೆಯಲ್ಲಿ ಬ್ಯಾಂಕಿನ ಆಡಳಿತ ಮಂಡಳಿ ಚುನಾವಣೆ ನಡೆದು ಕೆಲ ವಿಷಯಕ್ಕೆ ನ್ಯಾಯಾಲಯದಲ್ಲಿ ಪ್ರಕರಣಗಳಿದ್ದವು. ಆಡಳಿತ ಮಂಡಳಿ ರಚನೆ ಆಗದೇ ಇರುವ ಹಿನ್ನೆಲೆಯಲ್ಲಿ ಕೊಂಚ ಏರಿಕೆ ಆಗಿರಬಹುದು. ಆದರೆ, ರಾಷ್ಟ್ರೀಕೃತ ಬ್ಯಾಂಕ್ ಗಳಿಗೆ ಹೋಲಿಕೆ ಮಾಡಿದರೆ, ನಮ್ಮ ಬ್ಯಾಂಕ್ ತೀರಾ ಕಡಿಮೆ ಇದೆ. ಅಲ್ಲದೇ ಶುಗರ್ ಫ್ಯಾಕ್ಟರಿ ಗಳ ಸಾಲ ವಸೂಲಿ ಆಗಿದೆ. ಅಲ್ಲದೇ ಫಾರಂ ಹೌಸ್ ನಿರ್ಮಿಸಲು ಬ್ಯಾಂಕಿನಿಂದ ಸಾಲ ನೀಡಲಾಗಿತ್ತು. ಅದರಲ್ಲಿ ಶೇ. 55 ರಷ್ಟು ವಸೂಲಾತಿಯಲ್ಲಿ ವ್ಯತ್ಯಯ ಆಗಿದೆ. ಇದೂ ಒಂದು ಕಾರಣ ಆಗಿರಬಹುದು ಎಂದರು.

ರೈತರು ಸರಿಯಾದ ರೀತಿಯಲ್ಲಿ ವ್ಯವಹಾರ ನಡೆಸುತ್ತಿರುವ ಹಿನ್ನೆಲೆಯಲ್ಲಿ ಬ್ಯಾಂಕ್ ಇಷ್ಟು ದೊಡ್ಡ ಮಟ್ಟದಲ್ಲಿ ಬೆಳೆದಿದೆ. ಮಾಧ್ಯಮಿಕ ಸಾಲದ ಕಂತನ್ನು ವಿಸ್ತರಿಸುವಂತೆ ರೈತರು ಮನವಿ ಮಾಡುತ್ತಿದ್ದಾರೆ. ಆದರೆ, ಇದು ಬ್ಯಾಂಕ್‌ನಿಂದ ಆಗುವ ಕೆಲಸವಲ್ಲ, ಕೇಂದ್ರ ಸರ್ಕಾರ ಈ ಬಗ್ಗೆ ಗಮನ ಹರಿಸಬೇಕು.
■ ಶಿವರಾಮ ಹೆಬ್ಬಾರ, ಕೆಡಿಸಿಸಿ ಬ್ಯಾಂಕ್ ಅಧ್ಯಕ್ಷ

ಈ ಸಂದರ್ಭದಲ್ಲಿ ಉಪಾಧ್ಯಕ್ಷ.ಕೃಷ್ಣ ದೇಸಾಯಿ ನಿರ್ದೇಶಕರಾದ ಶ್ರೀಕಾಂತ ಘೋಟ್ನೇಕರ್ , ಮೋಹನ ನಾಯಕ, ಪ್ರಕಾಶ ಗುನಗಿ, ಭೀರಣ್ಣ ನಾಯಕ್, ವಿಶ್ವನಾಥ ಭಟ್, ಸುರೇಶ್ಚಂದ್ರ ಹೆಗಡೆ ಕೆಶಿನ್ಮನೆ, ಹೆಮ್ಮಣ್ಣ ನಾಯ್ಕ, ಮಹಾಬಲೇಶ್ವರ ಹೆಗಡೆ, ವಿ.ಕೆ ವಿಶಾಲ್, ರವಿ ಹೆಗಡೆ, ನಿರಂಜನ ಭಟ್ ಹಾಗೂ ಮುಖ್ಯ ವ್ಯವಸ್ಥಾಪಕ ನಿರ್ದೇಶಕ ಶ್ರೀಕಾಂತ್ ಭಟ್ ಇದ್ದರು.

ಬಿದ್ರೊಳ್ಳಿ ಗ್ರಾಮದ ಯುವಕನ ಕೊಲೆ ಪ್ರಕರಣ ತಂದೆ, ತಾಯಿ, ಸಹೋದರನಿಗೆ ಜೀವಾವಧಿ ಶಿಕ್ಷೆ

ಹಳಿಯಾಳ: ತಾಲೂಕಿನಲ್ಲಿ ಸಂಚಲನ ಮೂಡಿಸಿದ್ದ 2019ರ ಬಿದ್ರೊಳ್ಳಿ ಗ್ರಾಮದ ಕೊಲೆ ಪ್ರಕರಣಕ್ಕೆ ಅಂತೂ ನ್ಯಾಯ ದೊರಕಿದ್ದು, ಕೊಲೆಯ ಆರೋಪಿ ತಂದೆ, ತಾಯಿ ಹಾಗೂ ಸಹೋದರನಿಗೆ ಜೀವಾವಧಿ ಶಿಕ್ಷೆ ಹಾಗೂ ದಂಡವನ್ನು ಜಿಲ್ಲಾ ಸತ್ರ ನ್ಯಾಯಾಲಯ ಕಾರವಾರ ಪೀಠ ಶಿರಸಿ ಶಿಕ್ಷೆ ವಿಧಿಸಿದೆ.

ಏನಿದು ಪ್ರಕರಣ: ಹಳಿಯಾಳ ತಾಲೂಕಿನ ಬಿದ್ರೊಳ್ಳಿ ಗ್ರಾಮದ ಕೇಶವ ಪಾಂಡುರಂಗ ಕಿತ್ತೂರಕರ್ (30) ಈತನು ಆಸ್ತಿಯಲ್ಲಿ ಪಾಲು ಕೇಳಿದ್ದಕ್ಕೆ ಕುಪಿತಗೊಂಡ ತಂದೆ ಪಾಂಡುರಂಗ ಕೀರಪ್ಪಾ ಕಿತ್ತೂರಕರ್, ತಾಯಿ ಲತಾ ಯಾನೆ ತುಳಸಾಯಿ ಪಾಂಡುರಂಗ ಕಿತ್ತೂರಕರ್ ಹಾಗೂ ಕಿರಿಯ ಸಹೋದರ ಅಕ್ಷಯ ಯಾನೆ ಆಕಾಶ ಪಾಂಡುರಂಗ ಕಿತ್ತೂರಕರ್ ಕ್ಯಾತೆ ತೆಗೆದು ಕೈಕಾಲು ಕಟ್ಟಿ ಬದಿರಿನ ಕೋಲಿನಿಂದ ಥಳಿಸಿದ್ದಲ್ಲದೇ ಹಗ್ಗದಿಂದ ಕುತ್ತಿಗೆಗೆ ಬಿಗಿದು ಸಾಯಿಸಿ ನಂತರ ರಕ್ತಸಿಕ್ತ ಬಟ್ಟೆಯನ್ನು ಬದಲಾಯಿಸಿ ಸಾಕ್ಷಿ ನಾಶಕ್ಕೆ ಮುಂದಾಗಿದ್ದರು.

ಇವರಿಗೆ ಅಪಾದಿತರ ಸಂಬಂಧಿಗಳಾದ ಗಣಪತಿ ಯಲ್ಲಪ್ಪಾ ಕಿತ್ತೂರಕರ್ ಹಾಗೂ ಲಕ್ಷ್ಮಣ ಕೇದಾರಿ ಕಿತ್ತೂರಕರ್ ಸಹಾಯ ಪಡೆದು ಸಾಕ್ಷಿ ನಾಶಕ್ಕೆ ಸಹಕರಿಸಿದ ಅಪಾದನೆಯಿದೆ. ಮುಖ್ಯ ಆರೋಪಿಗಳಿಗೆ ಶಿಕ್ಷೆ ಪ್ರಕಟವಾಗಿದ್ದು ಸಹ ಆರೋಪಿಗಳ ಶಿಕ್ಷೆ ಇನ್ನಷ್ಟೆ ಪ್ರಕಟವಾಗಬೇಕಿದೆ.



ಸರ್ಕಾರಿ ಅಭಿಯೋಜಕ ರಾಜೇಶ ಮಳಗಿಕರ ರವರ ಸಮರ್ಥ ನ್ಯಾಯ ಮಂಡನೆಯಿಂದಾಗಿ ಆರೋಪಿಗಳು ಶಿಕ್ಷೆಗೆ ಗುರಿಯಾಗುವಂತಾಗಿದ್ದು ಪೊಲೀಸ್ ಇಲಾಖೆಯ ಅಂದಿನ ತನಿಖಾಧಿಕಾರಿಯಾದ ಬಿ.ಎಸ್.ಲೋಕಾಪೂರ ಸಿಪಿಐಹಳಿಯಾಳರವರು ನ್ಯಾಯಾಲಯಕ್ಕೆ ಸಲ್ಲಿಸಿದ ನಿಖರವಾದ ದೋಷಾರೋಪಣೆ ಪತ್ರದಿಂದಾಗಿ ಮುಂದಿನ ದಿನಗಳಲ್ಲಿ ಕೇಸನ್ನು ನಿಭಾಯಿಸಿದ ಪೊಲೀಸ್ ಅಧಿಕಾರಿಗಳಾದ ಎಸ್‌ಪಿ ದೀಪನ್ ಎಮ್.ಎನ್. ಉ.ಕ. ಕಾರವಾರ, ಕೃಷ್ಣಮೂರ್ತಿ ಎಎಸ್ಪಿ , ಉ.ಕ. ಕಾರವಾರ, ಶಿವಾನಂದ ಮದರಖಂಡಿ ಡಿವಾಯ್‌ಎಸ್ಪಿ ದಾಂಡೇಲಿ ರವರ ಮಾರ್ಗದರ್ಶನದಂತೆ ಜಯಪಾಲ ಪಾಟೀಲ್ ಸಿಪಿಐಆಯ್ ಹಳಿಯಾಳ ಪ್ರಕರಣದ ನಿರೀಕ್ಷಣೆ ಮಾಡಿದ್ದು ಆರೋಪಿಗಳಿಗೆ ಶಿಕ್ಷೆಯಾಗುವಂತೆ ಶ್ರಮ ವಹಿಸಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಕವನ ಸ್ಪರ್ಧೆ: ರಂಜಿತಾ ದ್ವಿತೀಯ



• **ಅಂಕೋಲಾ:** ಶೆಟಗೇರಿಯ ರಂಜಿತಾ ರಾಜು ಆಗೇರ ಅವರು ಹುಬ್ಬಳ್ಳಿಯ ಉಮಾಶಂಕರ ಪ್ರತಿಷ್ಠಾನ ಯುಗಾದಿ ಹಬ್ಬದ ನಿಮಿತ್ತ ನಡೆಸಿದ ರಾಜ್ಯ ಮಟ್ಟದ 'ಸ್ವರ್ಣಸಿರಿ ಕಾವ್ಯಧುರಿ' ಕವನ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಪಡೆದುಕೊಂಡಿದ್ದಾಳೆ. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪದವಿ ಓದುತ್ತಿರುವ ಇವಳು ಪಿ.ಎಂ.ಕಾಲೇಜಿನಲ್ಲಿ ಫಾಲ್ಗುಣ ಗೌಡ ಅವರು ತಮ್ಮ ತಂದೆ ಸ್ಮರಣಾರ್ಥ ಪ್ರತಿ ವರ್ಷ ನಡೆಸುವ ಚಿತ್ರ ಕವನ ಸ್ಪರ್ಧೆಯಲ್ಲಿ ಎರಡು ಬಾರಿ ಪ್ರಥಮ ಬಹುಮಾನ ಪಡೆದಿದ್ದಳು. ಕಾಲೇಜಿನ ಪಠ್ಯೇತರ ಚಟುವಟಿಕೆಗಳಲ್ಲೂ ಓದಿನಲ್ಲೂ ಮುಂದಿರುವ ರಂಜಿತಾ ಆಗೇರ ಸಾಧನೆಗೆ ಕಾಲೇಜಿನ ಪ್ರಾಂಶುಪಾಲರಾದ ವಿಜಯಾ ಪಾಟೀಲ ಮತ್ತು ಸಿಬ್ಬಂದಿ ಅಭಿನಂದನೆ ಸಲ್ಲಿಸಿದ್ದಾರೆ.

ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಸಾಧನೆ

• **ಗೋಕರ್ಣ:** ಇಲ್ಲಿನ ವಿಷ್ಣುಗುಪ್ತ ವಿಶ್ವವಿದ್ಯಾ ಪೀಠದ ಸಾರ್ವಭೌಮ ಗುರುಕುಲಮ್ ಕಾಲೇಜಿನ ದ್ವಿತೀಯ ಪಿಯು ಸಿ ವಿದ್ಯಾರ್ಥಿಗಳು ಶೇ100 ರಷ್ಟು ಫಲಿತಾಂಶ ದಾಖಲಿಸಿ ಗುರುಕುಲಕ್ಕೆ ಕೀರ್ತಿ ತಂದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಪನ್ನಗ ಎಸ್ ಭಟ್ (97.83)ರಷ್ಟು, ರಾಮಚಂದ್ರ ಉಪಾಧ್ಯಾಯ ಮತ್ತು ಸುಮುಖ ಜಿ ಹೆಗಡೆ (97.670) ರಷ್ಟು ಅಂಕಗಳಿಸಿದ್ದಾರೆ. ವಿಜ್ಞಾನ ವಿಭಾಗದಲ್ಲಿ ದರ್ಶನ್ ಸಾಹಿ (95.33) ರಷ್ಟು, ಸೌಭಾಗ್ಯಲಕ್ಷ್ಮಿ.ಎಂ.ಬಿರಾದಾರ್(94.50) ರಷ್ಟು ತ್ರಿಶಾ ನಾಗರಾಜ್ ರಾಯ್ಕರ್ (90), ರಾಜಶ್ರೀ ಗಣಪತಿ ಗೌಡ(88.33) ರಷ್ಟು ಅಂಕ ಪಡೆದುಕೊಂಡಿದ್ದಾರೆ. ಉಳಿದ ವಿದ್ಯಾರ್ಥಿಗಳು ಉನ್ನತ ಅಂಕಗಳೊಂದಿಗೆ ಮೊದಲ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಗುರುಕುಲದ ಸಂಸ್ಥಾಪಕರಾದ ರಾಘವೇಶ್ವರ ಭಾರತಿ ಶ್ರೀಗಳು ಮಕ್ಕಳ ಸಾಧನೆಗೆ ಪ್ರಾಚಾರ್ಯರು,ಮುಖ್ಯಾಧ್ಯಾಪಕರು, ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.



ವೈಟಿಎಸ್‌ಎಸ್ ಕಾಲೇಜಿನ ಉತ್ತಮ ಫಲಿತಾಂಶ

• **ಯಲ್ಲಾಪುರ:** ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಸ್ಥಳೀಯ ವೈಟಿಎಸ್‌ಎಸ್ ಸಂಯುಕ್ತ ಪದವಿಪೂರ್ವ ಕಾಲೇಜಿನ ಒಟ್ಟು 162 ವಿದ್ಯಾರ್ಥಿಗಳಲ್ಲಿ 159 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಅದರಲ್ಲಿ 72 ಉನ್ನತ ಶ್ರೇಣಿ, 80 ಪ್ರಥಮ ಶ್ರೇಣಿ, 7 ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ವಿಜ್ಞಾನ ವಿಭಾಗದಲ್ಲಿ 98.44%, ವಾಣಿಜ್ಯ ವಿಭಾಗದಲ್ಲಿ 100 %ಹಾಗೂ ಕಲಾ ವಿಭಾಗದಲ್ಲಿ 92.86% ರಷ್ಟು ಫಲಿತಾಂಶ ಬಂದಿದ್ದು ಕಾಲೇಜಿನ ಒಟ್ಟಾರೆ ಫಲಿತಾಂಶ 98.15% ಆಗಿದೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	60099	72619
ಬಿಳಿಗೋಟು	26100	39169
ಕೆಂಪುಗೋಟು	24011	36899
ಬೆಟ್ಟೆ	40699	52399
ರಾಶಿ	50410	55199
ಚಾಲಿ	44099	49511
ಬಿ.ಕಾಳುಮೆಣಸು	82099	91299

ಯಲ್ಲಾಪುರ	ಕನಿಷ್ಠ	ಗರಿಷ್ಠ
ಅಪಿ	58870	58870
ರಾಶಿ	49621	57899
ಬೆಟ್ಟೆ	38761	50469
ಕೆಂಪುಗೋಟು	18899	37012
ಬಿಳಿಗೋಟು	18899	42969
ಚಾಲಿ	39119	49809
ಕೋಕಾ	18000	35262
ಕಾಳುಮೆಣಸು	52675	69000



ಯಲ್ಲಾಪುರ: ವಿಧಾನ ಪರಿಷತ್ ಸದಸ್ಯರಾದ ಎಫ್.ಎಚ್. ಜಕ್ಕಪ್ಪನವರ ಪಟ್ಟಣದ ನಾಯಕ ನಕೇರಿಯ ದತ್ತಮಂದಿರಕ್ಕೆ ಭೇಟಿ ನೀಡಿ ದತ್ತಾತ್ರೇಯನ ದರ್ಶನ ಪಡೆದರು.ದತ್ತಮಂದಿರದ ಸುಂದರ ಪರಿಸರವನ್ನು ಕಂಡು ಸಂತಸ ವ್ಯಕ್ತಪಡಿಸಿದ ಅವರು. ಮುಂದಿನ ದಿನಗಳಲ್ಲಿ ಮಂದಿರಕ್ಕೆ ಬೇಕಾದ ನೆರವನ್ನು ನೀಡಲು ಸಿದ್ಧವಿರುವುದಾಗಿ ತಿಳಿಸಿದರು. ಪ್ರವಾಸೋದ್ಯಮ ಅಧ್ಯಯನ ಸಮಿತಿ ಉಕ ಸದಸ್ಯರಾದ ವೇಣುಗೋಪಾಲ ಮದ್ಗುಣಿ, ಅರ್ಚಕರು ಇದ್ದರು.

ಅನಧಿಕೃತ ಚಟುವಟಿಕೆ ತಡೆಯಲು ಒತ್ತಾಯ

• **ಮುಂಡಗೋಡ:** ತಾಲೂಕಿನಾದ್ಯಂತ ನಡೆಯುತ್ತಿರುವ ಅನಧಿಕೃತ ಚಟುವಟಿಕೆಗಳನ್ನು ತಡೆಯುವಂತೆ ಒತ್ತಾಯಿಸಿ ರಾಜ್ಯ ಮಾನವ ಹಕ್ಕುಗಳ ರಕ್ಷಣಾ ಪರಿಷತ್‌ನವರು ತಹಶೀಲ್ದಾರ್ ಶಂಕರ ಗೌಡಿ ಅವರಿಗೆ ಮನವಿ ಸಲ್ಲಿಸಿದರು.ಹಲವಾರು ವರ್ಷಗಳಿಂದ ತಾಲೂಕಿನ ವ್ಯಾಪ್ತಿಯೊಂದು ಹಳ್ಳಿಗಳಲ್ಲಿ ಸಾರ್ವಜನಿಕ ಸ್ಥಳಗಳಾದ ದೇವಸ್ಥಾನ, ಸ್ಕೂಲ್, ಹಸ್ಪಿಟಲ್, ಸರ್ಕಾರಿ ಆಸ್ಪತ್ರೆ ಹೀಗೆ ಹಲವಾರು ಸ್ಥಳಗಳಲ್ಲಿ ನಿರಂತರವಾಗಿ ತಂಬಾಕು, ಗುಟ್ಕಾ, ಸಿಗರೇಟ್, ಮಟ್ಕಾ ಹಾಗೂ ಮದ್ಯದಂಗಡಿಗಳು ಎಗ್ಗಿಲ್ಲದೆ ಮಾರಾಟ ಮಾಡುತ್ತಿದ್ದು, ಇದರಿಂದ ಶಾಲೆಯ ಚಿಕ್ಕ ಮಕ್ಕಳು ಸಾಕಷ್ಟು ಪ್ರಮಾಣದಲ್ಲಿ ಬಲಿಪಶುಗಳಾಗುತ್ತಿದ್ದಾರೆ. ಶಾಲಾ ಮಕ್ಕಳ ಕೈಯಿಂದ ಸಿಗರೇಟ್, ಗುಟ್ಕಾ ತರಿಸಿಕೊಳ್ಳುವುದರಿಂದ ದೇಶದ ಅಮೂಲ್ಯ ಆಸ್ತಿಯಾದ ಮಕ್ಕಳೇ ಇವತ್ತು ಗುಟ್ಕಾ, ಸಿಗರೇಟ್ ನಂತಹ ಮಾರಕ ವಸ್ತುಗಳಿಗೆ ದಾಸರಾಗುತ್ತಿದ್ದಾರೆ. ಮುಂದೆ ಬಾಳಿ-ಬೆಳೆದು ತಮ್ಮ ಕುಟುಂಬಗಳಿಗೆ ಆಸರೆಯಾಗಿ ನಿಲ್ಲುವ ಮಕ್ಕಳೇ ಇವತ್ತು ಹಲವಾರು ದುಶ್ಚಟಗಳಿಗೆ ಬಲಿಯಾಗಿ ಹಲವು ರೋಗಗಳಿಂದ ಬಳಲುತ್ತಿದ್ದಾರೆ. ಇದನ್ನು ಗಂಭೀರವಾಗಿ ಪರಿಗಣಿಸಿ ತಾಲೂಕಿನ ಎಲ್ಲಾ ಹಳ್ಳಿಗಳ ಹಾಗೂ ಪಟ್ಟಣದಲ್ಲಿನ ಅನಧಿಕೃತ ಚಟುವಟಿಕೆಗಳನ್ನು ತಕ್ಷಣ ನಿಲ್ಲಿಸಬೇಕು ಎಂದು ಮನವಿಯಲ್ಲಿ ತಿಳಿಸಿದ್ದಾರೆ. ನಂತರ ಸಿಪಿಐ ರಂಗನಾಥ ನೀಲಮ್ಮನವರ ಅವರಿಗೆ ಮನವಿ ಸಲ್ಲಿಸಿದರು.ಮಾನವ ಹಕ್ಕುಗಳ ರಕ್ಷಣಾ ಪರಿಷತ್ ತಾಲೂಕು ಸಮಿತಿಯ ಪದಾಧಿಕಾರಿಗಳಾದ ಧನರಾಜ್ ಸಿ., ಉದಯ್ ಕವಟೆ, ರಾಘವೇಂದ್ರ ಸಾನು, ವಾಮನ್ ರಾಯ್ಕರ, ಮಂಜುನಾಥ ಕವಟೆ, ರಾಜಕುಮಾರ ಮೊಸಳಗಿ, ಕೋಟೇಶ ಕುರುಬರ, ಜಗದೀಶ ಗೌಳಿ ಇದ್ದರು.



ಮುಂಡಗೋಡ: ತಾಲೂಕಿನಾದ್ಯಂತ ನಡೆಯುತ್ತಿರುವ ಅನಧಿಕೃತ ಚಟುವಟಿಕೆಗಳನ್ನು ತಡೆಯುವಂತೆ ಒತ್ತಾಯಿಸಿ ರಾಜ್ಯ ಮಾನವ ಹಕ್ಕುಗಳ ರಕ್ಷಣಾ ಪರಿಷತ್‌ನವರು ತಹಶೀಲ್ದಾರ್ ಶಂಕರ ಗೌಡಿ ಅವರಿಗೆ ಮನವಿ ಸಲ್ಲಿಸಿದರು. ಮಾನವ ಹಕ್ಕುಗಳ ರಕ್ಷಣಾ ಪರಿಷತ್ ತಾಲೂಕು ಸಮಿತಿಯ ಪದಾಧಿಕಾರಿಗಳಾದ ಧನರಾಜ್ ಸಿ., ಉದಯ್ ಕವಟೆ, ರಾಘವೇಂದ್ರ ಸಾನು, ವಾಮನ್ ರಾಯ್ಕರ, ಮಂಜುನಾಥ ಕವಟೆ, ರಾಜಕುಮಾರ ಮೊಸಳಗಿ, ಕೋಟೇಶ ಕುರುಬರ, ಜಗದೀಶ ಗೌಳಿ ಇದ್ದರು.

ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಬಿಜೆಪಿ ದೂರು

• **ಅಂಕೋಲಾ :** ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ರಾಷ್ಟ್ರಾಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ರಾಷ್ಟ್ರೀಯ ಸ್ವಯಂ ಸೇವಕ ಸಂಘ ಮತ್ತು ಭಾರತೀಯ ಜನತಾ ಪಕ್ಷದ ಸದಸ್ಯರನ್ನು ಕೊಲ್ಲುವಂತೆ ಪ್ರಚೋದನಾಕಾರಿ ಭಾಷಣ ಮಾಡಿರುವುದರಿಂದ ಅವರನ್ನು ಕೂಡಲೇ ಬಂಧಿಸುವಂತೆ ಭಾರತೀಯ ಜನತಾ ಪಕ್ಷದ ಅಂಕೋಲಾ ಮಂಡಲ ಯುವ ಮೋರ್ಚಾದ ವತಿಯಿಂದ ಅಂಕೋಲಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಯಿತು.

ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಆಸ್ಸಾಂ ಚುನುವಣಾ ಪ್ರಚಾರದ ಸಂದರ್ಭದಲ್ಲಿ ವಿಷ ಸರ್ಪ ಕಂಡರೆ

ಕೊಲ್ಲುವಂತೆ ಆರ್‌ಎಸ್‌ಎಸ್ ಮತ್ತು ಬಿಜೆಪಿಯವರನ್ನು ಕೊಲ್ಲುವಂತೆ ಪ್ರಚೋದನಾಕಾರಿ ಮಾತುಗಳನ್ನಾಡಿದ್ದು ಒಂದು ಸಮುದಾಯದ ಧರ್ಮಗ್ರಂಥದಲ್ಲಿ ಹೇಳಲಾಗಿದೆ ಉಲ್ಲೇಖಿಸಿ ಕರೆ ನೀಡಿರುವುದರಿಂದ ಲಕ್ಷಾಂತರ ಬಿಜೆಪಿ ಮತ್ತು ಆರ್‌ಎಸ್‌ಎಸ್ ಸದಸ್ಯರ ಜೀವಕ್ಕೆ ಅಪಾಯ ಎದುರಾಗಿದೆ ಎಂದು ದೂರಿನಲ್ಲಿ ಹೇಳಲಾಗಿದೆ.

ರಾಷ್ಟ್ರೀಯ ಪಕ್ಷವೊಂದರ ಜವಾಬ್ದಾರಿಯುತ ಸ್ಥಾನದಲ್ಲಿರುವ ಮಲ್ಲಿಕಾರ್ಜುನ ಖರ್ಗೆ ಅವರು ಅಲ್ಪಸಂಖ್ಯಾತರ ಓಲೈಕೆಗಾಗಿ ಆಡಿರುವ ಮಾತುಗಳು ಮತಿಗೇಡಿಗಳಿಗೆ ಉತ್ತೇಜನ ನೀಡುವಂತಿದ್ದು ದೇಶಾದ್ಯಂತ ಸಂಘ-ಪರಿವಾರ ಮತ್ತು ಸಂಘ ಪರಿವಾರದವರ ಮೇಲೆ ದಾಳಿ ನಡೆಯುವ ಸಾಧ್ಯತೆ ಇದೆ ಎಂದು ದೂರಲಾಗಿದ್ದು, ಮಲ್ಲಿಕಾರ್ಜುನ ಖರ್ಗೆ ಅವರ ಹೇಳಿಕೆ ಸಮುದಾಯಗಳ ನಡುವೆ ದ್ವೇಷ, ಹಗೆತನದ ಭಾವನೆಯನ್ನು ಉತ್ತೇಜಿಸುವ ಸಾರ್ವಜನಿಕ ಶಾಂತಿಗೆ ಭಂಗತಂದು ಹಿಂಸಾಚಾರಕ್ಕೆ ಉತ್ತೇಜಿಸುವ ಕೃತ್ಯ ಎಂದು ತಿಳಿಸಲಾಗಿದೆ.



» ಅಂಕೋಲಾ ಪೊಲೀಸ್ ಠಾಣೆಗೆ ಆಗಮಿಸಿದ ಬಿಜೆಪಿ ಮಂಡಲ ಮತ್ತು ಯುವ ಮೋರ್ಚಾದ ಪ್ರಮುಖರು ಮಲ್ಲಿಕಾರ್ಜುನ ಖರ್ಗೆ ಅವರ ಪ್ರಚೋದನಾಕಾರಿ ಹೇಳಿಕೆ ಖಂಡಿಸಿ ಮಲ್ಲಿಕಾರ್ಜುನ ಖರ್ಗೆ ಅವರ ಮೇಲೆ ಸೂಕ್ತ ಕಾನೂನಿನ ಕ್ರಮಕ್ಕೆ ಆಗ್ರಹಿಸಿದರು.

ಒಂದು ಸಮುದಾಯದ ಧಾರ್ಮಿಕ ಸ್ಥಳದಲ್ಲಿ ಈ ರೀತಿಯ ಪ್ರಚೋದನಾಕಾರಿ ಹೇಳಿಕೆ ನೀಡಿರುವುದು ಭಾರತೀಯ ದಂಡ ಸಂಹಿತೆ ಸೆಕ್ಷನ್ 196(2), 197, 299,353 ಪ್ರಕಾರ ಶಿಕ್ಷಾರ್ಹ ಅಪರಾಧವಾಗಿದ್ದು ಇಂತಹ ದ್ವೇಷ ಭಾಷಣ ಮಾಡಿರುವ ಮಲ್ಲಿಕಾರ್ಜುನ ಖರ್ಗೆ ಅವರ ಮೇಲೆ ಸ್ವಯಂ ಪ್ರೇರಿತ ದೂರು ದಾಖಲಿಸಬೇಕು. ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದು, ಮಲ್ಲಿಕಾರ್ಜುನ ಖರ್ಗೆ ಅವರ ಪುತ್ರ ಪ್ರಿಯಾಂಕ ಖರ್ಗೆ ಸಹ ಆರ್‌ಎಸ್‌ಎಸ್ ವಿರುದ್ಧ ಪದೇ ಪದೇ ವಿಷಕಾರಿ ಹೇಳಿಕೆ ನೀಡುತ್ತಿದ್ದಾರೆ ಇದರಿಂದ ಸಮಾಜಘಾತುಕ ಶಕ್ತಿಗಳು ಆರ್‌ಎಸ್‌ಎಸ್ ಮತ್ತು ಬಿಜೆಪಿ ಕಾರ್ಯಕರ್ತರ ಮೇಲೆ ದಾಳಿ ನಡೆಸಿ ಜೀವಕ್ಕೆ ಅಪಾಯ ತಂದೊಡ್ಡುವ ಸಾಧ್ಯತೆಯಿದ್ದು ಮಲ್ಲಿಕಾರ್ಜುನ ಖರ್ಗೆ ಅವರು ಇಸ್ಲಾಂ ಪವಿತ್ರ ಗ್ರಂಥ ಕುರಾನ್ ಉಲ್ಲೇಖಿಸಿ ಪ್ರಚೋದನಾಕಾರಿ ಹೇಳಿಕೆ ನೀಡಿರುವುದು ಮೂಲಭೂತವಾದಿಗಳಿಗೆ ಉತ್ತೇಜನ ನೀಡಿದಂತಿದೆ. ಖರ್ಗೆ ಅವರನ್ನು ಕೂಡಲೇ ಬಂಧಿಸಬೇಕು ಎಂದು ದೂರಿನಲ್ಲಿ ಒತ್ತಾಯಿಸಲಾಗಿದೆ.ಪಿಎಸ್‌ಐ ಗುರುನಾಥ ಹಾದಿಮನಿ ಮನವಿ ಸ್ವೀಕರಿಸಿದರು.

ಯುವ ಮೋರ್ಚಾ ಅಧ್ಯಕ್ಷ ನೀಲೇಶ ನಾಯ್ಕ, ಕಾರ್ಯದರ್ಶಿ ಸುಮಿತ ಬಾನಾವಳಿಕರ್, ಉಪಾಧ್ಯಕ್ಷ ನಾಗರಾಜ ನಾಯ್ಕ, ಮಂಡಲ ಪ್ರಭಾರಿ ಅಧ್ಯಕ್ಷ ಸಂಜಯ ನಾಯ್ಕ, ಕಾರ್ಯದರ್ಶಿ ಶ್ರೀಧರ ನಾಯ್ಕ, ಹಿಂದುಳಿದ ವರ್ಗಗಳ ಮೋರ್ಚಾ ಜಿಲ್ಲಾಧ್ಯಕ್ಷ ರಾಜೇಂದ್ರ ನಾಯ್ಕ, ಪುರಸಭೆ ಮಾಜಿ ಅಧ್ಯಕ್ಷ ಸೂರಜ ನಾಯ್ಕ, ಪರಿಶಿಷ್ಟ ಮೋರ್ಚಾ ಅಧ್ಯಕ್ಷ ಮಂಗೇಶ ಆಗೇರ, ಮೀನುಗಾರ ಮುಖಂಡ ಹೂವಾ ಖಂಡೇಕರ್ ಪ್ರಮುಖರುಗಳಾದ ವಿನಾಯಕ ನಾಯ್ಕ, ಸಂದೀಪ ಗಾಂವಕರ ಉಪಸ್ಥಿತರಿದ್ದರು.

ಖರ್ಗೆ ಹೇಳಿಕೆ ಖಂಡಿಸಿ ದೂರು ದಾಖಲು

• **ಕಾರವಾರ:** ಬಿಜೆಪಿ ಯುವಮೋರ್ಚಾ ಕಾರವಾರ ಗ್ರಾಮೀಣ ಮಂಡಲ ಉತ್ತರ ಕನ್ನಡ ಶುಕ್ರವಾರ ಬಿಜೆಪಿ ಯುವಮೋರ್ಚಾ ಕಾರವಾರ ಗ್ರಾಮೀಣ ಮಂಡಲ ವತಿಯಿಂದ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆರ್‌ಎಸ್‌ಎಸ್ ಹಾಗೂ ಭಾರತೀಯ ಜನತಾ ಪಕ್ಷದ ಬಗ್ಗೆ ಬಾಯಿಗೆ ಬಂದ ಹಾಗೆ ಮಾತನಾಡಿರುವುದನ್ನು ಖಂಡಿಸಿ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಚಿತ್ತಾಕುಲ ಪೊಲೀಸ್ ಠಾಣೆಗೆ ತೆರಳಿ ಪೊಲೀಸ್ ಉಪನಿರಿಕ್ಷಕರ ಬಳಿ ದೂರು ದಾಖಲಿಸಲಾಯಿತು.ಈ ಸಂದರ್ಭದಲ್ಲಿ ಯುವ ಮೋರ್ಚಾ ಅಧ್ಯಕ್ಷರಾದ ಸುರೇಂದ್ರ ಎಂ ಗಾಂವ್ಕರ್, ಕಾರ್ಯದರ್ಶಿ



ಸುದೇಶ್ ತಳೇಕರ್, ಉಪಾಧ್ಯಕ್ಷರಾದ ಸುನೀಲ್ ನಾಯ್ಕ್, ಉಪಾಧ್ಯಕ್ಷ ಕಿಶನ್ ಪಡುವಳಕರ್, ಸೂರಜ್ ದೇಸಾಯಿ, ನಿತಿನ್ ಬಾಂದೇಕರ್, ಪ್ರಣಯ್ ರಾಣೆ, ಉಲ್ಲಾಸ್ ತಳೇಕರ್, ಸಾಗರ್ ಕಾಸೇಕರ್, ವಿಜಯ ನಾಯ್ಕ, ರಾಮನಾಥ್ ಕೋಲಂಕರ್, ಗಿರೀಶ್ ನಾಯ್ಕ್, ರಜಪೂತ, ವಿನಾಯಕ ಮಾಜಾಳಿಕರ್ ಹಾಗೂ ಪ್ರಮುಖರು ಉಪಸ್ಥಿತರಿದ್ದರು.

ವ್ಯಕ್ತಿತ್ವ ವಿಕಸನಕ್ಕೆ ಬೇಸಿಗೆ ಶಿಬಿರ ಸಹಾಯಕ

• **ಅಂಕೋಲಾ:** ಮಕ್ಕಳ ದೈಹಿಕ ಮಾನಸಿಕ ಮತ್ತು ಸೃಜನಶೀಲ ಬೆಳವಣಿಗೆಗೆ ಪೂರಕವಾದ 11ನೇ ವರ್ಷದ ಬೇಸಿಗೆ ಶಿಬಿರವನ್ನು ಅಂಕೋಲಾದ ಪ್ರತಿಷ್ಠಿತ ಶಾಂತಿನಿಕೇತನ ಪೂರ್ವ ಪ್ರಾಥಮಿಕ ಶಾಲೆಯಲ್ಲಿ ಪ್ರಾರಂಭಗೊಂಡಿತು. ವಕೀಲ ದೀಕ್ಷಿತ್ ನಾಯಕ ಶಿಬಿರ ಉದ್ಘಾಟಿಸಿ ಮಾತನಾಡಿದರು.ಮೊದಲೆಲ್ಲ ಬೇಸಿಗೆ ಬಂದರೆ ಸಾಕು ತಾವೆಲ್ಲ ಸಾಕಷ್ಟು ಹೊರಾಂಗಣದ ಆಟ ಆಡಿ ನೆಮ್ಮದಿಯಿಂದ ಇರುತ್ತಿದ್ದೆವು, ಆದರೆ ಈಗ ಮೊಬೈಲ್ ಸಂಸ್ಕೃತಿಯಿಂದ ಮಕ್ಕಳು ಹೊರಾಂಗಣದ ಆಟ ಮರೆತಿದ್ದಾರೆ. ಆದರಿಂದ ಬೇಸಿಗೆ ಶಿಬಿರಗಳು ಮಕ್ಕಳಿಗೆ ಮೊಬೈಲ್ ನಿಂದಾ ದೂರ ಇರಲು ಸಹಕಾರಿಯಾಗುತ್ತಿವೆ ಎಂದು ಹೇಳಿದರು. ಕಾರ್ಯನಿರತ ಪತ್ರಕರ್ತ ಧ್ವನಿ ಅಧ್ಯಕ್ಷ ಮಾರುತಿ ಹರಿಕಂತ್ರ ಮಾತನಾಡಿದರು. ಶಾಂತಿನಿಕೇತನ ಟ್ರಸ್ಟ್‌ನ ನಿರ್ದೇಶಕರಾದ ದಂತ ವೈದ್ಯ ಡಾ.ಸಂಜು ನಾಯಕ ಮಾತನಾಡಿದರು.



ಹಿರಿಯ ಮತ್ತು ಕಿರಿಯ ಎರಡು ವಿಭಾಗಗಳಲ್ಲಿ ನಡೆಯುವ 20 ದಿನದ ಈ ಶಿಬಿರದಲ್ಲಿ ಕ್ರಾಫ್ಟ್, ಮಡಿಕೆ ಮಾಡುವುದು,ಪೈಂಟಿಂಗ್, ನೃತ್ಯ,ಕ್ಲೇ ಮಾಡೆಲಿಂಗ್, ಕಸದಿಂದ ರಸ, ಸಾಂಪ್ರದಾಯಿಕ ಮನರಂಜನೆಯ ಆಟ, ಇನ್ನಿತರ ಚಟುವಟಿಕೆಯನ್ನು ನಡೆಸಲಾಗುವುದು. ಶಿಕ್ಷಕಿ ಶ್ರದ್ಧಾ ಆಚಾರ್ಯ ಕಾರ್ಯಕ್ರಮ ನಿರೂಪಿಸಿದರು. ಶಿಕ್ಷಕಿಯರಾದ ಶೀತಲ್ ನಾಯ್ಕ ಮತ್ತು ಮಮತಾ ನಾಯ್ಕ ಮತ್ತು ಸಹ ಸಿಬ್ಬಂದಿ ಉಪಸ್ಥಿತರಿದ್ದರು. ಶಿಬಿರದ ಎಲ್ಲ ಮಕ್ಕಳಿಗೆ ಶಿಬಿರಕ್ಕೆ ಉಪಯೋಗ ಬರುವ ಕಿಟ್ ವಿತರಣೆ ಮಾಡಲಾಯಿತು.

ಮಲ್ಲಿಕಾರ್ಜುನ ಖರ್ಗೆ ಹೇಳಿಕೆ ಖಂಡಿಸಿ ದೂರು ಸಲ್ಲಿಕೆ

• **ಬನವಾಸಿ:** ಬಿಜೆಪಿ ಮತ್ತು ಆರ್‌ಎಸ್‌ಎಸ್ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಮೊಕದ್ದಮೆ ದಾಖಲಿಸಿ, ಬಂಧಿಸುವಂತೆ ಒತ್ತಾಯಿಸಿ ಬಿಜೆಪಿ ಯುವಾ ಮೋರ್ಚಾ ವತಿಯಿಂದ ಬನವಾಸಿ ಪೊಲೀಸ್ ಠಾಣೆಯ ಪಿಎಸ್‌ಐ ಮಾಂತೇಶ ಕುಂಬಾರ ಅವರಿಗೆ ಶುಕ್ರವಾರ ದೂರು ಸಲ್ಲಿಸಲಾಯಿತು.

ಬಳಿಕ ಸುದ್ದಿಗಾರರರೊಂದಿಗೆ ಮಾತನಾಡಿದ ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಪ್ರೇಮ್ ಕುಮಾರ್ ನಾಯ್ಕ್, ಅಸ್ಸಾಂ ವಿಧಾನಸಭಾ ಚುನಾವಣೆ ಪ್ರಚಾರ ಸಭೆಯಲ್ಲಿ ಆರ್‌ಎಸ್‌ಎಸ್ ಹಾಗೂ ಬಿಜೆಪಿ ವಿರುದ್ಧ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಅಸಂಬದ್ಧ ಹೇಳಿಕೆ ಖಂಡನೀಯವಾಗಿದೆ. ಖರ್ಗೆ ಅವರು ಕೋಮುದ್ವೇಷ ಹಬ್ಬಿಸುವ ಮಾತುಗಳನ್ನು ಆಡಿದ್ದಾರೆ. ಆರ್‌ಎಸ್‌ಎಸ್ ಹಾಗೂ ಬಿಜೆಪಿ ವಿಷದ ಹಾವುಗಳಾಗಿದ್ದು, ಪ್ರಾರ್ಥನೆ ಸಮಯದಲ್ಲಿ ಅವು ಕಂಡರೆ ಹೊಡೆದು ಹಾಕಬೇಕು ಎಂಬ ಹೇಳಿಕೆ ಜಿಯಾದಿ ಸಂಸ್ಕೃತಿಯ ಪ್ರತೀಕವಾಗಿದೆ. ಸಾರ್ವಜನಿಕವಾಗಿ ಇಂತಹ ಪ್ರಚೋದನಕಾರಿ ಹೇಳಿಕೆ ನೀಡುವುದು ಅವರ ಅನುಭವಕ್ಕೆ ಶೋಭೆಯಲ್ಲ. ಮುಸ್ಲಿಮರ ಓಲೈಕೆ ಮಾಡಲು ಏನು ಬೇಕಾದರೂ ಹೇಳಬಹುದು ಎನ್ನುವ ಮನಸ್ಥಿತಿಯನ್ನು ಅವರು ಈ ಕೂಡಲೇ ನಿಲ್ಲಿಸಬೇಕು. ಇಂತಹ ಆಕ್ಷೇಪಾರ್ಹ ಮಾತುಗಳು ಕೋಮುಗಲಭೆ ಹರಡುವ ದೇಶದ್ರೋಹಿಗಳಿಗೆ, ಮೂಲಭೂತವಾದಿಗಳಿಗೆ ಬೆಂಬಲಸೂಚಿಸುವ ಮಾತುಗಳಾಗಿವೆ. ಮಲ್ಲಿಕಾರ್ಜುನ ಖರ್ಗೆಯವರು ಸಂವಿಧಾನಕ್ಕೆ ವಿರುದ್ಧವಾಗಿ ಮಾತನಾಡಿದ್ದು ಅವರ ವಿರುದ್ಧ ಮೊಕದ್ದಮೆ ದಾಖಲಿಸಿ, ಬಂಧಿಸುವಂತೆ ಆಗ್ರಹಿಸಿದರು.

ಬಿಜೆಪಿ ಪಕ್ಷದ ಪ್ರಮುಖರಾದ ಗಣೇಶ ಸಣ್ಣಲಿಂಗಣ್ಣನವರ, ಜಿಲ್ಲಾ ಓಬಿಸಿ ಮೋರ್ಚಾ ಕಾರ್ಯದರ್ಶಿ ವಿಶ್ವನಾಥ ಹಾದಿಮನಿ, ಮಂಡಲ ಉಪಾಧ್ಯಕ್ಷ ಮೃತ್ಯುಂಜಯ ಚೌದರಿ, ಯುವ ಮೋರ್ಚಾ ಮಂಡಳದ ಅಧ್ಯಕ್ಷ ಗೌತಮ್ ನಾಯ್ಕ್, ಉಪಾಧ್ಯಕ್ಷ ಅಲೋಕ ನಾಯ್ಕ್, ಕಾರ್ಯದರ್ಶಿ ದೀಪಕ್ ಕಪಾಲಿ, ಬನವಾಸಿ ಶಕ್ತಿ ಕೇಂದ್ರದ ಅಧ್ಯಕ್ಷ ಚಂದ್ರಶೇಖರ ಗೌಡ, ಗುಡ್ನಾಪುರ ಶಕ್ತಿಕೇಂದ್ರದ ಅಧ್ಯಕ್ಷ ಶಂಭು ಗೌಡ, ಭಾಶಿ ಶಕ್ತಿಕೇಂದ್ರದ ಅಧ್ಯಕ್ಷ ಸಂತೋಷ ಗೌಡ ಸೇರಿದಂತೆ ಪಕ್ಷದ ದರ್ಶನ ಸಣ್ಣಲಿಂಗಣ್ಣನವರ, ರಾಜು ಮತ್ತುಗುಣಿ, ಪ್ರವೀಣ್ ಹಾಲಪ್ಪ, ರಾಕೇಶ ನಾಯ್ಕ್, ಅಕ್ಷಯ ಗೌಡ ಮತ್ತಿತರರು ಇದ್ದರು.



ಖರ್ಗೆ ಹೇಳಿಕೆ ಖಂಡಿಸಿ ದೂರು ಸಲ್ಲಿಕೆ

• **ಹಳಿಯಾಳ:** ರಾಷ್ಟ್ರಿಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ರವರು ಆರ್‌ಎಸ್‌ಎಸ್ ಹಾಗೂ ಭಾರತೀಯ ಜನತಾ ಪಕ್ಷದ ಬಗ್ಗೆ ದ್ವೇಷಪೂರಿತವಾಗಿ ಮಾತನಾಡಿರುವುದು ಖಂಡನೀಯ. ಇದನ್ನು ಬಿಜೆಪಿ ಯುವಮೋರ್ಚಾ ಹಳಿಯಾಳ ತೀವ್ರವಾಗಿ ವಿರೋಧಿಸುತ್ತದೆ ಮತ್ತು ಎಐಸಿಸಿ ಅಧ್ಯಕ್ಷರ ಹೇಳಿಕೆಯನ್ನು ಖಂಡಿಸಿ ಶುಕ್ರವಾರ ಹಳಿಯಾಳ ನಗರ ಪೊಲೀಸ್ ಠಾಣೆಯಲ್ಲಿ ಮಾಜಿ ಶಾಸಕ ಸುನಿಲ್ ಹೆಗಡೆ ರವರ ಉಪಸ್ಥಿತಿಯಲ್ಲಿ ಯುವ ಮೋರ್ಚಾ ನೇತೃತ್ವದಲ್ಲಿ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ದೂರು ದಾಖಲಿಸಲಾಯಿತು.

ಮಾಜಿ ಶಾಸಕ ಸುನಿಲ್ ಹೆಗಡೆ ಹಾಗೂ ಜಿಲ್ಲಾ ವಿಶೇಷ ಆಹ್ವಾನಿತ ಮಂಗೇಶ ದೇಶಪಾಂಡೆ ರವರು ಮಾತನಾಡಿ, ಕಾಂಗ್ರೆಸ್ ಪಕ್ಷ ಹಾಗೂ ರಾಜ್ಯ ಸರ್ಕಾರ ಕೇವಲ ಮತ ಬ್ಯಾಂಕ್ ಭದ್ರ ಪಡಿಸುವ ಉದ್ದೇಶದಿಂದ ಅಲ್ಪಸಂಖ್ಯಾತರ ಓಲೈಕೆ ರಾಜಕಾರಣ ಮಾಡುತ್ತ ಆರ್‌ಎಸ್‌ಎಸ್, ಬಿಜೆಪಿ ಹಾಗೂ ಹಿಂದೂಗಳ ವಿರುದ್ಧ ಪ್ರಚೋದನಕಾರಿ ಹೇಳಿಕೆ ನೀಡುತ್ತಿದ್ದಾರೆ ಇಂತಹವರ ವಿರುದ್ಧ ಕಠಿಣ ಕಾನೂನು ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮಂಡಲ ಅಧ್ಯಕ್ಷ ವಿಠ್ಠಲ ಸಿದ್ದನ್ನವರ, ಮಂಡಲ ಪ್ರಧಾನ ಕಾರ್ಯದರ್ಶಿ ಸಂತೋಷ್ ಘಟಕಾಂಬಳೆ ಹಾಗೂ ವಿ ಎಮ್ ಪಾಟೀಲ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವಾಜಿ ನರಸಾನಿ, ಎಸ್ ಸಿ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹನುಮಂತ ಚಿನಗಿನಕೊಪ್ಪ, ಯುವ ಮೋರ್ಚಾ ಅಧ್ಯಕ್ಷ ಯಲ್ಲಪ್ಪ ಹೆಳವರ, ಕಾರ್ಯದರ್ಶಿ ಜ್ಞಾನೇಶ ಮಾನಗೆ ಹಾಗೂ ಕಿರಣ ಅಡಕೆಹೊಸುರ, ಯುವ ಮೋರ್ಚಾ ಪದಾಧಿಕಾರಿಗಳಾದ ಶಂಕರ ಗಳಗಿ, ಪ್ರಕಾಶ್ ಕೊರವರ, ತಾನಾಜಿ ಪಟ್ಟೆಕರ, ಚೂಡಪ್ಪಾ ಬೊಬಾಟಿ, ಶ್ರೀನಿವಾಸ ಘೊಟ್ನೇಕರ, ಪ್ರಕಾಶ್ ಬೊಬಾಟಿ, ಮಹೇಶ್ ಮೆಘಾಣಿ, ಮಾರುತಿ ಪೆಟ್ನೇಕರ, ಸಂಜಯ ಹಿರೇಕರ, ಜಯಲಕ್ಷ್ಮೀ ಚೌವ್ಹಾಣ್, ರತ್ನಮಾಲಾ ಮುಳೆ, ಶಾಂತಾ ಹಿರೇಕರ, ವೀಣಾ ಕುಂಬಾರ, ಮಾಲಾ ಹುಂಡೇಕರ, ಜಿಲ್ಲಾ ಪದಾಧಿಕಾರಿಗಳು ಮತ್ತಿತರರಿದ್ದರು.



ಖರ್ಗೆ ವಿರುದ್ಧ ಕಾನೂನು ಕ್ರಮಕೈಗೊಳ್ಳಲು ಬಿಜೆಪಿ ಆಗ್ರಹ

• **ಶಿರಸಿ:** ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಅಸ್ಸಾಂ ಚುನಾವಣಾ ಪ್ರಚಾರದ ವೇಳೆ ಆರ್‌ಎಸ್‌ಎಸ್ ಮತ್ತು ಬಿಜೆಪಿ ವಿರುದ್ಧ ಹಿಂಸೆಗೆ ಪ್ರಚೋದನೆ ನೀಡುವಂತಹ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಬಿಜೆಪಿ ಶಿರಸಿ ನಗರ ಮಂಡಲದ ವತಿಯಿಂದ ಡಿವೈಎಸ್ಪಿ ಗೀತಾ ಪಾಟೀಲ್ ಅವರಿಗೆ ಮನವಿ ಸಲ್ಲಿಸಲಾಯಿತು.

ಅಸ್ಸಾಂನಲ್ಲಿ ಭಾಷಣ ಮಾಡುವ ಸಂದರ್ಭದಲ್ಲಿ ಮಲ್ಲಿಕಾರ್ಜುನ ಖರ್ಗೆಯವರು, ಕುರಾನ್‌ನಲ್ಲಿ ಬರೆದಂತೆ ನಮಾಜ್ ಮಾಡುವಾಗ ವಿಷ ಸರ್ಪ ಕಂಡರೆ ಅದನ್ನು ಕೊಲ್ಲಬೇಕು. ಆರ್‌ಎಸ್‌ಎಸ್ ಮತ್ತು ಬಿಜೆಪಿ ಕೂಡ ಅದೇ ರೀತಿಯ ವಿಷ ಸರ್ಪವಿದ್ದಂತೆ, ಅವುಗಳನ್ನು ಕೊಲ್ಲದಿದ್ದರೆ ನೀವು ಬದುಕುವುದಿಲ್ಲ ಎಂದು ಹೇಳುವ ಮೂಲಕ ಮುಸ್ಲಿಂ ಸಮುದಾಯವನ್ನು ಬಿಜೆಪಿ ಮತ್ತು ಸಂಘ ಪರಿವಾರದ ಸದಸ್ಯರ ವಿರುದ್ಧ ಪ್ರಚೋದಿಸಿದ್ದಾರೆ ಎಂದು ಬಿಜೆಪಿ ಮುಖಂಡರು ದೂರಿದ್ದಾರೆ.

ಧಾರ್ಮಿಕ ಸೌಹಾರ್ದತೆಗೆ ಧಕ್ಕೆ ತರುವ ಮತ್ತು ಸಮುದಾಯಗಳ ನಡುವೆ ಹಗೆತನ ಉತ್ತೇಜಿಸುವ ಕಾನೂನಿನ ಸೆಕ್ಷನ್ 196 (ಹಳೆಯ ಐಪಿಸಿ 1530



ಬದಲಿಗೆ) ಅಡಿಯಲ್ಲಿ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಬಿಜೆಪಿ ಕಾರ್ಯಕರ್ತರು ಒತ್ತಾಯಿಸಿದ್ದಾರೆ.ಈ ಸಂದರ್ಭದಲ್ಲಿ ಮಂಡಲ ಅಧ್ಯಕ್ಷ ಆನಂದ ಸಾಲೇರ, ಯುವಮೋರ್ಚಾ ಅಧ್ಯಕ್ಷ ವಿಜಯ ಶೆಟ್ಟಿ, ಮಂಡಲ ಪ್ರಧಾನ ಕಾರ್ಯದರ್ಶಿ ನಾಗರಾಜ ನಾಯ್ಕ, ಜಿಲ್ಲಾ ಕಾರ್ಯದರ್ಶಿ ಶರ್ಮಿಳಾ ಮಾದನಗೇರಿ, ಮಾಲತೇಶ್ ಹಾದಿಮನಿ, ಯುವಮೋರ್ಚಾ ಜಿಲ್ಲಾ ಉಪಾಧ್ಯಕ್ಷ ಸುದರ್ಶನ ವೈದ್ಯ, ಜಿಲ್ಲಾ ಸಾಮಾಜಿಕ ಜಾಲತಾಣ ಸಂಚಾಲಕ ರವಿಚಂದ್ರ ಶೆಟ್ಟಿ, ಮಂಡಲ ಯುವಮೋರ್ಚಾ ಪ್ರಧಾನ ಕಾರ್ಯದರ್ಶಿ ಸಂಜಯ ಸಜ್ಜನ ಹಾಗೂ ಪದಾಧಿಕಾರಿಗಳಾದ ಅಮಿತ್ ಸರ್ವದೆ, ಲೋಹಿತ್ ಕಾನಡೆ, ಡಿ.ಜಿ. ನಿತಿನ್, ಸಂಪತ ನಾಯ್ಕ ಮತ್ತಿತರರಿದ್ದರು.

ದ್ವಿತೀಯ ಪಿಯು ಫಲಿತಾಂಶ: ವಿದ್ಯಾರ್ಥಿಗಳ ಸಾಧನೆ

• **ಅಂಕೋಲಾ:** ತಾಲೂಕಿನ ಕೆನರಾ ವೆಲ್‌ಫೇರ ಟ್ರಸ್ಟಿನ ಶೈಕ್ಷಣಿಕ ಸಂಸ್ಥೆಗಳು ಪಿಯುಸಿ ದ್ವಿತೀಯ ವರ್ಷದ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ದಾಖಲಿಸಿದೆ.

ಕೆನರಾ ವೆಲ್‌ಫೇರ್ ಟ್ರಸ್ಟಿನ ಗೋಖಲೆ ಸೆಂಟಿನರಿ ಪಿಯು ಕಾಲೇಜು 96.70 ರಷ್ಟು ಫಲಿತಾಂಶ ದಾಖಲಿಸಿದೆ. ಪರೀಕ್ಷೆಗೆ ಕುಳಿತ 91 ವಿದ್ಯಾರ್ಥಿಗಳಲ್ಲಿ 32 ವಿದ್ಯಾರ್ಥಿಗಳು ಪ್ರಶಸ್ತಿ ಸಹಿತ ಪ್ರಥಮ ದರ್ಜೆ ಮತ್ತು ಮತ್ತು 49 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಪರೀಕ್ಷೆಗೆ ಕುಳಿತಿದ್ದ 63 ವಿದ್ಯಾರ್ಥಿಗಳಲ್ಲಿ 61 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು,96.82 ಪ್ರತಿಶತ ಫಲಿತಾಂಶ ಬಂದಿದೆ 27 ವಿದ್ಯಾರ್ಥಿಗಳು ಪ್ರಶಸ್ತಿ ಸಹಿತ ಪ್ರಥಮ ದರ್ಜೆಯಲ್ಲಿ ಮತ್ತು 32 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಸಂಜನಾ ಬ್ರಹ್ಮಾನಂದ ನಾಯಕ 571 ಅಂಕಗಳನ್ನು ಪಡೆದು 95.16 ಪ್ರತಿಶತ ಸಾಧನೆ ಮಾಡಿದ್ದು, ಭೌತಶಾಸ್ತ್ರ ವಿಷಯದಲ್ಲಿ 100 ಕ್ಕೆ 100 ಅಂಕಗಳನ್ನು ಪಡೆದು ವಿಜ್ಞಾನ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದಿದ್ದು 568 ಅಂಕಗಳನ್ನು ಪಡೆದು 94.66 ಪ್ರತಿಶತ ಸಾಧನೆ ಮಾಡಿರುವ ದೀಪ್ತಿ ಚಂದ್ರು ಗೌಡ ದ್ವಿತೀಯ ಮತ್ತು 565 ಅಂಕಗಳೊಂದಿಗೆ 94.16 ಪ್ರತಿಶತ ಸಾಧನೆ ಮಾಡಿರುವ ಆಫ್ರೀನ್ ಮಕ್ಬೂಲ್ ಫೀರಜಾದೆ ತೃತೀಯ ಸ್ಥಾನ ಪಡೆದಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಪರೀಕ್ಷೆಗೆ ಕುಳಿತ 28 ವಿದ್ಯಾರ್ಥಿಗಳಲ್ಲಿ 27 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, 5 ಜನ ಪ್ರಶಸ್ತಿ ಸಹಿತ ಪ್ರಥಮ ದರ್ಜೆ 17 ಜನ ಪ್ರಥಮ ದರ್ಜೆ ಸಾಧನೆ ತೋರಿದ್ದಾರೆ.



ವ್ಯವಹಾರ ಅಧ್ಯಯನದಲ್ಲಿ 100 ಕ್ಕೆ 100 ಅಂಕಗಳನ್ನು ಪಡೆದು 572 ಅಂಕಗಳೊಂದಿಗೆ 95.33 ಪ್ರತಿಶತ ಸಾಧನೆ ಮಾಡಿರುವ ಎಸ್.ರಾಜೇಶ್ವರಿ ಪ್ರಥಮ, 545 ಅಂಕಗಳನ್ನು ಪಡೆದು 90.83 ಪ್ರತಿಶತ ಸಾಧನೆ ಮಾಡಿರುವ ಮುಸ್ಕಾನ್ ಖಾತುನ್ ದ್ವಿತೀಯ ಮತ್ತು ವ್ಯವಹಾರ ಅಧ್ಯಯನದಲ್ಲಿ 100 ಅಂಕಗಳನ್ನು ಪಡೆದು 542 ಅಂಕಗಳೊಂದಿಗೆ ಶೇ.90.33 ಪ್ರತಿಶತ ಸಾಧನೆ ಮಾಡಿರುವ ಅಶ್ವಿನಿ ನಾರಾಯಣ ನಾಯಕ ತೃತೀಯ ಸ್ಥಾನ ಪಡೆಯುವ ಮೂಲಕ ಕಾಲೇಜಿನ ಕೀರ್ತಿಗೆ ಕಾರಣರಾಗಿದ್ದಾರೆ.ಕೆನರಾ ವೆಲ್‌ಫೇರ ಟ್ರಸ್ಟಿನ ಕಲಾ ವಿಭಾಗದ ಶೈಕ್ಷಣಿಕ ಸಂಸ್ಥೆಯಾಗಿರುವ ಪಿ.ಎಂ.ಜ್ಯೂನಿಯರ್ ಕಾಲೇಜು ಶೇ.87.5 ಪ್ರತಿಶತ ಫಲಿತಾಂಶ ದಾಖಲಿಸಿದ್ದು ಪರೀಕ್ಷೆಗೆ ಕುಳಿತಿದ್ದ 56 ವಿದ್ಯಾರ್ಥಿಗಳಲ್ಲಿ 49 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ, 547 ಅಂಕಗಳೊಂದಿಗೆ ಶೇ. 91.16 ಪ್ರತಿಶತ ಸಾಧನೆ ಮಾಡಿರುವ ನಾಗರತ್ನ ಅಶೋಕ ಗೌಡ ಕಾಲೇಜಿಗೆ ಪ್ರಥಮ, 530 ಅಂಕಗಳನ್ನು ಪಡೆದ ಹೇಮಂತ ಈಳಿಗೇರ ದ್ವಿತೀಯ ಹಾಗೂ 526 ಅಂಕಗಳನ್ನು ಪಡೆದ ಪವಿತ್ರ ಬಾಬು ಗೌಡ ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ. ಕೆನರಾ ವೆಲ್‌ಫೇರ ಟ್ರಸ್ಟಿನ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳ ಸಾಧನೆಗೆ ಟ್ರಸ್ಟಿನ ಅಧ್ಯಕ್ಷ ಎಸ್.ಪಿ.ಕಾಮತ್, ಕಾರ್ಯದರ್ಶಿ, ಆಡಳಿತಾಧಿಕಾರಿ, ಟ್ರಸ್ಟಿಗಳು ಹಾಗೂಪ್ರಾಚಾರ್ಯರು ಮತ್ತು ಬೋಧಕ ಬೋಧಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.

ಗಾಂವಕರಗೆ ಅತ್ಯುತ್ತಮ ಅಧ್ಯಕ್ಷ ಪ್ರಶಸ್ತಿ



• **ಅಂಕೋಲಾ:** ಲಯನ್ಸ್ ಸೇವಾ ಸಂಸ್ಥೆ ಅಂಕೋಲಾ ಕರಾವಳಿಯ ಬೆಳ್ಳಿಹಬ್ಬ ವರ್ಷ 2024-25ರಲ್ಲಿ ಅಧ್ಯಕ್ಷರಾಗಿ ಕೈಗೊಂಡಿರುವ ವಿದಾಯಕ ಮತ್ತು ಮಾನವೀಯ ಸೇವೆಗಾಗಿ ಲಯನ್ಸ್ ಅಂಕೋಲಾ ಕರಾವಳಿಯ ನಿಕಟಪೂರ್ವ ಅಧ್ಯಕ್ಷ ದೇವಾನಂದ ಗಾಂವಕರ ಅವರಿಗೆ ಅಂತಾರಾಷ್ಟ್ರೀಯ ಲಯನ್ಸ್ ಸಂಸ್ಥೆಯ ಅಧ್ಯಕ್ಷ ಪೆಬ್ರಿಸಿಯಾ ಪ್ಲೊಲಿವೇರಿಯಾ ಅವರು ಅತ್ಯುತ್ತಮ ಲಯನ್ಸ್ ಅಧ್ಯಕ್ಷ ಪ್ರಶಸ್ತಿ ಪ್ರಮಾಣ ಪತ್ರ ನೀಡಿ ಗೌರವಿಸಿದ್ದಾರೆ.ವಿಶ್ವಾದ್ಯಂತ 15 ಮಿಲಿಯನ್ ಸದಸ್ಯರು ಐತಿಹಾಸಿಕ ಸದಸ್ಯತ್ವ ಗುರಿ ತಲುಪಿರುವ ಹಿನ್ನೆಲೆಯಲ್ಲಿ ಉತ್ತರ ಕರ್ನಾಟಕ ಮತ್ತು ಗೋವಾ ರಾಜ್ಯ ಒಳಗೊಂಡ ಲಯನ್ಸ್ ಜಿಲ್ಲೆ 317 ಬಿ ಅಡಿಯಲ್ಲಿ ಬರುವ 102 ಕ್ಲಬ್‌ಗಳಲ್ಲಿ 1.5 ವಿಶೇಷ ಕಾರ್ಯಕ್ರಮದ ಅಡಿಯಲ್ಲಿ ಆಯ್ಕೆಯಾಗಿರುವ 7 ಕ್ಲಬ್ ಗಳಲ್ಲಿ ಅಂಕೋಲಾ ಲಯನ್ಸ್ ಒಂದಾಗಿ ಗುರುತಿಸಿಕೊಂಡಿದ್ದು, 100 ಪ್ರತಿಶತ ಸದಸ್ಯತ್ವ ಮುಂದುವರಿಸಿಕೊಂಡು ಬಂದಿರುವ ಐ.ಟಿ ದೇವಾನಂದ ಗಾಂವಕರ ತಂಡ ಪ್ರೀಮಿಯಮ್ ಕ್ಲಬ್ ಹೆಗ್ಗಳಿಕೆಗೆ ಪಾತ್ರವಾಗಿರುವುದರಿಂದ ಲಯನ್ಸ್ ಅಂತರಾಷ್ಟ್ರೀಯ ಅಧ್ಯಕ್ಷರು ಮೆಚ್ಚುಗೆ ಪ್ರಶಸ್ತಿ ಪ್ರಮಾಣ ಪತ್ರ ನೀಡಿ ಗೌರವಿಸಿದ್ದು, ಲಯನ್ಸ್ ಜಿಲ್ಲಾ ಪ್ರಾಂತಪಾಲ ಜೈಅಮೋಲ ನಾಯ್ಕ ಕ್ಲಬ್ಬಿಗೆ ಅಧಿಕೃತ ಭೇಟಿ ನೀಡಿ ದೇವಾನಂದ ಗಾಂವಕರ ಅವರಿಗೆ ಪ್ರಶಸ್ತಿ ಪ್ರಮಾಣ ಪತ್ರ ನೀಡಿ ಗೌರವಿಸಿದರು.ಜಿಲ್ಲಾ ಕ್ಯಾಬಿನೇಟ್ ಕಾರ್ಯದರ್ಶಿ ಕೀರ್ತಿ ನಾಯ್ಕ, ಪ್ರಾದೇಶಿಕ ಚೇರ್ ಪರ್ಸನ್ ರಾಜೇಶ ಸಾಲಿಹಿತ್ತಲ್,ಲಯನ್ಸ್ ಐ.ಟಿ ಆರ್. ಎಚ್.ನಾಯಕ, ಸಂಸ್ಥಾಪಕ ಅಧ್ಯಕ್ಷ ಕೆ.ವಿ.ಶೆಟ್ಟಿ, ಲಯನ್ಸ್ ಅಂಕೋಲಾ ಕರಾವಳಿ ಅಧ್ಯಕ್ಷ ರಮೇಶ ಪರಮಾರ, ಕಾರ್ಯದರ್ಶಿ ಕೆ.ಎಂ.ಗೌಡ ಮತ್ತು ಪದಾಧಿಕಾರಿ ಸದಸ್ಯರು ಉಪಸ್ಥಿತರಿದ್ದರು.

ಪ್ರಗತಿ ಪರಿಶೀಲನಾ ಸಭೆ: ಹಲವು ವಿಷಯಗಳ ಚರ್ಚೆ

• **ಯಲ್ಲಾಪುರ:** ಅಧಿಕಾರಿಗಳು ಕಾನೂನಿನ ಜೊತೆಗೆ ಮಾನವೀಯತೆಯ ನೆಲೆಯಲ್ಲಿ ಕೆಲಸ ಮಾಡಿ. ಹೊಸ ಅತಿಕ್ರಮಣಕ್ಕೆ ಅವಕಾಶ ಇಲ್ಲ, ಜಿಪಿಎಸ್ ಪಡೆದ ಹಳೆಯ ಅತಿಕ್ರಮಣದಾರರಿಗೆ ಸಮಸ್ಯೆ ನೀಡಬಾರದು ಹಾಗೂ ಬೆಳೆ ಹಾನಿಗೆ ಮಾನವೀಯತೆ ಆಧಾರವಾಗಿ ಪರಿಹಾರ ನೀಡುವಂತೆ ಅಧಿಕಾರಿಗಳಿಗೆ ಶಾಸಕ ಶಿವರಾಮ ಹೆಬ್ಬಾರ ಸೂಚಿಸಿದರು.

ತಾಲೂಕು ಪಂಚಾಯಿತಿ ಸಭಾಭವನದಲ್ಲಿ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು, ಕ್ಯಾನ್ಸರ್ ಮುಕ್ತ ಭಾರತಕ್ಕಾಗಿ ಎಲ್ಲರೂ ಶ್ರಮಿಸಬೇಕು. ಆರೋಗ್ಯ ಇಲಾಖೆಯ ಗರ್ಭಕಂಠ ಕ್ಯಾನ್ಸರ್ ಲಸಿಕೆ ಕುರಿತು ಪ್ರಗತಿ ಕಡಿಮೆ ಇರುವುದನ್ನು ಗಂಭೀರವಾಗಿ ಪರಿಗಣಿಸಿ, ಸಮಿತಿ ರಚಿಸಿ ಪಾಲಕರಿಗೆ ಜಾಗೃತಿ ಮೂಡಿಸಬೇಕು. ಕೈಗಾ ಸಮೀಪದ ಮಾವಿನಮನೆ ಗ್ರಾಪಂ ವ್ಯಾಪ್ತಿಯಲ್ಲಿ ಕ್ಯಾನ್ಸರ್ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಆರೋಗ್ಯ ಸರ್ವೆ ನಡೆಸಬೇಕು ಎಂದು ಹೇಳಿದರು.

ತಾಲೂಕಾ ಆರೋಗ್ಯಾಧಿಕಾರಿಡಾ ನರೇಂದ್ರ ಪವಾರ ಮಾತನಾಡಿ, ಹೆರಿಗೆ, ಶಸ್ತ್ರಚಿಕಿತ್ಸೆ ಹಾಗೂಅನಸ್ತೇಶಿಯಾ ವೈದ್ಯರ ಕೊರತೆ ಇದೆ ಎಂದರು. ಪಶುಸಂಗೋಪನೆ ಇಲಾಖೆಯ ಸಹಾಯಕ ನಿರ್ದೇಶಕ ಡಾ ಸುಬ್ರಾಯ ಭಟ್, ಅರಣ್ಯ ಇಲಾಖೆಯ ಎಸಿಎಫ ಹಿಮವತಿ ಭಟ್ಟ ಮಾಹಿತಿ ನೀಡಿದರು. ಕೃಷಿ ಇಲಾಖೆಯ ಅಧಿಕಾರಿ ನಾಗರಾಜ ನಾಯ್ಕ ಮಾತನಾಡಿ, ಈವರೆಗೆ 17ಮಿ ಮೀ ಮಳೆ ಆಗಿದೆ. ಬೀಜ ಮತ್ತು ಗೊಬ್ಬರಕ್ಕೆ ಬೇಡಿಕೆ ಸಲ್ಲಿಸಲಾಗಿದೆ ಎಂದರು. ಗೊಬ್ಬರ ಕೊರತೆಯ ಸಾಧ್ಯತೆ ಇರುವುದರಿಂದ ಖಾಸಗಿ ಡೀಲರ್‌ಗಳ ಮೇಲೆ ನಿಗಾ



ವಹಿಸುವಂತೆ ಶಾಸಕರು ಸೂಚಿಸಿದರು.ತೋಟಗಾರಿಕೆ ಅಧಿಕಾರಿ ಸತೀಶ ಹೆಗಡೆ ಮಾತನಾಡಿ, ತಾಲೂಕಿನಲ್ಲಿ ಬೆಳೆ ವಿಮೆ ಜಮಾ ಆಗಿದ್ದು, 2,132 ಹೆಕ್ಟೇರ್ ಅಡಿಕೆ ತೋಟಗಳಿಗೆ ಎಲೆಚುಕ್ಕೆ ರೋಗ ಕಾಣಿಸಿಕೊಂಡಿದೆ. ಈಗಾಗಲೇ 900 ರೈತರಿಗೆ 20 ಲಕ್ಷ ರೂ ಪರಿಹಾರ ನೀಡಲಾಗಿದೆ ಎಂದರು. ಮಳೆಮಾಪನ ಕೇಂದ್ರಗಳ ಸ್ಥಿತಿಗತಿ ಬಗ್ಗೆ 15 ದಿನಗಳಲ್ಲಿ ವರದಿ ನೀಡಲು ಶಾಸಕರು ಸೂಚಿಸಿದರು. ಹೆಸ್ಕಾಂ ಎಇಇ ರಮಾಕಾಂತ ನಾಯ್ಕ ಇಲಾಖೆಯ ಪ್ರಗತಿ ವಿವರಿಸಿದರು. ಭಾರತ ಗ್ಯಾಸ ನ ಶಮಾ ಗ್ಯಾಸ್ ಏಜೆನ್ಸಿಯ ಮುಜೀದ್ ಶೇಖ್ ಮಾಹಿತಿ ನೀಡಿ ಮಾತನಾಡಿ, 21,000 ಗೃಹ ಬಳಕೆದಾರರು ಹಾಗೂ 500 ವಾಣಿಜ್ಯ ಗ್ರಾಹಕರು ಇದ್ದು ವಾಣಿಜ್ಯ ಗ್ಯಾಸ್ ಕೊರತೆ ಇದೆ. ಬುಕ್ಕಿಂಗ್ ಮಾಡಿದ ನಂತರ 45 ದಿನಗಳಲ್ಲಿ ಸಿಲಿಂಡರ್ ನೀಡಲಾಗುತ್ತಿದೆ ಎಂದರು. ಕ್ಷೇತ್ರಶಿಕ್ಷಣಾಧಿಕಾರಿ ರೇಖಾ ನಾಯ್ಕ ಮಾತನಾಡಿದರು.ತಹಶೀಲ್ದಾರ್ ಚಂದ್ರಶೇಖರ ಹೊಸ್ಮನಿ, ತಾಪಂ ಆಡಳಿತಾಧಿಕಾರಿ ಎಚ್.ಕೆ ಪಾಂಡು , ತಾಪಂ ಇಒ ರಾಜೇಶ ಧನವಾಡಕರ, ಜಿಪಂ ಮಾಜಿ ಸದಸ್ಯ ವಿಜಯ ಮಿರಾಶಿ, ಕೆಡಿಪಿ ನಾಮನಿರ್ದೇಶಿತ ಸದಸ್ಯರಾದ ಲಾರೆನ್ಸ್ ಸಿದ್ದಿ, ದ್ಯಾಮಣ್ಣ ಬೋವಿವಡ್ಡರ, ಪ್ರಶಾಂತ ಸಭಾಹಿತ, ರಾಧಾ ಹೆಗಡೆ, ಎಂ ಡಿ ಮುಲ್ಲಾ, ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಇದ್ದರು.

ಕಿರುಸುದ್ದಿ

ಹೊಸಮಠ ಕಾಲೇಜಿಗೆ ಶೇ.91ರಷ್ಟು ಫಲಿತಾಂಶ

ಹಾವೇರಿ: ಸ್ಥಳೀಯ ಹೊಸಮಠದ ಎಸ್.ಜೆ.ಎಂ ಪದವಿ ಪೂರ್ವ ಕಾಲೇಜಿನ 2025-26 ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಮಕ್ಕಳು ಶೇ.91ರಷ್ಟು ಫಲಿತಾಂಶ ದಾಖಲಿಸಿದ್ದಾರೆ. ಉನ್ನತ ಶ್ರೇಣಿಯಲ್ಲಿ 24 ವಿದ್ಯಾರ್ಥಿಗಳು, ಪ್ರಥಮ ದರ್ಜೆ 145 ವಿದ್ಯಾರ್ಥಿಗಳು, ದ್ವಿತೀಯ ದರ್ಜೆ 45 ವಿದ್ಯಾರ್ಥಿಗಳು ಹಾಗೂ ತೃತೀಯ ದರ್ಜೆಯಲ್ಲಿ 9 ವಿದ್ಯಾರ್ಥಿಗಳು ಪಾಸಾಗಿದ್ದಾರೆ.

ಕಲಾ ವಿಭಾಗದ ಒಟ್ಟು ಫಲಿತಾಂಶ ಶೇ.93.65 ರಷ್ಟು, ವಾಣಿಜ್ಯ ವಿಭಾಗ ಶೇ.98.67 ಮತ್ತು ವಿಜ್ಞಾನ ವಿಭಾಗ ಶೇ.70.45ರಷ್ಟು ದಾಖಲಾಗಿದ್ದು ಕಾಲೇಜಿನ ಒಟ್ಟಾರೆ ಫಲಿತಾಂಶ ಶೇ.91.02ರಷ್ಟಾಗಿದೆ.

ವಾಣಿಜ್ಯ ವಿಭಾಗದಲ್ಲಿ ಅಭಿಷೇಕ ಕಮ್ಮಾರ 576 (ಶೇ.96)ರಷ್ಟು, ಕಲಾ ವಿಭಾಗದಲ್ಲಿ ಜ್ಯೋತಿ ದಾಸಣ್ಣನವರ 564 (ಶೇ.94), ವಿಜ್ಞಾನ ವಿಭಾಗದಲ್ಲಿ ಗಣೇಶ ಕಲ್ಲಮ್ಮನವರ 540 (ಶೇ.90) ಅಂಕಗಳನ್ನುಗಳಿಸಿ ಮಹಾವಿದ್ಯಾಲಯಕ್ಕೆ ಮೊದಲಿಗರಾಗಿದ್ದಾರೆ. ಉತ್ತಮ ಸಾಧನೆ ತೋರಿದ ಎಲ್ಲಾ ವಿದ್ಯಾರ್ಥಿಗಳಿಗೆ ಚಿತ್ರದುರ್ಗದ ಎಸ್.ಜೆ.ಎಂ ವಿದ್ಯಾಪೀಠದ ಅಧ್ಯಕ್ಷರು, ಆಡಳಿತಾಧಿಕಾರಿಗಳು ಹಾಗೂ ಕಾಲೇಜಿನ ಪ್ರಾಚಾರ್ಯರು ಎಲ್ಲಾ ಸಿಬ್ಬಂದಿ ಸಂತಸ ವ್ಯಕ್ತಪಡಿಸಿದ್ದಾರೆ.

ಕೃತಜ್ಞತಾ ಸಮಾರಂಭ ನಾಳೆ

ಹಾವೇರಿ: ತಾಲೂಕಿನ ನೆಗಳೂರ ಗ್ರಾಮದ ಹೆಚ್.ಪಿ.ಕೆ. ಜಿ. ಎಸ್. ಶಾಲೆಯ ಶಿಕ್ಷಕಿ ಎಸ್.ಜಿ. ಪಾಟೀಲ (ಹಿರೇಮಠ) ಸೇವಾ ನಿವೃತ್ತಿ ಹೊಂದಿದ ಹಿನ್ನೆಲೆಯಲ್ಲಿ ಏ.12ರಂದು ಹಳೆಯ ವಿದ್ಯಾರ್ಥಿಗಳ ಹಾಗೂ ಗ್ರಾಮಸ್ಥರ ವತಿಯಿಂದ ಕೃತಜ್ಞತಾ ಸಮಾರಂಭ ಜರಗಲಿದೆ. ಕಾರ್ಯಕ್ರಮದಲ್ಲಿ ಸ್ಥಳೀಯ ಸಂಸ್ಥಾನ ಹಿರೇಮಠದ ಪೂಜ್ಯ ಗುರುಶಾಂತೇಶ್ವರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸವರು ಎಂದು ಪ್ರಕಟಣೆಯಲ್ಲಿ ಆಯೋಜಕರು ತಿಳಿಸಿದ್ದಾರೆ.

ಮಾಸ್ತಿದೇವಿ, ಯಕ್ಷಿ ದೇವಿ ವರ್ಧಂತಿ ಉತ್ಸವ ಸಂಪನ್ನ

ಹೊನ್ನಾವರ: ತಾಲೂಕಿನ ಖರ್ವಾ ಗ್ರಾಮದ ನಾಥಗೇರಿಯ ಮಾಸ್ತಿದೇವಿ ಮತ್ತು ಯಕ್ಷಿ ದೇವಿ ದೇವಸ್ಥಾನದ 18ನೇ ವಾರ್ಷಿಕ ವರ್ಧಂತಿ ಉತ್ಸವ ವಿಜೃಂಭಣೆಯಿಂದ ಸಂಪನ್ನಗೊಂಡಿತು.



ವರ್ಧಂತಿ ಉತ್ಸವ ನಿಮಿತ್ತ ಗಣಪತಿ ಪೂಜೆ, ಪುಣ್ಯಾಹ, ಕಲಶ ಸ್ಥಾಪನೆ, ಬಲಿ, ನವಗ್ರಹ ಹೋಮ, ಪೂರ್ಣಾಹುತಿ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮ ಮೊಗೇರಾರ ದತ್ತಾತ್ರೇಯ ಭಟ್ಟ ನೇತ್ರತ್ವದಲ್ಲಿ ನಡೆಯಿತು. ಉತ್ಸವ ಪ್ರಯುಕ್ತ ದೇವಿಗೆ ವಿಶೇಷ ಹೂವಿನ ಅಲಂಕಾರ ಸಮರ್ಪಿಸಲಾಯಿತು.ಅಭಯ ಹಸ್ತ ಪ್ರತಿಕಳಾಗಿ ದೇವಿ ಕಂಗೊಳಿಸುತ್ತಿದ್ದಳು. ಗೇರುಸೊಪ್ಪಾದ ಗುತ್ತಿಕನ್ನಿಕಾ ಪರಮೇಶ್ವರಿ ದೇವಿಯ ಪಲ್ಲಕ್ಕಿಯನ್ನು ದೇವಳಕ್ಕೆ ಕರೆತಂದು ಪೂಜೆ ಸಲ್ಲಿಸಲಾಯಿತು. ದೇವಾಲಯದ ಪ್ರಧಾನ ಅರ್ಚಕ ಗಣೇಶ ಗೌಡ ಅವರು ದೇವರ ಪೂಜಾ ಕೈಂಕರ್ಯ ನೆರವೇರಿಸಿದರು.ಆಡಳಿತ ಮಂಡಳಿಯ ಅಧ್ಯಕ್ಷ ವಿಷ್ಣು ನಾಯ್ಕ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.

ಅರ್ಜಿ ಆಹ್ವಾನ

ಹಾವೇರಿ : ಪ್ರತಿಷ್ಠಿತ ಶಾಲಾ ಯೋಜನೆಯಡಿ 2026-27ನೇ ಸಾಲಿಗೆ ಜಿಲ್ಲೆಯ ಪ್ರತಿಷ್ಠಿತ ಶಾಲೆಗಳಿಗೆ 6 ನೇ ತರಗತಿಗೆ ಪ್ರವೇಶವಕಾಶ ಹೊಂದಲು ಇಚ್ಛಿಸುವ ಪರಿಶಿಷ್ಟ ಜಾತಿಯ ಪ್ರತಿಭಾವಂತ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.ವಿದ್ಯಾರ್ಥಿಗಳು ಪರಿಶಿಷ್ಟ ಜಾತಿಗೆ ಸೇರಿದವರಾಗಿರಬೇಕು. ಕಳೆದ ಸಾಲಿನಲ್ಲಿ 5ನೇ ತರಗತಿಯಲ್ಲಿ ಕನಿಷ್ಠ ಶೇ.60ಅಂಕ ಪಡೆದಿರಬೇಕು. ಕುಟುಂಬದ ವಾರ್ಷಿಕ ಆದಾಯ ರೂ.2.50ಲಕ್ಷ ಮಿತಿಯೊಳಗಿರಬೇಕು. ಒಂದು ಕುಟುಂಬದಲ್ಲಿ ಇಬ್ಬರಿಗೆ ಒಬ್ಬ ಬಾಲಕ ಮತ್ತು ಒಬ್ಬ ಬಾಲಕಿ, ಬಾಲಕ ಇಲ್ಲದಿದ್ದಲ್ಲಿ ಇಬ್ಬರೂ ಬಾಲಕಿಯರಿಗೂ ಅಥವಾ ಬಾಲಕಿ ಇಲ್ಲದಿದಲ್ಲಿ ಇಬ್ಬರೂ ಬಾಲಕರಿಗೆ ಪ್ರವೇಶವಕಾಶ ಕಲ್ಪಿಸಲಾಗುವುದು. ಶೇ.50ರಷ್ಟು ಬಾಲಕರಿಗೆ ಮತ್ತು ಶೇ.50ರಷ್ಟು ಬಾಲಕಿಯರಿಗೆ ಮೀಸಲಾತಿ ಕಲ್ಪಿಸಲಾಗುವುದು. ಅರ್ಹ ವಿದ್ಯಾರ್ಥಿಗಳು ಅರ್ಜಿಯೊಂದಿಗೆ ಜಾತಿ, ಆದಾಯ ಪ್ರಮಾಣಪತ್ರ, ಇತ್ತೀಚಿನ ಎರಡು ಭಾವಚಿತ್ರದೊಂದಿಗೆ ಅರ್ಜಿಯನ್ನು ಏ.15ರಿಂದ ಮೇ 4ರೊಳಗೆ ವೆಬ್‌ಸೈಟ್ https://swdsrvices.kamataka.gov.in/ EducationPrestigious- E-Kycಮೂಲಕ ಸಲ್ಲಿಸಬೇಕು.ಆನ್‌ಲೈನ್ ಅರ್ಜಿಯೊಂದಿಗೆ ಸೂಕ್ತ ದಾಖಲೆಗಳನ್ನು ಲಗತ್ತಿಸಿ ಉಪ ನಿರ್ದೇಶಕರ ಕಾರ್ಯಾಲಯ, ಸಮಾಜ ಕಲ್ಯಾಣ ಇಲಾಖೆ, ಜಿಲ್ಲಾಡಳಿತ ಭವನ ಹಾವೇರಿ ಈ ವಿಳಾಸಕ್ಕೆ ಸಲ್ಲಿಸಬೇಕು. ಅರ್ಜಿ ಸಲ್ಲಿಸಿದ ಅರ್ಹ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಮೇ 12ರಂದು ಪ್ರವೇಶ ಪರೀಕ್ಷೆ ನಿಗದಿ ಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರ ಕಚೇರಿ ಅಥವಾ ಆಯಾ ತಾಲೂಕಿನ ಸಹಾಯಕ ನಿರ್ದೇಶಕರ ಕಚೇರಿ ಸಂಪರ್ಕಿಸಬಹುದೆಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ರಾಣೇಬೆನ್ನೂರ: ನಗರದ ಹೊರವಲಯದ ತರಳಬಾಳು ಜಗದ್ಗುರು ತಾಂತ್ರಿಕ ಮಹಾವಿದ್ಯಾಲಯದ 3 ವಿದ್ಯಾರ್ಥಿಗಳು ಬೆಂಗಳೂರಿನ ಟೆಕ್ನಾಲಜೀಸ್ ಗ್ಲೋಬಲ್ ಪ್ರೈವೇಟ್ ಲಿಮಿಟೆಡ್ನ ಡ್ರೈವ್‌ನಲ್ಲಿ ಆಯ್ಕೆಯಾಗಿದ್ದಾರೆ.

ಏ.18ಕ್ಕೆ ಜಿಲ್ಲಾಮಟ್ಟದ ಬೇಸಿಗೆ ಶಿಬಿರ

ಹಾವೇರಿ: ಬಾಲಭವನ ಸೊಸೈಟಿ, ಜಿಲ್ಲಾಡಳಿತ, ಜಿಪಂ , ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಶಾಲಾ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಜಿಲ್ಲಾಮಟ್ಟದ ಬೇಸಿಗೆ ಶಿಬಿರ ಏ.18ರಿಂದ 15ದಿನಗಳ ಕಾಲ ಹಾವೇರಿ ಜಿಲ್ಲಾ ಬಾಲಭವನ ಸೊಸೈಟಿಯಲ್ಲಿ ಜರುಗಲಿದೆ.

ಐದರಿಂದ 16 ವರ್ಷದೊಳಗಿನ ಸರ್ಕಾರಿ ಶಾಲಾ ಮಕ್ಕಳು, ಗ್ರಾಮೀಣ ಪ್ರದೇಶದ ಹಾಗೂ ಸೌಲಭ್ಯ ವಂಚಿತ ಮಕ್ಕಳು, ವಿಶೇಷ ಚೇತನ ಮಕ್ಕಳು, ಬಾಲಕರ, ಬಾಲಕಿಯರ ಬಾಲ ಮಂದಿರದ ಮಕ್ಕಳು ಹಾಗೂ ಸರ್ಕಾರಿ ಸುಧಾರಣಾ ಸಂಸ್ಥೆಯ ಮಕ್ಕಳಿಗೆ ಮೊದಲ ಆದ್ಯತೆ ನೀಡಲಾಗುತ್ತದೆ. ಮೊದಲು ಬಂದ 60 ಮಕ್ಕಳಿಗೆ ಮಾತ್ರ ಪ್ರವೇಶವಿರುತ್ತದೆ.

ಶಿಬಿರದಲ್ಲಿ ಯೋಗ, ನೃತ್ಯ, ಚಿತ್ರಕಲೆ, ಕರಕುಶಲ ಕಲೆ, ಜೇಡಿಮಣ್ಣಿನ ಕಲೆ, ಕರಾಟೆ, ಧ್ಯಾನ, ನಾಟಕ, ಸಮೂಹ ಸಂಗೀತ, ಸಮೂಹ ನೃತ್ಯ, ಇತ್ಯಾದಿ ಚಟುವಟಿಕೆಗಳ ತರಬೇತಿ ನೀಡಲಾಗುವುದು. ಏ.17ರೊಳಗಾಗಿ ಮಕ್ಕಳ ಹೆಸರನ್ನು ನೊಂದಾಯಿಸಬೇಕು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಬಾಲಭವನ ಕಾರ್ಯಕ್ರಮ ಸಂಯೋಜಕ ಸೋಮನಗೌಡ ಗಾಳಿಗೌಡ್ರ ಮೊ.8970727355 ಹಾಗೂ ಕಚೇರಿ ಸಹಾಯಕ ರಾಮು ಪಾಟೀಲ ಅವರನ್ನು ಸಂಪರ್ಕಿಸಬಹುದೆಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು ಹಾಗೂ ಜಿಲ್ಲಾ ಬಾಲಭವನ ಸೊಸೈಟಿ ಕಾರ್ಯದರ್ಶಿ ಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕುಮಟಾ: ತಾಲೂಕಿನ ಹೆಗಡೆಯಲ್ಲಿ ವಿಶ್ವ ಹಿಂದೂ ಪರಿಷತ್ ಕಾರವಾರ ಜಿಲ್ಲಾ ಘಟಕದ ವತಿಯಿಂದ ಒಂದು ದಿನದ ಕಾರ್ಯಕರ್ತರ ಅಭ್ಯಾಸ ವರ್ಗವನ್ನು ಕೇಂದ್ರೀಯ ಸಂಘಟನಾ ಮಹಾಮಂತ್ರಿ ಮಿಲಿಂದ ಪರಾಂಡೆ ಅವರು ಚಾಲನೆ ನೀಡಿದರು. ಕರ್ನಾಟಕ ಉತ್ತರ ಪ್ರಾಂತದ ಅಧ್ಯಕ್ಷ ಲಿಗರಾಜಪ್ಪ ಅಪ್ಪಾಜಿ, ಉಪಾಧ್ಯಕ್ಷ ಗಂಗಾಧರ ಹೆಗಡೆ, ಕಾರ್ಯದರ್ಶಿ ಶಿವಕುಮಾರ್ ಬೋಳಶೆಟ್ಟಿ, ಸಹ ಕಾರ್ಯದರ್ಶಿಗಳು ವಿನಾಯಕ ತಲಗೇರಿ, ಪ್ರದೀಪ ಶೆಟ್ಟಿ, ಪುಂಡಲೀಕ ದವಾಯಿ ಹಾಗೂ ಕಾರವಾರ ಜಿಲ್ಲಾ ಅಧ್ಯಕ್ಷ ನಾಗಪ್ಪ ನಾಯ್ಕ ಉಪಸ್ಥಿತರಿದ್ದರು.

ತ್ರೈಮಾಸಿಕ ಕೆಡಿಪಿ ಸಭೆ | ಸಚಿವ ಶಿವಾನಂದ ಪಾಟೀಲ ಸೂಚನೆ

ಮಾರಾಟಗಾರರ ಮೇಲೆ ಕ್ರಮ ಅಗತ್ಯ

ಹಾವೇರಿ: ಕಳಪೆ ಬಿತ್ತನೆ ಬೀಜ ಮಾರಾಟಗಾರರ ಮೇಲೆ ಕಠಿಣ ಕ್ರಮವಾಗಬೇಕು. ಕೇವಲ ಕೇಸ್ ದಾಖಲಿಸಿ ದಂಡ ಹಾಕಿದರೆ ಸಾಲದು. ಮುಂಗಾರು ಹಂಗಾಮು ಆರಂಭವಾಗುತ್ತಿದ್ದು, ಈ ಬಗ್ಗೆ ಎಚ್ಚರಿಕೆ ವಹಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಸೂಚನೆ ನೀಡಿದರು.



ಇಲ್ಲಿಯ ಜಿಲ್ಲಾ ಪಂಚಾಯ್ತಿ ಸಭಾಭವನದಲ್ಲಿ ಆಯೋಜಿಸಿದ್ದ ತ್ರೈಮಾಸಿಕ ಕೆಡಿಪಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ನಕಲಿ ಹಾಗೂ ಕಳಪೆ ಬಿತ್ತನೆ ಬೀಜ ಮಾರಾಟಗಾರರ ಮೇಲೆ ಕೈಗೊಂಡ ಕ್ರಮದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು. 12 ಜನರ ಮೇಲೆ ಕೇಸ್ ಹಾಕಿದ್ದೀರಿ. ಆದರೆ, ಶಿಕ್ಷೆ ಆಗುತ್ತಿಲ್ಲವಲ್ಲ ಎಂದು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಜಂಟಿ ಕೃಷಿ ನಿರ್ದೇಶಕರು, ಅಂಥವರ ಪರವಾನಗಿ ರದ್ದು ಮಾಡಲಾಗುವುದು ಎಂದು ಹೇಳಿದರು.

ಮಾವು ಬೆಳೆ ಹಾಳಾಗಿರುವ ಬಗ್ಗೆ ರೈತರು ಅಳಲು ತೋಡಿಕೊಳ್ಳುತ್ತಿದ್ದಾರೆ, ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ ಎಂದು ತೋಟಗಾರಿಕಾ ಉಪನಿರ್ದೇಶಕರನ್ನು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಅವರು, ಈ ಸಲ ಹೂವು ಚೆನ್ನಾಗಿ ಬಿಟ್ಟರೂ ಕಡಿಮೆ ಉಷ್ಣಾಂಶದಿಂದ ಆರಂಭದಲ್ಲಿ ಹೂವು ಉದುರಿತ್ತು. ಬಳಿಕ ಮಳೆ, ಮೋಡದ ವಾತಾವರಣದಿಂದ ಇಳುವರಿ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ. ಆದರೆ, ಈ ಸಲ ಬಹುತೇಕ ಮಾವು ಬೆಳೆಗಾರರು ವಿಮೆ ಮಾಡಿಸಿಕೊಂಡಿದ್ದಾರೆ ಎಂದು ಹೇಳಿದರು. ವಿಮೆ ಮಾಡಿಸಿದರೆ ಸಾಲದು, ರೈತರಿಗೆ ವಿಮೆ ಕೊಡಿಸಬೇಕು ಎಂದು ಸಚಿವರು ಸೂಚಿಸಿದರು. ಹಾವೇರಿ ಮತ್ತು ರಾಣಿಬೆನ್ನೂರು ತಾಲೂಕಿನಲ್ಲಿ ಅಡಕೆ ಬೆಳೆಗೆ ಸಬ್ಸಿಡಿ ಸಿಗುತ್ತಿಲ್ಲ, ಈ ಬಗ್ಗೆ ಹಲವು ವರ್ಷಗಳಿಂದ ಹೇಳುತ್ತ ಬಂದರೂ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಸಂಪರ್ಕಿಸಿ ಸೂಕ್ತ ಕ್ರಮ ಕೈಗೊಳ್ಳಲು ಆಗುವುದಿಲ್ಲವೇ ಎಂದು ಸಚಿವರು ಅಧಿಕಾರಿಯನ್ನು ತರಾಟೆಗೆ ತೆಗೆದುಕೊಂಡರು.

ಶಿರಸಿ ಹಾವೇರಿ ರಸ್ತೆ ಯಾವಾಗ : ಶಿರಸಿ ಹಾವೇರಿ ರಸ್ತೆ ಗುಂಡಿ ಬಗ್ಗೆ ಪ್ರಸ್ತಾಪಿಸಿದ ಹಾನಗಲ್ಲ ಶಾಸಕ ಶ್ರೀನಿವಾಸ ಮಾನೆ, ಇನ್ನೂ ಎಷ್ಟು ಜನರ ಪ್ರಾಣ ತೆಗೆಯಬೇಕು ಎಂದುಕೊಂಡಿದ್ದೀರಿ? ಹಾವೇರಿಯಿಂದ ನಾಲ್ಕರ ಕ್ರಾಸ್‌ವರೆಗೆ ಅಲ್ಲಲ್ಲಿ ರಸ್ತೆ ಗುಂಡಿ ಬಿದ್ದಿದೆ. ಈ ಬಗ್ಗೆ ಹಲವು ಸಲ ಗಮನಕ್ಕೆ ತಂದರೂ ಗುಂಡಿ ಮುಚ್ಚುವ ಕೆಲಸವಾಗುತ್ತಿಲ್ಲ, ನಿತ್ಯವೂ ಅನೇಕ ಅಪಘಾತಗಳು ಆಗುತ್ತಿವೆ. ಇನ್ನೂ ಎಷ್ಟು ದಿನ ಬೇಕು ಎಂದು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ರಾಷ್ಟ್ರೀಯ ಹೆದ್ದಾರಿ ಅಧಿಕಾರಿ, ಮೇ ಅಂತ್ಯದೊಳಗೆ ಮುಗಿಸುತ್ತೇವೆ ಎಂದು ಹೇಳಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಸಚಿವರು, ನೀವು ಮಳೆಗಾಲದಲ್ಲಿ ಕೆಲಸ ಮಾಡುತ್ತೀರಾ, ಕೆಲಸ ವಿಳಂಬ ಮಾಡಿದ ಗುತ್ತಿಗೆದಾರರ ರಕ್ಷಣೆ ಮಾಡುತ್ತಿದ್ದೀರಾ, ಈಗಾಗಲೇ 3 ನೋಟಿಸ್ ಕೊಟ್ಟಿದ್ದೀರಿ ಎನ್ನುತ್ತೀರಿ, ಇನ್ನೂ ಎಷ್ಟು ನೋಟಿಸ್ ಕೊಡುತ್ತೀರಾ. ಈ ತಿಂಗಳ ಅಂತ್ಯದೊಳಗೆ ತಗ್ಗು ಗುಂಡಿ ತುಂಬಿಸುವ ಕೆಲಸ ಮುಗಿಸಬೇಕು ಎಂದು ತಾಕೀತು ಮಾಡಿದರು.

ಸಶಾಸಕ ಪ್ರಕಾಶ ಕೋಳಿವಾಡ, ಗ್ಯಾರಂಟಿ ರಾಜ್ಯ ಉಪಾಧ್ಯಕ್ಷ ಎಸ್.ಆರ್.ಪಾಟೀಲ್, ಜಿಪಂ ಸಿಇಒ ರುಚಿ ಬಿಂದಲ್, ಎಸ್ಪಿ ಯಶೋದಾ ವಂಟಗೋಡಿ, ಜಿಲ್ಲಾ ಮಟ್ಟದ ಅಧಿಕಾರಿಗಳು ಇದ್ದರು.

ಬೆಳೆ ಪದ್ಧತಿ ಬದಲಿಸಿ

ಮುಂಗಾರು ಹಂಗಾಮಿನ ಸಿದ್ಧತೆ ಪರಿಶೀಲಿಸಿದ ಅವರು, ಜಿಲ್ಲೆಯಲ್ಲಿ ಮೆಕ್ಕೆಜೋಳ ಅಧಿಕ ಪ್ರಮಾಣದಲ್ಲಿ ಬಿತ್ತನೆಯಾಗುತ್ತದೆ. ಈ ಸಲ ಬೆಲೆಯಿಲ್ಲದೇ ಸಮಸ್ಯೆ ಎದುರಿಸುವಂತಾಗಿದೆ. ಬೆಳೆ ಪದ್ಧತಿ ಬದಲಾವಣೆಗೆ ರೈತರ ಮನವೊಲಿಸುವ ಕೆಲಸ ಮಾಡಿ,. ರಾಗಿ, ಹೆಸರು, ಎಣ್ಣೆ ಕಾಳು ಉತ್ಪಾದನೆಗೆ ಆದ್ಯತೆ ನೀಡಿ, ಬೇಕು. ಮೆಕ್ಕೆಜೋಳ ಬಿತ್ತನೆ ಕ್ಷೇತ್ರದ ಶೇ.50ರಷ್ಟಾದರೂ ಬೇರೆ ಬೆಳೆ ಆಗಬೇಕು ಎಂದು ತಾಕೀತು ಮಾಡಿದರು. ಮುಂಗಾರು ಹಂಗಾಮಿಗೆ ರಸಗೊಬ್ಬರ, ಬಿತ್ತನೆ ಬೀಜ ದಾಸ್ತಾನು ಸಾಕಷ್ಟಿರುವ ಬಗ್ಗೆ ಅಧಿಕಾರಿಗಳು ಮಾಹಿತಿ ನೀಡಿದರು.

ದ್ವಿತೀಯ ಪಿಯು ಪರೀಕ್ಷೆಯಲ್ಲಿ ವಿದ್ಯಾರ್ಥಿಗಳ ಸಾಧನೆ

ಹಾವೇರಿ: 2025-26ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಫಲಿತಾಂಶ ಪ್ರಕಟಗೊಂಡಿದ್ದು, ವಾಣಿಜ್ಯ ವಿಭಾಗದ ಆಕಾಶ ಭದ್ರಶೆಟ್ಟಿ, ವಿಜ್ಞಾನ ವಿಭಾಗದ ಆರತಿ ಆನ್ವೇರಿ ಹಾಗೂ ಪ್ರಸನ್ನಕುಮಾರ ಪಾಟೀಲ ತಲಾ 591 ಅಂಕಗಳನ್ನು ಪಡೆದು, ಶೇ.98.50% ಪ್ರತಿಶತದೊಂದಿಗೆ ಹಾವೇರಿ ಜಿಲ್ಲೆಯ ಟಾಪರ್ ವಿದ್ಯಾರ್ಥಿಗಳಾಗಿ ಹೊರಹೊಮ್ಮಿದ್ದಾರೆ.

ಕಲಾ ವಿಭಾಗದಲ್ಲಿ ಹಾನಗಲ್ ತಾಲೂಕು ಬೊಮ್ಮನಹಳ್ಳಿ ಸರ್ಕಾರಿ ಪಪೂ ಕಾಲೇಜಿನ ವಿದ್ಯಾರ್ಥಿನಿ ಶೃತಿ ಈರಪ್ಪ ಮೂಡೂರು 590 ಅಂಕಗಳೊಂದಿಗೆ ಶೇ.98.33, ರಾಣೇಬೆನ್ನೂರಿನ ಸಂಜೀವಿನಿ ಪಪೂ ಕಾಲೇಜಿನ ವಿದ್ಯಾರ್ಥಿ ಶಿವಕುಮಾರ ಗುಡ್ಡಪ್ಪ ಕುಮ್ಮೂರ 587 ಅಂಕಗಳೊಂದಿಗೆ ಶೇ.97.83, ಬ್ಯಾಡಗಿಯ ಮಹಾಂತೇಶ್ವರ ಪಪೂ ಕಾಲೇಜಿನ ಲಕ್ಷ್ಮೀ ಜಗದೀಶ ವಾಲ್ಮೀಕಿ 586 ಅಂಕಗಳೊಂದಿಗೆ ಶೇ.97.66ರಷ್ಟು ಫಲಿತಾಂಶ ಪಡೆದು ಕಲಾ ವಿಭಾಗದಲ್ಲಿ ಟಾಪರ್ ಆಗಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಹಾವೇರಿ ಆಕ್ಸ್‌ಫರ್ಡ ಪಿಯು ಕಾಲೇಜಿನ ವಿದ್ಯಾರ್ಥಿ ಆಕಾಶ ಭದ್ರಶೆಟ್ಟಿ 591 ಅಂಕಗಳೊಂದಿಗೆ ಶೇ.98.50, ಹಾನಗಲ್ ಮುರಾರ್ಜಿ ದೇಸಾಯಿ ಬಾಲಕಿಯರ ಪ.ಪೂ ಕಾಲೇಜಿನ ಜಯಲಕ್ಷ್ಮೀ ಬಡಿಗೇರ ಹಾಗೂ ಸವಣೂರಿನ ಸರಕಾರಿ ಮಜೀದ್ ಪಪೂ ಕಾಲೇಜಿನ ವಿದ್ಯಾರ್ಥಿ ನಿತ್ಯರಾಜ ಹಂಚಾಟೆ ತಲಾ 590 ಅಂಕಗಳೊಂದಿಗೆ ಶೇ.98.33 ಹಾಗೂ ಹಾವೇರಿ ಆಕ್ಸ್‌ಫರ್ಡ ಕಾಲೇಜಿನ ಜ್ಯೋತಿ ಜಗದೀಶ ಹೊನಗೇಕರ 589 ಅಂಕಗಳೊಂದಿಗೆ ಶೇ.98.16ರಷ್ಟು ಫಲಿತಾಂಶ ಪಡೆದು ವಾಣಿಜ್ಯ ವಿಭಾಗದ ಟಾಪರ್ ಆಗಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಮೋಟೆಬೆನ್ನೂರು ಫೇಸ್ ಪಪೂ ಕಾಲೇಜಿನ ವಿದ್ಯಾರ್ಥಿನಿಯರಾದ ಆರತಿ ಮಂಜುನಾಥ ಆನ್ವೇರಿ ಹಾಗೂ ಪ್ರಸನ್ನಕುಮಾರ ಶಾಂತನಗೌಡ ಪಾಟೀಲ ತಲಾ 591 ಅಂಕಗಳೊಂದಿಗೆ ಶೇ.98.50, ರಾಣೇಬೆನ್ನೂರಿನ ದೇವಿಕಾ ಪಪೂ ಕಾಲೇಜಿನ ವೆಂಕಟೇಶ ಬಸವರಾಜ ಅಕ್ಕೂರ 589 ಅಂಕಗಳೊಂದಿಗೆ ಶೇ.98.16, ಸವಣೂರ ಮುರಾರ್ಜಿ ದೇಸಾಯಿ ವಸತಿಯುತ ಪಪೂ ಕಾಲೇಜಿನ ಚಿನ್ಮಯಿ ಕುಮಾರಸ್ವಾಮಿ ಹಿರೇಮಠ, ರಾಣೇಬೆನ್ನೂರಿನ ದೇವಿಕಾ ಪಪೂ ಕಾಲೇಜಿನ ನಾಯಲಖಾನ್, ನೇಹಾ ಬಸವರಾಜ ಹಳ್ಳಿಯವರ, ಶಿಗ್ಗಾವಿಯ ದಿಶಾ ಇಂಟರ್‌ನ್ಯಾಷನಲ್ ಪಿಯು ಕಾಲೇಜಿನ ಶೈನಾಜ್‌ಖಾನಂ ಖಾಜಿಖಾನ್ ಹಾಗೂ ರಾಣೇಬೆನ್ನೂರಿನ ಕನ್ನೂರು ಪಪೂ ಕಾಲೇಜಿನ ಶಂಭುಲಿಂಗ ಸುಂಕದ ತಲಾ 588 ಅಂಕಗಳೊಂದಿಗ ಶೇ.98 ಪ್ರತಿಶತದೊಂದಿಗೆ ವಿಜ್ಞಾನ ವಿಭಾಗದಲ್ಲಿ ಟಾಪರ್ ವಿದ್ಯಾರ್ಥಿಗಳಾಗಿ ಹೊರಹೊಮ್ಮಿದ್ದಾರೆ ಎಂದು ಡಿಡಿಪಿಯು ಅಶೋಕ ಶಾಸ್ತ್ರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಳ್ಳರ ಬಂಧನ: 6.65 ಲಕ್ಷ ರೂ. ಸ್ವತ್ತು ವಶ

ಹಾವೇರಿ: ಹಾವೇರಿ ಹಾಗೂ ದಾವಣಗೇರಿ ಜಿಲ್ಲೆಗಳಲ್ಲಿ ಕಳ್ಳತನ ಮಾಡುತ್ತಿದ್ದ ಅಂತರ್ ಜಿಲ್ಲಾ ಕಳ್ಳನನ್ನು ಶಹರ ಠಾಣೆಯ ಪೊಲೀಸರು ಪತ್ತೆ ಮಾಡಿದ್ದು, ಆರೋಪಿಯಿಂದ 6.65 ಲಕ್ಷ ರೂ.ಮೊತ್ತದ ಸ್ವತ್ತುಗಳನ್ನು ವಶಪಡಿಸಿಕೊಂಡಿದ್ದಾಗಿ ಜಿಲ್ಲಾ ಪೊಲೀಸ್ ಅಧೀಕ್ಷಕಿ ಯಶೋಧಾ ವಂಟಗೋಡಿ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಹಾವೇರಿ ಶಹರ ಪೊಲೀಸ್ ಠಾಣೆ ವ್ಯಾಪ್ತಿಯ ತಾರಾಪ್ಲಾಜಾ ಬಳಿ ಇತ್ತೀಚೆಗೆ ಜೀಪ್ ಕಳ್ಳತನವಾಗಿದ್ದರ ಬಗ್ಗೆ ಠಾಣೆಯಲ್ಲಿ ದೂರು ದಾಖಲಾಗಿತ್ತು. ಪ್ರಕರಣವನ್ನು ದಾಖಲಿಸಿಕೊಂಡ ಪೊಲೀಸರು ವಿಶೇಷ ತನಿಖಾ ತಂಡವನ್ನು ರಚಿಸಿ ಕಾರ್ಯಾಚರಣೆ ನಡೆಸಿ, ಬ್ಯಾಡಗಿ ತಾಲೂಕು ಕಾಗಿನೆಲೆಯ ಚಾಂದಭಾಷಾ ಅಬ್ದುಲ್‌ಸತ್ತಾರ ಶಿಕಾರಿಪುರ (34) ಎಂಬಾತನನ್ನು ದಸ್ತಗಿರಿ ಮಾಡಿ ವಿಚಾರಣೆಗೆ ಒಳಪಡಿಸಲಾಗಿದೆ ಎಂದು ತಿಳಿಸಿದ್ದಾರೆ.

ಆರೋಪಿಯಿಂದ ಹಾವೇರಿ, ಶಿಗ್ಗಾವಿ, ದಾವಣಗೆರಿಯಲ್ಲಿ ಕಳ್ಳತನಮಾಡಿದ್ದ 4.25ಲಕ್ಷ ಮೊತ್ತದ ಒಂದು ಬುಲೆರೋ ವಾಹನ, 1.80ಲಕ್ಷ ಮೊತ್ತದ ಒಂದು ಪ್ಯಾಸೆಂಜರ್ ವಾಹನ, 60ಸಾವಿರ ರೂ.ಕಿಮ್ಮತ್ತಿನ ನಾಲ್ಕು ಬೈಕ್‌ಗಳು ಸೇರಿದಂತೆ ಒಟ್ಟು 6.65 ಲಕ್ಷ ಮೊತ್ತದ ವಾಹನಗಳನ್ನು ವಶಪಡಿಸಿಕೊಂಡು, ಹೆಚ್ಚಿನ ತನಿಖೆ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಹೆಚ್ಚುವರಿ ಎಸ್ಪಿ ಲಕ್ಷ್ಮಣ ಶಿರಕೋಳ, ಡಿವೈಎಸ್‌ಪಿಗಳಾದ ಗಿರಿಮಲ್ಲ ತಳಕಟ್ಟಿ ನೇತೃತ್ವದಲ್ಲಿ ಶಹರ ಠಾಣೆ ಸಿಪಿಐ ಮೋತಿಲಾಲ್ ಪವಾರ ಮುಂದಾಳತ್ವದಲ್ಲಿ ತಂಡವನ್ನು ರಚಿಸಲಾಗಿತ್ತು. ಕಾರ್ಯಾಚರಣೆ ತಂಡದಲ್ಲಿ ಪಿಎಸ್ ಐಗಳಾದ ಎನ್.ಎನ್. ಶಿಶುವಿನಹಾಳ, ಎಂ.ಜಿ. ವಗ್ಗಣ್ಣನವರ, ಬಿ.ಜಿ. ದೊಡ್ಡಮನಿ, ಸಿಬ್ಬಂದಿಗಳಾದ ಯಲ್ಲಪ್ಪ ತಹಸೀಲ್ದಾರ, ಮುತ್ತಪ್ಪ ಲಮಾಣಿ, ಚನ್ನಬಸಪ್ಪ ಆರ್.ಬಿ., ನೀಲಕಂಠ ಲಿಂಗರಾಜ, ಮಲ್ಲೇಶ ಮಾಯಗೊಂಡರ, ಚಂದ್ರಕಾಂತ ಎಲ್.ಆರ್., ಮೆಹಬೂಬಲಿ ಎನ್.ಎಚ್., ರವಿ ಲಮಾಣಿ, ಬಸವರಾಜ ಸಿಳ್ಳಿಕ್ಯಾತರ, ಮಾಲತೇಶ ಕಬ್ಬೂರ, ಮಾರುತಿ ಹಾಲಭಾವಿ, ಸತೀಶ ಮಾರುಕಟ್ಟೆ ಸೇರಿದಂತ ಹಲವರು ಭಾಗಿಯಾಗಿದ್ದರು.



ನಾಗಯಕ್ಷೆ ಮಹಾಸತಿ ವರ್ಧಂತ್ಯುತ್ಸವ ಸಂಪನ್ನ

ಭಟ್ಕಳ : ಪಟ್ಟಣದ ನಾಗಯಕ್ಷೆ ಮಹಾಸತಿ ಧರ್ಮದೇವಿ ಸಂಸ್ಥಾನದ 22ನೇ ವರ್ಷದ ಪ್ರತಿಷ್ಠಾ ವರ್ಧಂತ್ಯುತ್ಸವ ಶುಕ್ರವಾರ ವಿಜೃಂಭಣೆಯಿಂದ ಸಂಪನ್ನಗೊಂಡಿತು.

ವರ್ಧಂತ್ಯುತ್ಸವದ ಅಂಗವಾಗಿ ಶುಕ್ರವಾರ ಬೆಳಗ್ಗೆ ದೇವಿಗೆ ಕಲಶಾಭಿಷೇಕ ಮತ್ತು ಪಂಚಾಮೃತ ಅಭಿಷೇಕ ನಡೆಯಿತು. ಮಧ್ಯಾಹ್ನ ನವಚಂಡಿಕಾ ಹವನದ ಪೂರ್ಣಾಹುತಿ, ದೇವಿಗೆ ವಿಶೇಷ ಅಲಂಕಾರ ಸಹಿತ ಮಹಾಪೂಜೆ ನೆರವೇರಿತು. ನವಚಂಡಿ ಯಾಗದ ಪೂರ್ಣಾಹುತಿ ಬಳಿಕ ಧರ್ಮದರ್ಶಿ ರಾಮದಾಸ ಪ್ರಭು ಅವರಿಂದ ಮೈದರ್ಶನ ನಡೆಯಿತು. ಅರ್ಚಕ ಉದಯ ಪ್ರಭು ಮತ್ತು ಅವರ ತಂಡ ನಾಗಯಕ್ಷೆ ದೇವಿಗೆ ಮಾಡಿದ ವಿಶೇಷ ಅಲಂಕಾರ ಗಮನ ಸೆಳೆಯಿತು. ಬೆಳಿಗ್ಗೆಯಿಂದ ಸಂಜೆ ವರೆಗೂ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ದೇವಿಗೆ ಪೂಜೆ, ಪುನಸ್ಕಾರ ಸಲ್ಲಿಸಿದರು. ಮಧ್ಯಾಹ್ನ ನೂರಾರು ಭಕ್ತರು ಪ್ರಸಾದ ಭೋಜನ ಸ್ವೀಕರಿಸಿದರು. ಸಂಜೆ ಕುಮಟಾದ ಕೊಂಕಣ ಎಜ್ಯುಕೇಶನ್ ಟ್ರಸ್ಟಿನ ಜಾನಕಿ ಪ್ರಭು ಪ್ರತಿಭಾ ಚೈತನ್ಯ ಕೇಂದ್ರದ ವಿದ್ಯಾರ್ಥಿಗಳಿಂದ ದೇವಿ ಮಹಾತ್ಮೆ ಯಕ್ಷಗಾನ ಪ್ರದರ್ಶನ ಪ್ರೇಕ್ಷರ ಮನರಂಜಿಸಿತು.

ರಾತ್ರಿ ಮುಂಬೈನ ಖ್ಯಾತ ಗಾಯಕರಾದ ಧನಂಜಯ್ ಮಾಸ್ಕರ್ ಮತ್ತು ಸಿದ್ದೇಶ ಜಾದವ್ ಅವರಿಂದ ಭಜನಾಮೃತ ಎನ್ನುವ ವಿಶೇಷ ಭಜನೆ ಕಾರ್ಯಕ್ರಮವೂ ಕೂಡ ಪ್ರೇಕ್ಷಕರ ರಂಜಿಸುವಲ್ಲಿ ಯಶಸ್ವಿ ಆಯಿತು. ಕುಮಟಾದ ಮುರಳೀಧರ ಪ್ರಭು ಸೇರಿದಂತೆ ಪ್ರಭು ಕುಟಂಬದವರು, ಗಣ್ಯರು ಸೇರಿದಂತೆ ನೂರಾರು ಭಕ್ತರು ದೇವಿಯ ದರ್ಶನ ಪಡೆದರು.



ನೀರಿನ ಸಮಸ್ಯೆಯಾಗದಂತೆ ಕ್ರಮ ಕೈಗೊಳ್ಳಿ: ಶಿವಣ್ಣನವರ

ಹಾವೇರಿ: ಬೇಸಿಗೆ ಆರಂಭವಾಗಿದ್ದು ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳಬೇಕು. ಸಮಸ್ಯೆ ಹೆಚ್ಚಾಗಿರುವ ಗ್ರಾಮಗಳಿಗೆ ಖಾಸಗಿ ಕೊಳವೆಬಾವಿಗಳನ್ನು ಬಾಡಿಗೆ ರೂಪದಲ್ಲಿ ಪಡೆದು ನೀರು ಪೂರೈಸಬೇಕು ಎಂದು ಶಾಸಕ ಬಸವರಾಜ ಶಿವಣ್ಣನವರ ಸೂಚಿಸಿದರು.

ಇಲ್ಲಿನ ಪ್ರವಾಸಿ ಮಂದಿರದಲ್ಲಿ ಹಾವೇರಿ ತಾಲೂಕಿನ ಬ್ಯಾಡಗಿ ವಿಧಾನಸಭಾ ಕ್ಷೇತ್ರಕ್ಕೆ ಒಳಪಡುವ ಗ್ರಾಮಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಕುರಿತು ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿ ಅವರು ಮಾತನಾಡಿ, ಗ್ರಾಮೀಣ ಭಾಗದ ಜನರಿಗೆ ಹಾಗೂ ಜಾನುವಾರುಗಳಿಗೆ ಯಾವುದೇ ಕಾರಣಕ್ಕೂ ನೀರಿನ ಸಮಸ್ಯೆ ಉಂಟಾಗಬಾರದು. ಅಲ್ಲದೇ ನೀರಿನ, ಮನೆ ಕರವನ್ನು ಸರಿಯಾಗಿ ವಸೂಲಿ ಮಾಡಬೇಕು. ಇತ್ತೀಚೆಗೆ ಬೀಸಿದ ಭಾರಿ ಗಾಳಿಗೆ ಕೆಲ ಹಳ್ಳಿಗಳ ಸರ್ಕಾರಿ ಶಾಲೆಗಳ ಮೇಲ್ಛಾವಣಿ ಹಾರಿ ಹೋಗಿದ್ದು, ಅಂಥ ಶಾಲೆಗಳನ್ನು ರಜಾ ಅವಧಿಯಲ್ಲಿ ದುರಸ್ತಿ ಮಾಡಬೇಕು ಎಂದು ಸೂಚಿಸಿದರು.

ಸಭೆಯಲ್ಲಿ ತಹಶೀಲ್ದಾರ್ ಶರಣಮ್ಮ, ತಾಪಂ ಇಒ ಡಾ.ಪಿ.ಎನ್. ಹುಬ್ಬಳ್ಳಿ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಹಾಜರಿದ್ದರು.



ತಮ್ಮ ಹೆಸರಿಗೆ ಆಸ್ತಿ ಅಕ್ರಮ ಖರೀದಿ ಖಂಡನೀಯ: ಕೋತಂಬರಿ

ಹಾವೇರಿ: ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠಕ್ಕೆ ಸಂಬಂಧಿಸಿದ ಆಸ್ತಿಯನ್ನು ಸಮಾಜದ ಮುಖಂಡರೂ ಆದ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ ಅಕ್ರಮವಾಗಿ ತಮ್ಮ ಹೆಸರಿಗೆ ಖರೀದಿ ಮಾಡಿಸಿಕೊಂಡಿದ್ದು ಖಂಡನೀಯ. ಕೂಡಲೇ ಶ್ರೀಮಠದ ಆಸ್ತಿಯನ್ನು ಹರಿಹರ ಪೀಠಕ್ಕೆ ಮರಳಿಸುವ ಮೂಲಕ ತಮ್ಮ ಘನತೆ, ಗೌರವ ಉಳಿಸಿಕೊಳ್ಳಬೇಕೆಂದು ಸಮಾಜದ ಮುಖಂಡ, ವಕೀಲ ಸೋಮಶೇಖರ ಕೋತಂಬರಿ ಆಗ್ರಹಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,

ಜಿಲ್ಲೆಯ ಸಮಾಜದ ಹಿರಿಯರಾದ, ರಾಜ್ಯ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ ಅವರು ಹರಿಹರ ಪೀಠದ ಟ್ರಸ್ಟಿ ಬಗ್ಗೆ ಆಧಾರ ರಹಿತ ಆರೋಪ ಮಾಡುತ್ತಿದ್ದಾರೆ. ಆರೋಪ ಮಾಡುವವರ ಕೈ ಕೂಡ ಶುದ್ಧತೆಯಿಂದ ಕೂಡಿರಬೇಕೆಂಬುದು ನಮ್ಮ ಒತ್ತಾಯ. ಈ ಹಿಂದೆ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಅವರು ಸಮಾಜದ ಅಭಿವೃದ್ಧಿ ಕಾರ್ಯಗಳಿಗೆಂದು ರೂ.5ಕೋಟಿ ಅನುದಾನದಲ್ಲಿ ಜಮೀನು ಹಿಡಿದುಕೊಟ್ಟಿದ್ದರು. ಆ ಜಮೀನು ಪೂಜ್ಯ ಸಿದ್ಧಲಿಂಗ ಸ್ವಾಮೀಜಿ ಅವರ ಹೆಸರಲ್ಲಿ ಖರೀದಿಯಾಗಿತ್ತು. ಸಿದ್ಧಲಿಂಗ ಸ್ವಾಮೀಜಿ ನಂತರ ಶ್ರೀಮಠದ ಟ್ರಸ್ಟ್ ಹೆಸರಿಗೆ ವರ್ಗಾವಣೆ ಆಗಬೇಕಿದ್ದ ಜಮೀನನ್ನು ಆಡಳಿತ ಮಂಡಳಿ ಅಧ್ಯಕ್ಷ ಡಾ.ರಾಜಕುಮಾರ ಹಸ್ತಕ್ಷೇಪದ ಮೂಲಕ ಸ್ವಾಮಿಲಿಂಗ ಉರ್ಫ್ ಸೋಮಣ್ಣ ಮಲ್ಲೇಶಪ್ಪ ಬೇವಿನಮರದ ಹೆಸರಿಗೆ ಕಾನೂನುಬಾಹಿರವಾಗಿ ಖರೀದಿ ಮಾಡಿಸಿಕೊಂಡಿದ್ದಾರೆ. ಇದನ್ನು ಸಮಾಜದ ಯಾರೂ ಕ್ಷಮಿಸಲ್ಲ. ಈ ಕೂಡಲೇ ಶ್ರೀ ಮಠದ ಆಸ್ತಿಯನ್ನು ಪೀಠಕ್ಕೆ ಮರಳಿಸಬೇಕು. ಈ ಮೂಲಕ ತಮ್ಮ ವ್ಯಕ್ತಿತ್ವಕ್ಕೆ ಧಕ್ಕೆ ಬಾರದಂತೆ ನೋಡಿಕೊಳ್ಳಬೇಕೆಂದು ಆಗ್ರಹಿಸಿದರು.



ಗಡಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ ಅವರು ಹರಿಹರ ಪೀಠಕ್ಕೆ 25ಲಕ್ಷ ರೂ., ಮೊತ್ತದ ಚೆಕ್ ಕೊಟ್ಟಿದ್ದೇನೆ. ಆ ಹಣ ಯಾವುದಕ್ಕೆ ವಿನಿಯೋಗಿಸಲಾಗಿದೆ ಎಂಬ ಲೆಕ್ಕ ಇಲ್ಲ ಎಂದು ಹೇಳಿದ್ದಾರೆ. ಸೋಮಣ್ಣ ಅವರು ಯಾವಾಗ 25ಲಕ್ಷ ರೂ., ಚೆಕ್ ಕೊಟ್ಟಿದ್ದಾರೆ. ಅದು ಕಲೆಕ್ಷನ್ ಆಗಿದೆಯೋ ಅಥವಾ ಬೋನ್ಸ್ ಆಗಿದೆಯೋ ಎಂಬುದರ ದಾಖಲೆ ಬಿಡುಗಡೆ ಮಾಡಲಿ.

■ ಸೋಮಶೇಖರ ಕೋತಂಬರಿ, ವಕೀಲ

ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಹಿರಿಯ ಧರ್ಮದರ್ಶಿ ಪಿಡಿ ಶಿರೂರ ಮಾತನಾಡಿ, ಯಾವುದೇ ಸಾರ್ವಜನಿಕ ಸಂಸ್ಥೆಗಳಲ್ಲಿ ಪರ-ವಿರೋಧ ಚರ್ಚೆಗಳು ಸಾಮಾನ್ಯವಾದರೂ ಎಲ್ಲ ವಿಚಾರಗಳನ್ನು ಬಹಿರಂಗವಾಗಿ ಚರ್ಚಿಸುವುದು ಸಾಧ್ಯವಿಲ್ಲ ಎಂಬ ಸತ್ಯವನ್ನು ಚಳವಳಿ ನಾಯಕರು ಅರ್ಥ ಮಾಡಿಕೊಳ್ಳಬೇಕು. ಲೆಕ್ಕ ಕೇಳುತ್ತಿರುವ ನಾಯಕರು ಬಹಿರಂಗ ಹೋರಾಟ ಕೈಬಿಡಲಿ ಎಂದರು. ರಾಜ್ಯ ವೀರಶೈವ ಲಿಂಗಾಯತ ಪಂಚಮಸಾಲಿ ಸಂಘದ ಉಪಾಧ್ಯಕ್ಷ ಶಂಕರ ಬಿಸರಹಳ್ಳಿ, ಸದಾನಂದ ಹಾದಿಮನಿ, ಕೆ.ಎಂ. ವಿಜಾಪುರ, ಶಿವಯೋಗಿ ಆರಿಶಿಣದ, ಸೋಮಶೇಖರ ಎಣ್ಣಿಯವರ, ಈಶ್ವರಗೌಡ ಪಾಟೀಲ, ಬಸವರಾಜ ಹಾವಕ್ಕನವರ ಸೇರಿ ಇತರರು ಉಪಸ್ಥಿತರಿದ್ದರು.

ವಿವಿಧ ಬೇಡಿಕೆ ಈಡೇರಿಕೆಗೆ ಸಚಿವರಿಗೆ ಒತ್ತಾಯ

ಹಾವೇರಿ: ಅಕ್ರಮ ಸಕ್ರಮ ಯೋಜನೆ ಮರುಜಾರಿ, ಸಮರ್ಪಕ ವಿದ್ಯುತ್ ಪೂರೈಕೆ, ಓವರ್ ಲೋಡ್ ಟಿಸಿ ಅಪ್‌ಗ್ರೇಡ್ ಮಾಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾ ರೈತ ಮುಖಂಡರು ಶುಕ್ರವಾರ ನಗರದ ಜಿಲ್ಲಾ ಪಂಚಾಯಿತಿಯಲ್ಲಿ ಸಚಿವ ಶಿವಾನಂದ ಪಾಟೀಲರಿಗೆ ಮನವಿ ಸಲ್ಲಿಸಿದರು.

ಈ ವೇಳೆ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾಧ್ಯಕ್ಷ ರಾಮಣ್ಣ ಕೆಂಚಳ್ಳೇರ ಮಾತನಾಡಿ, ಜಿಲ್ಲೆಯ ರೈತರ ಪಂಪ್‌ಸೆಟ್‌ಗಳಿಗೆ ಸೋಲಾರ್ ಅಳವಡಿಸುವ ಯೋಜನೆಯಿಂದಾಗಿ ರೈತರಿಗೆ ಬಹಳಷ್ಟು ಅನಾನುಕೂಲ ಆಗುತ್ತಿದೆ. ತಕ್ಷಣದಿಂದಲೇ ಅಕ್ರಮ ಸಕ್ರಮ ಯೋಜನೆ ಮರು ಜಾರಿಗೆ ತರಬೇಕು. ಕೃಷಿ ಪಂಪ್‌ಸೆಟ್‌ಗಳ ಟಿಸಿಗಳು ಬಹಳಷ್ಟು ಓವರ್ ಲೋಡ್ ಆಗಿದ್ದು, ತಕ್ಷಣ ಓವರ್ ಲೋಡ್ ಆದ ಟಿಸಿಗಳನ್ನು ಅಪ್‌ಗ್ರೇಡ್ ಮಾಡಬೇಕು. ಕೃಷಿ ಪಂಪ್‌ಸೆಟ್‌ಗಳಿಗೆ ನಿಗದಿತ ಏಳು ಗಂಟೆಗಳ ಬದಲಿಗೆ ಕೇವಲ 3-4 ಗಂಟೆ ಮಾತ್ರ ವಿದ್ಯುತ್ ಸಿಗುತ್ತಿದೆ. ತಕ್ಷಣದಿಂದಲೇ ಕೃಷಿ ಪಂಪ್‌ಸೆಟ್‌ಗಳಿಗೆ 7ತಾಸು ವಿದ್ಯುತ್ ಪೂರೈಕೆ ಮಾಡಬೇಕೆಂದು ಜೊತೆಗೆ ಗ್ರೀಡ್‌ಗಳನ್ನು ಅಪ್‌ಗ್ರೇಡ್ ಮಾಡಬೇಕೆಂದು ಆಗ್ರಹಿಸಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ ಬಳ್ಳಾರಿ ಮಾತನಾಡಿ, ಸುಟ್ಟ ಟ್ರಾನ್ಸ್‌ಫಾರ್ಮರ್‌ಗಳನ್ನು 24 ಗಂಟೆಯೊಳಗೆ ಬದಲಾಯಿಸಬೇಕು. ಈ ಪ್ರಕ್ರಿಯೆಯನ್ನು ಹೆಸ್ಕಾಂ ಇಲಾಖೆ ಅಧಿಕಾರಿಗಳು ಮಾಡುತ್ತಿಲ್ಲ ಎಂದು ಆರೋಪಿಸಿದರು. ಜಿಲ್ಲೆಯಲ್ಲಿ ಬೆಂಬಲ ಬೆಲೆ ಯೋಜನೆಯಡಿ ಮೂರು ತಿಂಗಳ ಹಿಂದೆ ಖರೀದಿ ಮಾಡಿದ ಗೋವಿನ ಜೋಳದ ಹಣ ಇನ್ನೂ ಜಮಾ ಮಾಡಿಲ್ಲ, ಕಾರಣ ಗೋವಿನ ಜೋಳ ಖರೀದಿ ಮಾಡಿದ ಹಣ ಮತ್ತು ಅದಕ್ಕೆ ಮೂರು ತಿಂಗಳ ಬಡ್ಡಿ ಸೇರಿಸಿ ರೈತರ ಖಾತೆಗೆ ಜಮಾ ಮಾಡಬೇಕೆಂದು ಆಗ್ರಹಿಸಿದರು.

ರಾಜ್ಯ ಸಮಿತಿ ಮುಖಂಡ ಮಾಲತೇಶ ಪೂಜಾರ, ಜಿಲ್ಲಾ ಉಪಾಧ್ಯಕ್ಷ ಎಚ್.ಎಚ್ ಮುಲ್ಲಾ, ಜಿಲ್ಲಾ ಕಾರ್ಯಾಧ್ಯಕ್ಷ ಶಿವಬಸಪ್ಪ ಗೋವಿ, ಶಿವಯೋಗಿ ಹೊಸಗೌಡ್ರ, ಮರಿಗೌಡ ಪಾಟೀಲ, ರುದ್ರಗೌಡ ಕಾಡನಗೌಡ್ರ, ಪ್ರಭುಗೌಡ ಪ್ಯಾಟಿ, ರಾಜು ತರ್ಲಗಟ್ಟ, ಶಂಕ್ರಣ್ಣ ಶಿರಗಂಬಿ, ಚೆನ್ನಪ್ಪ ಮರಡೂರ, ಗುಡ್ಡನಗೌಡ ಪ್ಯಾಟಿಗೌಡ್ರ, ಎ.ಆರ್. ಮಣಕೂರ, ಮಲ್ಲನಗೌಡ ಮಾಳಗಿ, ಜಗದೀಶ ಮೂಲಿಮನಿ, ಸುಭಾಷ ಬೆಣ್ಣಿಹಟ್ಟಿ ಸೇರಿದಂತೆ ಅನೇಕ ರೈತರು ಉಪಸ್ಥಿತರಿದ್ದರು.



ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ವಿದ್ಯುತ್ ಕಂಬ, ತಂತಿಗಳು ದಶಕಗಳಷ್ಟು ಹಳೆಯದಾಗಿದ್ದು, ಅಪಾಯಕಾರಿ ಸ್ಥಿತಿಯಲ್ಲಿವೆ. ತಕ್ಷಣವೇ ಹಳೆಯ ಕಂಬ, ತಂತಿ ಬದಲಿಸಿ ಹೊಸದಾಗಿ ಹಾಕಲು ಕ್ರಮವಹಿಸಬೇಕು. ಜಿಲ್ಲೆಯಲ್ಲಿ ಇನ್ನೆರಡು ತಿಂಗಳು ಕಳೆದರೆ ಬಿತ್ತನೆ ಕಾರ್ಯ ಪ್ರಾರಂಭವಾಗಲಿದ್ದು, ರಸಗೊಬ್ಬರದ ಸೂಕ್ತ ವ್ಯವಸ್ಥೆ ಮಾಡಿಕೊಳ್ಳಬೇಕು.

■ ರಾಮಣ್ಣ ಕೆಂಚಳ್ಳೇರ, ಜಿಲ್ಲಾಧ್ಯಕ್ಷ,ರೈತ ಸಂಘ ಹಾಗೂ ಹಸಿರು ಸೇನೆ



ಬೆಳಗಾವಿ: ತಾಲೂಕಿನ ವಾಘವಾಡೆ ಗ್ರಾಮದ ಗಣೇಶ್ ಸುತಾರ ಎಂಬಯುವಕ ಕಳೆದ ವರ್ಷ ಗ್ರಾಮದ ಕೆರೆಯಲ್ಲಿ ಈಜಲು ಹೋಗಿ ಅಕಾಲಿಕ ಮರಣಕ್ಕೀಡಾದ ಹಿನ್ನೆಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಯುವಕನ ಕುಟುಂಬಸ್ಥರ ನೋವಿಗೆ ಸ್ಪಂದಿಸಿ, ಸರ್ಕಾರದಿಂದ ಬಿಡುಗಡೆಗೊಳಿಸಿದ 2 ಲಕ್ಷ ರೂ. ಪರಿಹಾರ ಧನದ ಚೆಕ್‌ನ್ನು ಶುಕ್ರವಾರ ಪಾಲಕರಿಗೆ ಹಸ್ತಾಂತರಿಸಿ, ಮೃತನ ಕುಟುಂಬದೊಂದಿಗೆ ನಾನಿದ್ದೇನೆ ಎಂದು ಧೈರ್ಯ ತುಂಬಿದರು.

ನಾಳೆಯಿಂದ ಜ್ಯೋತಿರ್ಲಿಂಗ ಸಂಚಾರ

ಬೆಳಗಾವಿ: ಏ.12 ರಿಂದ 14ರ ವರೆಗೆ ಬೆಳಗಾವಿ ನಗರದಲ್ಲಿ ಸೋಮನಾಥ ಜ್ಯೋತಿರ್ಲಿಂಗ ಭಕ್ತರಿಗೆ ದರ್ಶನ ಕೊ.ರವಿ ಶಂಕರ ಗುರೂಜಿ ಮಠದ ಮಹೇಶ್ ಕೇರಕರ್ ಹೇಳಿದರು. ಶುಕ್ರವಾರ ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನೂರಾರು ವರ್ಷಗಳ ಜ್ಯೋತಿರ್ಲಿಂಗ ಬೆಳಗಾವಿಯ ಭಕ್ತರಿಗೆ ದರ್ಶನ ಪಡೆದುಕೊಳ್ಳುವುದಕ್ಕೆ ಮೂರು ದಿನಗಳ ಕಾಲ ಸಂಚರಿ ಶಂಕರಾಚಾರ್ಯರು ರವಿಶಂಕರ ಗುರೂಜಿ ಅವರಿಗೆ ಜ್ಯೋತಿರ್ಲಿಂಗ ಸೇರಬೇಕು ಎಂಬುವುದಾಗಿ ಆದರಿಂದಾಗಿ ಭಕ್ತರಿಗೆ ಈ ಸೌಲಭ್ಯವನ್ನು ಒದಗಿಸಬೇಕಾಗೊದೆ ಹಾಗಾಗಿ ಭಕ್ತರಿಗೆ ಅನಕೂಲ ಮಾಡಿಕೊಡಲಾಗಿದೆ ಎಂದು ತಿಳಿಸಿದರು. ಪ್ರವೀಣ್ ಶೇರಿ ಮಾತನಾಡಿ, ಸೋಮನಾಥಗೆ ಹೋಗಿ ಜ್ಯೋತಿರ್ಲಿಂಗ ನೋಡವುದಕ್ಕೆ ಕೆಲವಿಬ್ಬರಿಗೆ ಆಗುವುದಿಲ್ಲ, ಹಾಗಾಗಿ ಬೆಳಗಾವಿ ಜಿಲ್ಲೆಯ ಸುತ್ತಮುತ್ತಲಿನ ಭಕ್ತಾಧಿಗಳು ಇಲ್ಲಿಗೆ ಬಂದು ಜ್ಯೋತಿರ್ಲಿಂಗ ದರ್ಶನ ಮಾಡುವ ಉದ್ದೇಶದಿಂದ ಕಡೆಗಳಲ್ಲಿ ಸಂಚರಿಸಲಿದೆ ಎಂದು ಹೇಳಿದರು. ಏ.2 ರಂದು ಸೋಮವಾರ ಸಂಜೆ ವೇಳೆ ನಗರದಲ್ಲಿರುವ ಮಿಲಿಟರಿ ಮಹಾದೇವ ಮಂದಿರ ಹಾಗೂ ರಾಮತೀರ್ಥನಗರದಲ್ಲಿ ಶಿವಾಲಯದಲ್ಲಿ ಜ್ಯೋತಿರ್ಲಿಂಗದ ದರ್ಶನವನ್ನು ಪಡೆದುಕೊಳ್ಳಬಹುದು ಎಂದು ತಿಳಿಸಿದರು. ಈ ವಿಶೇಷ ಎರಡು ದಿನಗಳ ಕಾಲ ಜ್ಯೋತಿರ್ಲಿಂಗದ ದರ್ಶನವನ್ನು ಬೆಳಗಾವಿ ನಗರದ ಜನತೆಯು ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಜ್ಯೋತ್ರಿಲಿಂಗದ ದರ್ಶನವನ್ನು ಪಡೆದುಕೊಳ್ಳಬೇಕೆಂದು ಸಾರ್ವಜನಿಕರಲ್ಲಿ ಮನವಿ ಮಾಡಿಕೊಂಡಿದ್ದಾರೆ. ಈ ವೇಳೆ ಮಹೇಶ್ ಕೇರಕರ್, ಪ್ರವೀಣ್ ಶೇರಿ, ಸೇರಿದಂತೆ ಇತರರು ಇದ್ದರು.



ಬೆಳಗಾವಿ: ಗ್ರಾಮೀಣ ಕ್ಷೇತ್ರದ ಹಿಂಡಲಗಾ ಗ್ರಾಮದ ಓಂಕಾರ ನಗರದ ಶ್ರೀನಿವಾಸ್ ನಾಯಿಕ್‌ಗೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಶುಕ್ರವಾರ ವೀಲ್‌ಚೇರ್ ವಿತರಿಸಿದರು. ಕಾಡಾ ಅಧ್ಯಕ್ಷ ಯುವರಾಜ ಕದಂ, ಬಾಲವಿಕಾಸ ಅಕಾಡೆಮಿ ಅಧ್ಯಕ್ಷ ಅಡಿವೇಶ ಇಟಗಿ, ವಿಕಲಚೇತನರ ಇಲಾಖೆಯ ಉಪನಿರ್ದೇಶಕ ನಾಮದೇವ ಬೀಳಕರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಚೇತನ್ ಕುಮಾರ, ಮಲ್ಲೇಶ ಚೌಗಲೆ ಸೇರಿದಂತೆ ಹಲವರು ಇದ್ದರು.

ಕಿರುಸುದ್ದಿ

ವಿಜ್ಞಾನ ವಿಭಾಗದಲ್ಲಿ ಸಿದ್ಧಾರೂಢ ಸಾಧನೆ

ಗೋಕಾಕ: ಇಲ್ಲಿಯ ಕೆಎಲ್‌ಇ ಸಂಸ್ಥೆಯ ಸಿಎಸ್‌ಅಂಗಡಿ ಪಿಯು ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿ ಸಿದ್ಧಾರೂಢ ಶಾಮಾನಂದ ಪೂಜೇರಿ 95.66% ಅಂಕ ಪಡೆದಿದ್ದಾನೆ.



ದಾನೇಶ್ವರಿಗೆ ವಿಜ್ಞಾನ ವಿಭಾಗದಲ್ಲಿ ಶೇ.97 ಅಂಕ

ನೇಸರಗಿ: ಗ್ರಾಮದ ವಕೀಲ ಶೀತಲಕುಮಾರ ಹಾಗೂ ಶಿಕ್ಷಕಿ ಈರಮ್ಮ ಅವರ ಪುತ್ರಿ ದಾನೇಶ್ವರಿ ಕಾಡಣ್ಣವರ ಪಿಯುಸಿ ವಿಜ್ಞಾನ ವಿಭಾಗದಲ್ಲಿ 600ಕ್ಕೆ 582 ಅಂಕ ಪಡೆದು ಶೇ.97 ಫಲಿತಾಂಶ ಮಾಡಿ ಗ್ರಾಮಕ್ಕೆ ಹಾಗೂ ಹುಬ್ಬಳ್ಳಿ ವಿದ್ಯಾನಿಕೇತನ ಸೈನ್ಸ್ ಕಾಲೇಜಿಗೆ ಕೀರ್ತಿ ತಂದಿದ್ದಾಳೆ.



ವಾಣಿಜ್ಯ ವಿಭಾಗದಲ್ಲಿ 10ನೇ ರ್‍ಯಾಂಕ್ ಪಡೆದ ದಿವ್ಯಾ

ನೇಸರಗಿ: ಇಲ್ಲಿನ ಕಿರಾಣಿ ವ್ಯಾಪಾರಸ್ಥ ಶಂಕರ ಪ್ರಕಾಶ ತುಬಚಿ ಅವರ ಪುತ್ರಿ ದಿವ್ಯಾ 600 ಕ್ಕೆ 591 ಅಂಕ ಪಡೆದು 98.5 ಫಲಿತಾಂಶದೊಂದಿಗೆ ರಾಜ್ಯಕ್ಕೆ 10ನೇ ರ್‍ಯಾಂಕ್ ಪಡೆದು ನೇಸರಗಿ ಗ್ರಾಮಕ್ಕೆ ತುಬಚಿ ಪರಿವಾರಕ್ಕೆ ಹಾಗೂ ಬೆಳಗಾವಿ ಗೂಗಟೆ ಪಿಯು ಕಾಲೇಜಿಗೆ ಕೀರ್ತಿ ತಂದಿದ್ದಾಳೆ.



ಸರ್ಕಾರಿ ಕಾಲೇಜು ವಿದ್ಯಾರ್ಥಿಗಳ ಸಾಧನೆ



ಅಡಹಳ್ಳಿ: ಸ್ಥಳೀಯ ಸರಕಾರಿ ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಕಲಾ ವಿಭಾಗದಲ್ಲಿ ಶೇ.82.76 ಮತ್ತು ವಾಣೀಜ್ಯ ವಿಭಾಗದಲ್ಲಿ 100 ಫಲಿತಾಂಶ ಪಡೆದಿದೆ. ಕಲಾ ವಿಭಾಗ : ಭಾಗ್ಯಶ್ರೀ ಸಂಗಪ್ಪ ಪಾಟೀಲ 570 (95) ಪ್ರಥಮ, ಲಕ್ಷ್ಮೀ ಕಾಡಪ್ಪ ಖೋಬ್ರಿ 562 (93.66) ದ್ವಿತೀಯ, ಐಶ್ವರ್ಯ ಬಸಪ್ಪ ಮಹೇಶವಾಡಗಿ 560 (93.33) ತೃತೀಯ ಸ್ಥಾನ ಪಡೆದಿದ್ದಾರೆ. ವಾಣಿಜ್ಯ ವಿಭಾಗ : ಮಂಜುಳಾ ಪೀರಪ್ಪ ನಾಯಕ 570 (95) ಪ್ರಥಮ, ಕವಿತಾ ಸಂಗಪ್ಪ ಸರಗರ 559 (93.16) ದ್ವಿತೀಯ, ಭಾಗ್ಯಶ್ರೀ ಲಕ್ಷ್ಮಣ ಶಿವಪೂರ 556 (92.66) ತೃತೀಯ ಸ್ಥಾನ ಪಡೆದಿದ್ದಾರೆ ಎಂದು ಪ್ರಾಚಾರ್ಯ ಎಲ್. ಎನ್. ಬಣಜವಾಡ ತಿಳಿಸಿದ್ದಾರೆ.

ಸರ್ಕಾರಿ ಕಾಲೇಜು ವಿದ್ಯಾರ್ಥಿಗಳ ಸಾಧನೆ



ನೇಸರಗಿ: ಇಲ್ಲಿನ ಸರ್ಕಾರಿ ಪಿ ಯು ಕಾಲೇಜಿನ ದ್ವಿತೀಯ ವರ್ಷದ ಪರೀಕ್ಷೆಯಲ್ಲಿ ಕಲಾ ವಿಭಾಗದಲ್ಲಿ 94.51%, ಹಾಗೂ ವಾಣಿಜ್ಯ ವಿಭಾಗದಲ್ಲಿ 100%, ವಿಜ್ಞಾನ ವಿಭಾಗದಲ್ಲಿ 95.53%ವಿದ್ಯಾರ್ಥಿಗಳು ತೇರ್ಗಡೆಯಾಗಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ. ಕಲಾ ವಿಭಾಗದಲ್ಲಿ ಶಾರದಾ ಪರಗನ್ನವರ 568 ಅಂಕ ಪಡೆದು ಪ್ರಥಮ, ಮಲಗೌಡ ಪಾಟೀಲ 546 ಅಂಕ ಪಡೆದು ದ್ವಿತೀಯ ಸ್ಥಾನ, ಪ್ರೀತಿ ಸಂಗೊಳ್ಳಿ 541 ಅಂಕ ಪಡೆದು ತೃತೀಯ ಸ್ಥಾನ ಪಡೆದರೆ. ವಾಣಿಜ್ಯ ವಿಭಾಗದಲ್ಲಿ ರೇಣುಕಾ ಕುಡಚಿ 577 ಅಂಕ ಪಡೆದು ಪ್ರಥಮ ಸ್ಥಾನ, ಚೈತ್ರಾ ಹೊಗಾರ 568 ಅಂಕ ಪಡೆದು ದ್ವಿತೀಯ, ಸೌಮ್ಯ ಕಬ್ಬುರ ಹಾಗೂ ಭಾರತಿ ಸಾವಳಗಿ ತಲಾ 565 ಅಂಕ ಪಡೆದು ತೃತೀಯ ಸ್ಥಾನ ಪಡೆದಿದ್ದಾರೆ.ವಿಜ್ಞಾನ ವಿಭಾಗದಲ್ಲಿ ದೀಪಕ ಮಡಿವಾಳರ 522 ಅಂಕ ಗಳಿಸಿ ಪ್ರಥಮ ಸ್ಥಾನ, ಓಂಕಾರ ಬೆಳ್ಳಿಕಟ್ಟಿ 515 ಅಂಕ ಪಡೆದು ದ್ವಿತೀಯ ಸ್ಥಾನ, ಈರಣ್ಣ ವಾಳದ 512 ಅಂಕ ಪಡೆದು ತೃತೀಯ ಸ್ಥಾನ ಪಡೆದಿದ್ದಾರೆ. ಇವರ ಸಾಧನೆಗೆ ಶಾಸಕರಾದ ಬಾಬಾಸಾಹೇಬ ಪಾಟೀಲ, ಸುಧಾರಣಾ ಸಮಿತಿ ಉಪಾಧ್ಯಕ್ಷರು, ಸದಸ್ಯರು, ಪ್ರಾಂಶುಪಾಲರು, ಬೋಧಕ ಬೋಧಕೇತರ ಸಿಬ್ಬಂದಿ, ಪಾಲಕರು ಹರ್ಷ ವ್ಯಕ್ತಪಡಿಸಿದ್ದಾರೆ.ಕಲಾ ವಿಭಾಗದಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು.

ಬೆಳಗಾವಿ ಕ್ಷೇತ್ರ ರಾಮರಾಜ್ಯ ಮಾಡುವ ಕನಸು: ಹೆಬ್ಬಾಳ್ಕರ್

ಬೆಳಗಾವಿ: ಜಾತಿ ರಾಜಕಾರಣ ಬೇಡ, ದ್ವೇಷದ ರಾಜಕಾರಣ ಬೇಡ. ಮನುಷ್ಯ ಮನುಷ್ಯನನ್ನು ಪ್ರೀತಿಸುವ ರಾಜಕಾರಣ ಮಾಡುವ ಮೂಲಕ ಕ್ಷೇತ್ರವನ್ನು ರಾಮರಾಜ್ಯ ಮಾಡುವ ಕನಸು ಹೊಂದಿದ್ದೇನೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದ್ದಾರೆ.

ತಾರಿಹಾಳ ಗ್ರಾಮದಲ್ಲಿ ಮಹರ್ಷಿ ವಾಲ್ಮೀಕಿ ಮುತ್ಥಳಿ ಅನಾವರಣಗೊಳಿಸಿ ಅವರು ಮಾತನಾಡಿ, ಅಧಿಕಾರ ಇರಲಿ, ಇಲ್ಲದಿರಲಿ, ನಾನು ಒಂದೇ ರೀತಿ ಇರುತ್ತೇನೆ. ಎಂದಿಗೂ ಬದಲಾಗುವುದಿಲ್ಲ. ಜನರಿಂದ, ಜನರ ಪ್ರೀತಿ ವಿಶ್ವಾಸ ಗಳಿಸಿಕೊಂಡು ಬೆಳೆದಿದ್ದೇವೆ, ಸತ್ಯ, ನಿಷ್ಠೆ, ಪ್ರಾಮಾಣಿಕತೆಯಿಂದ ನಡೆಯುತ್ತಿದ್ದೇನೆ. ಕೈಲಾಗುವುದಷ್ಟನ್ನೇ ಹೇಳುತ್ತೇನೆ, ಅದನ್ನು ಮಾಡುತ್ತೇನೆ. ಗಲ್ಲಿ ಗಲ್ಲಿಗಳ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ ಎಂದು ಅವರು ಹೇಳಿದರು.

ಮಹರ್ಷಿ ವಾಲ್ಮೀಕಿ ಕೇವಲ ಒಂದು ಸಮಾಜದ ನಾಯಕರಲ್ಲ, ಇಡೀ ವಿಶ್ವಕ್ಕೆ ರಾಮಾಯಣ ಕೊಟ್ಟಂತಹ ಧೀಮಂತರು. ತಂದೆ ಹೇಗಿರಬೇಕು, ಮಗ ಹೇಗಿರಬೇಕು, ಸಹೋದರ ಹೇಗಿರಬೇಕು, ಹೆಂಡತಿ ಹೇಗಿರಬೇಕು ಎನ್ನುವ ಬದುಕಿನ ಸಂದೇಶ ನೀಡುವ ಮಹಾನ್ ಗ್ರಂಥ ರಾಮಾಯಣದ ಸೃಷ್ಟಿಕರ್ತ ಅವರು. ಮಾತಿನಿಂದ ಅಲ್ಲ, ಕೃತಿಯಿಂದ ರಾಮಾಯಣ ಅನುಸರಿಸಬೇಕು. ರಾಮಾಯಣದ ಸಂದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ರಾಮನಿಗೆ ಮರ್ಯಾದೆ ನೀಡಿದಂತಾಗುತ್ತದೆ. ವಾಲ್ಮೀಕಿ ಮೂರ್ತಿ ಸ್ಥಾಪನೆ ಸಾರ್ಥಕವಾಗುತ್ತದೆ ಎಂದು ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.



ಮುಂದಿನ ಪೀಳಿಗೆಗೆ ಆದರ್ಶಗಳನ್ನು ತಲುಪಿಸಬೇಕೆನ್ನುವ ಕಾರಣದಿಂದ ಸ್ವಂತ ದುಡ್ಡಿನಿಂದ ಕ್ಷೇತ್ರಾದ್ಯಂತ ಬಾಬಾ ಸಾಹೇಬ ಅಂಬೇಡ್ಕರ್, ಕಿತ್ತೂರು ಚೆನ್ನಮ್ಮ, ಶಿವಾಜಿ ಮಹಾರಾಜ, ಸಂಭಾಜಿ ಮಹಾರಾಜ, ಸಂಗೊಳ್ಳಿ ರಾಯಣ್ಣ, ವಾಲ್ಮೀಕಿ, ಬಸವೇಶ್ವರ ಮೊದಲಾದ ಮಹಾನ್ ವ್ಯಕ್ತಿಗಳ ಮುತ್ಥಳಿಯನ್ನು ಸ್ಥಾಪಿಸುತ್ತಿದ್ದೇನೆ. ತನ್ಮೂಲಕ ದೇಶದ ಪರಂಪರೆ ಎನ್ನುವ ದೊಡ್ಡ ಆಸ್ತಿಯನ್ನು ರಕ್ಷಿಸುವ ಕೆಸ ಮಾಡುತ್ತಿದ್ದೇನೆ ಎಂದು ಸಚಿವರು ತಿಳಿಸಿದರು.

ಜಾತ್ರೆಗೆ ಮುನ್ನ ಇಡೀ ತಾರಿಹಾಳ ಊರನ್ನು ಸ್ವಚ್ಛಗೊಳಿಸಿ, ಸುಂದರಗೊಳಿಸಲಾಗುವುದು. ಅತ್ಯಂತ ವೈಭವದಿಂದ, ಶ್ರದ್ಧಾ ಭಕ್ತಿಯಿಂದ ಜಾತ್ರೆಯನ್ನು ಆಚರಿಸೋಣ. ನಾನು ಕೂಡ ಭಾಗವಹಿಸುತ್ತೇನೆ ಎಂದು ಅವರು ತಿಳಿಸಿದರು.

ತೆರೆದ ವಾಹನದಲ್ಲಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರನ್ನು ಗ್ರಾಮದಲ್ಲಿ ಮೆರವಣಿಗೆ ಮಾಡಿ ಗ್ರಾಮಸ್ಥರು ಗೌರವ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯರಾದ ಚನ್ನರಾಜ ಹಟ್ಟಿಹೊಳಿ, ಸುರೇಶ ಗೊರನ್ನವರ, ಮಂಜುನಾಥ ತಳವಾರ, ಮನೋಹರ ಬಾಂಡಗೆ, ನಿಂಗಪ್ಪ ತಲ್ಲೂರ, ಯಲ್ಲಪ್ಪ ತಳವಾರ, ಕಾಶಿನಾಥ ಕೋಲಕಾರ, ಪ್ರಮೋದ ಪಾಟೀಲ, ನಾಗಪ್ಪ ತಳವಾರ, ಮಾರುತಿ ತಳವಾರ, ಬಸವರಾಜ ತಳವಾರ, ಹೊಳೆಪ್ಪ ಪೂಜೇರ,ನಾಗಯ್ಯ ಪೂಜೇರ್, ಲಕ್ಷ್ಮಣ ಮುಚ್ಚಂಡಿ, ಚಾಂಗದೇವ ನೇಸರಕರ, ಪಾಂಡು ಖಿನಗಾಂವ್ಕರ್, ಅಡಿವೆಪ್ಪ ಜಳಕನ್ನವರ, ಪ್ರಶಾಂತ ಪಾಟೀಲ, ಪುಂಡಲೀಕ ನಾಯಕ, ವಿರೂಪಾಕ್ಷ ಇಟಗಿ, ಅನಿಲ ಪೂಜಾರ, ಬಸವರಾಜ ವಾಣಿ ಹಾಗೂ ಗ್ರಾಮದ ಮಹಿಳೆಯರು ಉಪಸ್ಥಿತರಿದ್ದರು.

ಜನತಾ ದರ್ಶನ: ಸಾವಿರಾರು ಜನರ ಅಹವಾಲುಗಳಿಗೆ ಸಚಿವೆ ಸ್ಪಂದನೆ

ಬೆಳಗಾವಿ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರುಶುಕ್ರವಾರಬೆಳಗಾವಿಯ ತಮ್ಮ ಗೃಹ ಕಚೇರಿಯಲ್ಲಿ ಜನತಾ ದರ್ಶನ ಕಾರ್ಯಕ್ರಮ ನಡೆಸಿದರು. ಬೆಳಿಗ್ಗೆ 10 ಗಂಟೆಗೆ ಆರಂಭವಾದ ಈ ಜನತಾ ದರ್ಶನ ಮಧ್ಯಾಹ್ನ 2 ಗಂಟೆಯವರೆಗೆ ನಿರಂತರವಾಗಿ ನಡೆಯಿತು.

ಜಿಲ್ಲೆಯ ವಿವಿಧ ಭಾಗಗಳಿಂದ ಸಹಸ್ರಾರು ಸಂಖ್ಯೆಯಲ್ಲಿ ಜನರು ಆಗಮಿಸಿ ತಮ್ಮ ಸಮಸ್ಯೆಗಳು, ಅಹವಾಲುಗಳು ಮತ್ತು ಬೇಡಿಕೆಗಳನ್ನು ಸಚಿವರ ಮುಂದಿಟ್ಟರು. ಇ ಖಾತಾ, ಮಂದಿರ ನಿರ್ಮಾಣ, ಉದ್ಯೋಗ, ಪಿಂಚಣಿ, ಮನೆ ನಿರ್ಮಾಣ, ರಸ್ತೆ, ಕುಡಿಯುವ ನೀರು, ಶಿಕ್ಷಣ ಹಾಗೂ ಆರೋಗ್ಯ ಸೇರಿದಂತೆ ಹಲವು ವಿಷಯಗಳಿಗೆ ಸಂಬಂಧಿಸಿದ ಮನವಿಗಳನ್ನು ಜನರು ಸಲ್ಲಿಸಿದರು.

ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಪ್ರತಿಯೊಬ್ಬರ ಸಮಸ್ಯೆಯನ್ನು ಸಮಾಧಾನದಿಂದ ಆಲಿಸಿ, ಸಂಬಂಧಿಸಿದ ಅಧಿಕಾರಿಗಳಿಗೆತಕ್ಷಣಕ್ರಮಕೈಗೊಳ್ಳುವಂತೆ ಸೂಚಿಸಿದರು. ಕೆಲವು ತುರ್ತು ಸಮಸ್ಯೆಗಳ ಬಗ್ಗೆ ಸ್ಥಳದಲ್ಲೇ ಅಧಿಕಾರಿಗಳೊಂದಿಗೆ ದೂರವಾಣಿ ಮೂಲಕ ಮಾತನಾಡಿ, ಶೀಘ್ರ ಪರಿಹಾರ ಕಲ್ಪಿಸಲು ಕ್ರಮ ಕೈಗೊಂಡರು.

ಜನರ ಸಮಸ್ಯೆಗಳನ್ನು ನೇರವಾಗಿ ಕೇಳುವುದು ಮತ್ತು ಅವುಗಳಿಗೆ ತಕ್ಷಣ ಸ್ಪಂದಿಸುವುದು ಸರ್ಕಾರದ ಪ್ರಮುಖ ಹೊಣೆಗಾರಿಕೆ. ಜನತಾ ದರ್ಶನವು ಜನರಿಗೆ ಸರ್ಕಾರದೊಂದಿಗೆ ನೇರ ಸಂಪರ್ಕ ಸಾಧಿಸುವ ವೇದಿಕೆಯಾಗಿದೆ, ಎಂದು ಈ ಸಂದರ್ಭದಲ್ಲಿ ಸಚಿವೆ ಹೇಳಿದರು.

ಕಾರ್ಯಕ್ರಮದ ವೇಳೆ ಕಾಡಾ ಅಧ್ಯಕ್ಷ ಯುವರಾಜ ಕದಂ, ಬಾಲವಿಕಾಸ ಅಕಾಡೆಮಿ ಅಧ್ಯಕ್ಷಅಡಿವೇಶಇಟಗಿ, ಬಾಳುದೇಸೂರಕರ್ ಸರಿದಂತೆ ಹಲವು ಮುಖಂಡರು, ಹಿರಿಯ ಅಧಿಕಾರಿಗಳು, ಸಿಬ್ಬಂದಿಗಳು ಸಾರ್ವಜನಿಕರು ಉಪಸ್ಥಿತರಿದ್ದರು.

ಜನತಾ ದರ್ಶನದಲ್ಲಿ ಜನಸಾಮಾನ್ಯರ ಉತ್ಸಾಹಭರಿತ ಭಾಗವಹಿಸುವಿಕೆ ಗಮನಸೆಳೆದಿದ್ದು, ತಮ್ಮ ಸಮಸ್ಯೆಗಳಿಗೆ ತಕ್ಷಣ ಸ್ಪಂದನೆ ದೊರೆಯುತ್ತಿದೆ ಎಂಬ ವಿಶ್ವಾಸವನ್ನು ಜನರು ವ್ಯಕ್ತಪಡಿಸಿದರು.



ಶಿಕ್ಷಕರ ಶ್ರಮದಿಂದ ವಿದ್ಯಾರ್ಥಿಗಳ ಸಾಧನೆ

ಸಂಕೇಶ್ವರ: ಶಿಕ್ಷಕರ ನಿರಂತರ ಶ್ರಮದಿಂದ ಎಸ್‌ಡಿವಿಎಸ್ ಸಂಘದ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಪದವಿ ಪೂರ್ವ ಮಹಾವಿದ್ಯಾಲಯವು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ. 100ರಷ್ಟು ಫಲಿತಾಂಶ ದಾಖಲಿಸಿ ಸಾಧನೆ ಮಾಡಿದೆ ಎಂದು ಸಂಘದ ಅಧ್ಯಕ್ಷ ಹಾಗೂ ಮಾಜಿ ಸಚಿವ ಎ. ಬಿ. ಪಾಟೀಲ ಹೇಳಿದರು.

ಪಟ್ಟಣದಲ್ಲಿನ ಎಸ್.ಡಿ.ವಿ.ಎಸ್. ಸಂಸ್ಥೆಯ ಆಡಳಿತ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಶೈಕ್ಷಣಿಕ ಗುಣಮಟ್ಟಕ್ಕೆ ಹೆಚ್ಚಿನ ಒತ್ತು ನೀಡಿದ ಕಾರಣ ಸತತ ಮೂರನೇ ವರ್ಷವೂ ಶೇ. 100ರಷ್ಟು ಸಾಧನೆ ಮಾಡಲು ಸಾಧ್ಯವಾಗಿದೆ. ವಿದ್ಯಾರ್ಥಿಗಳ ಸಾಧನೆಯು ಸಂಸ್ಥೆಗೆ ಹೆಮ್ಮೆ ತಂದಿದೆ ಎಂದು ಶ್ಲಾಘಿಸಿದರು.

ಪ್ರಾಚಾರ್ಯೆ ಸರ್ವಮಂಗಳಾ ಯರಗಟ್ಟಿ ಮಾತನಾಡಿ, ಮೂರು ವಿಭಾಗಗಳಲ್ಲಿ ನಮ್ಮ ವಿದ್ಯಾರ್ಥಿಗಳು ಅತ್ಯುತ್ತಮ ಅಂಕ ಗಳಿಸಿದ್ದು, ಬರುವ ವರ್ಷದಲ್ಲಿ ನಮ್ಮ ಸಂಸ್ಥೆ ವಿದ್ಯಾರ್ಥಿಗಳು ರಾಜ್ಯದ ಗಮನ ಸೆಳೆಯುವ ಅಂಕಗಳನ್ನು ಪಡೆಯುವ ವಿಶ್ವಾಸ ವ್ಯಕ್ತಪಡಿಸಿದರು.

ವಿಜ್ಞಾನ ವಿಭಾಗ: ಲಲಿತಾ ಓಂಕಾರ, ಸೃಷ್ಟಿ ಗೋವಿನಕೊಪ್ಪ ಹಾಗೂ ಶ್ವೇತಾ ಕಳಸನ್ನವರ ಶೇ. 97.83 ಅಂಕ ಗಳಿಸಿ ಜಂಟಿಯಾಗಿ ಪ್ರಥಮ ಸ್ಥಾನ ಪಡೆದಿದ್ದಾರೆ. ಶೃತಿ ಚೌಗುಲೆ (ಶೇ. 97.5) ದ್ವಿತೀಯ ಹಾಗೂ ಸಾನಿಯಾ ಮಕಾನದಾರ (ಶೇ. 97.33) ತೃತೀಯ ಸ್ಥಾನ ಗಳಿಸಿದ್ದಾರೆ.

ವಾಣಿಜ್ಯ ವಿಭಾಗ: ವಿದ್ಯಾನಂದ ಸೂಜಿ ಶೇ. 98 ಪ್ರಥಮ, ಅನುಷ್ಕಾ ಪಾಟೀಲ (ಶೇ. 97.83) ದ್ವಿತೀಯ ಹಾಗೂ ಸಾನಿಕಾ ಶಿಂಧೆ (ಶೇ. 97.66) ತೃತೀಯ ಸ್ಥಾನಕ್ಕೆ ಭಾಜನರಾಗಿದ್ದಾರೆ.

ಕಲಾ ವಿಭಾಗ: ಕಾವೇರಿ ಪಾಟೀಲ ಶೇ. 96.33 ಪ್ರಥಮ, ಜ್ಯೋತಿ ಮದಿಹಳ್ಳಿ (ಶೇ. 95.66) ದ್ವಿತೀಯ ಹಾಗೂ ಆಶಾ ಹಾಲಟ್ಟಿ (ಶೇ. 95.16) ತೃತೀಯ ಸ್ಥಾನಗಳನ್ನು ಪಡೆದಿದ್ದಾರೆ.

ಈ ಸಂದರ್ಭದಲ್ಲಿ ಸಂಸ್ಥೆಯ ನಿರ್ದೇಶಕರಾದ ಆರ್. ಬಿ. ಪಾಟೀಲ, ಸಂತೋಷ ಪಾಟೀಲ, ಆಡಳಿತಾಽಕಾರಿ ಬಿ. ಎ. ಪೂಜಾರಿ, ಕಾರ್ಯದರ್ಶಿ ಜಿ. ಸಿ. ಕೋಟಗಿ , ಹುಕ್ಕೇರಿ ಕೆಇ.ಬಿ.ನಾಮನಿರ್ದೇಶಕರಾದ ಸುಭಾಷ ಕಾಸರಕರ ಹಾಗೂ ಕಾಲೇಜಿನ ಶಿಕ್ಷಕ, ಸಿಬ್ಬಂದಿ ಹಾಜರಿದ್ದರು.



ಪಿಯುಸಿ ಫಲಿತಾಂಶ: ಏಕಲವ್ಯ ಕಾಲೇಜು ಸಾಧನೆ

ಹಾರೂಗೇರಿ: ಪಟ್ಟಣದ ಶ್ರೀ ವಾಲ್ಮೀಕಿ ಶಿಕ್ಷಣ ಸಂಸ್ಥೆಯ ಏಕಲವ್ಯ ವಿಜ್ಞಾನ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಸನ್ 2025-26ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು, ಶೇ.98.70 ರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

ಅಂಜಲಿ ಮಾಳಿ 582 (97%) ಅಂಕಗಳೊಂದಿಗೆ ಪ್ರಥಮ ಸ್ಥಾನ ಪಡೆದಿದ್ದು, ಸುಧಾ ಗಲಗಲಿ 579 (96.5) ಅಂಕಗಳೊಂದಿಗೆ ದ್ವಿತೀಯ ಸ್ಥಾನ, ವಿಜಯ ಖೋತ 576 (96) ಅಂಕಗಳೊಂದಿಗೆ ತೃತೀಯ ಸ್ಥಾನ ಪಡೆದಿದ್ದಾರೆ. ಲಕ್ಷ್ಮಿ ಹೆಗಡೆ 575 (95.83) ಅಂಕಗಳೊಂದಿಗೆ ಚತುರ್ಥ ಸ್ಥಾನ ಹಾಗೂ ಶ್ವೇತಾ ಪುಡರಿ 574 (95.66) ಅಂಕಗಳೊಂದಿಗೆ ಉತ್ತಮ ಸಾಧನೆ ಮಾಡುವ ಮೂಲಕ ಸಂಸ್ಥೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ.



ಇಂತಹ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸಂಸ್ಥೆಯ ಚೇರ್ಮನ್ ರಾಮಣ್ಣ ಗಸ್ತಿಯವರು ಶಾಲು, ಮಾಲೆ ಹಾಕಿ ಸಿಹಿ ತಿನಿಸುವ ಮೂಲಕ ಸತ್ಕರಿಸಿ ಅಭಿನಂದಿಸಿದರು.

ಅಧ್ಯಕ್ಷ ರಾಮಣ್ಣ ಗಸ್ತಿಯವರು ಮಾತನಾಡಿ, ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದರು. ಮುಂಬರುವ ನೀಟ್, ಸಿಇಟಿ, ಜೆಇಇ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳನ್ನು ಪಡೆದು ತಂದೆ-ತಾಯಿ, ಗುರುಹಿರಿಯರ ಕನಸನ್ನು ನನಸು ಮಾಡಿ ಸಮಾಜಕ್ಕೆ ಒಳ್ಳೆಯ ಪ್ರಜೆಗಳಾಗಬೇಕು ಎಂದು ನೀಟ್, ಜೆಇಇ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ತಲಾ 50 ಸಾವಿರ ನಗದು ಬಹುಮಾನ ಕೂಡ ವಾಗ್ದಾನ ಮಾಡಿದರು. ಸಂಸ್ಥೆಯ ಕಾರ್ಯದರ್ಶಿ ಪ್ರಮೋದ ಗಸ್ತಿ, ನಿರ್ದೇಶಕರಾದ ರವಿ ಗಸ್ತಿ, ಎಂ.ಬಿ. ಮಾಳಶೆಟ್ಟಿ, ಪ್ರಾಚಾರ್ಯ ವಿ.ಬಿ. ಮುತ್ತಣ್ಣವರ, ಉಪನ್ಯಾಸಕ ವರ್ಗ, ಸಿಬ್ಬಂದಿ, ವಿದ್ಯಾರ್ಥಿಗಳು ಇದ್ದರು.

ಎಸ್.ಕೆ. ಸಂಯುಕ್ತ ಪದವಿ ಪೂರ್ವ ಕಾಲೇಜಿನ ಫಲಿತಾಂಶ

ಸವದತ್ತಿ: ಕೆ.ಎಲ್.ಇ ಸಂಸ್ಥೆಯ ಅಂಗಸಂಸ್ಥೆಯಾದ ಎಸ್. ಕೆ.ಸಂಯುಕ್ತ ಪದವಿ ಪೂರ್ವ ಕಾಲೇಜು ಸವದತ್ತಿ ಕಾಲೇಜಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ-1 2026 ರ ಫಲಿತಾಂಶ 98.42 ರಷ್ಟು ಆಗಿದೆ. ಕಲಾ ವಿಭಾಗದಲ್ಲಿ ಅಕ್ಷತಾ ಎಮ್. ಗೋಡಚಿ 575(95.83%), ಲಕ್ಷ್ಮೀ ಜಿ. ಕರೆನ್ನವರ 566(94.33%), ಅರುಂದತಿ ಆರ್.ಪೂಜೇರ 557(92.83%), ರೇಣುಕಾ ಟಿ. ಹಡಪದ 541(90.16%) ಹಾಗೂ ಮೇಘಾ ಬಿ. ಬಾರ್ಕಿ 538 (89.66%) ಪಡೆದು ಕೊಂಡಿ ದ್ದಾರೆ.



ವಾಣಿಜ್ಯ ವಿಭಾಗದಲ್ಲಿ ಕುಮಾರಿ ನಿಸರ್ಗಾ ಎಮ್. ಹೋಸುರ 579(96.50%), ಫಕ್ಕಿರವ್ವಾ ವ್ಹಿ. ಕುರಿ 574(95.66%) ಮತ್ತು ಕಾವೇರಿ ಎಮ್. ಜಟಗೊಂಡ 574(95.66%), ಗೀರಿಯವ್ವಾ ಎಸ್. ಪತ್ರಾವಳಿ 570(95.00%), ಪ್ರೀತಿ ಎಮ್. ಕುರಿ 566(94.33%) ಹಾಗೂ ಪ್ರೀಯಾಂಕಾ ಎಂ. ಬೆಟಸೂರ 558(93.00%) ಪಡೆದುಕೊಂಡಿರುತ್ತಾರೆ.

ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳಲ್ಲಿ 49 ಉನ್ನತ ಶ್ರೇಣಿ, 111 ಪ್ರಥಮ ದರ್ಜೆ, 22 ದ್ವಿತೀಯ ದರ್ಜೆ, 05 ತೃತೀಯ ದರ್ಜೆ, ಒಟ್ಟು 187 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಈ ಎಲ್ಲ ವಿದ್ಯಾರ್ಥಿಗಳಿಗೆ ಸಂಸ್ಥೆಯ ಕಾರ್ಯಾಧ್ಯಕ್ಷ ಅಮಿತ ಬಿ. ಕೋರೆ ಹಾಗೂ ಡಾ.ಪ್ರಭಾಕರ ಕೋರೆ ಮತ್ತು ಎಲ್ಲ ನಿರ್ದೇಶಕರು ಹಾಗೂ ಸ್ಥಾನಿಕ ಆಡಳಿತ ಮಂಡಳಿಯ ಅಧ್ಯಕ್ಷರು, ಸದಸ್ಯರು, ಪ್ರಾಚಾರ್ಯರು ಹಾಗೂ ಕಾಲೇಜಿನ ಎಲ್ಲ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

ಪಿಯುಸಿ ಫಲಿತಾಂಶ: ಸರ್ಕಾರಿ ಕಾಲೇಜು ಸಾಧನೆ

ಯಮಕನಮರಡಿ: ಸ್ಥಳೀಯ ಎಸ್.ಆರ್.ಎಂ ಸರಕಾರಿ ಪದವಿ ಪೂರ್ವ ಮಹಾವಿದ್ಯಾಲಯವು 2025 26ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ. 1 ರಲ್ಲಿ ದಾಖಲೆಯ ಫಲಿತಾಂಶ ನೀಡುವುದರ ಮೂಲಕ ಜನರ ಹಾಗೂ ವಿದ್ಯಾರ್ಥಿಗಳ ಪ್ರಶಂಸೆಗೆ ಕಾರಣವಾಗಿದೆ. ಕಲಾವಿಭಾಗದಲ್ಲಿ ದರ್ಶನ್ ಪೂಜೇರಿ 537, ರವಿಚಂದ್ರ ಕೊರವ 526, ಸಾವಿತ್ರಿ ಸಾವನ್ನವರ್ 521, ಹಾಗೂ ವಾಣಿಜ್ಯ ವಿಭಾಗದಲ್ಲಿ ಪ್ರೀತಿ ಗಸ್ತಿ 558, ಅಶ್ವಿನಿ ಬಾಕಳೆ 553, ಪ್ರಿಯಾಂಕಾ ಕಾಂಬಳೆ 538, ರೇಖಾ ಮಜತಿ, 538, ಅದರಂತೆ ವಿಜ್ಞಾನ ವಿಭಾಗದಲ್ಲಿ ಸಾಧನಾ ಮೇತ್ರಿ 557, ರುಕ್ಮಿಣಿ ಮೆಟಗುಡ್ಡಿ 542, ಪೂರ್ಣಿಮಾ ಬುಜಪ್ಪಗೋಳ 538, ಈ ರೀತಿಯಾಗಿ ಬಂದಿರುತ್ತದೆ. ಅದರಂತೆ ಒಟ್ಟು ಕಾಲೇಜಿನ ಫಲಿತಾಂಶವು ಕಲಾ ವಿಭಾಗ ಪರೀಕ್ಷೆಗೆ ಕುಳಿತ 76 ವಿದ್ಯಾರ್ಥಿಗಳ ಪೈಕಿ 72 ವಿದ್ಯಾರ್ಥಿಗಳು ಪಾಸಾಗಿದ್ದು ಫಲಿತಾಂಶ 94.73% ಬಂದಿದೆ. ವಾಣಿಜ್ಯ ವಿಭಾಗದಲ್ಲಿ 44 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು ಆದರ ಪೈಕಿ 43 ವಿದ್ಯಾರ್ಥಿಗಳು ಪಾಸ ಆಗಿ ಶೆ.97.72%. ಫಲಿತಾಂಶ ನೀಡಿದ್ದಾರೆ. ಅದರಂತೆ ವಿಜ್ಞಾನ ವಿಭಾಗದಲ್ಲಿ 83 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು 83 ವಿದ್ಯಾರ್ಥಿಗಳು ಪಾಸ ಆಗುವುದರೊಂದಿಗೆ 100%.ಫಲಿತಾಂಶ ನೀಡಿರುತ್ತಾರೆ. ಒಟ್ಟಾರೆಯಾಗಿ ಕಾಲೇಜಿನ ಫಲಿತಾಂಶವು 203 ವಿದ್ಯಾರ್ಥಿಗಳು ಪರೀಕ್ಷೆ ಬರೆದರೆ ಅದರ ಪೈಕಿ 198 ವಿದ್ಯಾರ್ಥಿಗಳು ಪಾಸಾಗುವುದರೊಂದಿಗೆ ಶೆ.97.53% ಫಲಿತಾಂಶವು ಕಾಲೇಜಿಗೆ ಬಂದಿದೆ. ಜಿಲ್ಲಾ ಉಸ್ತುವಾರಿ ಸಚಿವ ಜಾರಕಿಹೊಳಿ ಸೇರಿದಂತೆ ನಮ್ಮ ಮಹಾವಿದ್ಯಾಲಯದ ಉಪಾಧ್ಯಕ್ಷರು, ಸರ್ವ ಸದಸ್ಯರು, ಪ್ರಾಚಾರ್ಯರು, ಉಪನ್ಯಾಸಕರು, ಸಿಬ್ಬಂದಿ ಹಾಗೂ ಪಾಲಕರು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.



ಶಿವಬೋಧರಂಗ ಪದವಿ ಪೂರ್ವ ಕಾಲೇಜಿಗೆ ಅತ್ಯುತ್ತಮ ಫಲಿತಾಂಶ

ಮೂಡಲಗಿ: ಪಟ್ಟಣದ ಮೂಡಲಗಿ ಶಿಕ್ಷಣ ಸಂಸ್ಥೆಯ ಶಿವಬೋಧರಂಗ ಪದವಿ ಪೂರ್ವ ಮಹಾವಿದ್ಯಾಲಯದ ದ್ವಿತೀಯ ಪಿಯುಸಿ ವಾರ್ಷಿಕ ಫಲಿತಾಂಶವು ಶೇಕಡಾ ಶೇ.88ರಷ್ಟು ಫಲಿತಾಂಶವನ್ನು ಹೊಂದಿದೆ ಎಂದು ಕಾಲೇಜಿನ ಪ್ರಾಚಾರ್ಯ ಎಂ.ಎಸ್.ಪಾಟೀಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕಾಲೇಜಿಗೆ ವಿನೋದ ಗಸ್ತಿ ಶೇ.96.33% ಪ್ರಥಮ, ಸಿದ್ದನಗೌಡ ಕೆಂಪಸತ್ತಿಶೇ.96.00% ದ್ವಿತೀಯ, ಮತ್ತು ಪಲ್ಲವಿ ರೆಂಡಾಲೆ ಶೇ.94.00% ತೃತೀಯ.

ವಿಭಾಗವಾರು ಕಲಾ ವಿಭಾಗದಲ್ಲಿ ವಿನೋದಗಸ್ತಿಶೇ.96.33% ಪ್ರಥಮ, ಅಕ್ಷತಾ ಹೊಸತೋಟ ಶೇ.93.33% ದ್ವಿತೀಯ, ಜ್ಯೋತಿ ಮಾರಾಪೂರ ಶೇ.93.16% ತೃತೀಯ, ವಾಣಿಜ್ಯ ವಿಭಾಗದಲ್ಲಿ ರಕ್ಷಿತಾ ನಂದಾಗಾಂವಮಠ ಶೇ.92.00% ಪ್ರಥಮ, ಸುಮಂಗಳಾ ನಾಯ್ಕ ಶೇ.90.66% ದ್ವಿತೀಯ, ಸಂಜನಾ ಕುಂಬಾರ ಶೇ.89.16% ತೃತೀಯ, ವಿಜ್ಞಾನ ವಿಭಾಗದಲ್ಲಿ ಸಿದ್ದನಗೌಡ ಕೆಂಪಸತ್ತಿ ಶೇ.95.33% ಪ್ರಥಮ, ಪಲ್ಲವಿ ರೆಂಡಾಲೆ ಶೇ.93.50% ದ್ವಿತೀಯ, ಮಲಗೌಡತುಪಾಲೆ ಶೇ.91.00%ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ. ಇನ್ನೂಳಿದ ವಿದ್ಯಾರ್ಥಿಗಳು ಚಂದ್ರಿಕಾ ಕೆಳಗಡೆ 91.66%, ಲಕ್ಷ್ಮೀ ಗಣಾಚಾರಿ 91.16%, ಅಸದ ಮುಕ್ಕೇರಿ 90.33% ಮತ್ತು ಸ್ವಪ್ನಾ ಬೀರನಗಡ್ಡಿ 88.83% ಇದರಲ್ಲಿ47 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 169 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ ಮತ್ತು 59 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.



ವಿವಿಧ ವಿಷಯಗಳಲ್ಲಿ 100ಕ್ಕೆ 100 ಅಂಕಗಳನ್ನು 13 ವಿದ್ಯಾರ್ಥಿಗಳು ಪಡೆದುಕೊಂಡಿದ್ದಾರೆ ಆದರಲ್ಲಿ ಭೂಗೋಳಶಾಸ್ತ್ರ ವಿಷಯದಲ್ಲಿ ಐಶ್ವರ್ಯ ಚಿಂಚಲಿ, ಶೈಲಾ ಧವಳೇಶ್ವರ ಮತ್ತು ಸ್ವಪ್ನಾ ಚೌಗಲಾ, ಕನ್ನಡ ವಿಷಯದಲ್ಲಿ ರಾಜಶ್ರೀ ಬಂಕಾಪೂರ ಮತ್ತು ವಿನೋಧ ಗಸ್ತಿ, ಶಿಕ್ಷಣಶಾಸ್ತ್ರ ವಿಷಯದಲ್ಲಿಐಶ್ವರ್ಯಗಿರೆನ್ನವರ ಮತ್ತು ಲಕ್ಷ್ಮೀ ಹೆಗಾಡೆ, ವ್ಯವಹಾರ ಅಧ್ಯಯನ ವಿಷಯದಲ್ಲಿ ರಕ್ಷಿತಾ ನಂದಾಗಾಂವಮಠ ಮತ್ತು ಸ್ವಪ್ನಾ ಬೀರನಗಡ್ಡಿ, ಇತಿಹಾಸ ವಿಷಯದಲ್ಲಿ ವಿನೋಧ ಗಸ್ತಿ, ಭೌತಶಾಸ್ತ್ರ ವಿಷಯದಲ್ಲಿ ಸಿದ್ದನಗೌಡ ಕೆಂಪಸತ್ತಿ ಮತ್ತು ಆಸಿಯಾ ಪಾಳೇಗಾರ ಮತ್ತುಉರ್ದು ವಿಷಯದಲ್ಲಿ ಆಸಿಯಾ ಪಾಳೇಗಾರ ಅಂಕಗಳನ್ನು ಪಡೆದು ಈ ಎಲ್ಲ ವಿದ್ಯಾರ್ಥಿಗಳು ಕಾಲೇಜಿಗೆ ಕೀರ್ತಿಯನ್ನು ತಂದಿದ್ದಾರೆ.

ಎಲ್ಲ ವಿದ್ಯಾರ್ಥಿಗಳನ್ನು ಸಂಸ್ಥೆಯ ಚೇರಮನ್ನರು ವೆಂಕಟೇಶ ಆರ್. ಸೋನವಾಲ್ಕರ್, ವ್ಹಾ. ಚೇರಮನ್ನರು ರವೀಂದ್ರ ಪಿ.ಸೋನವಾಲ್ಕರ್, ಹಾಗೂ ನಿರ್ದೇಶಕರು, ಪ್ರಾಚಾರ್ಯರು ಪ್ರೊ. ಎಂ.ಎಸ್.ಪಾಟೀಲ, ಉಪನ್ಯಾಸಕರು, ಕಾಲೇಜಿನ ಸಿಬ್ಬಂದಿ ಅಭಿನಂದಿಸಿದ್ದಾರೆ.

ಸರ್ಕಾರಿ ಕಾಲೇಜು ಸಾಧನೆ



ಯರಗಟ್ಟಿ: ಪಟ್ಟಣದ ಎಸ್. ಬಿ. ಜಕಾತಿ ಸರ್ಕಾರಿ ಪದವಿ ಪೂರ್ವ ಮಹಾವಿದ್ಯಾಲಯದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಫಲಿತಾಂಶವು ಒಟ್ಟು 84.18% ರಷ್ಟಾಗಿದ್ದು, ವಾಣಿಜ್ಯ ವಿಭಾಗದಲ್ಲಿ ಪ್ರಥಮ ಲಕ್ಷ್ಮೀ ಗುಡ್ಡದ 553(92.17), ಕಲಾ ವಿಭಾಗದಲ್ಲಿ ಪ್ರಥಮ ಶಾಂಭವಿ ಉಪ್ಪಿನ 534 (89%), ವಿಜ್ಞಾನ ವಿಭಾಗದಲ್ಲಿ ಪ್ರಥಮ ರಂಗುಬಾಯಿ ನಾಯಕ 532(88. 67) ಅಂಕಗಳನ್ನು ಪಡೆದು ಕಾಲೇಜಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಭಾಗ್ಯ ದಾನನ್ನವರ ದ್ವಿತೀಯ 537 (89.50%), ಶಿಲ್ಪಾ ಹಾದಿಮನಿ 536 (89.33%) ಕಲಾ ವಿಭಾಗ ಪವಿತ್ರಾ ಪಾಟೀಲ 521 (86.83%), ರಾಹುಲ ಕೋಟೂರು 501 (83.50%), ವಿಜ್ಞಾನ ವಿಭಾಗದಲ್ಲಿ ಆರತಿ ಉಜ್ಜಿಕೊಪ್ಪ 504 (84%), ಮಹಾಲಕ್ಷ್ಮೀ ಕಂಚಗಾರ್ 500 (83.33%) ಅಂಕಗಳನ್ನು ಪಡೆದು ಸಾಧನೆ ಮಾಡಿದ್ದು ಕಾಲೇಜಿನ ಪ್ರಾಚಾರ್ಯರು ಮತ್ತು ಉಪನ್ಯಾಸಕರು ಹಾಗೂ ಆಡಳಿತ ಮಂಡಳಿ ವಿದ್ಯಾರ್ಥಿಗಳಿಗೆ ಅಭಿನಂದನೆಗಳನ್ನು ತಿಳಿಸಿದ್ದಾರೆ.

ಕಿರುಸುದ್ದಿ

ಪೂರ್ವಭಾವಿ ಸಭೆ ಇಂದು

ಬೈಲಹೊಂಗಲ: ನಗರದಲ್ಲಿ ಜಗಜ್ಯೋತಿ ಶ್ರೀ ಬಸವೇಶ್ವರ ಜಯಂತಿ ಉತ್ಸವ ಸಮಿತಿ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ಜಗಜ್ಯೋತಿ ಶ್ರೀ ಬಸವೇಶ್ವರ ಜಯಂತಿಯನ್ನು ಏ.20ರಂದು ವಿಜೃಂಭಣೆಯಿಂದ ಆಚರಿಸಲು ನಿರ್ಧರಿಸಲಾಗಿದೆ. ಈ ಹಿನ್ನೆಲೆಯಲ್ಲಿ ಜಯಂತಿ ಆಚರಣೆಯ ಸಿದ್ಧತೆಗಳ ಕುರಿತು ವಿಚಾರ ವಿನಿಮಯ ನಡೆಸಲು ಪೂರ್ವಭಾವಿ ಸಭೆಯನ್ನು ಏ.11ರಂದು ಸಂಜೆ 5 ಗಂಟೆಗೆ ಶಾಖಾ ಮೂರುಸಾವಿರ ಮಠದಲ್ಲಿ ಆಯೋಜಿಸಲಾಗಿದೆ. ಸಭೆ ಪೀಠಾಧಿಪತಿ ಪ್ರಭುನೀಲಕಂಠ ಮಹಾಸ್ವಾಮಿಗಳ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಸಭೆಗೆ ಸಮಿತಿ ಸದಸ್ಯರು, ಮುಖಂಡರು, ಭಕ್ತರು ಹಾಗೂ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ತಮ್ಮ ಅಮೂಲ್ಯ ಸಲಹೆ-ಸೂಚನೆಗಳನ್ನು ನೀಡುವಂತೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ತಾಲೂಕು ಅಧ್ಯಕ್ಷ ಡಾ. ಎ.ಎನ್. ಬಾಳಿ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ರೈತರಿಗೆ ವಿಶೇಷ ಶಿಬಿರ ಇಂದು

ಚಿಕ್ಕೋಡಿ: ನಿಪ್ಪಾಣಿ ತಾಲೂಕಿನ ಬೋರಗಾಂವ ಪಟ್ಟಣದಲ್ಲಿ ಅರಿಹಂತ ಉದ್ಯೋಗ ಸಮೂಹ, ದಕ್ಷಿಣ ಭಾರತ ಜೈನಸಭೆ ಪದವಿ ಸಂಘಟನೆ, ವೃಷಭನಾಥ ಕೃಷಿ ಸಮಿತಿ ಸಹಯೋಗದಲ್ಲಿ ಏ.11ರಂದು ಬೆಳಿಗ್ಗೆ 10 ಗಂಟೆಗೆ ''ರೈತರಿಗೆ ವಿಶೇಷ ಮಾರ್ಗದರ್ಶನ ಶಿಬಿರ'' ಹಮ್ಮಿಕೊಳ್ಳಲಾಗಿದೆ. ಸಹಕಾರ ರತ್ನ ದಿ.ರಾವಸಾಹೇಬ ಪಾಟೀಲ(ದಾದಾ) ಅವರ 82ನೇ ಜನ್ಮದಿನಾಚರಣೆ ನಿಮಿತ್ಯವಾಗಿ ನಡೆಯುವ ಶಿಬಿರವನ್ನು ಯುವ ನಾಯಕ ಉತ್ತಮ ಪಾಟೀಲ ಉದ್ಘಾಟಿಸಲಿದ್ದು, ದಕ್ಷಿಣ ಭಾರತ ಜೈನ ಸಭೆಯ ಅಧ್ಯಕ್ಷ ಬಾಲಚಂದ್ರ ಪಾಟೀಲ ಅಧ್ಯಕ್ಷತೆವಹಿಸಲಿದ್ದಾರೆ. ದಕ್ಷಿಣ ಭಾರತ ಜೈನಸಭಾ ವ್ಹಾಯ್ಸ್ ಚೇರಮನ್ ಅಭಿನಂದನ ಪಾಟೀಲ ಮುಖ್ಯ ಅತಿಥಿಗಳಾಗಿ ಆಗಮಿಸುವರು. ಬೆಳಿಗ್ಗೆ 10 ರಿಂದ ಸಂಜೆ 5ಗಂಟೆಯವರೆಗೆ ನಡೆಯುವ ಶಿಬಿರದಲ್ಲಿ ''ಕೃಷಿ ಕ್ಷೇತ್ರದಲ್ಲಿ ಕಡಿಮೆ ವೆಚ್ಚದಲ್ಲಿ ಉತ್ಪಾದನೆ, ಆಧುನಿಕ ಕೃಷಿ, ಸಾವಯವ ಕೃಷಿ, ಮನೆಯಲ್ಲಿ ಕೃಷಿ ಗೊಬ್ಬರ ಹಾಗೂ ಕಡಿಮೆ ವೆಚ್ಚದಲ್ಲಿ ಹೆಚ್ಚಿನ ಉತ್ಪಾದನೆ ಮಾಡುವ ಬಗೆಯನ್ನು ಆಗಮಿಸಿದ ಉಪನ್ಯಾಸಕರು ತಿಳಿಸಿಕೊಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.



ವಿದ್ಯುತ್ ವ್ಯತ್ಯಯ ನಾಳೆ

ಸವದತ್ತಿ: 220 ಕೆ ವಿ ವಿದ್ಯುತ್ ಸ್ವೀಕರಣ ಕೇಂದ್ರ ಸೌವದತ್ತಿ ಮತ್ತು ಬನ್ನೂರಿನಲ್ಲಿ ಮೊದಲನೆಯ ತ್ರೈಮಾಸಿಕ ಹಾಗೂ ತುರ್ತು ಕಾಮಗಾರಿಯನ್ನು ಕೈಗೊಳ್ಳುತ್ತಿರುವುದರಿಂದ 220 ಕೆವಿ ವಿದ್ಯುತ್ ಸ್ವೀಕಾರಣ ಕೇಂದ್ರ ಸೌದತ್ತಿ ಯಿಂದ 110 ಕೆವಿ ಬೆನಕಟ್ಟ 110 ಕೆವಿ ಯರಗಟ್ಟ ವಿದ್ಯುತ್ ವಿತರಣಾ ಕೇಂದ್ರಕ್ಕೆ ಪೂರೈಕೆಯಾಗುತ್ತಿರುವ ವಿದ್ಯುತ್ ಸರಬರಾಜಿನಲ್ಲಿ ಏ.12ರಂದು ವ್ಯತ್ಯಯ ಉಂಟಾಗಲಿದೆ.

ಈ ದಿನ ಬೆಳಗ್ಗೆ 10 ಗಂಟೆಯಿಂದ ಸಂಜೆ 5:30ರವರೆಗೆ ವಿದ್ಯುತ್ ಸಂಪೂರ್ಣವಾಗಿ ನಿಲುಗಡೆಯಾಗಲಿದೆ. ವಿದ್ಯುತ್ ನಿಲುಗಡೆಯಾಗಲಿರುವ ಗ್ರಾಮಗಳು ಎಂದರೆ ಎರಗಟ್ಟಿ, ಪಟ್ಟಣ ಜಾಲಿಕಟ್ಟಿ ಬೆನಕಟ್ಟಿ, ಜೀವಾಪುರ, ಮದ್ಲೂರು ,ಶ್ರೀರಂಗಪುರ, ತೆಗ್ಗಿಹಾಳ ಮಡ್ಡಿ, ತಲ್ಲೂರು, ಯರಜರವಿ, ನುಗ್ಗಾನಟ್ಟಿ, ಬೂದಿಗೊಪ್ಪ, ಗುಡಮ ಕೇರಿ, ಸೊಪ್ಪಡ್ಲ, ಆಲದಕಟ್ಟಿ, ರೈನಾಪುರ, ಬೋಳ ಕಡಬಿ, ಕುರುಬಗಟ್ಟಿ ಹಣಬರ ಕಡಬಿ, ಎರಜರವಿ ಶಿವಾಪುರ ತಾವಲಗೇರಿ ಪರಕಿ ಶಾಲೆ ಗೊರಗುದ್ದಿ ಕೋಟೂರು ಯರಗಣವಿ ಸೇರಿದಂತೆ ಕೆಲವು ಗ್ರಾಮಗಳಿಗೆ ಈ ದಿನ ವಿದ್ಯುತ್ ಸಂಪೂರ್ಣವಾಗಿ ನಿಲುಗಡೆಯಾಗಲಿದೆ ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕಾರ್ಯ ಮತ್ತು ಪಾಲನೆ ಉಪ ವಿಭಾಗ ಹುವಿಸಕಂ ಸೌವದತ್ತಿ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತೇಜಶ್ವಿನಿಗೆ ಶೇ.93.83 ಅಂಕ

ನೇಸರಗಿ: ಇಲ್ಲಿಗೆ ಸಮೀಪದ ಹೊನ್ನಿಹಾಳ ektn, (ನೇಸರಗಿ) ಗ್ರಾಮದ ತೇಜಸ್ವಿನಿ ಯಲ್ಲಪ್ಪ ಮದನಭಾವಿ ವಿಜ್ಞಾನ ವಿಭಾಗದಲ್ಲಿ 93.83% ಫಲಿತಾಂಶ ಮಾಡಿ ಗ್ರಾಮಕ್ಕೆ ಹಾಗೂ ಬೆಳಗಾವಿಯ ಕಾಸಭಾಗದ ಶ್ರೀ ಚೈತನ್ಯ ಸೈನ್ಸ ಪಿ ಯು ಕಾಲೇಜಗೆ ಕೀರ್ತಿ ತಂದಿದ್ದಾಳೆ.



ಸೊನಮಗೆ ಪ್ರಥಮ ಸ್ಥಾನ

ನೇಸರಗಿ: ಬೆಳಗಾವಿ ಕೆಎಲ್ಇ ಸಂಸ್ಥೆಯ ಹಿರಿಯ ನಿರ್ದೇಶಕ ವೈ. ಎಸ್ ಪಾಟೀಲ ಅವರ ಮೊಮ್ಮಗಳು ಹಾಗೂ ಡಾ. ಮಹಾಂತೇಶ ಪಾಟೀಲ ಇವರ ಪುತ್ರಿ ಸೊನಮ್ ಮಹಾಂತೇಶ ಪಾಟೀಲ ದ್ವಿತೀಯ ಯು ಕಲಾ ವಿಭಾಗದಲ್ಲಿ 600 ಕ್ಕೆ 579 ಗಳಿಸಿ 96.50% ಅಂಕ ಪಡೆದು ಗದಗದ ಕೆಎಲ್ಇ, ಜೆ ಕೆ, ಪಿ ಯು ಕಾಲೇಜಿಗೆ ಹಾಗೂ ಪಾಟೀಲ ಕುಟುಂಬಕ್ಕೆ ಕೀರ್ತಿ ತಂದಿದ್ದಾಳೆ.





ಬೆಳಗಾವಿ: ಡಿ.ದೇವರಾಜು ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ 2024-25ನೇ ಸಾಲಿನ ಯೋಜನೆಯಡಿಯಲ್ಲಿ ಗ್ರಾಮೀಣ ಕ್ಷೇತ್ರದ ಅರ್ಹ ಫಲಾನುಭವಿಗಳಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಶುಕ್ರವಾರ ಹೊಲಿಗೆ ಯಂತ್ರ ವಿತರಿಸಿದರು. ಕಾಡಾ ಅಧ್ಯಕ್ಷ ಯುವರಾಜ ಕದಂ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಚೇತನ್ ಕುಮಾರ, ತಾಪಂ ಕಾರ್ಯನಿರ್ವಹಣಾಧಿಕಾರಿ ಯಶವಂತ, ತಹಸಿಲ್ದಾರ ಬಸವರಾಜ ನಾಗರಹಾಳ, ಉಚಗಾಂವ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಾಳು ದೇಸೂರಕರ್ ಸೇರಿದಂತೆ ಇತರರಿದ್ದರು.

ನಾಟಕ ಪ್ರದರ್ಶನಕ್ಕೆ ಚಾಲನೆ

ಕೊಕಟನೂರ: ಅಥಣಿ ತಾಲೂಕಿನ ಕೊಕಟನೂರ ಗ್ರಾಮದ ರಬಕವಿ ತೋಟದ ಶ್ರೀ ಅಪ್ಪಯ್ಯ ಸ್ವಾಮೀಜಿ ಜಾತ್ರಾ ಮಹೋತ್ಸವ ಅಂಗವಾಗಿ ಗುರುವಾರ ರಾತ್ರಿ ಹಮ್ಮಿಕೊಂಡ ''ಮಾನು ಬಿದ್ದಿತು ಮೌನ ಗೆದ್ದಿತು'' ನಾಟಕ ಪ್ರದರ್ಶನಕ್ಕೆ ಡಾ. ಮಲ್ಲಿಕಾರ್ಜುನ್ ಹಿರೇಮಠ ಚಾಲನೆ ನೀಡಿದರು. ಈ ವೇಳೆ ಯಲ್ಲಮ್ಮದೇವಿ ಅರ್ಚಕ ಪ್ರಲ್ಹಾದ ಪೂಜಾರಿ ಮಾತನಾಡಿ, ಪ್ರತಿಯೊಬ್ಬ ಪಾಲಕರು ತಮ್ಮ ಮಕ್ಕಳಿಗೆ ದೇಶಿ ಸಂಸ್ಕೃತಿ, ಸಂಸ್ಕಾರದ ಬಗ್ಗೆ ಅರಿವು ನೀಡಿ ಒಳ್ಳೆಯ ಶಿಕ್ಷಣ ನೀಡಬೇಕು ಎಂದು ತಿಳಿಸಿದರು. ವೇಳೆ ಡಾ. ಮಲ್ಲಿಕಾರ್ಜುನ ಹಿರೇಮಠ ನಾಟಕ ಪ್ರದರ್ಶನ ಸಮಾರಂಭ ಉದ್ಘಾಟಿಸಿ, ಮುಖಂಡರಾದ ಸುಭಾಷ ಸೋನಕರ, ಅನಿಲ ಮುಳಿಕ ಮಾತನಾಡಿದರು. ಈ ಮಹೇಶ ವೀರಕ್ತ ಮಠ, ಸುರೇಶ ಪಾಟಣಕರ, ಸುನಿಲ ಕುಂಬಾರ, ಪ್ರಭುಲಿಂಗ ರಡ್ಡರಟ್ಟಿ, ಬಸವರಾಜ ಅಡಹಳ್ಳಿ, ಕುಮಾರ್ ವಿರಗೌಡ, ಸದಾಶಿವ ರಬಕವಿ, ಗಣೇಶ್ ದಡಕೆ. ರವಿ ದೊಡ್ಡಮನಿ, ಶಿವಾನಂದ ಸೋನಕರ, ರಾಜು ತೋಟಗಿ, ಚಿದಾನಂದ ಬಜಂತ್ರಿ, ಹಣಮಂತ ಬಡಿಗೇರ, ಸುರೇಶ ಧಡಕೆ, ಶಂಕರ ಕುಟಗಿ, ಹಣಮಂತ ಅಡಹಳ್ಳಿ, ಆನಂದ ಪೂಜಾರಿ, ಅಮಿತ ಪಡಸಲಗಿ, ಶ್ರೀಶೈಲ ಮಾಳಿ, ನಿರೂಪಕರು ಆನಂದ ಕುಲಕರ್ಣಿ ಕುಮಾರ್ ನಾವಿ, ಸೇರಿದಂತೆ ಹಲವರು ಉಪಸ್ಥಿತರಿದ್ದರು. ಕೊಕಟನೂರ ಗ್ರಾಮದ ರಬಕವಿ ತೋಟದ ಶ್ರೀ ಅಪ್ಪಯ್ಯ ಸ್ವಾಮೀಜಿ ಜಾತ್ರಾ ಮಹೋತ್ಸವ ಅಂಗವಾಗಿ ಗುರುವಾರ ರಾತ್ರಿ ಹಮ್ಮಿಕೊಂಡ ''ಮಾತು ಬಿದ್ದಿತು ಮೌನ ಗೆದ್ದಿತು'' ನಾಟಕ ಪ್ರದರ್ಶನ ಸಮಾರಂಭವನ್ನು ಪ್ರಲ್ಹಾದ ಪೂಜಾರಿ ಚಾಲನೆ ನೀಡಿದರು.



ಕೊಕಟನೂರ: ಅಥಣಿ ತಾಲೂಕಿನ ಕೊಕಟನೂರ ಗ್ರಾಮದ ರಬಕವಿ ತೋಟದ ಶ್ರೀ ಅಪ್ಪಯ್ಯ ಸ್ವಾಮೀಜಿ ಜಾತ್ರಾ ಮಹೋತ್ಸವ ಅಂಗವಾಗಿ ಗುರುವಾರ ರಾತ್ರಿ ಹಮ್ಮಿಕೊಂಡ ''ಮಾನು ಬಿದ್ದಿತು ಮೌನ ಗೆದ್ದಿತು'' ನಾಟಕ ಪ್ರದರ್ಶನಕ್ಕೆ ಡಾ. ಮಲ್ಲಿಕಾರ್ಜುನ್ ಹಿರೇಮಠ ಚಾಲನೆ ನೀಡಿದರು.

ವಿವಿಧ ಗ್ರಾಮಸ್ಥರಿಂದ ಬೃಹತ್ ಪ್ರತಿಭಟನೆ

ಕಸ ವಿಲೇವಾರಿ ಘಟಕ ತೆರವಿಗೆ ಆಗ್ರಹ

ಬೆಳಗಾವಿ: ಬೆಳಗಾವಿ ತಾಲೂಕಿನ ತುರಮುರಿ ಗ್ರಾಮದ ಹೊರ ವಲಯದಲ್ಲಿರುವ ತ್ಯಾಜ್ಯ ವಿಲೇವಾರಿ ಘಟಕ ತೆರವಿಗೆ ಆಗ್ರಹಿಸಿ ಬೆಳಗಾವಿ ನಗರದಲ್ಲಿ ಶುಕ್ರವಾರ ಸಾವಿರಾರು ಜನರು ಬೃಹತ್ ಪ್ರತಿಭಟನೆ ನಡೆಸಿದರು.

ನಗರದ ಸರ್ದಾರ್ ಮೈದಾನದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಪಾದಯಾತ್ರೆ ನಡೆಸಿದ ತುರಮುರಿ, ಉಚಗಾಂವ, ಬಾಚಿ, ಕೋಣೆವಾಡಿ, ಸುಳಗಾ, ಗೋಜಗಾ, ಮಣ್ಣೂರ, ಕಲ್ಲೆಹೋಳ, ಅಂಬೇವಾಡಿ ಗ್ರಾಮಗಳ ಜನರು ಜಿಲ್ಲಾಡಳಿತದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಭಜನೆ ಬಾರಿಸಿ, ಆಡಳಿತದ ವಿರುದ್ಧ ಪ್ರತಿಭಟನಾಕಾರರು ಧಿಕ್ಕಾರ ಕೂಗಿದರು. ಪ್ರತಿಭಟನೆಯಲ್ಲಿ ಅಂಗವಿಕರು, ವೃದ್ಧರು, ಮಕ್ಕಳು, ಮಹಿಳೆಯರು ಸೇರಿದಂತೆ ಸುಮಾರು 3 ಸಾವಿರಕ್ಕೂ ಅಧಿಕ ಜನರು ಪಾಲ್ಗೊಂಡು ತ್ಯಾಜ್ಯ ವಿಲೇವಾರಿ ಘಟಕ ತೆರವುಗೊಳಿಸುವಂತೆ ಒತ್ತಾಯಿಸಿದರು.

250 ಟನ್ ಸಾಮ್ಯರ್ಥದ ತ್ಯಾಜ್ಯ ವಿಲೇವಾರಿ ಘಟಕ ಇದಾಗಿದ್ದು, 66 ಎಕರೆ ಪ್ರದೇಶದಲ್ಲಿ ನಿರ್ಮಾಣವಾಗಿದೆ. ಗೊಬ್ಬರ ಮತ್ತು ಪ್ಲಾಸ್ಟಿಕ್ ಪ್ರತ್ಯೇಕ ಮಾಡಿ ಕಸ ವಿಲೇವಾರಿ ಮಾಡಲಾಗುತ್ತಿದೆ. ಇಲ್ಲಿನ ತ್ಯಾಜ್ಯದಿಂದ ಸುತ್ತಲಿನ ಗ್ರಾಮಗಳಲ್ಲಿ ರೋಗಗಳು ಹರಡುತ್ತಿವೆ. ಶುದ್ಧ ಕುಡಿಯುವ ನೀರು ಮತ್ತು ಗಾಳಿ ಇಲ್ಲದೇ ಪರದಾಡುತ್ತಿದ್ದೇವೆ. ಕ್ಯಾನ್ಸರ್, ಲಿವರ್, ಕಿಡ್ನಿ, ಉಸಿರಾಟದ ಸಮಸ್ಯೆ ಆಗುತ್ತಿದೆ. ಇದರಿಂದ ಸಾವಿನ ಸಂಖ್ಯೆ ಹೆಚ್ಚಳವಾಗುತ್ತಿದೆ ಪ್ರತಿಭಟನಾಕಾರರು ಆರೋಪಿಸಿದರು.

ಈ ವೇಳೆ ಮಾತನಾಡಿದ ಮುಖಂಡ ಸಿದ್ದಪ್ಪ ಕಾಂಬಳೆ, ತ್ಯಾಜ್ಯ ವಿಲೇವಾರಿ ಘಟಕದಿಂದ ನಮಗೆ ಸಾಕಷ್ಟು ಸಮಸ್ಯೆ ಆಗುತ್ತಿದೆ. ತ್ಯಾಜ್ಯವು ಭಾವಿ ಮತ್ತು ಬೋರ್ ವೇಲ್ ನಲ್ಲಿ ಸೇರಿ ನೀರು ಕಲುಷಿತಗೊಂಡಿದೆ. ಸುತ್ತಲೂ ಸಾವಿರಾರು ನಾಯಿಗಳು ಅಲ್ಲಿವೆ. ನೊಣಗಳ ಕಾಟವು ಹೆಚ್ಚಿದೆ. ಈ ಎಲ್ಲಾ ಸಮಸ್ಯೆಯಿಂದ ಸಮೀಪದಲ್ಲಿರುವ ನಾಲ್ಕು ಶಾಲೆಗಳಿಗೆ ವಿದ್ಯಾರ್ಥಿಗಳೇ ಬರುತ್ತಿಲ್ಲ. ಈ ಘಟಕ ತೆರವು ಮಾಡುವವರೆಗೆ ಗ್ರಾಪಂ, ತಾಪಂ, ಜಿಪಂ ಚುನಾವಣೆ ಬಹಿಷ್ಕಾರ ಹಾಕಲು ನಾವು ನಿರ್ಣಯ ಕೈಗೊಂಡಿದ್ದೇವೆ ಎಂದರು.

ಸುಮಾರು 20 ವರ್ಷಗಳಿಂದ ಬೆಳಗಾವಿ ನಗರದ ಕಸವನ್ನು ತುರಮುರಿ ಘಟಕದಲ್ಲಿ ಸಂಗ್ರಹಿಸಲಾಗುತ್ತಿದೆ. ಇದರಿಂದ ಸುತ್ತಲಿನ ಗ್ರಾಮಗಳಲ್ಲಿ ವಾಯು ಮತ್ತು ಜಲ ಸಂಪೂರ್ಣ ಮಾಲಿನ್ಯವಾಗಿದೆ. ನಾವು ಅನೇಕ ಬಾರಿ ಹೋರಾಟ ಮಾಡಿ, ಜಿಲ್ಲಾಡಳಿತ, ಸಚಿವರು ಮತ್ತು ಶಾಸಕರಿಗೆ ಮನವಿ ಸಲ್ಲಿಸಿದರೂ ನಮ್ಮ ಸಮಸ್ಯೆ ಪರಿಹರಿಸುತ್ತಿಲ್ಲ. ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಹಿಂದಿನ ಚುನಾವಣೆಯಲ್ಲಿ ಆಶ್ವಾಸನೆ ಕೊಟ್ಟಿದ್ದರು. ಆ ಪ್ರಕಾರ ಈ ಘಟಕ ತೆರವುಗೊಳಿಸಬೇಕು. ಈಗಾಗಲೇ ಈ ಹೋರಾಟದಲ್ಲಿ ಒಮ್ಮೆ ಜೈಲಿಗೂ ಹೋಗಿ ಬಂದಿದ್ದೇವೆ. ಇನ್ಮುಂದೆ ಜೀವ ಹೋದರೂ ಹೋರಾಟದಿಂದ ಹಿಂದೆ ಸರಿಯಲ್ಲ ಎಂದು ಮತ್ತೋರ್ವ ಹೋರಾಟಗಾರ ಮಹಾಂತೇಶ ತಳವಾರ ಎಚ್ಚರಿಸಿದರು.



ಪರ್ಯಾಯ ಜಾಗ ಹುಡುಕುತ್ತಿದ್ದೇವೆ:ಡಿಸಿ

ಮನವಿ ಸ್ವೀಕರಿಸಿದ ಬಳಿಕ ಮಾತನಾಡಿದ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್, ಇದು ಬಹಳ ಹಳೆಯ ಸಮಸ್ಯೆ. ತ್ಯಾಜ್ಯ ವಿಲೇವಾರಿ ಘಟಕ ಬೇರೆ ಕಡೆ ಸ್ಥಳಾಂತರಕ್ಕೆ ಈಗಾಗಲೇ ಸಿದ್ಧತೆ ನಡೆಸಿದ್ದೇವೆ. ನಾವು ಮತ್ತು ಜನಪ್ರತಿನಿಧಿಗಳು ನಿಮ್ಮ ಪರ ಇದ್ದೇವೆ. ಆದರೆ, ಏಕಾಏಕಿ ಒಂದೇ ದಿನದಲ್ಲಿ ಇಷ್ಟು ದೊಡ್ಡ ಘಟಕ ಸ್ಥಳಾಂತರ ಮಾಡುವುದು ಸುಲಭದ ಕೆಲಸವಲ್ಲ. ಇದಕ್ಕೆ ಕಾಲಾವಕಾಶ ಬೇಕಾಗುತ್ತದೆ. ಪರ್ಯಾಯ ಜಾಗ ಹುಡುಕಬೇಕಾಗುತ್ತದೆ. ಅದೇರೀತಿ ಹೇಗೆ ಮತ್ತು ಎಲ್ಲಿ ಸ್ಥಳಾಂತರ ಮಾಡಬೇಕು ಎನ್ನುವುದನ್ನು ನಿಮ್ಮ ಜೊತೆಗೆ ಚರ್ಚಿಸಿ ನಿರ್ಧಾರ ತೆದುಕೊಳ್ಳುವುದಾಗಿ ಭರವಸೆ ನೀಡಿದರು.

ಮದ್ಯದಂಗಡಿ ಸ್ಥಳಾಂತರಕ್ಕೆ ಒತ್ತಾಯ

ಚನ್ನಮ್ಮನ ಕಿತ್ತೂರು: ತಾಲೂಕಿನ ಅಂಬಡಗಟ್ಟಿ ಗ್ರಾಮದ ಬಳಿ ಇರುವ ಎಂಎಸ್ಐಎಲ್ ಮದ್ಯದಂಗಡಿಯನ್ನು ಈ ಕೂಡಲೇ ಸ್ಥಳಾಂತರಿಸಬೇಕೆಂದು ಆಗ್ರಹಿಸಿ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿ ಧರಣಿ ನಡೆಸಿದ ಘಟನೆ ಶುಕ್ರವಾರ ನಡೆದಿದೆ.



ಆಕ್ರೋಶ ವ್ಯಕ್ತಪಡಿಸಿದ ಗ್ರಾಮದ ಮಹಿಳೆಯರು, ಈ ಮದ್ಯದಂಗಡಿಯಿಂದ ಯುವಕರು ದಾರಿ ತಪ್ಪುತ್ತಿದ್ದಾರೆ. ಅಲ್ಲದೆ ಪ್ರತಿದಿನ ದುಡಿದು ಮನೆಗೆ ತರುವ ಹಣವನ್ನು ಮದ್ಯಕ್ಕಾಗಿ ವ್ಯಯಿಸುತ್ತಿದ್ದು, ಕುಟುಂಬ ನಿರ್ವಹಣೆಗೂ ಇದು ತೊಂದರೆ ಉಂಟಾಗುತ್ತಿದೆ ಎಂದು ಆರೋಪಿಸಿದರು.

ಗ್ರಾಮದ ಕೂಗಳತೆಯ ದೂರದಲ್ಲಿ ಈ ಮಳಿಗೆ ತೆರೆಯಲಾಗಿದ್ದು, ಈ ಮಾರ್ಗದಲ್ಲಿ ಮಹಿಳೆಯರು ಹಾಗೂ ಮಕ್ಕಳು ಸಂಚರಿಸದ ಪರಿಸ್ಥಿತಿ ಬಂದೂದಗಿದೆ. ಮದ್ಯ ಖರೀದಿಸಿ ದಾರಿ ಮದ್ಯದಲ್ಲಿಯೇ ಕುಳಿತು ಮದ್ಯ ಸೇವಿಸುವದಲ್ಲದೆ ದಾರಿ ಹೋಕರಿಗೆ ಸುಖಾ ಸುಮ್ಮನೆ ತೊಂದರೆ ನೀಡಲಾಗುತ್ತಿದೆ ಎಂದು ಆರೋಪಿಸಿ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕಾಗಮಿಸುವವರೆಗೂ ಧರಣಿ ಕೈ ಬಿಡುವುದಿಲ್ಲ ಎಂದು ಪಟ್ಟು ಹಿಡಿದರು.

ನಂತರ ಸ್ಥಳಕ್ಕಾಗಮಿಸಿದ ತಹಶೀಲ್ದಾರ ಕಲ್ಲಗೌಡ ಪಾಟೀಲ ಮುಂದೆ ತಮ್ಮ ತೊಂದರೆಗಳ ಕುರಿತು ಮನವಿ ಸಲ್ಲಿಸಿದರು.

ಗ್ರಾಮಸ್ಥರ ಮನವಿಗೆ ಸ್ಪಂದಿಸಿದ ತಹಶೀಲ್ದಾರ ಕಲ್ಲಗೌಡ ಪಾಟೀಲ, ಅಬಕಾರಿ ಇಲಾಖೆಯ ಅಧಿಕಾರಿಗಳು, ಬೆಳಗಾವಿ ಜಿಲ್ಲಾಧಿಕಾರಿಗಳು, ಪೊಲೀಸ್ ಅಧಿಕಾರಿಗಳು ಬಂದು ಪರಿಶೀಲನೆ ಮಾಡುವವರಿಗೆ ಮಳಿಗೆ ತೆರೆಯದಂತೆ ಸೂಚಿಸಿದರು. ಗ್ರಾಮಸ್ಥರು ಸೇರಿದಂತೆ ಪೊಲೀಸ್ ಇಲಾಖೆ, ಗ್ರಾಪಂ ಅಧಿಕಾರಿಗಳು ಇದ್ದರು.



ಗೋಕಾಕ: ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಮಠ ನೂತನ ಚೇರಮನ ಬಾಳು ಮಗಜಿಕೊಂಡಿ, ಕಾರ್ಯದರ್ಶಿ ವಿನಾಯಕ ಘೋಡಕೆ, ಧರ್ಮದರ್ಶಿ ಶಾಮಾನಂದ ಪೂಜೇರಿ, ಬಸವರಾಜ ಕಲ್ಯಾಣಶೆಟ್ಟರ ಅವರನ್ನು ಶಾಸಕ ರಮೇಶ ಜಾರಕಿಹೊಳಿ ಸತ್ಕರಿಸಿ ಅಭಿನಂದಿಸಿದರು.

ಇಂದಿನಿಂದ ಪ್ರವಚನ ಕಾರ್ಯಕ್ರಮ

ಕಬ್ಬೂರು: ಕಬ್ಬೂರ ಪಟ್ಟಣದ ಶ್ರೀನ ಜಾತ್ರಾ ಮಹೋತ್ಸವ ಹಾಗೂ ಶ್ರೀ ಜಗಜ್ಯೋತಿ ಬಸವೇಶ್ವರ ಜಯಂತ್ಯೋತ್ಸವ ಏ. 11ರಿಂದ ಏ. 19ರವರೆಗೆ ಪ್ರತಿದಿನ ಸಂಜೆ 7ಕ್ಕೆ ಪ್ರವಚನ ಕಾರ್ಯಕ್ರಮ ಜರುಗಲಿದೆ.

ಏ.11ರಂದು ಸಂಜೆ 5ಕ್ಕೆ ಶ್ರೀಗಳ ಮೆರವಣಿಗೆಯು ಸುಮಂಗಲೆಯರ ಬುತ್ತಿ ಸೇವೆ ಹಾಗೂ ಸಕಲವಾದ್ಯಗಳೊಂದಿಗೆ ಶ್ರೀ ಗೌರಿ ಶಂಕರ ಮಠದಿಂದ ಹೊರಟು ಮಲ್ಲಿಕಾರ್ಜುನ ದೇವಸ್ಥಾನ ತಲುಪುವುದು.



ಗದಗ, ಜಿಲ್ಲೆಯ ಸಂಸ್ಥಾನ ಹರ್ತಿಮಠ, ಹರ್ಲಾಪೂರದ ಪಂ. ಪುಟ್ಟರಾಜ ಕವಿ ಗವಾಯಿಗಳವರ ಶಿಷ್ಯರಾದ ಸದಾನಂದ ಶಾಸ್ತ್ರಿಗಳು ಏ11ರಿಂದ ಏ19ರವರೆಗೆ ಆಧ್ಯಾತ್ಮಿಕ ಪ್ರವಚನ ನೀಡಲಿದ್ದಾರೆ.

ನಿಡಸೋಶಿಯ ಪಂಚಮ ಶಿವಲಿಂಗೇಶ್ವರ ಶ್ರೀಗಳು, ಚಿಕ್ಕೋಡಿಯ ಸಂಪಾದನಾ ಶ್ರೀಗಳು, ಘಟಪ್ರಭಾ ಮಲ್ಲಿಕಾರ್ಜುನ ಶ್ರೀಗಳು, ಮಹಾಂತೇಶ್ವರ ವಿರಕ್ತಮಠ, ಬಾಗೇವಾಡಿಯ ಶಿವಾನಂದ ಶ್ರೀಗಳು, ಕಬ್ಬೂರಿನ ಗೌರಿಶಂಕರಮಠದ ರೇವಣಸಿದ್ಧ ಶಿವಾಚಾರ್ಯ ಶ್ರೀಗಳು, ಪ್ರತಿದಿನ ಪ್ರವಚನ ಕಾರ್ಯಕ್ರಮದಲ್ಲಿ ಸಾನಿಧ್ಯ ವಹಿಸಲಿದ್ದಾರೆ. ಶಂಕರಯ್ಯಾ ಮಠದ, ಮಹೇಶ ಬಸಲಿಂಗಪ್ಪಾ ಬೆಲ್ಲದ, ಉದ್ಯಮಿಗಳು, ಬೆಂಗಳೂರು. ಸುರೇಶ ಬೆಲ್ಲದ, ಮಲ್ಲಪ್ಪಾ ಚಿಮ್ಮಟ, ಮಹಾದೇವ ಜಿವಣಿ, ಶಂಕರ ಕಾಮಪ್ಪಾ ಕಾಮಗೌಡ ಭಾಗವಹಿಸಲಿದ್ದಾರೆ.

ಏ.20ರಂದು ಜಗಜ್ಯೋತಿ ಬಸವೇಶ್ವರ ಜಯಂತ್ಯೋತ್ಸವ 6ಕ್ಕೆ ಡಾ. ರವಿ ಈರಪ್ಪಾ ಕುರಬೇಟ ಇದರಿಂದ ಮಲ್ಲಿಕಾರ್ಜುನ ದೇವರಿಗೆ ಮಹಾರುದ್ರಾಭಿಷೇಕ ಹಾಗೂ ವಿಶೇಷ ಪೂಜಾಲಂಕಾರದ ಸೇವೆ ನಂತರ ಬೆಳಗ್ಗೆ 9.30 ಗಂಟೆಗೆ ಬಸವೇಶ್ವರ ದೇವಸ್ಥಾನದಲ್ಲಿ ಬಸವೇಶ್ವರ ನಾಮಕರಣ ಕಾರ್ಯಕ್ರಮ, ಮಧ್ಯಾಹ್ನ 1ಕ್ಕೆ ಗೋಕಾಕ ಫಾಲ್ಸ್ ಮಹಾಲಿಂಗೇಶ್ವರ ದೇವಸ್ಥಾನದಿಂದ ಬಸವಜ್ಯೋತಿ ಆಗಮನ (ಬಸದ ಸೇವಾದಳ, ಕಬ್ಬರ ಇದರಿಂದ). ಸಂಜೆ 4ಕ್ಕೆ ಗಂಟೆಗೆ ಬಸವೇಶ್ವರರ ಭಾವಚಿತ್ರದ ಮೆರವಣಿಗೆ, ಸಹಸ್ರ ಕುಂಭೋತ್ಸವ, ಸಕಲ ವಾದ್ಯ ಮೇಳಗಳೊಂದಿಗೆ ಬಸವೇಶ್ವರ ದೇವಸ್ಥಾನದಿಂದ ಹೊರಟು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಮಲ್ಲಿಕಾರ್ಜುನ ದೇವಸ್ಥಾನ ತಲುಪುವುದು. ಸಂಜೆ 7ಕ್ಕೆ ಬಸವ ಜಯಂತ್ಯೋತ್ಸವದ ಸಮಾರೋಪ ಸಮಾರಂಭ. ಪ್ರತಿದಿನ ಪ್ರವಚನದ ನಂತರ ಮಹಾದಾನಿಗಳಿಗೆ ಹಾಗೂ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರಿಗೆ ಸತ್ಕಾರ ಹಾಗೂ ಸದ್ಭಕ್ತರಿಂದ ಬುತ್ತಿ ಸೇವೆ ಹಾಗೂ ಮಹಾಪ್ರಸಾದ ಸೇವೆ. ಏ 21-ರಂದು ಮಲ್ಲಿಕಾರ್ಜುನ ದೇವರ ಜಾತ್ರಾ ಮಹೋತ್ಸವ ಮಹಾರುದ್ರಾಭಿಷೇಕ ಹಾಗೂ ವಿಶೇಷ ಪೂಜಾಲಂಕಾರ, ಸಾಮೂಹಿಕ ಗುಗ್ಗುಳೋತ್ಸವ. 'ದಟ್ಟಿ ಕುಣಿತ ' ಕರಡಿ ಮಜಲು ಮಹಾಪ್ರಸಾದ ಜೋಡು ಕುದುರೆ ಗಾಡಿ ಶರ್ಯತ್ತು, ಸಾಯಕಲ್ ಶರ್ಯತ್ತು, ಕುಳಿತು ಕುದುರೆ ಓಡಿಸುವ ಶರ್ಯತ್ತು ಇರುತ್ತದೆ ಎಂದು ಜಾತ್ರಾ ಸಮಿತಿಯವರು ಪ್ರಕಟನೆಯಲ್ಲಿ ಕೋರಿದ್ದಾರೆ.

ಜ್ಯೋತಿ ಅರ್ಬನ್ ಸೊಸೈಟಿಗೆ 1.58 ಕೋಟಿ ರೂ.ಗಳ ಲಾಭ


ಮೂಡಲಗಿ: ಪಟ್ಟಣದ ಜ್ಯೋತಿ ಅರ್ಬನ್ ಕೋ-ಆಪ್ ಕ್ರೆಡಿಟ್ ಸೊಸೈಟಿ ಲಿ.ಮೂಡಲಗಿ, ಸನ್ 2025-26 ನೇ ಆರ್ಥಿಕ ವರ್ಷದ ಕೊನೆಯಲ್ಲಿ 1,58 ಕೋಟಿ ರೂ.ಗಳ ಲಾಭ ಗಳಿಸಿ ಪ್ರಗತಿ ಪಥದಲ್ಲಿ ಸಾಗಿದೆ. ಎಂದು ಸೊಸೈಟಿ ಅಧ್ಯಕ್ಷ ಮಲ್ಲಪ್ಪಾ ಮದಗುಣಕಿ ಹೇಳಿದರು.

ಶುಕ್ರವಾರ ಸಂಘ ಸಭಾ ಭವನದಲ್ಲಿ ಕರೆದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ, ಸಂಘವು 1.66 ಕೋಟಿ ರೂ. ಶೇರು ಬಂಡವಾಳ, 91.22 ಕೋಟಿ ರೂ. ಠೇವು, 2.33 ಕೋಟಿ ರೂ. ನಿಧಿಗಳು, 58.11 ಕೋಟಿ ರೂ. ಸಾಲಗಳು, 36.88 ಕೋಟಿ ಗುಂತಾವಣಿಗಳು, 101.89 ಕೋಟಿ ರೂ. ದುಡಿಯುವ ಬಂಡವಾಳ ಹೊಂದಿದ್ದು ಪ್ರಸಕ್ತ ಸಾಲಿನಲ್ಲಿ 442.88 ಕೋಟಿ ವ್ಯವಹಾರ ಮಾಡಿ ಪ್ರಗತಿ ಪಥದಲ್ಲಿ ಸಾಗುತ್ತಿದೆ. ಸೊಸೈಟಿಯು ಈಗಾಗಲೇ 9 ಶಾಖೆಗಳನ್ನು ಹೊಂದಿದ್ದು, ಮುಂಬರುವ ದಿನಗಳಲ್ಲಿ ಪ್ರಧಾನ ಕಛೇರಿ ಸ್ವಂತ ಕಟ್ಟಡ ಹೊಂದುವ ಗುರಿ ಹೊಂದಲಾಗಿದೆ ಎಂದು ಮದಗುಣಕಿ ತಿಳಿಸಿದರು.



ಉಪಾಧ್ಯಕ್ಷರಾದ ಬಸವರಾಜ ನೇಮಗೌಡರ ಈ ಪ್ರಸ್ತುತ ಸಾಲಿನಲ್ಲಿ ಸೊಸೈಟಿಯು 3 ರಿಂದ 5 ನೂತನ ಶಾಖೆಗಳನ್ನು ಪ್ರಾರಂಭಿಸುವ ಗುರಿ ಹೊಂದಿದ್ದು ಶೇರುದಾರರ ಸಹಕಾರ ಠೇವಣಿದಾರ ಬೆಂಬಲದಿಂದ ಈಗಿರುವ ಶಾಖೆಗಳು ಪ್ರಗತಿಯಲ್ಲಿವೇ ಎಂದರು.

ಪತ್ರಿಕಾಗೋಷ್ಠಿಯಲ್ಲಿ ನಿರ್ದೇಶಕರಾದ ಶ್ರೀಶೈಲ್ ಶಿ. ಜೈನಾಪೂರ, ಅಪ್ಪಯ್ಯಪ್ಪ ಬ. ನೇಮಗೌಡರ, ಶ್ರೀಶೈಲ್ ಶಿ. ಗಾಣಿಗೇರ, ಮಲ್ಲಪ್ಪ ಹ. ಗಾಣಿಗೇರ, ಸಂಗಪ್ಪ ಮ. ಕಾಳಪ್ಪಗೋಳ, ಚಂದ್ರು ಬ. ಗಾಣಿಗ, ಸಾವಿತ್ರಿ ಶಂ. ತೇಲಿ, ಆಶಾ ಮ. ಗಾಣಿಗೇರ, ಮಂಜುಳಾ ಮ. ನೇಮಗೌಡರ, ಮುತ್ತಪ್ಪಾ ಲ. ವರ್ಗಿ, ಪ್ರಧಾನ ವ್ಯವಸ್ಥಾಪಕರಾದ ಪ್ರಕಾಶ ಶೇಖರ ರಡರಟ್ಟಿ ಉಪಸ್ಥಿತರಿದ್ದರು.



ಅಥಣಿ: ಸ್ಥಳೀಯ ಜಿ. ಇ . ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯಿಂದ ಸಾಧಕ ವಿದ್ಯಾರ್ಥಿಗಳ ಅಭಿನಂದನಾ ಸಮಾರಂಭ ನಡೆಯಿತು. ಸಂಸ್ಥೆಯ ಕಾರ್ಯಾಧ್ಯಕ್ಷ ಡಾ. ರಾಮ್ ಬಿ. ಕುಲಕರ್ಣಿ, ಸಂಸ್ಥೆಯ ಉಪ ಕಾರ್ಯಧ್ಯಕ್ಷ ಸಂದೀಪ ಸಂಗೋರಾಮ, ಸಂಸ್ಥೆಯ ಕಾರ್ಯದರ್ಶಿ ರವಿ ಕುಲಕರ್ಣಿ, ಸಹ ಕಾರ್ಯದರ್ಶಿ ಆನಂದ ಟೋಣಪಿ, ಹಿರಿಯ ಸದಸ್ಯರಾದ ಎಸ್ ಎಂ ಪಾಟೀಲ, ಅನೀಲ ದೇಶಪಾಂಡೆ, ಎಂ ವಿ ಜೋಶಿ, ಡಾ. ಅವಿನಾಶ ನಾಯಿಕ , ಹಿಮಾಂಶು ಬಾಟೆ, ಅಥರ್ವ ದೇಶಪಾಂಡೆ, ಡಾ.ಶ್ರೀವತ್ಸ ಕುಲಕರ್ಣಿ, ಡಾ. ವಿಶ್ವನಾಥ ಕುಲಕರ್ಣಿ, ಪ್ರಾಚಾರ್ಯ ಎಂ ಪಿ ಮೇತ್ರಿ, ಆಡಳಿತಾಧಿಕಾರಿ ಉದಯಕುಮಾರ ಕೋರಿವಾಲೆ ಮಹಾವಿದ್ಯಾಲಯದ ಬೋಧಕ ಸಿಬ್ಬಂದಿ, ವಿದ್ಯಾರ್ಥಿಗಳು, ಪಾಲಕರು ಉಪಸ್ಥಿತರಿದ್ದರು.

ಸಚಿವ ಸತೀಶ ಜಾರಕಿಹೊಳಿಗೆ ಆಹ್ವಾನ

ಬೆಳಗಾವಿ: ಕರ್ನಾಟಕ ರಾಜ್ಯ ಸರ್ಕಾರಿ ಮಹಿಳಾ ನೌಕರರ ಸಂಘ ಬೆಳಗಾವಿ ಜಿಲ್ಲಾ ಘಟಕದ ವತಿಯಿಂದ ಹಮ್ಮಿಕೊಳ್ಳಲಿರುವ ವಿಶೇಷ ಕಾರ್ಯಕ್ರಮಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಅವರನ್ನು ಕರ್ನಾಟಕ ರಾಜ್ಯ ಸರ್ಕಾರಿ ಮಹಿಳಾ ನೌಕರರ ಸಂಘದ ಬೆಳಗಾವಿ ಪ್ರಧಾನ ಕಾರ್ಯದರ್ಶಿ ಡಾ. ಕೃಪಾಲಿನಿ ಎಸ್. ಗಡದವರ, ಬೆಳಗಾವಿ ಜಿಲ್ಲಾ ಘಟಕದ ಅಧ್ಯಕ್ಷ ಗೀತಾ ಎಸ್. ದಳವಾಯಿ ಅವರ ನೇತೃತ್ವದಲ್ಲಿ ಅಧಿಕೃತವಾಗಿ ಆಹ್ವಾನಿಸಿದರು.

ಶುಕ್ರವಾರ ನಗರದ ಜಿಲ್ಲಾ ಕಾಂಗ್ರೆಸ್ ಭವನದಲ್ಲಿ ಲೋಕೋಪಯೋಗಿ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಅವರನ್ನು ಕರ್ನಾಟಕ ರಾಜ್ಯ ಸರ್ಕಾರಿ ಮಹಿಳಾ ನೌಕರರ ಸಂಘದ ಬೆಳಗಾವಿ ಪ್ರಧಾನ ಕಾರ್ಯದರ್ಶಿ ಡಾ. ಕೃಪಾಲಿನಿ ಎಸ್. ಗಡದವರ ಅವರ ನೇತೃತ್ವದಲ್ಲಿ ಪದಾಧಿಕಾರಿಗಳು, ಕಾರ್ಯಕ್ರಮದ ಕುರಿತು ಚರ್ಚಿಸಿ, ಆಮಂತ್ರಣ ಪತ್ರ ವಿತರಿಸಿದರು.

ಇದೇ ವೇಳೆ ಮಹಿಳಾ ನೌಕರರ ಸಮಸ್ಯೆಗಳಿಗೆ ಸ್ಪಂದಿಸುವುದಾಗಿ ಹಾಗೂ ಕಾರ್ಯಕ್ರಮಕ್ಕೆ ಬರುವುದಾಗಿ ಸಚಿವರು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ಮಹಿಳಾ ನೌಕರರ ಸಂಘದ ಹಲವು ಮಹಿಳಾ ಸದಸ್ಯರು ಸೇರಿದಂತೆ ಹಲವರು ಇದ್ದರು.



ಪಿಯುಸಿ ಫಲಿತಾಂಶ: ವಿದ್ಯಾರ್ಥಿಗಳಿಗೆ ಸನ್ಮಾನ



ಗೋಕಾಕ: ನಗರದ ಕೆಎಲ್ಇ ಸಂಸ್ಥೆಯ ಸಿಎಸ್ ಅಂಗಡಿ ಪದವಿ ಪೂರ್ವ ಮಹಾವಿದ್ಯಾಲಯದ 6 ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ರಾಜ್ಯ ಮಟ್ಟದಲ್ಲಿ ರ್‍ಯಾಂಕ್ ಪಡೆದ ನಿಮಿತ್ಯ ಕೆಎಲ್ಇ ನಿರ್ದೇಶಕ ಜಯಾನಂದ ಮುನವಳ್ಳಿ ಶುಕ್ರವಾರ ಸತ್ಕರಿಸಿದರು.

ವಿಜ್ಞಾನ ವಿಭಾಗದಲ್ಲಿ ವಿದ್ಯಾರ್ಥಿನಿ ಪ್ರಜಕ್ತಾ ಜಾಧವ 7ನೇ ರ್‍ಯಾಂಕ್, ವೇದಿಕಾ ಶಿಂಧಿಹಟ್ಟಿ 11ನೇ ರ್‍ಯಾಂಕ್, ವಾಣಿಜ್ಯ ವಿಭಾಗದಲ್ಲಿ ದಿವ್ಯಪ್ರಭಾ ಮನಿವನ್ನನ್ 4ನೇ ರ್‍ಯಾಂಕ್, ಆರ್‍ನಾ ಚಿಗಡೊಳ್ಳಿ 10ನೇ ರ್‍ಯಾಂಕ್, ಕಲಾ ವಿಭಾಗದಲ್ಲಿ ಸರಸ್ವತಿ ಚಂದರಗಿ ಮತ್ತು ಅಡಿವೆಪ್ಪ ಮುಶೆಪ್ಪಗೋಳ 10ನೇ ರ್‍ಯಾಂಕ್ ಪಡೆದಿದ್ದಾರೆ.

ಈ ಸಂದರ್ಭದಲ್ಲಿ ಸಂಸ್ಥೆಯ ಸ್ಥಳೀಯ ಆಡಳಿತ ಮಂಡಳಿ ಅಧ್ಯಕ್ಷ ಎಂ.ಡಿ ಚುನಮರಿ, ರೂಪಾ ಮುನವಳ್ಳಿ, ಸುನಂದಾ ಅಂಗಡಿ, ಆಡಳಿತಾಧಿಕಾರಿ ಜಿ. ಎಂ. ಅಂದಾನಿ, ಪ್ರಾಚಾರ್ಯರಾದ ಮಲ್ಲಿಕಾರ್ಜುನ ಕೌಜಲಗಿ, ಎಂ.ಎ. ಅಂಗಡಿ ಇದ್ದರು.

ಏ.20ಕ್ಕೆ ಗುಗ್ಗುಳೋತ್ಸವ

ಮೂಡಲಗಿ: ತಾಲೂಕಿನ ಕಲ್ಲೋಳಿ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಪ್ರತಿ ವರ್ಷದಂತೆ ಪ್ರಸಕ್ತ ವರ್ಷದ ಬಸವೇಶ್ವರ ಜಯಂತಿ ಪ್ರಯುಕ್ತ ಐದನೆಯ ವರ್ಷದ ಸಾಮೂಹಿಕ ಉಚಿತ ಗುಗ್ಗುಳೋತ್ಸವ ಏ.20ರಂದು ಜರುಗಲಿದೆ. ಗುಗ್ಗುಳದಲ್ಲಿ ಭಾಗವಹಿಸುವವರು ಏ.15ರೊಳಗೆ ಮೌನೇಶ ಪತ್ತಾರ 9110239285, ರಾಮಪ್ಪ ಬೆಳಕೂಡ 8431574724ಗೆ ಸಂಪರ್ಕಿಸಿ ಹೆಸರು ನೋಂದಾಯಿಸಬೇಕೆಂದು ಬಸವೇಶ್ವರ ಕಮಿಟಿ ಅಧ್ಯಕ್ಷ ರಮೇಶ ಬೆಳಕೂಡ ತಿಳಿಸಿದ್ದಾರೆ.

ಭೀಮ ಜ್ಯೋತಿ: ಐವರ ತಂಡಕ್ಕೆ ಬೀಳ್ಕೊಡುಗೆ

ಬೆಳಗಾವಿ : ನಗರದ ಡಾ.ಬಿ.ಆರ್.ಅಂಬೇಡ್ಕರ ಉದ್ಯಾನವನದಲ್ಲಿ ನಾಗಪುರದಿಂದ ಭೀಮಜ್ಯೋತಿ ತರುವ ನಿಮಿತ್ಯ ಐದು ಜನರ ತಂಡವನ್ನು ಶುಕ್ರವಾರ ಸನ್ಮಾನಿಸಿ ಬೀಳ್ಕೊಡಲಾಯಿತು. ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಉಪ ಆಯುಕ್ತರಾದ ಉದಯಕುಮಾರ ತಳವಾರ, ಮುಖಂಡರಾದ ಮಲ್ಲೇಶ ಚೌಗುಲೆ ಸೇರಿದಂತೆ ಗಣ್ಯರು ಮತ್ತಿತರು ಉಪಸ್ಥಿತರಿದ್ದರು. ನಾಗಪುರದಿಂದ ಭೀಮ ಜ್ಯೋತಿಯು ಏ.13ರಂದು ನಗರಕ್ಕೆ ಆಗಮಿಸಲಿದ್ದು, ಏ.14ರಂದು ಭೀಮ ಜ್ಯೋತಿಯನ್ನು ಜಿಲ್ಲಾಡಳಿತಕ್ಕೆ ಹಸ್ತಾಂತರಿಸಲಾಗುವುದು.

ಸ್ವತಂತ್ರ ಪಪೂ ಕಾಲೇಜಿನ ಸಾಧನೆ

ಹಾರೂಗೇರಿ: ಸ್ಥಳೀಯ ಎಸ್‌ವಿಇಎಸ್ ಸಂಸ್ಥೆಯ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಈ ಬಾರಿ ಉತ್ತಮ ಅಂಕಗಳನ್ನ ಗಳಿಸಿ ಕಾಲೇಜಿನ ಕೀರ್ತಿಯನ್ನು ಉನ್ನತ ಹಂತಕ್ಕೆ ತಂದಿದ್ದಾರೆ.

90% ಪ್ರತಿಶತ ಕಾಲೇಜಿನ ಒಟ್ಟು 135 ಡಿಸ್ಟಿಂಕ್ಷನ್ ,185 ಪ್ರಥಮ,45 ದ್ವಿತೀಯ ಹಾಗೂ 05 ತೃತೀಯ ಸ್ಥಾನ ಗಳಿಸಿದ್ದು, ಫಲಿತಾಂಶದಲ್ಲಿ ರೇಣುಕಾ ಸನದಿ ಕಲಾ ವಿಭಾಗದಲ್ಲಿ 592 ಅಂಕಗಳೊಂದಿಗೆ ಪ್ರಥಮ, ಅಕ್ಷತಾ ವಡಗಂವಿ ವಾಣಿಜ್ಯ ವಿಭಾಗದಲ್ಲಿ 588 ಅಂಕಗಳೊಂದಿಗೆ ಪ್ರಥಮ, ಸ್ವಾತಿ ಸೈದಾಪುರ ವಿಜ್ಞಾನ ವಿಭಾಗದಲ್ಲಿ 573 ಅಂಕಗಳನ್ನು ಗಳಿಸಿ ಪ್ರಥಮ ಸ್ಥಾನ ಗಳಿಸಿದ್ದು, ವ್ಯವಹಾರ ಅಧ್ಯಯನದಲ್ಲಿ 8 ಜನ 100ಕ್ಕೆ 100, ಕನ್ನಡದಲ್ಲಿ 2, ಅರ್ಥಶಾಸ್ತ್ರದಲ್ಲಿ 5 ಜನ ವಿದ್ಯಾರ್ಥಿಗಳು 100 ಕ್ಕೆ 100 ಅಂಕ ಗಳಿಸಿದ್ದಾರೆ.ಇವರ ಈ ಸಾಧನೆಗೆ ಸಂಸ್ಥೆಯ ಅಧ್ಯಕ್ಷ ಗಿರೀಶ ದರೂರ, ಕಾರ್ಯದರ್ಶಿ ಡಾ.ವಿ ಎಸ್ ಮಾಳಿ, ಪ್ರಾಚಾರ್ಯರಾದ ಎಸ್ ಎಸ್ ಅಣ್ಣಿಗೇರಿ, ಉಪನ್ಯಾಸಕರಾದ ವಿನೋದ ಹೆಗಡೆ, ಎಸ್ ಎಲ್ ಮೊಕಾಶಿ, ಸುರೇಶ ದರೂರ, ಉಪನ್ಯಾಸಕ-ಸಿಬ್ಬಂದಿ ವರ್ಗ ಅಭಿನಂದನೆ ಸಲ್ಲಿಸಿದ್ದಾರೆ.



ಕಿರುಸುದ್ದಿ

ಸರ್ಕಾರಿ ಕಾಲೇಜಿಗೆ 95.70%ರಷ್ಟು ಫಲಿತಾಂಶ

ಜಮಖಂಡಿ: ಸಮೀಪದ ಹುನ್ನೂರು ಗ್ರಾಮದ ಸರ್ಕಾರಿ ಪ.ಪೂ ಕಾಲೇಜಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ 95.70%ರಷ್ಟು ಫಲಿತಾಂಶ ನೀಡಿ ಸಾಧನೆ ಮಾಡಿದೆ. ಪರೀಕ್ಷೆಗೆ ಹಾಜರಾದ 488 ವಿದ್ಯಾರ್ಥಿಗಳಲ್ಲಿ 117 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ (ಡಿಸ್ಟಿಂಕ್ಷನ್) ಹಾಗೂ 289 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಕಾಲೇಜಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಪ್ರಾಚಾರ್ಯರು, ಉಪನ್ಯಾಸಕರು ಹಾಗೂ ಸಿಬ್ಬಂದಿ ಮತ್ತು ಕಾಲೇಜಿನ ಅಭಿವೃದ್ಧಿ ಸಮಿತಿಯ ಅಧ್ಯಕ್ಷರು, ಸದಸ್ಯರು ಹಿರಿಯರು ಅಭಿನಂದಿಸಿದ್ದಾರೆ.

ವಿದ್ಯಾರ್ಥಿನಿಯ ಸಾಧನೆ

ರಬಕವಿ-ಬನಹಟ್ಟಿ: ಇಲ್ಲಿನ ಸರ್ಕಾರಿ ಪದವಿ ಪೂರ್ವ ಮಹಾವಿದ್ಯಾಲಯದ ವಿಶೇಷ ಚೇತನ ವಿದ್ಯಾರ್ಥಿನಿ ರಚಿತಾ ಬಾಗಿ ದ್ವಿತೀಯ ಪಿಯುಸಿ ಕಲಾ ವಿಭಾಗದಲ್ಲಿ ಪ್ರಥಮ ಶ್ರೇಣಿಯಲ್ಲಿ ಉತೀರ್ಣರಾಗುವುದರ ಮೂಲಕ ತಾನು ಇತರರಿಗೆ ಏನು ಕಮ್ಮಿ ಇಲ್ಲ ಎಂಬುದನ್ನು ಸಾಧಿಸಿ ತೋರಿಸಿದ್ದಾಳೆ.



ಕನ್ನಡ-79, ಇತಿಹಾಸ-68, ಅರ್ಥಶಾಸ್ತ್ರ-71 ಸಮಾಜ ಶಾಸ್ತ್ರ-79 ರಾಜ್ಯಶಾಸ್ತ್ರ-69 ಒಟ್ಟು 500ಕ್ಕೆ 357 ಅಂಕಗಳಿಸಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣಳಾಗಿದ್ದು ಇತರರಿಗೆ ಮಾದರಿಯಾಗಿದ್ದಾಳೆ. ವಿಶೇಷ ಚೇತನ ಮಕ್ಕಳಿಗೆ ಯಾವುದಾದರೂ ಒಂದು ಭಾಷಾ ವಿಷಯದಲ್ಲಿ ವಿನಾಯತಿ ಪಡೆಯಲು ಇಲಾಖೆ ಅವಕಾಶ ಮಾಡಿ ಕೊಟ್ಟಿದೆ. ಆದರೆ ಹತ್ತನೇ ತರಗತಿಯಲ್ಲಿ ರಚಿತಾ ಅದಕ್ಕಾಗಿ ಅಲೆದಾಡಲಾಗದೆ ಎಲ್ಲಾ ವಿಷಯದ ಪರೀಕ್ಷೆ ಬರೆದಿದ್ದಳು. ಈ ಸಲ ಅವಳಿಗೆ ಒಂದು ವಿಷಯದಲ್ಲಿ ವಿನಾಯತಿ ಕೊಡಿಸಲೇಬೇಕೆಂದು ಶತ ಪ್ರಯತ್ನ ಮಾಡಿದ ಕಾಲೇಜಿನ ಪ್ರಾಚಾರ್ಯರು ಇಂಗ್ಲಿಷ್ ಪರೀಕ್ಷೆಯ ಹಿಂದಿನ ದಿನದ ವರೆಗೂ ಶ್ರಮ ವಹಿಸಿ ವಿನಾಯತಿ ಪಡೆಯುವಲ್ಲಿ ಯಶಸ್ವಿಯಾದರು. ಇದರಿಂದಾಗಿ ರಚಿತಾಳ ಫಲಿತಾಂಶ ಉತ್ತಮ ರೀತಿಯಲ್ಲಿ ಬರಲು ಸಾಧ್ಯವಾಗಿದೆ. ಕಾಲೇಜು ಅಭಿವೃದ್ಧಿ ಸಮಿತಿಯ ಅಧ್ಯಕ್ಷರು, ಉಪಾಧ್ಯಕ್ಷರು, ಸರ್ವ ಸದಸ್ಯರು ಮತ್ತು ಪ್ರಾಚಾರ್ಯರು ಹಾಗೂ ಉಪನ್ಯಾಸಕರು ರಚಿತಾಳಿಗೆ ಶುಭಾಶಯ ಕೋರಿದ್ದಾರೆ.

ಇಂದು ಮಾರುತೇಶ್ವರ ಓಕುಳಿ

ಗಲಗಲಿ: ಗ್ರಾಮದ ಮಾರುತೇಶ್ವರ ದೇವಸ್ಥಾನದಲ್ಲಿ ಮಾರುತೇಶ್ವರ ಓಕುಳಿ ಕಾರ್ಯಕ್ರಮ ಏ.11ರಂದು ಶನಿವಾರ ನಡೆಯಲಿದೆ. ಬೆಳಗ್ಗೆ ಹನುಮಂತ ದೇವರ ದೇವಸ್ಥಾನದಲ್ಲಿ ಅಭಿಷೇಕ, ವಿಶೇಷ ಪೂಜೆ ನಡೆಯಲಿದ್ದು ಸಂಜೆ ಓಕುಳಿ ಜರುಗಲಿದೆ. ರಾತ್ರಿ 10 ಗಂಟೆಗೆ ಸ್ಥಳೀಯ ಗಾಲವ ಶಕ್ತಿ ತರುಣ ನಾಟ್ಯ ಸಂಘದವರಿಂದ 'ಮನ ಒಡೆಯಿತು ಮನೆ ಮುರಿಯಿತು' ಎಂಬ ಸಾಮಾಜಿಕ ನಾಟಕ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಪದವಿ ಕೋರ್ಸ್‌ಗಳ ಪ್ರವೇಶ ಪ್ರಾರಂಭ

ಬಾಗಲಕೋಟೆ: ಬಾಗಲಕೋಟೆ ನವನಗರದ ಸೆಕ್ಟರ್ ನಂಬರ್ 43 ರಲ್ಲಿರುವ ನ್ಯಾಕ್ ಬಿ+ ಮಾನ್ಯತೆ ಪಡೆದಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಸಕ್ತ 2026-27 ನೇ ಶೈಕ್ಷಣಿಕ ಸಾಲಿನ ಖಇಕ ಅಡಿಯಲ್ಲಿ 3 ವರ್ಷದ ಪದವಿ ಕೋರ್ಸಗಳಾದ ಬಿ.ಎ, ಬಿ.ಕಾಂ, ಬಿ.ಎಸ್ಸಿ, ಬಿ.ಬಿ.ಎ, ಬಿ.ಸಿ.ಎ ಪ್ರಥಮ ವರ್ಷದ ಪದವಿ ಕೋರ್ಸಗಳಿಗೆ ಈಗ ಪ್ರವೇಶ ಪ್ರಾರಂಭವಾಗಿದ್ದು, ಪದವಿ ಕೋರ್ಸಗಳ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಅಗತ್ಯ ದಾಖಲಾತಿ ಪ್ರತಿಗಳೊಂದಿಗೆ ಕಾಲೇಜಿಗೆ ಬಂದು ಪ್ರವೇಶ ಪಡೆಯಬೇಕು ಎಂದು ಪ್ರಾಚಾರ್ಯ ಡಾ.ಅರುಣಕುಮಾರ ಗಾಳಿ ತಿಳಿಸಿದ್ದಾರೆ. ಎಲ್ಲಾ ದಾಖಲಾತಿಗಳೊಂದಿಗೆ ಪದವಿ ಪ್ರಥಮ ವರ್ಷದ ಪ್ರವೇಶ ಪಡೆಯಬೇಕೆಂದು ತಿಳಿಸಿದ್ದಾರೆ.

ಇಂದಿನಿಂದ ವಿಶೇಷ ಶಿಬಿರ

ಅಮೀನಗಡ: ಇಲ್ಲಿನ ಸಂಗಮೇಶ್ವರ ಪದವಿ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಘಟಕದ ವತಿಯಿಂದ 2026ನೇ ಸಾಲಿನ ವಾರ್ಷಿಕ ವಿಶೇಷ ಶಿಬಿರ ಏ.12ರಿಂದ 17ರ ವರೆಗೆ ದತ್ತು ಗ್ರಾಮವಾದ ಇಲಾಳದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪ್ರಾಚಾರ್ಯ ಗುರುದತ್ತ ಮರ್ತಗೇರಿ ಹಾಗೂ ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಎನ್.ಬಿ. ಬೆಣ್ಣೂರ ತಿಳಿಸಿದ್ದಾರೆ. ಶಿಬಿರದ ಉದ್ಘಾಟನಾ ಸಮಾರಂಭವು ಏ.11ರಂದು ಸಂಜೆ 5 ಗಂಟೆಗೆ ಇಲಾಳ ಗ್ರಾಮದಲ್ಲಿ ಜರುಗಲಿದೆ. ಸಂಗಮೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಶಂಕರರಾಜೇಂದ್ರ ಸ್ವಾಮೀಜಿ ಅವರು ದಿವ್ಯ ಸಾನಿಧ್ಯ ವಹಿಸಲಿದ್ದಾರೆ. ಯಲ್ಲಪ್ಪ ಗೋಡಿ ಉದ್ಘಾಟಿಸಲಿದ್ದಾರೆ. ಸಂಗಮೇಶ್ವರ ವಿದ್ಯಾವರ್ಧಕ ಸಂಘದ ಚೇರ್ಮನ್ ಐ.ಎಸ್.ಲಿಂಗದಾಳ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಸೋಮಯ್ಯ ಕಾಟಾಪುರಮಠ, ಆಡಳಿತ ಮಂಡಳಿ ಸದಸ್ಯರಾದ ಸಿ.ಡಿ.ಇಲಕಲ್, ಡಾ.ಎಂ.ವಿ.ಹಾದಿಮನಿ, ಆರ್.ಕೆ.ಗೌಡರ ಉಪಸ್ಥಿತರಿರಲಿದ್ದಾರೆ.



ಮುದ್ದೇಬಿಹಾಳ: ಮುಂಬರುವ ಬಸವ ಜಯಂತಿ ಆಚರಣೆ ಪ್ರಯುಕ್ತ ಹಿಂದು ಸಮಾಜದ ಪಂಗಡಗಳ ಮುಖಂಡರು ಶುಕ್ರವಾರ ನಗರದ ಖಾಸ್ಗತೇಶ್ವರ ಮಠದಲ್ಲಿ ಸಭೆ ಸೇರಿ ಬಸವ ಜಯಂತಿ ಆಚರಣೆಯನ್ನು ಅದ್ದೂರಿಯಾಗಿ ಆಚರಿಸಲು ತೀರ್ಮಾನಿಸಿದರು. ಮುಖಂಡರಾದ ಪ್ರಭುರಾಜ್, ಕಲ್ಬುರ್ಗಿ ಬಸವರಾಜ ನಾವದಗಿ, ಮಹಿಬೂಬ್ ಗೊಳಸಂಗಿ ನೇತಾಜಿ ನಲವಡೆ, ಕಾಮರಾಜ ಬಿರಾದಾರ, ಮಹಿಬೂಬ್ ಗೊಳಸಂಗಿ, ಗೋಪಿ ಕಲಾಲ್, ಪರಶುರಾಮ ನಾಲತವಾಡ, ಜಗದೀಶ ಕಂಠಿ, ಬಸಯ್ಯ ನಂದಿಕೇಶ್ವರಮಠ, ಗೋಪಿ ಮಡಿವಾಳರ ಸೇರಿದಂತೆ ಇತರರು ಭಾಗವಹಿಸಿದ್ದರು

ಸಂಭ್ರಮದ ಸಂತೆ ಆಹಾರ ಮೇಳ

ಇಳಕಲ್: ವಿಜಯ ಮಹಾಂತೇಶ ವಿದ್ಯಾವರ್ಧಕ ಸಂಘದ ಎಸ್‌ವಿಎಂ ಕಲೆ ಮತ್ತು ವಾಣಿಜ್ಯ ಪದವಿ ಮಹಿಳಾ ಮಹಾವಿದ್ಯಾಲಯ ಇಳಕಲ್‌ನಲ್ಲಿ ಮನರಂಜನಾ ವಾರದ ವಿಶೇಷವಾಗಿ ನಾಲ್ಕನೇ ದಿನದಂದು ಸಂಭ್ರಮದ ಸಂತೆ ಎಂಬ ಆಹಾರ ಮೇಳ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ವಿದ್ಯಾರ್ಥಿನಿಯರು ವಿವಿಧ ತಿನಿಸುಗಳು, ಸೀರೆಗಳು ಹಾಗೂ ಇತರ ವಸ್ತುಗಳ ಮಾರಾಟ ಮಾಡುವ ಮೂಲಕ ತಮ್ಮ ಸೃಜನಶೀಲತೆ ಮತ್ತು ಉದ್ಯಮಶೀಲ ಕೌಶಲ್ಯ ಪ್ರದರ್ಶಿಸಿದರು. ಸಂತೆ ಕಾರ್ಯಕ್ರಮವನ್ನು ಡಾ.ಮಹಾಂತೇಶ ಅಕ್ಕಿ, ಡಾ.ಅನಿತಾ ಅಕ್ಕಿ, ಪ್ರಶಾಂತ ಹಂಚಾಟೆ ಹಾಗೂ ರಶ್ಮಿ ಹಂಚಾಟೆ ಉದ್ಘಾಟಿಸಿದರು. ಕಾಲೇಜು ಚೇರಮನ್ ಬಸವರಾಜ ಮರಟದ ಅಧ್ಯಕ್ಷತೆ ವಹಿಸಿದ್ದರು. ಸಂಘದ ವೈಸ್ ಚೇರಮನ್ ಅರುಣ ಬಿಜ್ಜಲ್, ಉಪಾಧ್ಯಕ್ಷ ಆರ್.ಎಸ್.ಹೂಲಿ, ಸಿ.ಪಿ.ಸಾಲಿಮಠ, ನಿರ್ದೇಶಕ ಡಿ.ಎನ್.ದೇವಗಿರಿಕರ, ಬಿಬಿಎ ಮತ್ತು ಬಿಸಿಎ ಚೇರಮನ್ ಶರಣಪ್ಪ ಅಕ್ಕಿ, ಪ್ರಾಚಾರ್ಯ ಬಿ.ಬಿ.ಸುಗ್ಗಮದ, ಐಕ್ಯೂಎಸಿ ಸಂಯೋಜಕ ಪಿ.ಆರ್.ಪಾಟೀಲ್ ಹಾಗೂ ಕಾಲೇಜು ಒಕ್ಕೂಟದ ಕಾರ್ಯಾಧ್ಯಕ್ಷೆ ಎ.ಸಿ.ದಟ್ಟಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಸುಮಾರು 20 ಕ್ಕೂ ಹೆಚ್ಚು ಮಳಿಗೆಗಳು ಸ್ಥಾಪಿಸಲ್ಪಟ್ಟಿದ್ದು, ಮಹಾವಿದ್ಯಾಲಯದ ಬಿಎ ಮತ್ತು ಬಿಕಾಂ ವಿದ್ಯಾರ್ಥಿನಿಯರು ಇಪ್ಪತ್ತಕ್ಕೂ ಹೆಚ್ಚು ಮಳಿಗೆಗಳನ್ನು ನಿರ್ವಹಿಸಿದರು. ಈ ಮಳಿಗೆಗಳಲ್ಲಿ ಉತ್ತರ ಕರ್ನಾಟಕದ ಸಾಂಪ್ರದಾಯಿಕ ಊಟ, ಸೀರೆಗಳು ಹಾಗೂ ವಿವಿಧ ಉಪಯುಕ್ತ ವಸ್ತುಗಳನ್ನು ಮಾರಾಟ ಮಾಡಲಾಯಿತು.



ಇಳಕಲ್: ವಿಜಯ ಮಹಾಂತೇಶ ವಿದ್ಯಾವರ್ಧಕ ಸಂಘದ ಎಸ್‌ವಿಎಂ ಕಲೆ ಮತ್ತು ವಾಣಿಜ್ಯ ಪದವಿ ಮಹಿಳಾ ಮಹಾವಿದ್ಯಾಲಯ ಇಳಕಲ್‌ನಲ್ಲಿ ಮನರಂಜನಾ ವಾರದ ವಿಶೇಷವಾಗಿ ನಾಲ್ಕನೇ ದಿನದಂದು ಸಂಭ್ರಮದ ಸಂತೆ ಎಂಬ ಆಹಾರ ಮೇಳ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಸಂತೆ ಕಾರ್ಯಕ್ರಮವನ್ನು ಡಾ.ಮಹಾಂತೇಶ ಅಕ್ಕಿ, ಡಾ.ಅನಿತಾ ಅಕ್ಕಿ, ಪ್ರಶಾಂತ ಹಂಚಾಟೆ ಹಾಗೂ ರಶ್ಮಿ ಹಂಚಾಟೆ ಉದ್ಘಾಟಿಸಿದರು.

ರಿಲ್ಯಾಕ್ಸ್ ಮೂಡ್‌ನಲ್ಲಿರುವ ಕಾಂಗ್ರೆಸ್, ಬಿಜೆಪಿ ಅಭ್ಯರ್ಥಿಗಳು

ಗೆಲುವಿನ ಲೆಕ್ಕಾಚಾರದಲ್ಲಿ ಅಭ್ಯರ್ಥಿಗಳು

▸ ಜಗದೀಶ ಎಂ.ಗಾಣಿಗೇರ

ಬಾಗಲಕೋಟೆ: ತೀವ್ರ ಕುತೂಹಲ ಹಾಗೂ ಉಪಚುನಾವಣೆ ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದ ಕಾಂಗ್ರೆಸ್ ಹಾಗೂ ಬಿಜೆಪಿ ನಾಯಕರು ಈಗ ಮತದಾನ ನಡೆದ ಬಳಿಕ ಮತಗಳ ಕುರಿತು ಲೆಕ್ಕಾಚಾರ ಶುರು ಮಾಡಿದ್ದಾರೆ.

ಬಾಗಲಕೋಟೆ ಉಪಚುನಾವಣೆಯಲ್ಲಿ ಬಿಜೆಪಿಯಿಂದ ವೀರಣ್ಣ ಚರಂತಿಮಠ ಹಾಗೂ ಕಾಂಗ್ರೆಸ್ ಪಕ್ಷದಿಂದ ಉಮೇಶ ಮೇಟಿಯವರು ನಡುವೆನೇರ ಹಣಾಹಣಿ ನಡೆದಿದೆ. ಗ್ರಾಮೀಣ ಮತ್ತು ನಗರ ಮಟ್ಟದಲ್ಲಿ ಎರಡೂ ಪಕ್ಷದ ಕಾರ್ಯಕರ್ತರು ಹಾಗೂ ಬೆಂಬಲಿಗರು ಇದ್ದಾರೆ. ಹೀಗಾಗಿ ಎರಡೂ ಭಾಗದಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ನಡುವೆ ನೇರ ಸ್ಪರ್ಧೆ ನಡೆದಿದೆ.

ಉಪಚುನಾವಣೆಗೆ ಮತದಾನ ಗುರುವಾರ ಮುಕ್ತಾಯಗೊಂಡಿತು. ಬಾಗಲಕೋಟೆ ಮತಕ್ಷೇತ್ರದಲ್ಲಿ ಶೇ.68.74 ರಷ್ಟು ಮತದಾನವಾಗಿದೆ. ಮತದಾನ ಬಳಿಕ ಈಗ ಯಾರಿಗೆ ಎಷ್ಟು ಮತಗಳು ಹೋಗಿವೆ ಎಂಬ ಲೆಕ್ಕಾಚಾರ ಬಲು ಜೋರಾಗಿ ನಡೆದಿದೆ. ಮತದಾನ ಮುಗಿಯುತ್ತಿದ್ದಂತೆ ಕಾಂಗ್ರೆಸ್ ಬಿಜೆಪಿ ಕಾರ್ಯಕರ್ತರು, ಬೂತಮಟ್ಟದ ಕಾರ್ಯಕರ್ತರು,ಅಧ್ಯಕ್ಷರು ತಮ್ಮ ಮುಖಂಡರ ಬಳಿ ಕುಳಿತು ಮತಗಳಿಕೆ ಕುರಿತು ಲೆಕ್ಕಾಚಾರ ನಡೆದಿದೆ. ಬಾಗಲಕೋಟೆ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಹಾಗೂ ಮುಖಂಡರಿಗೆ ಬೂತ ಏಜೆಂಟರು ತಮ್ಮ ಪಕ್ಷದ ಪರವಾಗಿ ಎಷ್ಟು ಮತಗಳು ಬಂದಿರಬಹುದು ಎಂದು ಲೆಕ್ಕ ಹಾಕುತ್ತಿದ್ದಾರೆ.

ಕಳೆದ ಹದಿನೈದು ದಿನಗಳಿಂದ ಚುನಾವಣೆಯಲ್ಲಿ ಸಕ್ರೀಯವಾಗಿದ್ದ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಮತದಾನ ಮುಗಿಯುತ್ತಿದ್ದಂತೆ ಶುಕ್ರವಾರ ಎಂದಿನಂತೆ ತಮ್ಮ ಕೆಲಸವನ್ನು ಬೆಳಗ್ಗೆ 9 ಗಂಟೆಗೆ ಆರಂಭಿಸಿ ಮೊದಲು ಎಪಿಎಂಸಿ ಆವರಣದಲ್ಲಿರುವ ಅಡಗಿ ಅಂಗಡಿಗೆ ತೆರಳಿ ಲೆಕ್ಕವನ್ನು ಪಡೆದುಕೊಂಡು ನಂತರ 10 ಗಂಟೆಗೆ ಬಿವಿವಿ ಸಂಘದ ಕಚೇರಿಯಲ್ಲಿ ಹೋಗಿ ತಮ್ಮ ಕೆಲಸ ಕಾರ್ಯದಲ್ಲಿ ತೊಡಗಿದರು. ಇದರ ಜತೆಗೆ ಪಕ್ಷದ ಕಾರ್ಯಕರ್ತರು ಮುಖಂಡರ ಜತೆಗೆ ಚುನಾವಣೆಯ ಕುರಿತು ಮಾಹಿತಿ ಪಡೆದುಕೊಂಡರು.

ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿಯವರು ತಮ್ಮ ತಿಮ್ಮಾಪುರ ಗ್ರಾಮದಲ್ಲಿ ಬೆಳಿಗ್ಗೆಯಿಂದಲೇ ತಮ್ಮ ಕಾರ್ಯಕರ್ತರಿಗೆ, ಮುಖಂಡರಿಗೆ ದೂರವಾಣಿ ಕರೆ ಮಾಡಿ ಮತದಾನ ಕುರಿತು ಮಾಹಿತಿ ಪಡೆದುಕೊಂಡು ತಮ್ಮ ಕೆಲಸದಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದರು. ಮತದಾನ ಮುಗಿಯುತ್ತಿದ್ದಂತೆ ಎರಡೂ ಪಕ್ಷದ ಅಭ್ಯರ್ಥಿಗಳು ರೀಲ್ಯಾಕ್ಸ್ ಮೂಡನಲ್ಲಿದ್ದು ಕಾರ್ಯಕರ್ತರು, ಮತ್ತು ಪಕ್ಷದ ಪದಾಧಿಕಾರಿಗಳು ನಮ್ಮ ಪಕ್ಷಕ್ಕೆ ಹೆಚ್ಚು ಮತಗಳು ಬಂದಿವೆ ಎಂದು ಸಂಭ್ರಮದಲ್ಲಿದ್ದಾರೆ. ಕೊನೆಗೆ ಮೇ 4ಕ್ಕೆ ಯಾರಿಗೆ ಅದೃಷ್ಟ ಲಕ್ಷ್ಮೀ ಕೈ ಹಿಡಿಯಲಿದ್ದಾರೆ ಎಂಬುದು ಮಾತ್ರ ಕಾಯಬೇಕಾಗಿದೆ.



> ಗ್ರಾಮಾಂತರ ಪ್ರದೇಶದಲ್ಲಿಯೂ ಕೂಡ ನಮ್ಮ ಕೆಲಸಗಳೇ ನಡೆದಿವೆ ಎಂಬುದು ಜನರು ಅಭಿಪ್ರಾಯವಾಗಿದೆ. ಮತದಾನ ಮುಂಚೆ ಪ್ರಚಾರಕ್ಕೆ ಹೋದಾಗ ಗ್ರಾಮೀಣ ಮತ್ತು ನಗರಮಟ್ಟದಲ್ಲಿ ಜನರು ಉತ್ಸಾಹದಿಂದ ನಮ್ಮನ್ನು ಸ್ವಾಗತಿಸಿದ್ದಾರೆ. ಮತದಾರರು ಬಿಜೆಪಿ ಗೆಲ್ಲಿಸಲಿದ್ದಾರೆ ಎಂಬ ವಿಶ್ವಾಸವಿದೆ.
>
> ■ ವೀರಣ್ಣ ಚರಂತಿಮಠ, ಬಿಜೆಪಿ ಅಭ್ಯರ್ಥಿ



> ಚುನಾವಣೆಯ ಮತದಾನ ಮುಗಿದಿದ್ದು ಬೆಳಿಗ್ಗೆಯಿಂದಲೇ ಕಾರ್ಯಕರ್ತರು, ಅಭಿಮಾನಿಗಳು ಮನೆಗೆ ಬರುತ್ತಿದ್ದು ಯಾವ ಊರಿನಲ್ಲಿ ಎಷ್ಟು ಮತ ನಮ್ಮ ಪರವಾಗಿ ಬಂದಿವೆ ಎಂಬುದನ್ನು ಕೇಳುತ್ತಿದ್ದೇವೆ. ಎಂದಿನಂತೆ ನಮ್ಮ ಕಾರ್ಯದಲ್ಲಿ ಹಾಗೂ ಮನೆ ಕೆಲಸದಲ್ಲಿ ತೊಡಗಿದ್ದೇವೆ. ಗೆಲುವು ನಮ್ಮದೇ ಆಗಲಿದೆ.
>
> ■ ಉಮೇಶ ಮೇಟಿ, ಕಾಂಗ್ರೆಸ್ ಅಭ್ಯರ್ಥಿ

ಅನ್ನದಾನೇಶ್ವರ ಪಿಯು ಕಾಲೇಜಿನ ವಿದ್ಯಾರ್ಥಿಗಳ ಸಾಧನೆ

ಬಾದಾಮಿ: ತಾಲೂಕಿನ ಬೇಲೂರ ಗ್ರಾಮದ ಅನ್ನದಾನೇಶ್ವರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು 2026ರ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳನ್ನು ಪಡೆದು ಉತ್ತೀರ್ಣರಾಗುವ ಮೂಲಕ ಉತ್ತಮ ಸಾಧನೆ ಮಾಡಿದ್ದಾರೆ.

ಕಲಾ ವಿಭಾಗ ವಿಭಾಗದಲ್ಲಿ ತ್ರಿವೇಣಿ ಬಾಬಾಸಾಬ ಬಾಬಶೆಟ್ಟಿ-568/600 (94.66%) ?ಕನ್ನಡ ಹಾಗೂ ಶಿಕ್ಷಣ ಶಾಸ್ತ್ರ ವಿಷಯದಲ್ಲಿ 100ಕ್ಕೆ 100 ಅಂಕಗಳನ್ನ ಪಡೆದು ಕಲಾ ವಿಭಾಗದಲ್ಲಿ ಕಾಲೇಜಿಗೆ ಪ್ರಥಮ, ಅನ್ನಪೂರ್ಣ ಮಲ್ಲಪ್ಪ ಬಡಿಗೇರ-566/600 (94.33%) ಕನ್ನಡ ಹಾಗೂ ಶಿಕ್ಷಣ ಶಾಸ್ತ್ರ ವಿ?ಯದಲ್ಲಿ 100ಕ್ಕೆ 100 ಅಂಕಗಳು ಮತ್ತು ಪವಿತ್ರ ಸಂಗಪ್ಪ ದೇಶಾಯಿ- 566/600 (94.33%), ಭೂಗೋಳಶಾಸ್ತ್ರ ವಿಷಯದಲ್ಲಿ 100ಕ್ಕೆ 100 ಅಂಕಗಳನ್ನು ಪಡೆದು ದ್ವಿತೀಯ ಸ್ಥಾನ ಹಾಗೂ ಪಲ್ಲವಿ ಶೇಖರಪ್ಪ ದೇಶಾಯಿ-565/600 (94.16%) ಭೂಗೋಳಶಾಸ್ತ್ರ ವಿಷಯದಲ್ಲಿ 100ಕ್ಕೆ 100 ಅಂಕಗಳು ಹಾಗೂ ಸಮನ್ವ ಅಮಿನಸಾಬ ಕೊಪ್ಪದ-565/600 (94.16%) ಪಡೆದು ತೃತೀಯ ಸ್ಥಾನ ಪಡೆದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಕೇರಮ್ಮ ಬಸವರಾಜ ಹೊಮ್ಮನಗೌಡ-579/600 (96.5%) ವಾಣಿಜ್ಯ ವಿಭಾಗದಲ್ಲಿ ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ವಿದ್ಯಾರ್ಥಿಗಳನ್ನು ಅನ್ನದಾನೇಶ್ವರಿ ಪಿಯು ಕಾಲೇಜಿನ ಆಡಳಿತ ಮಂಡಳಿ, ಬಬಲಾದ ಪಾರ್ವತಿ ಭಾಗದ ವಿ.ವಿ.ಸಂಸ್ಥೆ, ಪ್ರಾಚಾರ್ಯರು ಹಾಗೂ ಸಿಬ್ಬಂದಿ ಅಭಿನಂದನೆ ಸಲ್ಲಿಸಿದ್ದಾರೆ.

ಸರ್ಕಾರಿ ಕಾಲೇಜಿಗೆ 67.62 ರಷ್ಟು ಫಲಿತಾಂಶ

ಹುನಗುಂದ: ಪಟ್ಟಣದ ಸರ್ಕಾರಿ ಪಿಯು ಕಾಲೇಜಿನ ದ್ವಿತೀಯ ಪಿಯುಸಿ ಪರೀಕ್ಷೆ-1 ರ 67.62ರಷ್ಟು ಫಲಿತಾಂಶ ಪಡೆದುಕೊಂಡಿದೆ.

ಕಲಾ ವಿಭಾಗದಲ್ಲಿ ಹನಮವ್ವ ಹಿರೇಕುರುಬರ-576(96%) (ಪ್ರಥಮ), ಸಿದ್ದವ್ವ ಹೊಸರೂರ-555(92.5%) (ದ್ವಿತೀಯ), ಶಿವಲೀಲಾ ವಸ್ತ್ರದ-544 (90.66%) (ತೃತೀಯ), ವಾಣಿಜ್ಯ ವಿಭಾಗದಲ್ಲಿ ಪವನಕುಮಾರ ಚಿಗರಿ-542(90.33%) (ಪ್ರಥಮ), ಉಮೇಶ ಗೌಂಡಿ-498(83%) (ದ್ವಿತೀಯ), ಸವಿತಾ ಶೀಲವಂತರ 482(80.33%), (ತೃತೀಯ), ವಿಜ್ಞಾನ ವಿಭಾಗದಲ್ಲಿ ಸೇವಂತಿ ಬೆಣಗಿ-504(84%) (ಪ್ರಥಮ) ಅಮೃತಾ ನಡುವಿನಮನಿ-472(78.66%) (ದ್ವಿತೀಯ) ಸ್ನೇಹಾ ಗುಡದಪ್ಪನವರ-458 (76.33)%) (ತೃತೀಯ) ಸ್ಥಾನ ಪಡೆದುಕೊಂಡು ಕಾಲೇಜು ಕೀರ್ತಿ ಹೆಚ್ಚಿಸಿದ್ದಾರೆ.

ಈ ಎಲ್ಲ ಸಾಧಕ ವಿದ್ಯಾರ್ಥಿಗಳಿಗೆ ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಪ್ರಾಚಾರ್ಯರು, ಉಪನ್ಯಾಸಕರು ಹಾಗೂ ಸಿಬ್ಬಂದಿ ಅಭಿನಂದಿಸಿದ್ದಾರೆ.

ಆನ್‌ಲೈನ್‌ನಲ್ಲಿ ಕುಟುಂಬದ ವಿವರ ದಾಖಲಿಸಿ


ಲೋಕಾಪುರ: ಐತಿಹಾಸಿಕವಾದ ಮೊದಲ ಡಿಜಿಟಲ್ ಜನಗಣತಿ ಪ್ರಕ್ರಿಯೆ ಆರಂಭವಾಗಿದೆ. 2027ರ ಜನಗಣತಿಯ ಈ ಮಹತ್ವದ ಹಂತದಲ್ಲಿ ಸಾರ್ವಜನಿಕರಿಗೆ ಸ್ವಯಂ ಗಣತಿ ಮಾಡಿಕೊಳ್ಳುವ ವಿಶೇಷ ಅವಕಾಶವನ್ನು ಕಲ್ಪಿಸಲಾಗಿದ್ದು, ನಾಗರಿಕರು ತಾವೇ ನೇರವಾಗಿ ಆನ್‌ಲೈನ್ ಮೂಲಕ ತಮ್ಮ ಕುಟುಂಬದ ವಿವರಗಳನ್ನು ದಾಖಲಿಸಬಹುದಾಗಿದೆ ಎಂದು ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ಸಾಬಣ್ಣ ಪೂಜೇರ ಹೇಳಿದರು.

ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಹಮ್ಮಿಕೊಂಡ ಸ್ವಯಂ ಗಣತಿಯ ಜಾಗೃತಿ ಬೈಕ್ ರ‍್ಯಾಲಿ ಜಾಥಾಗೆ ಚಾಲನೆ ನೀಡಿ ಮಾತನಾಡಿದ ಅವರು ಮೊಬೈಲ ಇಲ್ಲವೇ ಲ್ಯಾಪ್ ಟ್ಯಾಪ್‌ನಲ್ಲಿ ಪೋರ್ಟಲ್‌ಗೆ ಲಾಗಿನ ಆಗಿ ಅದಲ್ಲಿ ಕಾಣಿಸುವ 33 ಸರಳ ಪ್ರಶ್ನೆಗಳಿಗೆ ಸರಿಯಾದ ಅಪ್ ಡೇಟ್ ಮಾಡಿದ ನಂತರ ಎಸ್‌ಇ ಐಡಿ ಸೃಜನೆಯಾಗುತ್ತಿದ್ದಂತೆಯೆ ಅದನ್ನು ಸೇ ಮಾಡಬೇಕು. ಬಳಿಕ ಗಣತಿದಾರರು ಮನೆಗೆ ಬಂದಾಗ ಅವರಿಗೆ ನೀಡಬೇಕು ಎಂದರು.

ಕಂದಾಯ ನಿರೀಕ್ಷಕ ಆಕಾಶ ರಾಯಣ್ಣವರ ಮಾತನಾಡಿ, 2 ಹಂತಗಳಲ್ಲಿ ನಡೆಯುವ ಜನಗೀತಯ ಭಾಗವಾಗಿ ಮೊದಲ ಹಂತವಾದ ಸ್ವಯಂ ಗಣತಿ ಹಾಗೂ ಮನೆಗಳ ಪಟ್ಟಿ ಮತ್ತು ಮನೆಗಳ ಗಣತಿ ಕಾರ್ಯವನ್ನು ಏಪ್ರೀಲ್ ಮತ್ತು ಮೇ ತಿಂಗಳಲ್ಲಿ ಕೈಗೊಳ್ಳಲು ನಿರ್ಧರಿಸಲಾಗಿದೆ, ಮೊದಲ ಹಂತದ ಸ್ವಯಂ ಗಣತಿ ಕಾರ್ಯವನ್ನು ಏ.1ರಿಂದ ಏ.15ರ ವರೆಗೆ ಹಾಗೂ ಮನೆಗಳ ಪಟ್ಟಿ ಮತ್ತು ಮನೆಗಳ ಗಣತಿ ಕಾರ್ಯವನ್ನು ಏ.16ರಿಂದ ಮೇ 15 ರವರೆಗೆ ನಿಗದಿಪಡಿಸಲಾಗಿದೆ ಇದಕ್ಕಾಗಿ ಮೊಬೈಲ್ ಆ್ಯಪ್ ಮತ್ತು ವೆಬ್ ಪೋರ್ಟಲ್ ಮುಖಾಂತರ ಗಣತಿ ಕಾರ್ಯಕೈಗೊಳ್ಳಲಾಗುತ್ತದೆ ಎಂದರು.

ಬಸವೇಶ್ವರ ವೃತ್ತದಿಂದ ಪ್ರಾರಂಭಗೊಂಡ ಜನಗಣತಿ ಜಾಥಾ ಮೇನ ಬಜಾರ, ಹೂಗಾರ ಗಲ್ಲಿ, ಬ್ರಾಹ್ಮಣ ಗಲ್ಲಿ, ಬಡಿಗೇರ ಓಣಿ, ದೇಸಾಯಿ ವಾಡೆ, ಜನತಾ ಪ್ಲಾಟ, ಶಿವಾಜಿ ವೃತ್ತ, ಜ್ಞಾನೇಶ್ವರ ಮಠ, ಸುಭಾಸನಗರ, ವೆಂಕಟಾಪುರ, ಜಾಲಿಕಟ್ಟಿ ವಿವಿಧಡೆ ಸಾರ್ವಜನಿಕರಿಗೆ ಜನಗಣತಿ ಜಾಥಾ ಬೈಕ್ ಹಮ್ಮಿಕೊಂಡಿದ್ದರು.

ಪ್ರಥಮ ದರ್ಜೇ ಸಹಾಯಕ ಸಂತೋಷ ಸಿರಿನಾಳ, ಪಪಂ ಆರೋಗ್ಯ ನಿರೀಕ್ಷಕಿ ಭಾಗ್ಯಾಶ್ರೀ ಪಾಟೀಲ, ಸಿಆರ್‌ಪಿ ಕೃಷ್ಣಾ ಮಾಳೇದ, ರಾಘವೇಂದ್ರ ಮುರಗೋಡ, ಕಾಶಲಿಂಗ ರೊಡ್ಡಪ್ಪವನರ, ವಿಠ್ಠಲ ಗಸ್ತಿ, ಶಂಕರಗೌಡ ಪಾಟೀಲ, ಹೃತ್ತಿಕ ಮೋಮಿನ್, ಶಬ್ಬೀರ ಕರ್ನಾಚಿ, ಅಶೋಕ ಕಾಳಮ್ಮನವರ, ಗ್ಯಾನು ರೊಡ್ಡಪ್ಪನವರ ಕಾವೇರಿ ಪಾಟೀಲ, ಪಟ್ಟಣ ಪಂಚಾಯತ ಸಿಬ್ಬಂದಿ ಜಾಥಾದಲ್ಲಿ ಪಾಲ್ಗೊಂಡಿದ್ದರು.



ಜಿಎಂಕೆ ಕಾಲೇಜಿನ ವಿದ್ಯಾರ್ಥಿಗಳ ಸಾಧನೆ





ಬಾದಾಮಿ: ಪಟ್ಟಣದ ಪ್ರತಿಷ್ಠಿತ ವೀರಪುಲಿಕೇಶಿ ವಿದ್ಯಾವರ್ಧಕ ಸಂಸ್ಥೆಯ, ಜಿ.ಎಂ.ಕಲ್ಯಾಣಶೆಟ್ಟಿ ಪದವಿ ಪೂರ್ವ ಮಹಾವಿದ್ಯಾಲಯದ ದ್ವಿತೀಯ ಪಿಯುಸಿ ವಾರ್ಷಿಕ ಫಲಿತಾಂಶ ಪ್ರಕಟವಾಗಿದ್ದು, ವಿಜ್ಞಾನ ವಿಭಾಗದಲ್ಲಿ ಕುಮಾರಿ ದೀಪಾ ಆರ್. ಹೊಸಮನಿ (95.17%) ಪ್ರಥಮ, ತನ್ಸಿರಾ.ಎಮ್.ಖಾಜಿ (94.97) ದ್ವಿತೀಯ, ಹಾಗೂ ಕಲಾ ವಿಭಾಗದಲ್ಲಿ ಕುಮಾರಿ ಕೌಶಲ್ಯ ಎನ್.ಸಿಂಗನ್ನವರ (94.00%) ಪ್ರಥಮ, ಮಹಾದೇವಿ ಸಣ್ಣಪ್ಪನ್ನವರ(ಶೇ92) ದ್ವಿತೀಯ, ಅಕ್ಷತಾ ಕಾಟನ್ನವರ(90.33) ತೃತೀಯ ಸ್ಥಾನ ಮತ್ತು ವಾಣಿಜ್ಯ ವಿಭಾಗದಲ್ಲಿ ಕುಮಾರಿ ರಾಜೇಶ್ವರಿ.ಬಿ.ಭಾವಿಮನಿ (92.00%) ಪ್ರಥಮ, ಅನಿತಾ ಗೌಡರ(91.33) ದ್ವಿತೀಯ, ದ್ಯಾಮವ್ವ ಮೀಸಿ(89) ತೃತೀಯ ಸ್ಥಾನ ಪಡೆದಿರುತ್ತಾರೆ.

ಒಟ್ಟಾರೆ 33 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, ಪ್ರಥಮ ದರ್ಜೆಯಲ್ಲಿ 180, ದ್ವಿತೀಯ ದರ್ಜೆಯಲ್ಲಿ 95 ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ. ಭುಗೋಳ ವಿಷಯದಲ್ಲಿ 06, ಇತಿಹಾಸ ವಿಷಯದಲ್ಲಿ 03. ಕನ್ನಡ 02. ಗಣಿತ ವಿಷಯದಲ್ಲಿ ಒಬ್ಬ ವಿದ್ಯಾರ್ಥಿಯು 100 ಕ್ಕೆ 100 ಅಂಕಗಳನ್ನು ಪಡೆದಿರುತ್ತಾರೆ. ಉತ್ತಮ ಫಲಿತಾಂಶ ಪಡೆದ ಎಲ್ಲ ವಿದ್ಯಾರ್ಥಿಗಳಿಗೆ ಸಂಸ್ಥೆಯ ಕಾರ್ಯಾಧ್ಯಕ್ಷ ಎ.ಸಿ.ಪಟ್ಟಣದ, ಆಡಳಿತ ಮಂಡಳಿ, ಅಧ್ಯಕ್ಷ ಎ.ಆರ್. ಕಲ್ಯಾಣಶೆಟ್ಟಿಂ, ಕಾರ್ಯನಿರ್ವಾಹಕ ಅಧಿಕಾರಿಗಳು, ಕಾಲೇಜಿನ ಮೇಲ್ವಿಚಾರಣಾ ಸಮಿತಿ ಚೇರಮನ್ನ ಡಿಎಂಪೈಲ್ ಹಾಗೂ ಸದಸ್ಯರು ಹಾಗೂ ಪ್ರಾಚಾರ್ಯ ಪಿ.ಎಸ್. ಜವಳಿ ಹಾಗೂ ಸಿಬ್ಬಂದಿ ಅಭಿನಂದನೆ ಸಲ್ಲಿಸಿದ್ದಾರೆ.

ಕೆಎಲ್‌ಇ ಕಾಲೇಜ್‌ಗೆ ಶೇ.96.11 ಫಲಿತಾಂಶ





ಮಹಾಲಿಂಗಪುರ: ಸ್ಥಳೀಯ ಕೆಎಲ್‌ಇ ಸಂಸ್ಥೆಯ ಎಸ್‌ಸಿಪಿ ಪಪೂ ಕಾಲೇಜಿನ ಪಿಯು ಫಲಿತಾಂಶ ಶೇ.96.11 ರಷ್ಟಾಗಿದೆ. ಕಲಾ ವಿಭಾಗದ ಫಲಿತಾಂಶ ಶೇ. 93.56 ಆಗಿದ್ದು, ಸನ್ಮತಿ ಇಟ್ನಾಳ (ಶೇ.96) ಪ್ರಥಮ, ಸುನಿತಾ ನಡುವಿನಮನಿ (ಶೇ.94.16) ದ್ವಿತೀಯ, ಶ್ರೀರಕ್ಷಾ ಪಾಟೀಲ (ಶೇ.93.83) ತೃತೀಯ ಸ್ಥಾನ ಪಡೆದಿದ್ದಾರೆ.

ವಾಣಿಜ್ಯ ವಿಭಾಗದ ಫಲಿತಾಂಶ ಶೇ.100 ಆಗಿದ್ದು, ಕೌಸರ ಕಡಕೋಳ (ಶೇ.98) ಮತ್ತು ಪ್ರೀತಿ ಭರಮನಿ (ಶೇ.98) ಪ್ರಥಮ, ಮಹಾಲಿಂಗ ಕಿಡದಾಳ (ಶೇ.97.5) ದ್ವಿತೀಯ, ಸತ್ಯಪ್ಪ ಚನ್ನದಾಸರ (ಶೇ.96.66) ತೃತೀಯ ಸ್ಥಾನ ಪಡೆದಿದ್ದಾರೆ. ವಿಜ್ಞಾನ ವಿಭಾಗದ ಫಲಿತಾಂಶ ಶೇ.94.66 ಆಗಿದ್ದು, ಆರತಿ ಕಾಗಿ (ಶೇ.91.66) ಪ್ರಥಮ, ಕಮಲಾ ಡುಮ್ಮನವರ (ಶೇ.91.16) ದ್ವಿತೀಯ, ಅಭಿಷೇಕ ಪಾಟೀಲ (ಶೇ.90.66) ತೃತೀಯ ಸ್ಥಾನ ಪಡೆದಿದ್ದಾರೆ. ಮೂರೂ ವಿಭಾಗ ಸೇರಿ 59 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್‌ನಲ್ಲಿ ಉತ್ತೀರ್ಣರಾಗಿದ್ದು, ಅರ್ಥಶಾಸ್ತ್ರದಲ್ಲಿ 8, ಕನ್ನಡದಲ್ಲಿ 4, ಸಮಾಜಶಾಸ್ತ್ರದಲ್ಲಿ 4, ಗಣಿತ, ಲೆಕ್ಕಶಾಸ್ತ್ರ ವ್ಯವಹಾರ ಅಧ್ಯಯನದಲ್ಲಿ ತಲಾ ಓರ್ವ ವಿದ್ಯಾರ್ಥಿಗಳು ನೂರಕ್ಕೆ ನೂರು ಅಂಕ ಪಡೆದಿದ್ದಾರೆ ಎಂದು ಪ್ರಾಚಾರ್ಯ ಎಲ್.ಬಿ.ತುಪ್ಪದ ತಿಳಿಸಿದ್ದಾರೆ.

ಪುಷ್ಪಾತಾಯಿ ಕಾಲೇಜಿಗೆ ಉತ್ತಮ ಫಲಿತಾಂಶ

ಜಮಖಂಡಿ: ತಾಲೂಕಿನ ಸಿದ್ದಾಪುರ ಗ್ರಾಮದ ಪ್ರಭುಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪುಷ್ಪಾತಾಯಿ ವಿಜ್ಞಾನ ಮತ್ತು ವಾಣಿಜ್ಯ ಪದವಿ ಪೂರ್ವ ಮಹಾವಿದ್ಯಾಲಯದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ-1ರಲ್ಲಿ ಕಾಲೇಜಿನ ವಿದ್ಯಾರ್ಥಿಗಳು ಉತ್ತಮ ಸಾಧನೆಗೈದಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಶೇ.95.56ರಷ್ಟು ಫಲಿತಾಂಶ ಬಂದಿದ್ದು, ಅನಿಲ ಸುಂಕದ, ಭಾಗ್ಯಶ್ರೀ ಬಿಲ್ಲನ್ನವರ ಪ್ರಥಮ ಸ್ಥಾನ 578/600 (ಶೇ.96.33), ಸಂಜನಾ ರಾಮಗೊಂಡ ದ್ವಿತೀಯ ಸ್ಥಾನ 572/600 (ಶೇ.95.33), ಅಮೃತಾ ಚಿಂಚಲಿ 569/600 (ಶೇ.94.83) ತೃತಿಯ ಸ್ಥಾನ ಪಡೆದು ಉತ್ತಮ ಸಾಧನೆ ಮಾಡಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಶೇ.94.59ರಷ್ಟು ಫಲಿತಾಂಶ ಬಂದಿದ್ದು, ಸುನಂದಾ ಗುಡಿ ಪ್ರಥಮ ಸ್ಥಾನ 587/600 (ಶೇ.97.83), ಸಂಗೀತಾ ಕಡ್ಲಿ 586/600 (ಶೇ.97.67)ದ್ವಿತೀಯ ಸ್ಥಾನ. ಸ್ನೇಹಾ ಸಿಂಗಾಡಿ 580/600 (ಶೇ.96.67) ಅಂಕ ಪಡೆದು ತೃತಿಯ ಸ್ಥಾನಗಳಿಸಿ ಉತ್ತಮ ಸಾಧನೆ ಮಾಡಿದ್ದಾರೆ.

ಕನ್ನಡದಲ್ಲಿ 6, ಅರ್ಥಶಾಸ್ತ್ರದಲ್ಲಿ 12, ರಾಜ್ಯಶಾಸ್ತ್ರದಲ್ಲಿ 1, ಲೆಕ್ಕಶಾಸ್ತ್ರದಲ್ಲಿ 4, ವ್ಯವಹಾರ ಅಧ್ಯಯನ ವಿಷಯದಲ್ಲಿ 4 ವಿದ್ಯಾರ್ಥಿಗಳು 100 ಕ್ಕೆ 100 ಅಂಕ ಪಡೆದಿದ್ದಾರೆ.

ಕಾಲೇಜಿನ ಒಟ್ಟು 94.87ರಷ್ಟು ಫಲಿತಾಂಶ ಬಂದಿದೆ. ವಿದ್ಯಾರ್ಥಿಗಳ ಈ ಅತ್ಯುನ್ನತ ಸಾಧನೆಗೆ ಸಂಸ್ಥೆಯ ಅಧ್ಯಕ್ಷ ಶಾಸಕರಾದ ನಾಡೋಜ ಜಗದೀಶ ಗುಡಗುಂಟಿ, ಕಾರ್ಯದರ್ಶಿ ಧರ್ಮಲಿಂಗಯ್ಯಾ ಗುಡಗುಂಟಿ, ನಿರ್ದೇಶಕ ಪಾರ್ವತಿ ಧರ್ಮಲಿಂಗಯ್ಯಾ ಗುಡಗುಂಟಿ, ಡಾ. ಎಸ್. ಎಸ್. ಹೂಲಿ, ಸಂಸ್ಥೆಯ ಆಡಳಿತಾಧಿಕಾರಿ ಹಾಗೂ ಕಾಲೇಜಿನ ಪ್ರಾಚಾರ್ಯ ಪ್ರೊ.ವೈ.ಬಿ.ಹೊಟ್ಟಿ, ಹಾಗೂ ಸಿಬ್ಬಂದಿ ಹಾಗೂ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರು ಅಭಿನಂದನೆ ಸಲ್ಲಿಸಿದ್ದಾರೆ.





ವಿದ್ಯಾರ್ಥಿಗಳ ಉತ್ತಮ ಸಾಧನೆ

ಕಮತಗಿ: ಪಟ್ಟಣದ ಹುಚ್ಚೇಶ್ವರ ವಿದ್ಯಾವರ್ಧಕ ಸಂಘದ, ಹುಚ್ಚೇಶ್ವರ ಸಂಯುಕ್ತ ಕಲಾ ಹಾಗೂ ವಾಣಿಜ್ಯ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು 2025-2026ನೇ ಸಾಲಿನಲ್ಲಿ ನಡೆದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆಯುವುದರ ಮುಖಾಂತರ ಉತ್ತಮ ಸಾಧನೆಗೈದಿದ್ದಾರೆ. ಕಲಾ ವಿಭಾಗದಲ್ಲಿ ಪರೀಕ್ಷೆ ಬರೆದ ವಿದ್ಯಾರ್ಥಿಗಳು 71 ಜನ ಪಾಸಾದ ವಿದ್ಯಾರ್ಥಿಗಳು

45ಶೇಕಡಾ63.38% ಹಾಗೂ ವಾಣಿಜ್ಯ ವಿಭಾಗ ಪರೀಕ್ಷೆ ಬರೆದ ವಿದ್ಯಾರ್ಥಿಗಳು 41ಜನ ಅದರಲ್ಲಿ ಪಾಸಾದವರು ವಿದ್ಯಾರ್ಥಿಗಳು 39 ಜನ, ಶೇಕಡಾ 95.12%ವಿದ್ಯಾರ್ಥಿಗಳು ಪಾಸಾಗಿದ್ದಾರೆ. ಶೃತಿ ಮಲಕಪ್ಪ ದಿವಟಗಿ 571(95.16%), ಐಶ್ವರ್ಯ ಮಂಜುನಾಥ ವಡವಡಗಿ 568(94.66%), ರಾಧಿಕಾ ಬೀಳಗಿ565(94.16%) ಹಾಗೂ ಕನ್ನಡ ವಿಷಯದಲ್ಲಿ 100ಕ್ಕೆ 100 ಅಂಕಪಡೆದ ವಿದ್ಯಾರ್ಥಿಗಳು ಶೃತಿ ದಿವಟಗಿ, ಸ್ನೇಹಾ ಕುರವಿನಶೆಟ್ಟಿ, ಶ್ರೀದೇವಿ ಕಾಳಗಿ ಮತ್ತು ಇತಿಹಾಸ ವಿಷಯದಲ್ಲಿ 100ಕ್ಕೆ 100 ಅಂಕಪಡೆದ ವಿದ್ಯಾರ್ಥಿನಿ ರಾಧಿಕಾ ಬೀಳಗಿ, ಈ ಎಲ್ಲ ಉತ್ತಮವಾದ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಅಧ್ಯಕ್ಷರು, ಆಡಳಿತ ಮಂಡಳಿ ಸರ್ವ ಸದಸ್ಯರು, ಆಡಳಿತಾಧಿಕಾರಿಗಳು ಮತ್ತು ಪ್ರಾಚಾರ್ಯರು, ಸಿಬ್ಬಂದಿ ಅಭಿನಂದನೆ ಸಲ್ಲಿಸಿದ್ದಾರೆ.



ಹಣ್ಣು ಬೆಳೆಗಾರರ ಕಾಲೇಜು: ಶೇ 92ರಷ್ಟು ಫಲಿತಾಂಶ

ಕಲಾದಗಿ: ಗ್ರಾಮದ ಹಣ್ಣು ಬೆಳೆಗಾರರ ಕಲಾ ಮತ್ತು ವಾಣಿಜ್ಯ ಪದವಿ ಪೂರ್ವ ಕಾಲೇಜು 2025-26ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಅತ್ಯುತ್ತಮ ಫಲಿತಾಂಶ ಸಾಧನೆ ಮಾಡಿದ್ದು ಕಲಾ ವಿಭಾಗದಲ್ಲಿ ಶೇ 95 ರಷ್ಟು ಫಲಿತಾಂಶ ಮಾಡಿದೆ. ವಾಣಿಜ್ಯ ವಿಭಾಗದಲ್ಲಿ ಶೇ 80ರಷ್ಟು ಸಾಧನೆ ಮಾಡಿ ಒಟ್ಟು ಕಾಲೇಜಿನ ಫಲಿತಾಂಶ ಶೇ92 ಆಗಿದೆ. ವಾಣಿಜ್ಯ ವಿಭಾಗದ ಕಾಲೇಜು ವಿದ್ಯಾರ್ಥಿನಿ ತಂಜಿಯಾ ಶಬ್ಬೀರ ಜತ್ತಿ ಒಟ್ಟು 546 ಅಂಕ ಪಡೆದು ಶೇ 91% ಕಲಾ ವಿಭಾಗದ ಕಾಲೇಜು ವಿದ್ಯಾರ್ಥಿನಿ ಅಕ್ಷತಾ ಶ್ರೀಶೈಲ್ ಪೂಜಾರ 559 ಅಂಕ ಪಡೆದು ಶೇ 93.16% ಪ್ರಥಮ ಸ್ಥಾನ ಹಾಗೂ ಸುಧಾ ನಡುವಿನಮನಿ 530 ಅಂಕ ಪಡೆದು 88.33% ಫಲಿತಾಂಶ ಮಾಡಿದ್ದಾರೆ ಎಂದು ಕಾಲೇಜು ಪ್ರಾಚಾರ್ಯ ಎಸ್.ಬಿ.ಬಳವಾಟ ತಿಳಿಸಿದ್ದಾರೆ.



ಭಾಗ್ಯಶ್ರೀ ನಾಯ್ಕರ ಶೇ 91.83 ಅಂಕ

ಬಾದಾಮಿ: ನಗರದ ಭಾಗ್ಯಶ್ರೀ ಈರಣ್ಣ ನಾಯ್ಕರ ವಿದ್ಯಾರ್ಥಿನಿ ಪ್ರಸಕ್ತ ವರ್ಷದ ದ್ವಿತೀಯ ವರ್ಷದ ಪಿಯುಸಿ ಯನ್ನು ಮಂಗಳೂರಿನ ಬೆಳ್ತಂಗಡಿ ಎಕ್ಸೆಲ್ ಪಿಯು ಕಾಲೇಜಿನಲ್ಲಿ ಅಧ್ಯಯನ ಮಾಡಿ ಪರೀಕ್ಷೆಯಲ್ಲಿ ವಿಜ್ಞಾನ ವಿಭಾಗದಲ್ಲಿ 600ಕ್ಕೆ 551 ಅಂಕ ಪಡೆದು ಶೇ 91.83 ರಷ್ಟು ಪಡೆದು ಉತ್ತಮ ಸಾಧನೆ ಮಾಡಿದ್ದಾಳೆ.



ಮಲಮ್ಮಗೆ 558 ಅಂಕ

ಬೀಳಗಿ: ತಾಲೂಕಿನ ಗಿರಿಸಾಗರ ಗ್ರಾಮದ ಮಲ್ಲಮ್ಮ ಹನಮಂತ ಹೂಗಾರ ವಿಜಯಪುರದ ಎಕ್ಸಲೆಂಟ್ ಪಿಯು ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ವಿಜ್ಞಾನ ವಿಭಾಗದಲ್ಲಿ 600ಕ್ಕೆ 558 ಅಂಕಗಳನ್ನು ಪಡೆದು ಉತ್ತಮ ಸಾಧನೆ ಮಾಡಿದ್ದಾಳೆ. ಕೊಪ್ಪ (ಎಸ್.ಕೆ) ಗ್ರಾಮದ ಸಾಗರ ವೆಂಕಟೇಶ ಪಾಟೀಲ ಅವರು ಮೂಡುಬಿದಿರೆಯ ಆಳ್ವಾಸ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ವಿಜ್ಞಾನ ವಿಭಾಗದಲ್ಲಿ 600ಕ್ಕೆ 543 ಅಂಕಗಳನ್ನು ಪಡೆದು ಉತ್ತಮ ಸಾಧನೆ ಮಾಡಿದ್ದಾನೆ. ವಿದ್ಯಾರ್ಥಿಗಳಿಗೆ ಆಯಾ ಗ್ರಾಮಸ್ಥರು ಶುಭ ಕೋರಿದ್ದಾರೆ.



ಕಿರುಸುದ್ದಿ

ರೈತನ ಮಗಳ ಸಾಧನೆ



ವಿಜಯಪುರ: ತಾಲೂಕಿನ ಕವಲಗಿ ಗ್ರಾಮದ ಪ್ರಗತಿಪರ ರೈತ ಮಲ್ಲಿಕಾರ್ಜುನ ಬಗಲಿ ಅವರ ಪುತ್ರಿ ವಿಜಯಪುರ ನೊಬೆಲ್ ಸೈನ್ಸ ಅಕಾಡೆಮಿ ಕಾಲೇಜಿನ ವಿದ್ಯಾರ್ಥಿನಿ ಶ್ರೇಯಾ ಬಗಲಿ ಪಿಯು ಸಿ ವಿಜ್ಞಾನ ವಿಭಾಗದಲ್ಲಿ 600ಕ್ಕೆ 577 ಅಂಕ ಪಡೆದು ಅಮೋಘ ಸಾಧನೆ ಮಾಡಿದ್ದಾರೆ. ವಿದ್ಯಾರ್ಥಿನಿಯ ಸಾಧನೆಗೆ ಶಾಲೆಯ ಪ್ರಾಚಾರ್ಯರು ಶಿಕ್ಷಕ, ಸಿಬ್ಬಂದಿ, ಗ್ರಾಮದ ಗ್ರಾಮಸ್ಥರು ಅಭಿನಂದಿಸಿದ್ದಾರೆ.

ಸುಮಂತಗೆ ಶೇ. 97.67ರಷ್ಟು ಅಂಕ



ಬಸವನಬಾಗೇವಾಡಿ: ಗೊಳಸಂಗಿ ವರದಿಗಾರ ಡಿ.ಬಿ.ಕುಪ್ಪಸ್ತ (ಡಿಬಿಕೆಜಿ) ಇವರ ಸುಪುತ್ರ ಸುಮಂತ ಕುಪ್ಪಸ್ತ ಪಿಯು ವಿಜ್ಞಾನ ಪರೀಕ್ಷೆಯಲ್ಲಿ ಶೇ.97.67ರಷ್ಟು ಅಂಕ ಗಳಿಸಿ ತಾನು ಕಲಿತ ಮುದ್ದೇಬಿಹಾಳ ತಾಲೂಕಿನ ನಾಗರಬೆಟ್ಟದ ಆಕ್ಸ್‌ಫರ್ಡ್ ಮಠ್ ಸಮೂಹ ಸಂಸ್ಥೆಯ ಎಕ್ಸ್‌ಫರ್ಟ್ ಪಿಯು ಸೈನ್ಸ್ ಕಾಲೇಜಿಗೆ ಪ್ರಥಮ ಸ್ಥಾನದಲ್ಲಿ ತೇರ್ಗಡೆಯಾಗಿದ್ದಾನೆ. ಭೌತಶಾಸ್ತ್ರ ಮತ್ತು ಗಣಿತದಲ್ಲಿ ಶೇ.100ರಷ್ಟು ಅಂಕ ಗಳಿಸಿ ಕನ್ನಡ ಮತ್ತು ರಸಾಯನಶಾಸ್ತ್ರದಲ್ಲಿ ಶೇ.98, ಜೀವಶಾಸ್ತ್ರದಲ್ಲಿ ಶೇ.96 ಇಂಗ್ಲೀಷದಲ್ಲಿ 94 ಸೇರಿ ಶೇ 97.67ರಷ್ಟು ಅಂಕ ಗಳಿಸಿದ್ದಾನೆ.

ಏ.13ರಿಂದ ಆರೋಗ್ಯ ತಪಾಸಣಾ, ಚಿಕಿತ್ಸಾ ಶಿಬಿರ

ವಿಜಯಪುರ: ನಗರದ ಬಿಎಲ್‌ಡಿಇ ಸಂಸ್ಥೆಯ ಎವಿಎಸ್ ಆಯುರ್ವೇದ ಮಹಾವಿದ್ಯಾಲಯ, ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರದ ಕಾಯಚಿಕಿತ್ಸಾ ವಿಭಾಗದ ವತಿಯಿಂದ ಸರ್ವೈಕಲ್ ಸ್ಪಾಂಡೊಲೈಸಿಸ್ ಲಕ್ಷಣಗಳು, ಕುತ್ತಿಗೆಯ ಹಿಂಭಾಗ ಬಿಗಿಯುವುದು, ಕುತ್ತಿಗೆ ನೋವು, ಕುತ್ತಿಗೆಯನ್ನು ತಿರಿಗಿಸಲು ಕಷ್ಟವಾಗುವುದು, ಭುಜದಿಂದ ಕೈಗಳಲ್ಲಿ ನೋವು ಹರಡುವ ಸಮಸ್ಯೆ ಕುರಿತು ಉಚಿತ ತಪಾಸಣೆ ಮತ್ತು ಚಿಕಿತ್ಸೆ ಶಿಬಿರ ಏ.13ರಿಂದ ಏ.18ರ ವರೆಗೆ ನಡೆಯಲಿದೆ. ಬಿಎಲ್‌ಡಿಇ ಆಯುರ್ವೇದ ಆಸ್ಪತ್ರೆಯಲ್ಲಿ ಸೋಮವಾರದಿಂದ ಶನಿವಾರದಂದು ಆರು ದಿನಗಳ ಕಾಲ ನಡೆಯಲಿದೆ. ಮೇಲಿನ ಸಮಸ್ಯೆಯನ್ನು ಎದುರಿಸುತ್ತಿರುವ ಸಾರ್ವಜನಿಕರು (30 ರಿಂದ 60 ವರ್ಷದವರಿಗೆ) ಈ ಶಿಬಿರದ ಸದುಪಯೋಗ ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ (ಮೊ. 9513397413) ಸಂಪರ್ಕಿಸಬಹುದಾಗಿದೆ ಎಂದು ಬಿಎಲ್‌ಡಿಇ ಸಂಸ್ಥೆಯ ಆಯುರ್ವೇದ ಆಸ್ಪತ್ರೆಯ ಆಡಳಿತಾಧಿಕಾರಿ ಡಾ.ಸಂಜಯ ಕಡ್ಲಿಮಟ್ಟಿ ತಿಳಿಸಿದ್ದಾರೆ.

ಅಧ್ಯಕ್ಷರಾಗಿ ಅಶೋಕ ಮಣಿ ಅವಿರೋಧ ಆಯ್ಕೆ



ಮುದ್ದೇಬಿಹಾಳ: ಪಟ್ಟಣದ ಬಸವೇಶ್ವರ ವೃತ್ತದ ಹತ್ತಿರ ಇರುವ ರಾಜ್ಯಸರಕಾರಿ ನಿವೃತ್ತ ನೌಕರರ ಸಂಘದ ಕಾರ್ಯಾಲಯದಲ್ಲಿ,ಇಂದು ನಡೆದ ಸದಸ್ಯರ ಸಭೆಯಲ್ಲಿಕರ್ನಾಟಕ ರಾಜ್ಯ ಸರಕಾರಿ ನಿವೃತ್ತ ನೌಕರರ ಸಂಘ,ತಾಲೂಕ ಘಟಕ ನೂತನ ಅಧ್ಯಕ್ಷರಾಗಿ 5 ವರ್ಷಗಳ ಅವಧಿಗೆ, ಬಸರಕೋಡದ ಪವಾಡ ಬಸವೇಶ್ವರ ಪ್ರೌಢಶಾಲೆಯ ನಿವೃತ್ತ ಮುಖ್ಯೋಪಾಧ್ಯಾಯ ಹಾಗೂ ಹಿರಿಯ ಸಾಹಿತಿ ಅಶೋಕ ಪಿ.ಮಣಿ ಅವಿರೋಧವಾಗಿ ಆಯ್ಕೆಯಾದರು. ಪವಾಡ ಬಸವೇಶ್ವರ ಸಂಸ್ಥೆಯ ಅಧ್ಯಕ್ಷ ಕೆ.ವಾಯ್ .ಬಿರಾದಾರ,ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕಾಮರಾಜ ಬಿರಾದಾರ,ಬಸವ ಮಹಾಮನೆಯ ಅಧ್ಯಕ್ಷ ಬಿ.ಪ್ಹಿ. ಕೋರಿ,ವಚನ ಸಾಹಿತ್ಯ ಹಾಗೂ ಸಾಂಸ್ಕೃತಿಕ ಪರಿಷತ್ತಿನ ಜಿಲ್ಲಾ ಅಧ್ಯಕ್ಷ ಅಬ್ದುಲ್ ರೆಹೆಮಾನ್ ಬಿದರಕುಂದಿ, ಪದ್ಮಾವತಿ ದೇವಸ್ಥಾನ ಟ್ರಸ್ಟಿನ ಕಾರ್ಯದರ್ಶಿ ಮಾಣಿಕಚಂದ್ ದಂಡಾವತಿ,ಕೋಶಾಧ್ಯಕ್ಷ ಬಾಹುಬಲಿ ಗೋಗಿ,ಹಿರಿಯ ಸಾಹಿತಿ ಪ್ರೊ.ಬಿ.ಎಂ.ಹಿರೇಮಠ ಸೇರಿದಂತೆ ಅನೇಕ ಸಂಘಸಂಸ್ಥೆಗಳ ಪ್ರತಿನಿಧಿಗಳು ಅಭಿನಂದಿಸಿದ್ದಾರೆ.

ನಿಧನಸುದ್ದಿ

ಶಿವಪ್ಪ ಕಸಬೇಗೌಡರ



ನಾಲತವಾಡ: ಸ್ಥಳೀಯ ವಾರ್ಡ್ ನಂಬರ್-2 ನಿವಾಸಿ ಶಿವಪ್ಪ ಮಲ್ಲಪ ಕಸಬೇಗೌಡರ(71) ನಿಧನರಾದರು. ಮೃತರಿಗೆ ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಅಪಾರ ಬಂಧು ಬಳಗ ಇದ್ದಾರೆ.



ಸಿಂದಗಿ: ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಇತ್ತಿಚಗೆ ನಡೆದ ರೈತರ ಮೋಟರ್ ಪಂಪ್‌ಸೆಟ್‌ಗಳ ಕಳ್ಳತನದ ಪ್ರಕರಣ ಭೇದಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ ಹಿನ್ನೆಲೆಯಲ್ಲಿ ಸಿಪಿಸಿ ವೈ.ಕೆ.ಉಕಮನಾಳ ಅವರಿಗೆ ವಿಜಯಪುರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೊಡ ಮಾಡುವ ಪ್ರಸಂಶನಾ ಪತ್ರವನ್ನು ಇಂಡಿ ಡಿವೈಎಸ್ಪಿ ಸದಾಶಿವ ಕಟ್ಟಿಮನಿ ನೀಡಿ ಗೌರವಿಸಿದರು.

ಪುಸ್ತಕ ಮೇಳದ ಸದುಪಯೋಗ ಪಡೆದುಕೊಳ್ಳಿ

ವಿಜಯಪುರ: ಬುದ್ಧ ಬಸವ ಅಂಬೇಡ್ಕರ್ ಜಯಂತಿ ಪ್ರಯುಕ್ತ ಪುಸ್ತಕ ಮೇಳದ ಮೂಲಕ ಹಮ್ಮಿಕೊಂಡಿರುವ ಪುಸ್ತಕ ಮೇಳ ಸಾಹಿತ್ಯ ಮತ್ತು ವೈಚಾರಿಕ ಕ್ಷೇತ್ರದ ಮಾದರಿಯಾಗಿದೆ. ರಾಜ್ಯದ ವಿವಿಧ ಭಾಗಗಳಿಂದ ವಿವಿಧ ಪ್ರಕಾಶನ ಸಂಸ್ಥೆಗಳು ಲೇಖಕರು ಪುಸ್ತಕ ಮೇಳದಲ್ಲಿ ಭಾಗವಹಿಸಿದ್ದು ಸಾರ್ವಜನಿಕರು ಮೇಳದಲ್ಲಿ ಭಾಗವಹಿಸಿ ಅದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಬಾಗಲಕೋಟೆ ವಿಶ್ವವಿದ್ಯಾಲಯದ ಕುಲಸಚಿವ ಸೋಮಲಿಂಗ ಗೆಣ್ಣೂರ ಹೇಳಿದರು. ನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಮೇ ಸಾಹಿತ್ಯ ಮೇಳ ವಿಜಯಪುರ ಬಳಗ ದಲಿತ ಮತ್ತು ಪ್ರಗತಿಪರ ಸಂಘಟನೆಗಳ ಆಶ್ರಯದಲ್ಲಿ ಏಪ್ರಿಲ್ 10ರಿಂದ 14ರ ವರೆಗೆ 5ದಿನಗಳ ಕಾಲ ಹಮ್ಮಿಕೊಂಡಿರುವ ಬಿಜಾಪುರ ಬುದ್ಧ, ಬಸವ, ಬಾಬಾಸಾಹೇಬ ಅಂಬೇಡ್ಕರ್ ಪುಸ್ತಕ ಮೇಳದ ನಿಮಿತ್ಯ ಅಂಬೇಡ್ಕರ್ ವೃತ್ತದಿಂದ ಪುಸ್ತಕ ಮೇಳದ ವೇದಿಕೆಯ ವರೆಗೆ ಹಮ್ಮಿಕೊಂಡ ಸಾಹಿತಿಗಳ ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದರು. ಎಸ್.ಎಂ.ಪಾಟೀಲ ಗಣಿಹಾರ, ಶಶಿಕಾಂತ ಹೊನವಾಡಕರ, ಅಪ್ಪಾಸಾಹೇಬ ಯರನಾಳ,ಸುರೇಶ ಜೀಬಿ, ಲಕ್ಷ್ಮಣ ಹಂದ್ರಾಳ, ಸೋಮು ರಣದೇವಿ, ಸಂಗಮೇಶ ಸಗರ, ಬಸವರಾಜ ಸೂಳಿಬಾವಿ, ಅನಿಲ ಇಕ್ಕಡೆ, ಸುರೇಶ ಬಿಜಾಪುರ, ವೈ ಎಸ್ ಗುಣಕಿ, ಚೆನ್ನು ಕಟ್ಟಿಮನಿ, ಮೀನಾಕ್ಷಿ ಸಿಂಗೆ ನೀಲಾಂಬಿಕಾ ಬಿರಾದಾರ, ರೇಣುಕಾ ಕೋಟ್ಯಾಳ, ಬೋಗೇಶ ಸೋಲಾಪುರ, ಸಂಘರ್ಷ ಹೊಸಮನಿ, ನಾಗರಾಜ ಲಂಬು, ಲಾಯಪ್ಪ ಇಂಗಳೆ ಶರಣು ಕಿರಣಗಿ ಸೇರಿದಂತೆ ನೂರಾರು ಜನ ಉಪಸ್ಥಿತರಿದ್ದರು.



ವಿಜಯಪುರ: ನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಮೇ ಸಾಹಿತ್ಯ ಮೇಳ ವಿಜಯಪುರ ಬಳಗ ದಲಿತ ಮತ್ತು ಪ್ರಗತಿಪರ ಸಂಘಟನೆಗಳ ಆಶ್ರಯದಲ್ಲಿ ಏಪ್ರಿಲ್ 10ರಿಂದ 14ರ ವರೆಗೆ 5 ದಿನಗಳ ಕಾಲ ಹಮ್ಮಿಕೊಂಡಿರುವ ಬಿಜಾಪುರ ಬುದ್ಧ, ಬಸವ, ಬಾಬಾಸಾಹೇಬ ಅಂಬೇಡ್ಕರ್ ಪುಸ್ತಕ ಮೇಳದ ನಿಮಿತ್ತ ಅಂಬೇಡ್ಕರ್ ವೃತ್ತದಿಂದ ಪುಸ್ತಕ ಮೇಳದ ವೇದಿಕೆಯ ವರೆಗೆ ಹಮ್ಮಿಕೊಂಡ ಸಾಹಿತಿಗಳ ಜಾಥಾಕ್ಕೆ ಬಾಗಲಕೋಟೆ ವಿಶ್ವವಿದ್ಯಾಲಯದ ಕುಲಸಚಿವ ಸೋಮಲಿಂಗ ಗೆಣ್ಣೂರ ಚಾಲನೆ ನೀಡಿದರು.

ಬೇಸಿಗೆ ನೀರು ನಿರ್ವಹಣೆಯಲ್ಲಿ ನಿರ್ಲಕ್ಷ್ಯ ಸಲ್ಲ
ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ: ಎಂಬಿಪಾ

ವಿಜಯಪುರ: ಜಿಲ್ಲೆಯಲ್ಲಿ ಸದ್ಯಕ್ಕೆ ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಉಲ್ಬಣಿಸಿಲ್ಲ, ಇಂಡಿ ಹಾಗೂ ಚಡಚಣ ಭಾಗದಲ್ಲಿ ನೀರಿನ ಸಮಸ್ಯೆ ತಲೆದೋರಬಹುದು. ಗ್ರಾಪಂ ಮಟ್ಟದಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ನೋಡಿಕೊಳ್ಳಬೇಕು. ಈ ವಿಷಯದಲ್ಲಿ ನಿರ್ಲಕ್ಷ್ಯ ವಹಿಸುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಡಾ.ಎಂ.ಬಿ.ಪಾಟೀಲ ಅಧಿಕಾರಿಗಳಿಗೆ ಸೂಚಿಸಿದರು.



ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಜಿಲ್ಲೆಯ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿನ ಕುಡಿಯುವ ನೀರಿನ ನಿರ್ವಹಣೆ ಕುರಿತ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಬೇಸಿಗೆ ಸಂದರ್ಭದಲ್ಲಿ ಅಧಿಕಾರಿಗಳು ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸಬೇಕು. ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಸಮಸ್ಯೆಗಳಿದ್ದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳು ತಾಲೂಕು ಕೇಂದ್ರಗಳಿಗೆ ತಕ್ಷಣ ತೆರಳಿ ಸಭೆ ನಡೆಸಿ ನಿಮ್ಮ ನಿಮ್ಮ ಹಂತದಲ್ಲಿ ಸಮಸ್ಯೆ ಬಗೆಹರಿಸಬೇಕು ಎಂದು ಸಚಿವರು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಯ ಇಂಡಿ ಸೇರಿದಂತೆ ಎಲ್ಲೆಲ್ಲಿ ನೀರಿನ ಸಮಸ್ಯೆ ಉದ್ಭವಿಸಿದಲ್ಲಿ ತಕ್ಷಣವೇ ಪರ್ಯಾಯ ವ್ಯವಸ್ಥೆಗಳನ್ನು ಕೈಗೆತ್ತಿಕೊಂಡು ಯಾವುದೇ ನೀರಿನ ಸಮಸ್ಯೆಯಾಗದಂತೆ ಅಧಿಕಾರಿಗಳು ನೋಡಿಕೊಳ್ಳುವುದರತ್ತ ನಿಗಾ ವಹಿಸಬೇಕು. ಸಾಧ್ಯವಾದರೆ ಬೋರವೆಲ್ ನಂತಹ ಜಲಮೂಲಗಳನ್ನು ಗುರುತಿಸಿಟ್ಟುಕೊಳ್ಳಬೇಕು. ಬೇಸಿಗೆ ಸಂದರ್ಭದಲ್ಲಿ ಜನ-ಜಾನುವಾರುಗಳಿಗೆ ಯಾವುದೇ ಕಾರಣಕ್ಕೂ ನೀರಿನ ಸಮಸ್ಯೆಯಾಗದಂತೆ ನೋಡಿಕೊಳ್ಳಲು ಜಿಲ್ಲಾಡಳಿತ ಸದಾ ಸನ್ನದ್ಧವಾಗಿರಬೇಕು ಎಂದರು.

ಜಿಲ್ಲಾಧಿಕಾರಿ ಡಾ.ಆನಂದ ಕೆ. ಮಾತನಾಡಿ, ಜಿಲ್ಲೆಯ ಆಲಮಟ್ಟಿ ಹಾಗೂ ನಾರಾಯಣಪುರ ಜಲಾಶಯದಲ್ಲಿ ಕಳೆದ ವರ್ಷ ಇದ್ದ ನೀರಿನ ಲಭ್ಯತೆ ಎರಡೂ ಜಲಾಶಯದಲ್ಲಿ ಇದೆ ಎಂದು ಮಾಹಿತಿ ನೀಡುತ್ತಿದ್ದಂತೆಯೇ ಮಧ್ಯೆ ಪ್ರವೇಶಿಸಿದ ಜಿಲ್ಲಾ ಉಸ್ತುವಾರಿ ಸಚಿವರು, ಆಗಸ್ಟ್ ತಿಂಗಳವರೆಗೆ ಕುಡಿಯುವ ನೀರಿನ ಲಭ್ಯತೆಯನ್ನು ಬಳಸಿಕೊಳ್ಳಬೇಕು ಎಂದರು. ಗ್ರಾಮೀಣ ಪ್ರದೇಶ 40 ಬಹುಹಳ್ಳಿ ಕುಡಿಯುವ ನೀರಿನ (ಎಂವಿಎಸ್) ಯೋಜನೆಗಳು ಸಮರ್ಪಕವಾಗಿ ನಡೆಯುತ್ತಿವೆ ಎಂದು ಜಿಲ್ಲಾಧಿಕಾರಿ ವಿವರಿಸಿದರು.

ಮುದ್ದೇಬಿಹಾಳ ಶಾಸಕ ಸಿ.ಎಸ್.ನಾಡಗೌಡ ಮಾತನಾಡಿ, ಜಲಾಶಯದ ಸ್ಟೋರೇಜ್ ನೋಡಿಕೊಂಡು ನೀರಿನ ಸಮರ್ಪಕ ನಿರ್ವಹಣೆ ಮಾಡಬೇಕು ಎಂದು ಸಲಹೆ ಮಾಡಿದರು.

ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮಾತನಾಡಿ, ನಗರದ ಹಳೆಯ ಬೋರವೆಲ್ ಗಳು ಚಾಲ್ತಿಯಲ್ಲಿರುವಂತೆ ನೋಡಿಕೊಳ್ಳಬೇಕು ಎಂದು ಸಭೆಯಲ್ಲಿ ಅಧಿಕಾರಿಗಳಿಗೆ ಸಲಹೆ ಮಾಡಿದರು. ಯಾವ ಯಾವ ವಾರ್ಡಿಗೆ ಎಷ್ಟು ನೀರು ಎಂಬುದಾಗಿ ಶೆಡ್ಯೂಲ್ ಮಾಡಿ ಸಮರ್ಪಕವಾಗಿ ನೀರು ಪೂರೈಸಬೇಕು ಎಂದರು.

ಸಭೆಯಲ್ಲಿ ಸಂಸದರಾದ ರಮೇಶ ಜಿಗಜಿಣಗಿ, ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ, ಅಪ್ಪಾಜಿ ನಾಡಗೌಡ, ವಿಠ್ಠಲ ಕಟಕದೊಂಡ, ರಾಜುಗೌಡ ಪಾಟೀಲ, ಅಶೋಕ ಮನಗೂಳಿ, ಮೇಯರ್ ಮಡಿವಾಳಪ್ಪ ಕರಡಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಿಷಿ ಆನಂದ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಇದ್ದರು.

ಎಸ್.ಕೆ ಕಾಲೇಜಿಗೆ ಶೇ.97.67ರಷ್ಟು ಫಲಿತಾಂಶ

ತಾಳಿಕೋಟೆ: ಸ್ಥಳೀಯ ವೀರಶೈವ ವಿದ್ಯಾವರ್ಧಕ ಸಂಘದ ಅಡಿಯಲ್ಲಿ ನಡೆಯುತ್ತಿರುವ ಅನುದಾನಿತ ಎಸ್.ಕೆ ಪದವಿ ಪೂರ್ವ ಕಾಲೇಜು ತಾಳಿಕೋಟೆಯ 2026ರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ-1ಕ್ಕೆ ಹಾಜರಾದ ಒಟ್ಟು ವಿದ್ಯಾರ್ಥಿಗಳು 301 ತೇರ್ಗಡೆಯಾದ ವಿದ್ಯಾರ್ಥಿಗಳು 293 ಒಟ್ಟು ಫಲಿತಾಂಶ ಶೇ 97.67ರಷ್ಟು ಆಗಿರುತ್ತದೆ. ಉನ್ನತ ಶ್ರೇಣಿಯಲ್ಲಿ 86, ಪ್ರಥಮ ದರ್ಜೆಯಲ್ಲಿ 173, ದ್ವಿತೀಯ 27 ತೃತೀಯ 7 ವಿದ್ಯಾರ್ಥಿಗಳು ಪಾಸಾಗಿದ್ದಾರೆ. ಕಲಾ ವಿಭಾಗದಲ್ಲಿ ಪ್ರಥಮ ಸ್ಥಾನ ಅನೀಲಕುಮಾರ ನಾಗೂರಮೇಟಿ (584 , 97.30%), ದ್ವಿತೀಯ ಸ್ಥಾನ ಭಾಗ್ಯಲಕ್ಷ್ಮೀ ಬಿರಾದಾರ (567, 94.50%) ತೃತೀಯ ಸ್ಥಾನ ಚೈತ್ರಾ ಮೆಲ್ದಾಪೂರ (566, 94.30%) ಅಮೀರಾಬಾಯಿ ಬಿರಾದಾರ (566, 94.30%) ಪಡೆದಿದ್ದಾರೆ.

ಶಿಕ್ಷಣ ವಿಭಾಗದಲ್ಲಿ ಪ್ರಥಮ ಸ್ಥಾನ ಹುಲಿಗೆಪ್ಪ ಮುದನೂರ (589, 98.16%), ದ್ವಿತೀಯ ಸ್ಥಾನ ಬಾಲಪ್ಪ ಗಡ್ಡಿ (579, 96.60%) ತೃತೀಯ ಸ್ಥಾನ ಯಮನೂರಪ್ಪ ಕವಡಿಮಟ್ಟಿ (559 , 93.16%) ಪಡೆದಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಪ್ರಥಮ ಸ್ಥಾನ ಸಂಜನಾ ಬಬಲೇಶ್ವರ (585, 97.50%), ದ್ವಿತೀಯ ಸ್ಥಾನ ಚನ್ನಮಲ್ಲಯ್ಯ ಹಿರೇಮಠ (573, 95.50%), ತೃತೀಯ ಸ್ಥಾನ ವಿರೇಶ ಬಬಲೇಶ್ವರ (569 , 94.80%) ಪಡೆದಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಪ್ರಥಮ ಸ್ಥಾನ ಸೋಮವ್ವ ಬಸವರಾಜ (570, 95.00%), ದ್ವಿತೀಯ ಸ್ಥಾನ ಅನಿತಾ ಪಂಜಗಲ್ಲ (565, 94.16%) ತೃತೀಯ ಸ್ಥಾನ ಮೈಬೂಬ ಮುದ್ದೇಬಿಹಾಳ (547, 91.16%) ಪಡೆದಿದ್ದಾರೆ. ವಿದ್ಯಾರ್ಥಿಗಳಿಗೆ ವೀರಶೈವ ವಿದ್ಯಾವರ್ಧಕ ಸಂಘದ ಚೇರಮನ್ ವಿ.ಸಿ.ಹಿರೇಮಠ (ಹಂಪಿ ಮುತ್ಯಾ), ವ್ಹಾ.ಚೇರಮನ್ ಕೆ.ಎಸ್.ಮುರಾಳ, ಕಾರ್ಯದರ್ಶಿ ಎಂ.ಎಸ್.ಸರಶೆಟ್ಟಿ ಹಾಗೂ ಆಡಳಿತ ಮಂಡಳಿಯ ಎಲ್ಲ ನಿರ್ದೇಶಕರು, ಕಾಲೇಜಿನ ಚೇರಮನ್ನ ಎಂ.ಆರ್.ಕತ್ತಿ, ಸಿಬ್ಬಂದಿ ಅಭಿನಂದಿಸಿದ್ದಾರೆ.

ಏ.14ರಂದು ಡಾ.ಅಂಬೇಡ್ಕರ್ ಜಯಂತಿ

ವಿಜಯಪುರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ ಹಾಗೂ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಏ.14ರಂದು ನಡೆಯಲಿರುವ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆಯಲ್ಲಿ ಜಿಲ್ಲಾಮಟ್ಟದ ಅಧಿಕಾರಿಗಳು ತಮ್ಮ ಸಿಬ್ಬಂದಿಗಳೊಂದಿಗೆ ಭಾಗವಹಿಸಲು ಹಾಗೂ ಜಿಲ್ಲೆಯ ಸಾರ್ವಜನಿಕರು, ವಿವಿಧ ಸಂಘಟನೆಗಳ ಪದಾಧಿಕಾರಿಗಳು ಮತ್ತು ಎಲ್ಲ ಸಮುದಾಯದ ಗಣ್ಯರು ಭಾಗವಹಿಸುವಂತೆ ಎಂದು ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಮಹೇಶ ಪೋದಾರ ಹೇಳಿದ್ದಾರೆ. ಈ ಕುರಿತು ಪ್ರಕಟಣೆ ನೀಡಿದ ಅವರು, ಅಂದು ಬೆಳಗ್ಗೆ 8 ಗಂಟೆಗೆ ನಗರದ ಅಂಬೇಡ್ಕರ್ ವೃತ್ತದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಗುವುದು.


ಗುರು ಸಂಗನಬಸವ ಸ್ವಾಮೀಜಿ ಅಡ್ಡಪಲ್ಲಕ್ಕಿ ಉತ್ಸವ

ಇಂಡಿ: ತಾಲೂಕಿನ ಲಚ್ಯಾಣದಲ್ಲಿ ನಡೆದ ಶಂಕರಲಿಂಗ ಶಿವಯೋಗಿಗಳ ಮಹಾರಥೋತ್ಸವ ಅಂಗವಾಗಿ ಅಗ್ನಿ ಶಮನ ಕಾರ್ಯಕ್ರಮ ನೆರೆದ ಸಹಸ್ರಾರು ಭಕ್ತರ ಜಯಘೋಷಗಳೊಂದಿಗೆ ನಡೆಯಿತು.

ಈ ಉತ್ಸವದ ಅಂಗವಾಗಿ ನಿಗಧಿಯಂತೆ ಲಚ್ಯಾಣ ಹಾಗೂ ಬಂಥನಾಳ ಮಠದ ಪ್ರಸ್ತುತ ಪೀಠಾಧೀಶರಾದ ವೃಷಭಲಿಂಗೇಶ್ವರ ಮಹಾ ಶಿವಯೋಗಿಗಳ ಅಡ್ಡ ಪಲ್ಲಕ್ಕಿ ಉತ್ಸವ ನಡೆಯಬೇಕಿತ್ತು. ಆದರೆ ಬಂಥನಾಳ ಪೂಜ್ಯರ ಅಪ್ಪಣೆಯ ಮೇರೆಗೆ ಯರನಾಳ ಮಠದ ಪೀಠಾಧೀಶ ಗುರು ಸಂಗನಬಸವ ಸ್ವಾಮೀಜಿ ಅವರ ಅಡ್ಡಪಲ್ಲಕ್ಕಿ ಉತ್ಸವ ಹಾಗೂ ಅಗ್ನಿ ಪ್ರವೇಶ ಕಾರ್ಯಕ್ರಮ ಇದೇ ಮೊದಲ ಬಾರಿಗೆ ನಡೆಯಿತು. ಅಪರೂಪದ ಈ ದೃಶ್ಯಕ್ಕೆ ನೆರೆದ ಸಹಸ್ರಾರು ಜನರು ಸಾಕ್ಷಿಯಾಗಿ ಪೂಜ್ಯರ ದರ್ಶನ ಪಡೆದು ಪುನೀತರಾದರು.

ಸಿದ್ದಲಿಂಗ ಮಹಾರಾಜರ ಐಕ್ಯ ಮಂಟಪದಿಂದ ಆರಂಭವಾದ ಯರನಾಳ ಪೂಜ್ಯರ ಪಲ್ಲಕ್ಕಿ ಉತ್ಸವ ಭವ್ಯ ಮೆರವಣಿಗೆಯೊಂದಿಗೆ ಉತ್ತರ ದಿಕ್ಕಿನ ಮಠದ ಮಹಾದ್ವಾರ ಬಾಗಿಲಿನ ಮುಂಭಾಗದ ಪಾದಗಟ್ಟೆಯ ವರೆಗೆ ವಾದ್ಯ ಮೇಳದೊಂದಿಗೆ ನಡೆಯಿತು. ಬಳಿಕ ಪುರವಂತರೊಂದಿಗೆ ಅಗ್ನಿ ಶಮನ ಕಾರ್ಯಕ್ರಮ ಮಠದ ಸಂಪ್ರದಾಯದಂತೆ ಸಂಭ್ರಮದಿಂದ ನೇರವೇರಿತು.

ಸುಕ್ಷೇತ್ರ ಯರನಾಳ ಮಠಕ್ಕೂ ಲಚ್ಯಾಣ ಮಠಕ್ಕೂ ಅವಿನಾಭಾವ ಸಂಬಂಧ. ಲಚ್ಯಾಣ ಮಠ ಬಂಥನಾಳ ಮಠದ ಶಾಖಾ ಮಠವಾಗಿದೆ. ಲಚ್ಯಾಣ ಹಾಗೂ ಬಂಥನಾಳ ಮಠದ ಈ ಹಿಂದಿನ ಪೀಠಾಧೀಶರಾಗಿದ್ದ ಸಂಗನಬಸವ ಮಹಾಶಿವಯೋಗಿಗಳು ಈ ಮಠದ ಪೀಠಾಧೀಶರಾಗುವ ಮುನ್ನ ಯರನಾಳದ ಮಠದ ಪೀಠಧೀಶರಾಗಿದ್ದರು. ಇಂತಹ ವೀರಕ್ತ ಮಠ ಯರನಾಳ ಮಠದ ಪ್ರಸ್ತುತ ಪೀಠಧೀಶರಾದ ಗುರು ಸಂಗನಬಸವ ಮಹಾಸ್ವಾಮೀಜಿ ಅವರ ಅಡ್ಡ ಪಲ್ಲಕ್ಕಿ ಉತ್ಸವ ನಡೆದದ್ದು ಭಕ್ತರ ಸಂತಸ ಇಮ್ಮಡಿಗೊಳಿಸಿದೆ. ಲಚ್ಯಾಣ ಕ್ಷೇತ್ರದಲ್ಲಿ ಈ ಹಿಂದೆ ನಡೆದ ಉತ್ಸವದಲ್ಲಿ ಯರನಾಳ ಮಠದ ಈ ಹಿಂದಿನ ಪೀಠಾಧೀಶರಾಗಿದ್ದ ದಯಾನಂದ ಪೂಜ್ಯರ ಅಡ್ಡಪಲ್ಲಕ್ಕಿ ಉತ್ಸವ ಭವ್ಯವಾಗಿ ಜರುಗಿತ್ತು ಎಂದು ನಿವೃತ್ತ ಪ್ರಾಚಾರ್ಯ ಎ.ಪಿ.ಕಾಗವಾಡ ಭಕ್ತಿಯಿಂದ ಸ್ಮರಿಸುತ್ತಾರೆ.



ಇಂದಿನಿಂದ ನಾಲ್ಕು ದಿನ ಅಂಬೇಡ್ಕರ್ ಹಬ್ಬ: ಡಾ. ಬಾಬುರಾಜೇಂದ್ರ ನಾಯಿಕ

ವಿಜಯಪುರ: ದಲಿತ ವಿದ್ಯಾರ್ಥಿ ಪರಿಷತ್ ಹಾಗೂ ಜಿಲ್ಲೆಯ ವಿವಿಧ ಪ್ರಗತಿಪರ ಸಂಘ-ಸಂಸ್ಥೆಗಳ ಆಶ್ರಯದಲ್ಲಿ ಏ.11ರಿಂದ ಏ.14ರ ವರೆಗೆ ನಾಲ್ಕು ದಿನ ಅಂಬೇಡ್ಕರ್ ಹಬ್ಬ-2026 ಹಮ್ಮಿಕೊಳ್ಳಲಾಗಿದ್ದು, ಜಿಲ್ಲೆಯ ಸರ್ವ ಸಮಾಜಗಳ ಜಾತ್ಯತೀತ ಮುಖಂಡರ ನೇತೃತ್ವದಲ್ಲಿ ಭರ್ಜರಿ ತಯಾರಿ ನಡೆಸಲಾಗಿದೆ ಎಂದು ಸಂಚಾಲನ ಸಮಿತಿ ಸದಸ್ಯ ಡಾ.ಬಾಬುರಾಜೇಂದ್ರ ನಾಯಿಕ ಹೇಳಿದರು.



ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬುದ್ಧ, ಬಸವ, ಅಂಬೇಡ್ಕರ್, ಜ್ಯೋತಿಬಾ- ಸಾವಿತ್ರಿಬಾಯಿ ಫುಲೆ, ಫಾತಿಮಾ ಶೇಖ್ ಅವರು ಯಾವುದೇ ಒಂದು ವರ್ಗದ ಪರ ಕಾರ್ಯ ಮಾಡದೇ ಸರ್ವ ಜನಾಂಗಗಳ ಸಮಾನತೆಗಾಗಿ ಮತ್ತು ಅಭಿವೃದ್ಧಿಗೆ ಶ್ರಮಿಸಿದವರು. ಎಲ್ಲ ಮಹಾಪುರುಷರ ತತ್ವ ಸಿದ್ಧಾಂತಗಳಡಿ ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಂವಿಧಾನ ಬರೆಯುವ ಮೂಲಕ ಎಲ್ಲ ಜನರಿಗೆ ಹಕ್ಕುಗಳನ್ನು ನೀಡಿ, ವಿಶ್ವದ ಅತ್ಯಂತ ಶ್ರೇಷ್ಠವಾದ ಸಂವಿಧಾನವನ್ನು ದೇಶಕ್ಕೆ ಕೊಡುಗೆಯಾಗಿ ನೀಡಿದ್ದು, ಸಮಾನತೆಗಾಗಿ ಹೋರಾಡಿದ ಈ ಎಲ್ಲ ಮಹನೀಯರನ್ನು ನೆನೆಯುವು ಕಾರ್ಯವೇ ಅಂಬೇಡ್ಕರ್ ಹಬ್ಬ ಎಂದರು.

ಸಂಚಾಲನ ಸಮಿತಿ ಹಿರಿಯ ಸದಸ್ಯ ಅಬ್ದುಲ್ ರಜಾಕ್ ಹೊರ್ತಿ ಮಾತಾಡಿ, ಬಾಬಾಸಾಹೇಬರ ಅಂಬೇಡ್ಕರ್ ಅವರ 135 ನೇ ಜಯಂತ್ಯುತ್ಸವ ನಿಮಿತ್ತ ಸಮಾನತೆಯ ಅರಿವಿನ ಹಬ್ಬ ಅಂಬೇಡ್ಕರ್ ಹಬ್ಬ. ಅಂಬೇಡ್ಕರ್ ಅವರ ಚಿಂತನೆಗಳು ಮತ್ತು ಸಂವಿಧಾನ ಆಶಯಗಳು ಎಲ್ಲ ವರ್ಗಗಳ ಜೊತೆಗೆ ವಿದ್ಯಾರ್ಥಿ ಯುವಜನರಿಗೆ ಮುಖ್ಯವಾಗಿ ತಲುಪಿಸಬೇಕಿದೆ ಎಂದರು.

ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯ ಮುಖಂಡ ಎಂ.ಸಿ.ಮುಲ್ಲಾ ಮಾತನಾಡಿ, ಸಮಾನತೆಗಾಗಿ ಹೋರಾಡಿದ ಮಹಾಪುರುಷರನ್ನು ಒಂದೇ ಜಾತಿಗೆ ಸೀಮಿತ ಮಾಡುತ್ತಿರು, ಈ ಕಾಲಘಟ್ಟದಲ್ಲಿ ಅಂಬೇಡ್ಕರ್ ಹಬ್ಬದ ಮೂಲಕ ನಮ್ಮ ಮೂಲ ಮಹಾಪುರುಷರ ಜಯಂತಿಯನ್ನು ಎಲ್ಲ ಜನಾಂಗದವರು ಸೇರಿ ಒಟ್ಟಾಗಿ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಸಂಚಾಲನ ಸಮಿತಿ ಸದಸ್ಯ ಡಾ.ಬಿ.ಎಂ.ಬಿರಾದಾರ ಮಾತನಾಡಿ, ಅಂಬೇಡ್ಕರ್ ಹಬ್ಬವು ಮಹಾತ್ಮ ಜ್ಯೋತಿಬಾ ಫುಲೆ ಅವರ 199 ನೇ ಜನ್ಮದಿನಾಚರಣೆ ಆಗಿರುವ ಏ.11ರಂದು ಆರಂಭವಾಗಿ, ಏ.14ರಂದು ಬಾಬಾಸಾಹೇಬ್ ಅಂಬೇಡ್ಕರ್ ಅವರ 135ನೇ ಜಯಂತಿಯನ್ನು ಭವ್ಯವಾಗಿ ಆಚರಣೆ ಮಾಡುವ ಮೂಲಕ ಎರಡನೆ ಆವೃತ್ತಿಯ ಅಂಬೇಡ್ಕರ್ ಹಬ್ಬ ಅರ್ಥಪೂರ್ಣವಾಗಿ ಹಮ್ಮಿಕೊಳ್ಳಲಾಗಿದೆ ಎಂದರು.ಅಂಬೇಡ್ಕರ್ ಹಬ್ಬದ ನೇರ್ಥೃತ್ವ ವಹಿಸಿದ ದಲಿತ ವಿದ್ಯಾರ್ಥಿ ಪರಿಷತ್ ರಾಜ್ಯಾಧ್ಯಕ್ಷ ಶ್ರೀನಾಥ ಪೂಜಾರಿ, ಎಚ್.ಎಂ.ಬಾಗಬಾನ್ (ಜಾಕೀರ್ ಅಗ್ರೊ), ಪ್ರಭು ಮಲ್ಲಿಕಾರ್ಜುನಮಠ, ಫಯಾಜ್ ಕಲಾದಗಿ, ದೀಪಾ ತಟ್ಟಿಮನಿ, ಮೋಹನ್ ಕಟ್ಟಿಮನಿ, ಬಾಲಾಜಿ ಕಾಂಬಳೆ, ಮಹಾದೇವ ಚಲವಾದಿ, ಹುಚ್ಚಪ್ಪ ಬಾವಿಮನಿ ಇದ್ದರು.

ಶ್ರೀರಾಮು, ಹನುಮಂತ ಮೂರ್ತಿ ಭವ್ಯ ಶೋಭಾಯಾತ್ರೆ

ಬಸವನಬಾಗೇವಾಡಿ: ಪಟ್ಟಣದಲ್ಲಿ ರಾಮ ನವಮಿ ಹಾಗೂ ಹನುಮ ಜಯಂತಿ ಅಂಗವಾಗಿ ಶ್ರೀರಾಮ ಸಮಿತಿ ನೇತೃತ್ವದಲ್ಲಿ ಡೊಳ್ಳು, ಡೋಲ್ ವಾದ್ಯ, ಡಿಜೆ ಧ್ವನಿ ವರ್ಧಕದೊಂದಿಗೆ ಶ್ರೀರಾಮಚಂದ್ರನ ಭವ್ಯ ಮೂರ್ತಿ ಹಾಗೂ ಹನುಮಂತ ಮೂರ್ತಿಯನ್ನು ಭವ್ಯ ಮೆರವಣಿಗೆ ನಡೆಯಿತು.



ವಿಠ್ಠಲ ಮಂದಿರ, ಬಸವ ಸ್ಮಾರಕ ದ್ವಾರದ ಮೂಲಕ ಪಲ್ಲೆದ ಕಟ್ಟೆ, ಗೊಳಸಂಗಿ ಅವರ ಓಣಿ, ಪತ್ತಾರ ಓಣಿ, ಹಾರಿವಾಳರ ಓಣಿ, ಅಗಸಿ ಮಾರ್ಗವಾಗಿ ಬಸವೇಶ್ವರ ವೃತ್ತ, ವಿವೇಕಾನಂದ ಗಲ್ಲಿ, ದ್ಯಾಮವ್ವದೇವಿ ದೇವಸ್ಥಾನ, ಮಹಾರಾಜರ ಮಠ, ಗೌರಿ ಗುಡಿ, ಅಂಬಿಗೇರ ಚೌಡಯ್ಯನ ವೃತ್ತ, ಸಂಗೊಳ್ಳಿ ರಾಯಣ್ಣ ವೃತ್ತದ ಮಾರ್ಗವಾಗಿ ವಿಠ್ಠಲ ಮಂದಿರದ ಹತ್ತಿರ ಶೋಭಾ ಯಾತ್ರೆ ಸಂಪನ್ನಗೊಂಡಿತು.

ಸಮಿತಿ ಅಧ್ಯಕ್ಷ ನಿಂಗಣ್ಣ ಬಡಿಗೇರ, ಉಪಾಧ್ಯಕ್ಷ ಬಸು ಅಳ್ಳಗಿ, ಕಾರ್ಯದರ್ಶಿ ವಿಜಯ ಗೊಳಸಂಗಿ, ಸಹಕಾರ್ಯದರ್ಶಿ ಭಾಗ್ಯವಂತ ಚೌಧರಿ, ರಾಹುಲ ಜಗತಾಪ, ರಾಘು ದೊಡಮನಿ, ಅಪ್ಪು ಭೂತನಾಳ, ಬಸು ಭೂತನಾಳ, ಪದ್ಮರಾಜ ಒಡೆಯರ, ಶಿವು ರೇವಡೆಕರ, ಬಸು ಇಂಗಳೇಶ್ವರ, ಶಿವು ಬೆಲ್ಲದ, ನಂದೀಶ ಗೊಳಸಂಗಿ, ಸಂತೋಷ ಜಾಧವ, ಮುಖಂಡರಾದ ಜಗದೀಶ ಕೊಟ್ರಶೆಟ್ಟಿ, ರವಿ ಪಟ್ಟಣಶೆಟ್ಟಿ, ಬಸವರಾಜ ಉಕ್ಕಲಿ, ವಿದ್ಯಾಶ್ರೀ ಬಡಿಗೇರ, ರೂಪಾ ಜಾಧವ, ವೀಣಾ ಜಾಧವ ಸೇರಿದಂತೆ ಇತರರು ಇದ್ದರು.

ಸರ್ವರೂ ಸಾಮಾಜಿಕ ಬದ್ಧತೆ ಅಳವಡಿಸಿಕೊಳ್ಳಿ: ಕೆ.ಎಂ.ಜಾನಕಿ

ವಿಜಯಪುರ: (ಪ್ರೊ.ಎ.ಎಸ್.ಹಿಪ್ಪರಗಿ, ಈಶ್ವರಚಂದ್ರ ಚಿಂತಾಮಣಿ, ಕಾ ಹು ಬಿಜಾಪುರ ವೇದಿಕೆ) ಬಸವ ನಾಡಿನಲ್ಲಿ ನಿಂತು ಅಂಬೇಡ್ಕರ್ ಜಯಂತಿಯನ್ನು ಪುಸ್ತಕ ಮೇಳದ ಮೂಲಕ ಹಮ್ಮಿಕೊಂಡಿರುವುದು ದೇಶಕ್ಕೆ ಗುಣಾತ್ಮಕ ಸಂದೇಶ ನೀಡುತ್ತಿದೆ ಎಂದು ಬೆಳಗಾವಿಯ ಪ್ರಾದೇಶಿಕ ಆಯುಕ್ತರಾದ ಕೆ.ಎಂ.ಜಾನಕಿ ಹೇಳಿದರು.



ನಗರದ ದರಾಬಾರ್ ಪ್ರೌಢ ಶಾಲೆ ಮೈದಾನದಲ್ಲಿ ಮೇ ಸಾಹಿತ್ಯ ಮೇಳ ವಿಜಯಪುರ ಬಳಗ, ದಲಿತ ಮತ್ತು ಪ್ರಗತಿಪರ ಸಂಘಟನೆಗಳ ಆಶ್ರಯದಲ್ಲಿ ಏ.10ರಿಂದ 14ರ ವರೆಗೆ 5 ದಿನ ಹಮ್ಮಿಕೊಂಡಿರುವ ಬಿಜಾಪುರ ಬುದ್ಧ, ಬಸವ, ಬಾಬಾಸಾಹೇಬ ಅಂಬೇಡ್ಕರ್ ಪುಸ್ತಕ ಮೇಳದ ಉದ್ಘಾಟನೆ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಸರ್ವ ಜನಾಂಗದ ಶಾಂತಿಯ ತೋಟ ಆಗಬೇಕಾದರೆ ಸರ್ವರೂ ಸಾಮಾಜಿಕ ಬದ್ಧತೆ ಅಳವಡಿಸಿಕೊಳ್ಳಬೇಕು ಎಲ್ಲರು ಇಂತಹ ಪುಸ್ತಕ ಮೇಳದಲ್ಲಿ ಭಾಗವಹಿಸುವ ಮೂಲಕ ಎಲ್ಲರು ತಮ್ಮ ಜ್ಞಾನದ ಬಲವನ್ನು ಹೆಚ್ಚಿಸಿಕೊಳ್ಳಬೇಕು ಎಂದು ಹೇಳಿದರು.

ಮುಂಬೈನ ದಲಿತ ಪ್ಯಾಂಥರ್ಸ್ ಸಂಸ್ಥಾಪಕ ಜೆ.ವಿ.ಪವಾರ ಅವರು ಪುಸ್ತಕ ಮೇಳದ ದಿಕ್ಸೂಚಿ ಭಾಷಣ ಮಾಡಿದ ಅವರು, ಬುದ್ಧ, ಬಸವ ಬಾಬಾಸಾಹೇಬ ಪುಸ್ತಕಮೇಳವುಇಂದಿನಅಂಬೇಡ್ಕರ್ ಜಯಂತಿ ಸಂದರ್ಭದಲ್ಲಿ ಹಮ್ಮಿಕೊಂಡಿರುವುದು ಒಂದು ಐತಿಹಾಸಿಕ ಸಂಗತಿಯಾಗಿದೆ. ಅಂಬೇಡ್ಕರ್ ಅವರು ಪುಸ್ತಕಗಳ ಒಡನಾಟಿಯಾಗಿದ್ದರು ಅವರು ತಮ್ಮ ಇಡಿ ಜೀವನವನ್ನು ಪುಸ್ತಕಗಳೊಂದಿಗೆ ಕಳೆದಿದ್ದಾರೆ. ಅಂತಹ ಮಹಾನ್ ವ್ಯಕ್ತಿ ಜಯಂತಿ ಮತ್ತು ಜ್ಯೋತಿಬಾ ಫುಲೆ ಅವರ 200ನೇ ಜಯಂತಿ ಸಂದರ್ಭದಲ್ಲಿ ಅರ್ಥಪೂರ್ಣ ಕಾರ್ಯಕ್ರಮ ಹಮ್ಮಿಕೊಂಡಿರುವುದು ಪ್ರಸ್ತುತ ಸಂದರ್ಭದಲ್ಲಿ ಅತ್ಯಂತ ಸೂಕ್ತವಾಗಿದೆ. ಬಾಬಾಸಾಹೇಬರ ಪತ್ನಿ ರಾಮಬಾಯಿ ಅವರ ಜೀವನ ಅವರ ಸಾಮಾಜಿಕ ಕೊಡುಗೆ ಬಗ್ಗೆ ಅಧ್ಯಯನ ಮಾಡುವುದು ಅವಶ್ಯಕತೆ ಇದೆ ಎಂದು ಹೇಳಿದರು.

ಡಿಎಸ್‌ಎಸ್‌ನ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಪುಸ್ತಕಗಳನ್ನು ಜನರ ಬಳಿಗೆ ಹೋಗಬೇಕು ಜನರಿಗೆ ಕೊಳ್ಳುವ ಶಕ್ತಿ ಬರಬೇಕು ಎಂಬ ದೃಷ್ಟಿಕೋನದಲ್ಲಿ ಬುದ್ಧ, ಬಸವ ಬಾಬಾಸಾಹೇಬರ ಪುಸ್ತಕ ಮೇಳವನ್ನು ಬಸವರಾಜ ಸೂಳಿಬಾವಿ ಅವರ ನೇತೃತ್ವದಲ್ಲಿ ಹಮ್ಮಿಕೊಂಡಿರುವುದು ಸಾಂದರ್ಭಿಕ ಸೂಕ್ತವಾಗಿದೆ. ಇತಿಹಾಸದಲ್ಲಿ ಪ್ರಭುತ್ವಕ್ಕೆ ಪುಸ್ತಕಗಳ ಭಯ ಕಾಡುತ್ತಿದೆ. ಅದು ಇವತ್ತಿನ ವಿಷಯವಲ್ಲ ಬಸವಾದಿ ಶರಣರ ಕಾಲದಿಂದಲೂ ಪ್ರಭುತ್ವವು ಪುಸ್ತಕಗಳ ವೈಚಾರಿಕತೆಗೆ ಅಂಜುತ್ತಿದೆ ಎಂದರು.

ಪ್ರಕಾಶಕರ ಸಂಘದ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ ಮಾತನಾಡಿ, ಅಂಬೇಡ್ಕರ್ ಅವರು ಪ್ರೀತಿಸುವ ಪುಸ್ತಕಗಳ ಮೇಳ ಹಮ್ಮಿಕೊಳ್ಳುವ ಮೂಲಕ ಜಯಂತಿ ಆಯೋಜನೆ ಮಾಡಿರುವುದು ಅಭಿನಂದನಾರ್ಹ ಎಂದರು. ಅನಿಲ ಹೊಸಮನಿ ಮಾತನಾಡಿದರು. ಡಾ ಅರುಣಕುಮಾರ ಇಂಗಳೆ, ಹಾಸಿಂಪೀರ ವಾಲಿಕಾರ, ಆರತಿ ಶಹಾಪುರ, ಸುಭಾಸ ಬೆಳ್ಳುಳ್ಳಿ, ಶ್ರೀನಿವಾಸ ಜಾಲವಾದಿ, ಹೇಮಂತ ಭೂತನಾಳ, ಸುರೇಶ ಗೆಜ್ಜಿ, ಹೇಮಂತ ಭೂತನಾಳ, ಸಿದ್ದರಾಮ ಉಪ್ಪಿನ, ಅಡಿವೆಪ್ಪ ಸಾಲಗಲ್ಲ, ಬಸವರಾಜ ಸೂಳಿಬಾವಿ, ಲಾಯಪ್ಪ ಇಂಗಳೆ. ಸುರೇಶ ಬಿಜಾಪುರ. ಸಂಜು ಕಂಬಾಗಿ ಇದ್ದರು.

ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಲು ಬದ್ಧ: ಶಾಸಕ ರಾಜುಗೌಡ

ದೇವರಹಿಪ್ಪರಗಿ: ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಲು ಬದ್ಧರಾಗಿದ್ದು, ಹಂತ ಹಂತವಾಗಿ ಇನ್ನಷ್ಟು ರಸ್ತೆ, ಸಿಸಿ ರಸ್ತೆ, ಸಮುದಾಯ ಭವನ ಮತ್ತು ಇನ್ನಿತರ ಕಾಮಗಾರಿ ಕೈಗೊಳ್ಳಲಾಗುವುದು ಎಂದು ಶಾಸಕ ರಾಜುಗೌಡ ಪಾಟೀಲ ಕುದರಿಸಾಲವಾಡಗಿ ಹೇಳಿದರು.



ತಾಲ್ಲೂಕಿನ ತಿಳಗೂಳ ಗ್ರಾಮದಲ್ಲಿ ಶುಕ್ರವಾರದಂದು ಮಾಂತೇಶ್ವರ ಮಠದ ಸಮುದಾಯ ಭವನಕ್ಕೆ 10ಲಕ್ಷ ,ಸಿ.ಸಿ.ರಸ್ತೆ ನಿರ್ಮಾಣಕ್ಕೆ 50 ಲಕ್ಷ ಹಾಗೂ ಕಾಳಿಕಾದೇವಿ ದೇವಸ್ಥಾನದ ಸಮುದಾಯ ಭವನಕ್ಕೆ 5 ಲಕ್ಷ ರೂ ವೆಚ್ಚದ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಕ್ಷೇತ್ರದ ಶಾಸಕನಾದ ಮೇಲೆ ಅನುದಾನದ ಕೊರತೆ ಇದ್ದರೂ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇನೆ. ಗ್ರಾಮಗಳ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ರಸ್ತೆ,ಸಿ.ಸಿ.ರಸ್ತೆ, ನೀರಾವರಿ, ವಿದ್ಯುತ್ತು, ಚರಂಡಿ, ಆಸ್ಪತ್ರೆ ಸೇರಿದಂತೆ ನಾನಾ ಸಮುದಾಯಗಳ ದೇವಸ್ಥಾನದಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ ಸಾಕಷ್ಟು ಅನುದಾನ ಬಿಡುಗಡೆಗೊಳಿಸಿದ್ದೇನೆ. ಆಯಾ ಸಮುದಾಯಗಳ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಗಳಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇನೆ. ಕ್ಷೇತ್ರದಲ್ಲಿ ನಾನಾ ವರ್ಗಗಳ ಕಲ್ಯಾಣಕ್ಕಾಗಿ ಅನುದಾನ ಬಳಕೆ ಮಾಡಲಾಗಿದ್ದು, ಹೆಚ್ಚಿನ ಅನುದಾನವನ್ನು ಹಂತ ಹಂತವಾಗಿ ಒದಗಿಸುವ ಮೂಲಕ ಸಾಮಾಜಿಕ ಹೊಣೆಗಾರಿಕೆ ನಿಭಾಯಿಸಿದ ತೃಪ್ತಿ ಇದೆ. ಇಂದು ಹಂಚಲಿ ಗ್ರಾಮದಲ್ಲಿ ಸುಮಾರು 50 ಲಕ್ಷ ರೂ ವೆಚ್ಚದ ಸಿ.ಸಿ.ರಸ್ತೆ, ಸೋಮನಾಥ ದೇವಸ್ಥಾನದ ಸಮುದಾಯ ಭವನಕ್ಕೆ 5 ಲಕ್ಷ, ಕೆರೂಟಗಿ ಗ್ರಾಮದ ಲಕ್ಷ್ಮಿ ದೇವಸ್ಥಾನದ ಸಮುದಾಯ ಭವನಕ್ಕೆ 5 ಲಕ್ಷ, ಸಿ.ಸಿ ರಸ್ತೆ ನಿರ್ಮಾಣಕ್ಕೆ 50 ಲಕ್ಷ ಹಾಗೂ ವರ್ಕನಹಳ್ಳಿ ಗ್ರಾಮದ ಸಿ.ಸಿ ರಸ್ತೆಗೆ 50 ಲಕ್ಷ, ಹಿರೋಡೇಶ್ವರ ದೇವಸ್ಥಾನದ ಸಮುದಾಯ ಭವನಕ್ಕೆ 10 ಲಕ್ಷ ರೂ ವೆಚ್ಚದ ಕಾಮಗಾರಿಗಳ ಭೂಮಿ ಪೂಜೆ ನೆರವೇರಿಸಲಾಯಿತು ಎಂದು ಹೇಳಿದರು.

ಜೆಡಿಎಸ್ ಪಕ್ಷದ ಜಿಲ್ಲಾ ಉಪಾಧ್ಯಕ್ಷ ಶಿವಪುತ್ರ ಸಾತಿಹಾಳ ಅವರು ಮಾತನಾಡಿ, ತಿಳಗೂಳ ಗ್ರಾಮದ ಅಭಿವೃದ್ಧಿಗೆ ಶಾಸಕರು ಸಾಕಷ್ಟು ಅನುದಾನ ನೀಡಿದ್ದಾರೆ, ಬರುವಂಥ ದಿನಗಳಲ್ಲಿ ಗ್ರಾಮದ ಸರ್ವಾಂಗೀಣ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಒದಗಿಸಲು ಒತ್ತಾಯಿಸುತ್ತೇನೆ. ಶಾಸಕರು ಅನುದಾನದ ಕೊರತೆಯಲ್ಲಿ ಸಾರ್ವಜನಿಕರಿಗೆ ಉತ್ತಮ ರಸ್ತೆ, ಸಿ.ಸಿ.ರಸ್ತೆಯ ವ್ಯವಸ್ಥೆ, ಕುಡಿಯುವ ನೀರಿನ ಸಮಸ್ಯೆ, ಸಾರಿಗೆ, ವಿದ್ಯುತ್ ಒದಗಿಸಿ ಕೊಡಲು ನಿರಂತರವಾಗಿ ಶ್ರಮಿಸುತ್ತಿದ್ದಾರೆ ಅವರಿಗೆ ಸಹಕಾರ ನೀಡಬೇಕು ಎಂದರು.

ಮುಖಂಡರಾದ ಶೇಖರಗೌಡ ಪಾಟೀಲ,ಮಾಂತಯ್ಯ ಹಿರೇಮಠ, ವೀರೇಶ ಯಡ್ರಾಮಿ, ಶ್ರೀಶೈಲ ಸಾತಿಹಾಳ, ನಿತ್ಯಾನಂದ ಕತ್ತಿ, ಮುತ್ತುಗೌಡ ಪಾಟೀಲ, ಶಿವಾನಂದ ಸಾತಿಹಾಳ, ಮಹೇಶ ಗದ್ದಗಿ, ಸಂಗಮೇಶ ಸಾತಿಹಾಳ, ಲ್ಯಾಂಡ ಆರ್ಮಿ ಇಲಾಖೆಯ ಎಇಇ ರಾಜಶೇಖರ,ಪಿ.ಡಿ.ಒ ಬಲವಂತ ಗವಡೆ, ಅಧಿಕಾರಿಗಳಾದ ಪ್ರಫುಲಕುಮಾರ, ಮಾಂತೇಶ ಸೇರಿದಂತೆ ವಿವಿಧ ಗ್ರಾಮಗಳ ಮುಖಂಡರು ಕಾರ್ಯಕರ್ತರು ಹಾಗೂ ಇತರರು ಉಪಸ್ಥಿತರಿದ್ದರು.

ಕಿರುಸುದ್ದಿ

ವಿದ್ಯಾರ್ಥಿನಿ ಸಂಗೀತಾಗೆ ಸಿಡಿಪಿಒ ಸನ್ಮಾನ

ಕೊಪ್ಪಳ: ಜಿಲ್ಲೆಯ ಕುಕನೂರು ತಾಲೂಕಿನ ಮಂಗಳೂರು ಗ್ರಾಮದ ಪ್ರತಿಭಾವಂತ ವಿದ್ಯಾರ್ಥಿನಿ ಸಂಗೀತಾ ದ್ವಿತೀಯ ಪಿಯುಸಿ ಕಲಾ ವಿಭಾಗದ ಪರೀಕ್ಷೆಯಲ್ಲಿ ಕರ್ನಾಟಕ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿರುವುದಕ್ಕೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ವಿದ್ಯಾರ್ಥಿನಿಯ ಮನೆಗೆ ಭೇಟಿ ನೀಡಿ ವಿದ್ಯಾರ್ಥಿನಿ ಹಾಗೂ ಪಾಲಕರನ್ನು ಸನ್ಮಾನಿಸಿ ಪ್ರೋತ್ಸಾಹಿಸಿದರು. ಯಲಬುರ್ಗಾ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಬೆಟದೇಶ ಮಾಳೆಕೊಪ್ಪ ಮಾತನಾಡಿ, ವಿದ್ಯಾರ್ಥಿನಿ ಉತ್ತಮ ಸಾಧನೆ ಮಾಡುವ ಮೂಲಕ ಕೊಪ್ಪಳ ಜಿಲ್ಲೆ ಹಾಗೂ ಯಲಬುರ್ಗಾ ತಾಲೂಕಿಗೆ ಹೆಸರು ತಂದಿದ್ದಾಳೆ. ಮುಂದೆ ಇದೇ ರೀತಿ ಸಾಧನೆ ಮಾಡಲಿ. ಅಂದುಕೊಂಡಿರುವ ಉನ್ನತವಾದ ಗುರಿಯತ್ತ ಸಾಗಲಿ. ಜೀವನದಲ್ಲಿ ತಮಗೆ ಯಶಸ್ಸು ಸಿಗಲಿ. ಇಲಾಖೆಯಿಂದ ಪ್ರೋತ್ಸಾಹ, ಮಾರ್ಗದರ್ಶನ ಸಿಗಲಿದೆ. ಸದಾಕಾಲ ತಮ್ಮೊಂದಿಗೆ ನಾವಿರುತ್ತೇವೆ ಎಂದರು.

ಹಿರಿಯ ಮೇಲ್ವಿಚಾರಕಿಯರಾದ ಜಯಲಕ್ಷ್ಮೀ ಮೆಣಸಿನಕಾಯಿ, ಮಾಧವಿ ವೈದ್ಯ, ಲಲಿತಾ ನಾಯ್ಕರ್, ಮಂಜುಳಾ ಗುಗ್ಗರಿ, ಅಂಗನವಾಡಿ ಕಾರ್ಯಕರ್ತೆ ಲಲಿತ ಅರಳಿ ಇತರರಿದ್ದರು.

ಲೈನ್‌ಮ್ಯಾನ್ ಮಗನಿಗೆ ಶೇ.96 ಅಂಕ



ಹಟ್ಟಿಚಿನ್ನದಗಣಿ: ಶಿವಶಂಕ್ರಯ್ಯ ಮಲ್ಲೇಶಯ್ಯಸ್ವಾಮಿ ವಿದ್ಯಾರ್ಥಿ ದ್ವಿತಿಯ ಪಿಯು ವಿಜ್ಞಾನ ವಿಭಾಗದಲ್ಲಿ 574 ಅಂಕ, ಪ್ರತಿಶತ 96 ಪಡೆಯುವದರೊಂದಿಗೆ ಉತ್ತಮ ಸಾಧನೆಗೈದಿದ್ದಾನೆ. ವಿದ್ಯಾರ್ಥಿಯ ತಂದೆ ಮಲ್ಲೇಶಯ್ಯಸ್ವಾಮಿ ಹಟ್ಟಿಚಿನ್ನದಗಣಿ ಜೆಸ್ಕಾಂ ಲೈನ್ ಮ್ಯಾನ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ವಿದ್ಯಾರ್ಥಿ ಗಂಗಾವತಿ ನಗರದ ವಿದ್ಯಾನಿಕೇತನ ವಿಜ್ಞಾನ ಕಾಲೇಜಿನಲ್ಲಿ ಅಭ್ಯಾಸ ಮಾಡುತ್ತಿದ್ದನು.

ಸರ್ಕಾರಿ ಪಿಯು ಕಾಲೇಜ್‌ಗೆ ಶೇ.87.5ರಷ್ಟು ಫಲಿತಾಂಶ







ಶ್ರೀರಾಮನಗರ: ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ. 87.5ರಷ್ಟು ಫಲಿತಾಂಶ ಪಡೆದಿದೆ.ಕಲಾ ಮತ್ತು ವಾಣಿಜ್ಯ ವಿಭಾಗದಿಂದ 5 ವಿದ್ಯಾರ್ಥಿನಗಳು ಅತ್ಯುನ್ನತ ಶ್ರೇಣಿಯಲ್ಲಿ, 9 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ, 5 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ, 2 ವಿದ್ಯಾರ್ಥಿಗಳು ತೃತೀಯ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಕಲಾ ವಿಭಾಗದಿಂದ ಶೇ.78.5ರಷ್ಟು ಹಾಗೂ ವಾಣಿಜ್ಯ ವಿಭಾಗದಿಂದ ಶೇ.100ರಷ್ಟು ಫಲಿತಾಂಶ ಬಂದಿದೆ. ಕಲಾ ವಿಭಾಗದಲ್ಲಿ ಹುಲಿಗೆಮ್ಮ 527, ಮಹಾದೇವಿ 458, ಪುಷ್ಪ 453 ಅಂಕಗಳು ಮತ್ತು ವಾಣಿಜ್ಯ ವಿಭಾಗದಲ್ಲಿ ನಾನಿ 568, ಅರುಣಾ ಕುಮಾರಿ 535, ಉಷಾ 527 ಅಂಕಗಳನ್ನು ಪಡೆದಿದ್ದಾರೆ. ಸಾಧನೆಗೈದ ಎಲ್ಲ ವಿದ್ಯಾರ್ಥಿಗಳಿಗೆ ಕಾಲೇಜಿನ ಅಭಿವೃದ್ಧಿ ಸಮಿತಿಯ ಅಧ್ಯಕ್ಷರು, ಸದಸ್ಯರು, ಭೂದಾನಿಗಳು, ಗ್ರಾಮದ ಶಿಕ್ಷಣ ಪ್ರೇಮಿಗಳು, ಉಪನ್ಯಾಸಕರು ಹಾಗೂ ಪ್ರಾಂಶುಪಾಲರಾದ ಡಿ.ಎಸ್. ಮಾಲಗೌಡರ್ ಸಂತಸ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

ಮದ್ಯ ಮಾರಾಟ ನಿಷೇಧ

ರಾಯಚೂರು: ಜಿಲ್ಲೆಯಲ್ಲಿ ಏ.14ರಂದು ಡಾ.ಬಿ.ಆರ್. ಅಂಬೇಡ್ಕರ ಜಯಂತಿ ಪ್ರಯುಕ್ತ ಆ ದಿನದಂದು ಯಾವುದೇ ಅಹಿತಕರ ಘಟನೆಗಳು ಜರುಗದಂತೆ ಮುನ್ನೆಚರಿಕೆ ಕ್ರಮವಾಗಿ ಏ.13ರ ರಾತ್ರಿ 11ಗಂಟೆಯಿಂದ ಏ.15ರ ಬೆಳಿಗ್ಗೆ 6 ಗಂಟೆಯವರೆಗೆ ರಾಯಚೂರು ಜಿಲ್ಲೆಯಾದ್ಯಂತ ಮದ್ಯ ಮಾರಾಟ ಅಥವಾ ಸಾಗಾಣಿಕೆಯನ್ನು ನಿಷೇಧಿಸಿ ಪ್ರಭಾರಿ ಜಿಲ್ಲಾಧಿಕಾರಿ ಈಶ್ವರ ಕುಮಾರ ಕಾಂದೂ ಆದೇಶ ಹೊರಡಿಸಿದ್ದಾರೆ. ಜಿಲ್ಲೆಯಾದ್ಯಂತ ಎಲ್ಲಾ ರೀತಿಯ ಮದ್ಯ ತಯಾರಿಕಾ ಘಟಕಗಳು, ಸಾಗಾಣಿಕೆ, ಸಂಗ್ರಹಣೆಯನ್ನು ಮತ್ತು ಮಾರಾಟ ಮಳಿಗೆಗಳನ್ನು ಬಂದ್ ಮಾಡುವ ಅವಶ್ಯಕತೆ ಇರುವುದರಿಂದ ಈ ದಿನಗಳಂದು ಶುಷ್ಕ ದಿನಗಳನ್ನಾಗಿ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ.



ಕೊಪ್ಪಳ: ಜಿಲ್ಲೆಯ ಕುಕನೂರು ತಾಲೂಕಿನ ಮಂಗಳೂರು ಗ್ರಾಮದ ಪ್ರತಿಭಾವಂತ ವಿದ್ಯಾರ್ಥಿನಿ ಸಂಗೀತಾ ದ್ವಿತೀಯ ಪಿಯುಸಿ ಕಲಾ ವಿಭಾಗದ ಪರೀಕ್ಷೆಯಲ್ಲಿ ಕರ್ನಾಟಕ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿರುವುದಕ್ಕೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ವಿದ್ಯಾರ್ಥಿನಿಯ ಮನೆಗೆ ಭೇಟಿ ನೀಡಿ ವಿದ್ಯಾರ್ಥಿನಿ ಹಾಗೂ ಪಾಲಕರನ್ನು ಸನ್ಮಾನಿಸಿ ಪ್ರೋತ್ಸಾಹಿಸಿದರು.

ಖರ್ಗೆ ಹೇಳಿಕೆ ಖಂಡಿಸಿ ಬಿಜೆಪಿಯಿಂದ ದೂರು

ರಾಯಚೂರು: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಬಿಜೆಪಿ ಮತ್ತು ಆರ್‌ಎಸ್‌ಎಸ್ ವಿರುದ್ಧ ನೀಡಿರುವ ಪ್ರಚೋದನಕಾರಿ ಹೇಳಿಕೆ ಖಂಡಿಸಿ ಬಿಜೆಪಿ ಯುವ ಮೋರ್ಚಾದಿಂದ ಎಸ್ಪಿಗೆ ದೂರು ನೀಡಲಾಯಿತು.

ಗುರುವಾರ ಬಿಜೆಪಿ ಕಾರ್ಯಕರ್ತರು ಆವರಣದಲ್ಲಿ ಕೆಲ ಕಾಲ ಪ್ರತಿಭಟನೆ ನಡೆಸಿ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಗೋಷಣೆಗಳನ್ನು ಕೂಗಿದರು. ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಬಿಜೆಪಿ ಮತ್ತು ಆರ್‌ಎಸ್‌ಎಸ್ ನಂತಹ ರಾಷ್ಟ್ರಭಕ್ತ ಸಂಘಟನೆಗಳನ್ನು ವಿಷಕಾರಿ ಹಾವು ಎಂದು ಹೇಳಿದ್ದಲ್ಲದೆ ಹಿಂದುಗಳನ್ನು ಹತ್ಯೆ ಮಾಡುವಂತೆ ಕರೆ ನೀಡುವ ಮೂಲಕ ದೇಶದಲ್ಲಿ ಹಿಂಸೆಯನ್ನು ಪ್ರಚೋದಿಸುವುದರ ಜೊತೆಗೆ ನಮ್ಮ ಕಾರ್ಯಕರ್ತರ ಮೇಲೆ ನೇರ ದಾಳಿ ಮಾಡಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ ಅವರ ವಿರುದ್ಧ ತಕ್ಷಣ ಕಾನೂನು ಕ್ರಮ ಕೈಗೊಳ್ಳಬೇಕು. ಅವಹೇಳನಕಾರಿ ಹೇಳಿಕೆಗೆ ಮಲ್ಲಿಕಾರ್ಜುನ ಖರ್ಗೆ ಬೇಶರತ್ತಾಗಿ ಕ್ಷಮೆಯಾಚನೆ ಮಾಡಬೇಕು ಎಂದು ಮನವಿ ಪತ್ರದಲ್ಲಿ ತಿಳಿಸಲಾಗಿದೆ. ರಾಜಕುಮಾರ, ಬಂಡೇಶ ವಲ್ಕಂದಿನ್ನಿ, ನರಸಪ್ಪ ಎಕ್ಲಾಸ್ಪುರ, ಊಟ್ಕೂರ್ ರಾಘವೇಂದ್ರ, ಪ್ರದೀಪ್ ಸನ್ನಾಳ, ಜೆ.ಎಂ.ಮೌನೇಶ್, ಯು.ನರಸರೆಡ್ಡಿ, ಎನ್.ಕಾರ್ತಿಕ ರೆಡ್ಡಿ, ರವಿಗೌಡ ಮಿರಾಪುರ್, ಉಪ್ಪೇಟ್ ರಾಜಶೇಖರ, ಲಕ್ಷ್ಮಣ್, ಸುದೀಪ್, ಅಂಜಿ, ರೋಹಿತ್ ಕಡಗೋಲ, ವಿಜಯಕುಮಾರ, ಅನಿಲಕುಮಾರ, ವೆಂಕಟೇಶ ಉಪ್ಪಾರ, ಶ್ರೀಕಾಂತ ಚಿಕ್ಕಿ ಸೇರಿದಂತೆ ಇತರರಿದ್ದರು.



ರಾಯಚೂರು: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಬಿಜೆಪಿ ಮತ್ತು ಆರ್‌ಎಸ್‌ಎಸ್ ವಿರುದ್ಧ ನೀಡಿರುವ ಪ್ರಚೋದನಕಾರಿ ಹೇಳಿಕೆ ಖಂಡಿಸಿ ಬಿಜೆಪಿ ಯುವ ಮೋರ್ಚಾದಿಂದ ಎಸ್ಪಿಗೆ ದೂರು ನೀಡಲಾಯಿತು. ನಗರ ಶಾಸಕ ಡಾ.ಎಸ್.ಶಿವರಾಜ ಪಾಟೀಲ, ಯುವ ಮೋರ್ಚಾ ಜಿಲ್ಲಾಧ್ಯಕ್ಷ ಎನ್.ವಿನಾಯಕ ರಾವ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರವೀಂದ್ರ ಜಲ್ದಾರ್, ಸಂತೋಷ ರಾಜಗುರು, ನೀಲಗಲ್ ಜಂಬಣ್ಣ, ಕಡಗೋಳ ಆಂಜನೇಯ, ಟಿ.ಶ್ರೀನಿವಾಸ ರೆಡ್ಡಿ ಇದ್ದರು.

ಕಾರ್ಮಿಕ ಸಂಘಟನೆಗಳ ಒಕ್ಕೂಟದಿಂದ ಕ್ರಮಕ್ಕೆ ಒತ್ತಾಯ

ವ್ಯಾಪಾರಸ್ಥರಿಂದ ತೆರಿಗೆ ವಂಚನೆ

ಕೊಪ್ಪಳ: ಜಿಲ್ಲೆಯ ಬಹುತೇಕ ಅಂಗಡಿ-ಮುಂಗಟ್ಟುಗಳಲ್ಲಿ ವ್ಯಾಪಾರಸ್ಥರು ಗ್ರಾಹಕರಿಗೆ ಅಧಿಕೃತ ರಶೀದಿಯನ್ನು ನೀಡುತ್ತಿಲ್ಲ. ಗ್ರಾಹಕರು ರಶೀದಿ ಕೇಳಿದರೂ ಸಹ ಸರಕುಗಳ ಮೇಲೆ ತೆರಿಗೆ ಹೆಚ್ಚಾಗುತ್ತದೆ ಎಂಬ ನೆಪವೊಡ್ಡಿ ಅಥವಾ ಸಣ್ಣ ಕೈಬರಹದ ಚೀಟಿ ನೀಡಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ತೆರಿಗೆ ವಂಚನೆ ನಡೆಸಿದ್ದಾರೆ. ವಿವಿಧ ವ್ಯಾಪಾರಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಒತ್ತಾಯಿಸಿ ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಅವರಿಗೆ ಜನಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಸ್.ಎ.ಗಫಾರ್ ಹಾಗೂ ಭಾರತೀಯ ಕಾರ್ಮಿಕ ಸಂಘಟನೆಗಳ ಒಕ್ಕೂಟದ ಸಂಚಾಲಕ ಬಸವರಾಜ್ ಶೀಲವಂತರ್ ನೇತೃತ್ವದಲ್ಲಿ ಶುಕ್ರವಾರ ಮನವಿ ಸಲ್ಲಿಸಲಾಯಿತು.



ವ್ಯಾಪಾರಸ್ಥರು ರಶೀದಿ ನೀಡದಿದ್ದರೆ ಸರ್ಕಾರಕ್ಕೆ ಸೇರಬೇಕಾದ ತೆರಿಗೆ ಹಣ ಸೋರಿಕೆಯಾಗುತ್ತಿದೆ. ವಸ್ತುಗಳಲ್ಲಿ ದೋಷ ಕಂಡು ಬಂದಾಗ ಗ್ರಾಹಕರಿಗೆ ಬದಲಾಯಿಸಲು ಅಥವಾ ವಾರಂಟಿ ಪಡೆಯಲು ಸಾಧ್ಯವಾಗುತ್ತಿಲ್ಲ, ಇದು ಗ್ರಾಹಕ ಸಂರಕ್ಷಣಾ ಕಾಯ್ದೆಯ ನೇರ ಉಲ್ಲಂಘನೆಯಾಗಿದೆ. ಅನೇಕ ವ್ಯಾಪಾರಸ್ಥರು ಅಧಿಕೃತ ರಶೀದಿ ಇದ್ದರೂ ಗ್ರಾಹಕರಿಗೆ ಕೊಡುವುದಿಲ್ಲ, ಇನ್ನೂ ಕೆಲವರು ರಶೀದಿ ಪುಸ್ತಕಗಳನ್ನೇ ತಯಾರಿಸಿಲ್ಲ. ಇವು ನೋಡಿಕೊಳ್ಳದ ಕರ್ತವ್ಯ ನಿರ್ಲಕ್ಷ್ಯ ವಹಿಸಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದರು.

ಗಿಣಿಗೇರಾ ನಾಗರಿಕ ಹೋರಾಟ ಸಮಿತಿ ಸಂಚಾಲಕ ಮಂಗಳೇಶ ರಾಥೋಡ್, ಪಾಸ್ಟರ್ಸ್ ಅಸೋಸಿಯೇಷನ್ ಜಿಲ್ಲಾ ಅಧ್ಯಕ್ಷ ಚನ್ನಬಸಪ್ಪ ಅಪ್ಪಣವರ್, ಮೊಹಮ್ಮದ್ ಗೌಸ್ ನೀಲಿ ಇತರರಿದ್ದರು.

ಲಾರಿ ಡಿಕ್ಕಿ ಅಪಾರ ಹಾನಿ: ಪರಿಹಾರಕ್ಕೆ ಆಗ್ರಹ

ಯಲಬುರ್ಗಾ: ಪಟ್ಟಣದ ಡಾ.ಜಗಜೀವನ ರಾಂ ಕಾಲೋನಿ ಹತ್ತಿರ ಗುರುವಾರ ತಡರಾತ್ರಿ ಸಾಯಿ ವಿಂಡ್ ಕಂಪನಿಗೆ ಸೇರಿದ ಲಾರಿಯೊಂದು 9 ವಿದ್ಯುತ್ ಕಂಬಗಳಿಗೆ ಡಿಕ್ಕಿ ಹೊಡೆದ ಪರಿಣಾಮ ವಿದ್ಯುತ್ ಕಂಬಗಳು ಮನೆಗಳ ಮೇಲೆ ಉರುಳಿ ಬಿದ್ದು ಅಪಾರಹಾನಿಯಾಗಿದ್ದು, ಕೂಡಲೇ ಪರಿಹಾರ ನೀಡುವಂತೆ ಒತ್ತಾಯಿಸಿ ಶುಕ್ರವಾರ ಆ ಕಾಲೋನಿಯ ದಲಿತ ನಿವಾಸಿಗಳು ಪಟ್ಟಣದ ತಹಶೀಲ್ದಾರ್ ಕಚೇರಿ ಮುಂದೆ ತಮಟೆ ಬಾರಿಸುತ್ತ ಪ್ರತಿಭಟನೆ ನಡೆಸಿದರು.

ದಲಿತ ಮುಖಂಡ ಯಮನೂರಪ್ಪ ನಡುವಲಮನಿ, ಶಂಕರ ಭಾವಿಮನಿ, ಚಂದ್ರಪ್ಪ ನಡುವಲನಿ, ಬಸವರಾಜ ಹಾಗೂ ಶಿವು ಬಣಕಾರ ಮಾತನಾಡಿ, ಗುರುವಾರ ರಾತ್ರಿ 2ಗಂಟೆಯ ಸುಮಾರಿಗೆ ಸಾಯಿ ವಿಂಡ್ ಕಂಪನಿಯ ಲಾರಿಯೊಂದು ವಿಂಡ್ ಪ್ಯಾನಿನ ಸಾಮಗ್ರಿ ಹೇರಿಕೊಂಡು ಹೋಗುತ್ತಿದ್ದಾಗ ರಸ್ತೆ ಪಕ್ಕದಲ್ಲಿರುವ ವಿದ್ಯುತ್ ಕಂಬಗಳಿಗೆ ತಗುಲಿ 9 ವಿದ್ಯುತ್ ಕಂಬಗಳು ಉರುಳಿ ವಿದ್ಯುತ್ ತಂತಿಗಳು ಹರಿದು ಬಿದ್ದಿವೆ. ಅದೃಷ್ಟಾ ವಶಾವತ್ ವಿದ್ಯುತ್ ಕಡಿತಗೊಂಡಿದ್ದರಿಂದ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ, ಆದರೆ ಮನೆಗಳಲ್ಲಿನ ಫ್ರಿಡ್ಜ್, ಪ್ಯಾನ್, ಟಿವಿ, ಎಸಿ ಸೇರಿದಂತೆ ಅನೇಕ ಸಾಮಗ್ರಿಗಳು ಮತ್ತು ಮನೆಗಳ ಗೋಡೆಗಳಿಗೆ ಸಾಕಷ್ಟು ನಷ್ಟವಾಗಿವೆ. ಇಡೀ ರಾತ್ರಿಯಿಂದ ಶುಕ್ರವಾರ ಮಧ್ಯಾನದವರೆಗೊ ವಿದ್ಯುತ್ ಸಂಪರ್ಕವಿಲ್ಲದೆ ನಿವಾಸಿಗಳು ಪರದಾಡುವಂತಾಗಿದೆ ಎಂದರು.

ಪ್ರತಿಭಟನಾಕಾರರ ಸ್ಥಳಕ್ಕೆ ತಹಶೀಲ್ದಾರ ಪ್ರಕಾಶ ನಾಶಿ, ಸಿಪಿಐ ಮೌನೇಶ್ವರ ಪಾಟೀಲ, ಪಪಂ ಮುಖ್ಯಾಧಿಕಾರಿ ನಾಗೇಶ ಪಿಎಸ್‌ಐ ವಿಜಯಪ್ರತಾಪ ಆಗಮಿಸಿ ಖಾಸಗಿ ಕಂಪನಿಯವರು ರಾತ್ರಿ ಸಮಯದಲ್ಲಿ ಈ ರೀತಿ ಆಗಿರುವ ಘಟನೆಗೆ ವಿಷಾದ ವ್ಯಕ್ತಪಡಿಸುವ ಮೂಲಕ ಕಂಪನಿ ಮಾಲೀಕರರಿಂದ ಮನೆಗಳಲ್ಲಿನ ವಸ್ತುಗಳು ಹಾನಿಗೊಳಗಾದ ಫಲಾನುಭವಿಗಳಿಗೆ ಪರಿಹಾರ ಹಾಗೂ ವಿದ್ಯುತ್ ಕಂಬಗಳನ್ನು ಸರಿಪಡಿಸಿ ಸಂಪರ್ಕ ಕಲ್ಪಿಸಿಕೊಡುವುದಾಗಿ ಭರವಸೆ ನೀಡಿದ ಹಿನ್ನೆಲೆ ಪ್ರತಿಭಟನೆ ಹಿಂಪಡೆದರು. ಮುಖಂಡರಾದ ಶಿವಾನಂದ, ಪ್ರಕಾಶ, ಈರಪ್ಪ ಬಣಕಾರ, ಯಮನೂರಪ್ಪ, ದುರಗಪ್ಪ, ವಿಜಯ ಜಕ್ಕಲಿ, ಡಿ.ಕೆ.ಪರುಶುರಾಮ, ಶಶಿಧರ ಹೊಸ್ಮನಿ, ಹುಲಗಪ್ಪ ಬಣಕಾರ, ಶಂಕರ ಜಕ್ಕಲಿ, ಕನಕೇಶ ಪೇಮಟರ್, ಶ್ರೀಕಾಂತ ಪೂಜಾರ, ಶ್ರೀಧರ ಕಟ್ಟಿಮನಿ ಮತ್ತಿತರರರಿದ್ದರು.



ಕೆ.ಬೋದೂರು ತಾಂಡಾ: ನೀರಿಗೆ ಪರದಾಟ

ಕುಷ್ಟಗಿ: ತಾಲೂಕಿನ ಕೆ.ಬೋದೂರು ತಾಂಡಾದಲ್ಲಿ ಕಳೆದ ಒಂದು ತಿಂಗಳಿನಿಂದ ನೀರಿನ ಸಮಸ್ಯೆ ತಾಂಡವಾಡುತ್ತಿದೆ.

ಬಿಜಕಲ್ ಗ್ರಾಪಂ ವ್ಯಾಪ್ತಿಯ ಕೆ.ಬೋದೂರು ತಾಂಡಾದಲ್ಲಿ 350-400 ಮನೆಗಳು ಇದ್ದು, 600-800 ಜನ ಸಂಖ್ಯೆಯನ್ನು ಹೊಂದಿದೆ. ತಾಂಡಾದಲ್ಲಿ ಕಳೆದ ಒಂದು ತಿಂಗಳಿನಿಂದ ನೀರಿನ ಸಮಸ್ಯೆ ತೀವ್ರವಾಗಿ ಕಾಡುತ್ತಿದೆ. ತಾಂಡದಲ್ಲಿ ವಿದ್ಯುತ್ ಇದ್ದಾಗ ಬೋರವೇಲ್ ಮೂಲಕ ಸಣ್ಣ ಟ್ಯಾಂಕ್ ನೀರು ಸಂಗ್ರಹಿಸಲಾಗುತ್ತದೆ. ವಿದ್ಯುತ್ ಸಂಪರ್ಕ ಕಡಿತಗೊಂಡರೆ ಮತ್ತಷ್ಟು ನೀರಿನ ಸಮಸ್ಯೆ ಉದ್ಭವವಾಗುತ್ತದೆ. ಇಡೀ ತಾಂಡಕ್ಕೆ ಒಂದೇ ಒಂದು ಕೊಳವೆ (ಬೋರ್‌ವೇಲ್) ಇದ್ದು ಅದರ ಮೂಲಕ ನೀರು ಪೂರೈಕೆ ಮಾಡಲಾಗುತ್ತದೆ. ತಾಂಡಾದಲ್ಲಿ ಜೆಜೆಎಂ ನೀರು ಪೂರೈಕೆ ಆಗುತ್ತಿಲ್ಲ. ಹಾಗಾಗಿ ನೀರಿನ ಸಮಸ್ಯೆಗೆ ಕಾರಣವಾಗಿದೆ ಎನ್ನಲಾಗುತ್ತದೆ.



ವಿಜ್ಞಾನ ವಿಭಾಗದಲ್ಲಿ ಉತ್ತಮ ಅಂಕ ಪಡೆದ ತಾಂಡದ ಮಕ್ಕಳು



ಸಿದ್ದಯ್ಯ ಹೆಸರೂರು

ಮಸ್ಕಿ: ತಾಲೂಕಿನ ಮಾರಲದಿನ್ನಿ ತಾಂಡಾದ ಕೂಲಿ ಕಾರ್ಮಿಕರ ಮಕ್ಕಳು ಪಿಯುಸಿ ಸೈನ್ಸ್ ಪರೀಕ್ಷೆಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದು ಶಾಲೆಯ ಹಾಗೂ ಗ್ರಾಮದ ಕೀರ್ತಿ ಪತಾಕೆ ಹೆಚ್ಚಿಸಿದ್ದಾರೆ.

ತಾಲೂಕಿನ ಸಮೀಪದ ಮಾರಲದಿನ್ನಿ ತಾಂಡದ ಬೇರೆ ಬೇರೆ ಪೇಟೆಗೆ ತಂದೆ, ತಾಯಿಗಳು ಗುಳೆಹೋಗಿ ಕೂಲಿ ನಾಲಿ ಮಾಡಿ ಬರುವ ಹಣ ಜೊತೆಗೆ ಸಾಲ ಮಾಡಿ ಮಕ್ಕಳಿಗೆ ವಿವಿಧ ಖಾಸಗಿ ಶಾಲೆಗಳಲ್ಲಿ ಓದಿಸಿದ್ದಾರೆ. ಮಕ್ಕಳು ಸಹ ಹಗಲು ರಾತ್ರಿ ಕಷ್ಟಪಟ್ಟು ಓದಿ ವಿಜ್ಞಾನ ವಿಭಾಗದಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದು ಪೋಷಕರ ಕೀರ್ತಿ ಪತಾಕೆ ಹೆಚ್ಚಿಸಿದ್ದಾರೆ.

ಪ್ರಕಾಶ ಅವರು ಬೆಂಗಳೂರಿನ ಕಟ್ಟಡ ಕಾರ್ಮಿಕ ಗಾರೆ ಕೆಲಸ ಮಾಡಿ ಮಗನಿಗೆ ನಾಗರಬೆಟ್ಟದ ಆಕ್ಸ್‌ಫರ್ಡ್ ಪಾಟೀಲ ಪಿಯು ಕಾಲೇಜಿನಲ್ಲಿ ಸೈನ್ಸ್ ಪ್ರವೇಶ ಮಾಡಿಸಿದ್ದರು, ಮಗನು ತಂದೆಯ ಕಷ್ಟ ಗಮನಿಸಿ ಚೆನ್ನಾಗಿ ವಿದ್ಯಾಭ್ಯಾಸ ಮಾಡಿ 554ಅಂಕ ಪಡೆದು ಶೇ.92ಅಂಕ ಪಡೆದಿದ್ದಾನೆ. ಕೇಶಪ್ಪ ಅವರು ಜಮೀನಿನಲ್ಲಿ ಕೂಲಿ ನಾಲಿ ಮಾಡಿ ಬರುವ ಹಣದಲ್ಲಿ ಮಗ ಉದಯನಿಗೆ ಲಿಂಗಸ್ಗೂರಿನ ಸಮ್ ಕಾಲೇಜಿನಲ್ಲಿ ಸೈನ್ಸ್ ಓದಿಸಿದ್ದಾರೆ. ಪೋಷಕರ ಶ್ರಮಕ್ಕೆ ತಕ್ಕ ಮಗ 553ರಷ್ಟು 92 ಅಂಕ ಪಡೆದಿದ್ದಾರೆ. ಶೇಖರ ಅವರು ಸಿಂಧನೂರಿನ ಎಪಿಎಂಸಿಯಲ್ಲಿ ಹಮಾಲಿ ಕೆಲಸ ಮಾಡಿ ಮಗನಿಗೆ ಗಂಗಾವತಿಯ ಶ್ರೀನಗರ ವಿದ್ಯಾನಿಕೇತನ ಕಾಲೇಜಿನಲ್ಲಿ ಓದಿಸಿದ್ದರಿಂದ ಮಗ ವಸತಿ ನಿಲಯದಲ್ಲಿ ಇದ್ದು, ಉತ್ತಮ ವಿದ್ಯಾಭ್ಯಾಸ ಮಾಡಿರುವುದರಿಂದ 600ಕ್ಕೆ 564ರಷ್ಟು ಪಡೆದು ಶೇ 94 ಅಂಕ ಪಡೆದಿದ್ದಾರೆ. ಅಮರೇಶ ರಾಠೋಡ ಅವರು ಖಾಸಗಿ ಕಂಪನಿವೊಂದರಲ್ಲಿ ಅಕೌಂಟ್ ವಿಭಾಗದಲ್ಲಿ ಕೆಲಸ ಮಾಡಿ ಗಂಗಾವತಿಯ ಶ್ರೀರಾಮನಗರ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿಸಿದ್ದು, ತಂದೆಯ ಕಷ್ಟಪಡುತ್ತಿರುವುದನ್ನು ಗಮನಿಸಿ ಮಗ ಶ್ರೀರಾಮ ಅವರು ವಸತಿ ಶಾಲೆಯಲಿದ್ದು ಓದಿ 564 ರಷ್ಟು ಶೇ.93 ಅಂಕ ಪಡೆದು ಪೋಷಕರು ಕೀರ್ತಿ ಪತಾಕೆ ಹೆಚ್ಚಿಸಿದ್ದಾನೆ. ಇದರಿಂದ ಶಾಲೆಯ ಸಿಬ್ಬಂದಿ ಹಾಗೂ ಗ್ರಾಮದ ಮುಖಂಡರು ಫುಲ್ ಖುಷ್ ಆಗಿ ಅಭಿನಂದನೆ ಸಲ್ಲಿಸಿದ್ದಾರೆ.

ಪಿಯುಸಿ ಫಲಿತಾಂಶದಲ್ಲಿ ಮಹಿಳೆಯರೇ ಮೇಲುಗೈ

ಹನುಮಸಾಗರ: ಪಟ್ಟಣದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷಾ ಫಲಿತಾಂಶದಲ್ಲಿ ಇಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜು ಗಮನಾರ್ಹ ಸಾಧನೆ ಮಾಡಿದ್ದು, ಒಟ್ಟು ಶೇ.89.11ರಷ್ಟು ಫಲಿತಾಂಶ ದಾಖಲಿಸಿ ಪಟ್ಟಣಕ್ಕೆ ಕೀರ್ತಿ ತಂದಿದೆ.

ಕಾಲೇಜಿನಿಂದ ಒಟ್ಟು 101 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಅವರಲ್ಲಿ 90 ಮಂದಿ ಉತ್ತೀರ್ಣರಾಗಿದ್ದಾರೆ. ಫಲಿತಾಂಶದಲ್ಲಿ 14 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 61 ಮಂದಿ ಪ್ರಥಮ ಶ್ರೇಣಿ, 14 ಮಂದಿ ದ್ವಿತೀಯ ಶ್ರೇಣಿ ಮತ್ತು 1 ವಿದ್ಯಾರ್ಥಿ ತೃತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಶೇ.90ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳಲ್ಲಿ ಹನಮವ್ವ ಬಂಡರಗಲ್ (94.66%), ವಿಜಯಲಕ್ಷ್ಮೀ ಕಟೆಗೇಲರ್ (93.83%), ಅಮೃತ ತುಳಸಿಕಟ್ಟಿ (92.66%), ವೈಷ್ಣವಿ ಎಸ್.ಮೇಟಿ (91%), ರೇಖಾ ಕುರಿ (90.66%) ಮತ್ತು ಮಂಜುಳಾ ಬೊಮ್ಮನಾಳ (90.16%) ಅವರು ಪ್ರಮುಖರಾಗಿದ್ದಾರೆ.



ವಿಷಯವಾರು ಫಲಿತಾಂಶದಲ್ಲೂ ಕಾಲೇಜು ಮೆಚ್ಚುಗೆಗೆ ಪಾತ್ರವಾಗಿದೆ. ಕನ್ನಡ, ಅರ್ಥಶಾಸ್ತ್ರ ಮತ್ತು ರಾಜ್ಯಶಾಸ್ತ್ರ ವಿಷಯಗಳಲ್ಲಿ ಪರೀಕ್ಷೆಗೆ ಹಾಜರಾದ ಎಲ್ಲಾ 101 ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ ನೂರಕ್ಕೆ ನೂರರಷ್ಟು ಫಲಿತಾಂಶ ಸಾಧಿಸಲಾಗಿದೆ.

ವೈಯಕ್ತಿಕ ಸಾಧನೆಗಳಲ್ಲೂ ಇಬ್ಬರು ವಿದ್ಯಾರ್ಥಿನಿಯರು ವಿಶೇಷವಾಗಿ ಗಮನ ಸೆಳೆದಿದ್ದಾರೆ. ಹನಮವ್ವ ಬಂಡರಗಲ್ ಅವರು ಸಮಾಜಶಾಸ್ತ್ರದಲ್ಲಿ 100ಕ್ಕೆ 100 ಅಂಕಗಳನ್ನು ಗಳಿಸಿದ್ದು, ವಿಜಯಲಕ್ಷ್ಮಿ ಕಟೆಗೇಲರ್ ಅವರು ರಾಜ್ಯಶಾಸ್ತ್ರದಲ್ಲಿ 100ಕ್ಕೆ 100 ಅಂಕಗಳನ್ನು ಪಡೆದುಕೊಂಡಿದ್ದಾರೆ.

ಉದ್ಯೋಗ ಖಾತ್ರಿ ಯೋಜನೆ ಸಮರ್ಪಕ ಜಾರಿಗೆ ಮುಂದಾಗಿ

ಕುಕನೂರ: ಕೇಂದ್ರ ಸರ್ಕಾರ ಮಹಾತ್ಮ ಗಾಂಧೀಜಿ ಉದ್ಯೋಗ ಖಾತ್ರಿ ಯೋಜನೆಯನ್ನು ಸಮರ್ಪಕವಾಗಿ ಜಾರಿಗೆ ತರುವಂತೆ ಕ್ರಮ ಕೈಗೊಳ್ಳಲು ಮುಂದಾಗಬೇಕು ಎಂದು ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿಯ ಅಧ್ಯಕ್ಷರಾದ ಯಂಕಣ್ಣ ಯರಾಶಿ ಒತ್ತಾಯಿಸಿದರು.

ಅವರು ಪಟ್ಟಣದ ಪ್ರವಾಸಿ ಮಂದಿರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಉದ್ಯೋಗ ಖಾತ್ರಿ ಯೋಜನೆಯು ಗ್ರಾಮೀಣ ಪ್ರದೇಶದಲ್ಲಿ ಸರಿಯಾಗಿ ನಡೆಯದೇ ಇರುವುದರಿಂದ ಕಲ್ಯಾಣ ಕರ್ನಾಟಕದ ಪ್ರದೇಶಗಳಾದ ಬೀದರ್ ಯಾದಗಿರಿ ಗುಲ್ಬರ್ಗ ಹಾಗೂ ಇತರೆ ಜಿಲ್ಲೆಗಳ ಜನತೆ ಈಗಾಗಲೇ ದೂರದ ಸ್ಥಳಗಳಿಗೆ ಉದ್ಯೋಗಕ್ಕಾಗಿ ವಲಸೆ ಹೋಗುತ್ತಿದ್ದಾರೆ. ಇದುವರೆಗೂ ಮಾಡಿದ ಕೆಲಸ ಕಾರ್ಯಗಳ ಕಾರ್ಮಿಕರಿಗೆ ವೇತನ ನೀಡಿಲ್ಲ. ಸರಕಾರ ಇಂತಹ ಸಮಸ್ಯೆಗಳಿಂದ ರಾಜ್ಯದ ಜನತೆ ಕಂಗೆಟ್ಟಿದ್ದಾರೆ. ಮಾಜಿ ಪ್ರಧಾನ ಮಂತ್ರಿ ಮನ್ಮೋಹನ್ ಸಿಂಗ್ ಜಾರಿಗೆ ತಂದಿರುವ ಈ ಮಹತ್ವಕಾಂಕ್ಷಿ ಯೋಜನೆ ಸಮರ್ಪಕವಾಗಿ ಅನುಷ್ಠಾನಕ್ಕೆ ತರಬೇಕು ಇಲ್ಲದಿದ್ದರೆ ಮುಂದಿನ ದಿನಮಾನಗಳಲ್ಲಿ ಗ್ರಾಮೀಣ ಮಟ್ಟದ ಜನರನ್ನು ಕರೆದುಕೊಂಡು ತೀವ್ರ ಹೋರಾಟವನ್ನು ಮಾಡಲಾಗುವುದು ಎಂದು ಎಚ್ಚರಿಸಿದರು. ಹಾಗೆ ಮುಂದಿನ ದಿನಮಾನಗಳಲ್ಲಿ ಯಲಬುರ್ಗಾ ವಿಧಾನಸಭಾ ಕ್ಷೇತ್ರದಲ್ಲಿ 14 ಕೆರೆಗಳಿಗೆ ನೀರು ತುಂಬಿಸುವ ಯೋಜನೆಯನ್ನು ಸ್ಥಳೀಯ ಶಾಸಕ ಸಿಎಂ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಅವರು ಈಗಾಗಲೇ 272 ಕೋಟಿ ಅನುದಾನವನ್ನು ಮಂಜೂರು ಮಾಡಿಸಿ ಕುಡಿಯುವ ನೀರಿನ ಭವಣೆ ನೀಗಿಸಲು ಮುಂದಾಗಿದ್ದಾರೆ ಎಂದರು. ಹನುಮಂತಗೌಡ ಚಂಡೂರ್, ಮಂಜುನಾಥ್ ಕಡೇಮನಿ, ಉದಯ ರಾಯರಡ್ಡಿ, ಮಾಂತೇಶ್ ಮುಧೋಳ್, ಮಂಜು ಎಡಿಯಾಪುರ, ರಾಘವೇಂದ್ರ ಕಾತರಕಿ ಇತರರಿದ್ದರು.



ನ.27ರಿಂದ ಕೆಕೆಸಿಐ ವಜ್ರ ಮಹೋತ್ಸವ ಆಚರಿಸಲು ತೀರ್ಮಾನ

ಕಲಬುರಗಿ: ಕಲ್ಯಾಣ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ (ಕೆಕೆಸಿಐ) ತನ್ನ 60 ವರ್ಷಗಳ ಸಾಧನೆಯನ್ನು ಸ್ಮರಣೀಯವಾಗಿಸಲು ನ.27, 28 ಮತ್ತು 29ರಂದು ವಜ್ರ ಮಹೋತ್ಸವವನ್ನು ಅದ್ದೂರಿಯಾಗಿ ಆಚರಿಸಲು ತೀರ್ಮಾನಿಸಿದೆ ಎಂದು ಕಲ್ಯಾಣ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಶರಣಬಸಪ್ಪ ಪಪ್ಪಾ ತಿಳಿಸಿದರು.

ಈ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು,ಕಳೆದ ಆರು ದಶಕಗಳಿಂದ ವ್ಯಾಪಾರಿಗಳು, ಕೈಗಾರಿಕೋದ್ಯಮಿಗಳು ಹಾಗೂ ರೈತರ ವಿಶ್ವಾಸವನ್ನು ಗಳಿಸಿರುವ ಕೆಕೆಸಿಐ ಸಂಸ್ಥೆ, ಪ್ರದೇಶದ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಿದ್ದು,ಈ ಹಿನ್ನೆಲೆಯಲ್ಲಿ ಕೆಕೆಸಿಐ ಅಧ್ಯಕ್ಷ ಶರಣಬಸಪ್ಪ ಎಂ. ಪಪ್ಪಾ ಅವರ ನೇತೃತ್ವದಲ್ಲಿ, ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಸಂತೋಷ್ ಸುರೇಶ್ ನಂದ್ಯಾಳ ಹಾಗೂ ಸಂಪತ್ ವಿ. ಪಾಟೀಲ್ ಅವರು ನವದೆಹಲಿಯಲ್ಲಿ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರನ್ನು ಭೇಟಿ ಮಾಡಿ ವಿವಿಧ ಅಭಿವೃದ್ಧಿ ವಿಚಾರಗಳನ್ನು ಚರ್ಚಿಸಿದರು.

ಕಲಬುರಗಿ ವಿಮಾನ ಸೇವೆಗಳ ಪುನರಾರಂಭ ಮತ್ತು ಪಿಎಂ ಮಿತ್ರ ಮೆಗಾ ಟೆಕ್ಸ್‌ಟೈಲ್ ಪಾರ್ಕ್ ಯೋಜನೆಯ ಪ್ರಗತಿಯನ್ನು ವೇಗಗೊಳಿಸುವ ಕುರಿತು ಸಚಿವರ ಗಮನಕ್ಕೆ ತರಲಾಯಿತು. ಈ ವೇಳೆ ಸಚಿವರು ನಾಗರಿಕ ವಿಮಾನಯಾನ ಸಚಿವ ರಾಮ್ ಮೋಹನ್ ನಾಯ್ಡು ಕಿಂಜರಾಪು ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿ, ಕಲಬುರಗಿ ವಿಮಾನ ನಿಲ್ದಾಣದಿಂದ ವಿಮಾನ ಸೇವೆಯನ್ನು ಒಂದು ತಿಂಗಳೊಳಗೆ ಪುನರಾರಂಭಿಸುವ ಭರವಸೆ ನೀಡಿದ್ದಾರೆ.

ಇದಲ್ಲದೆ, ಕಲ್ಯಾಣ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳನ್ನು ಕೇಂದ್ರ ಸಚಿವ ಸಂಪುಟ ಮಟ್ಟದಲ್ಲಿ ಚರ್ಚಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಸಚಿವರು ತಿಳಿಸಿದ್ದಾರೆ ಎಂದರು.



ಇದೇ ವೇಳೆ ನಡೆಯಲಿರುವ ವಜ್ರ ಮಹೋತ್ಸವಕ್ಕೆ ಪ್ರಹ್ಲಾದ್ ಜೋಶಿ ಅವರನ್ನು ಆಹ್ವಾನಿಸಲಾಗಿದ್ದು, ಅವರು ಕಾರ್ಯಕ್ರಮದಲ್ಲಿ ಭಾಗವಹಿಸುವುದಾಗಿ ಒಪ್ಪಿದ್ದಾರೆ.ಇನ್ನು ಕೆಕೆಸಿಐ ಪ್ರತಿನಿಧಿಗಳು ನೋಯ್ಡಾದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯಲ್ಲಿ ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ, ಭಾರತ್ ಫೋರ್ಜ್ ಸಂಸ್ಥೆಯ ಅಧ್ಯಕ್ಷ ಬಾಬಾ ಸಾಹೇಬ್ ಕಲ್ಯಾಣಿ ಹಾಗೂ ಪಾಟೀಲ್ ರೈಲು ಇನ್‌ಫ್ರಾಸ್ಟಕ್ಚರ್ ಸಂಸ್ಥೆಯ ಅಧ್ಯಕ್ಷ ಡಾ.ಎಲ್.ಎಸ್.ಪಾಟೀಲ ಅವರನ್ನು ಭೇಟಿ ಮಾಡಿ ಮಹೋತ್ಸವಕ್ಕೆ ಆಹ್ವಾನಿಸಿದರು. ಗಣ್ಯರು ಆಹ್ವಾನವನ್ನು ಸ್ವೀಕರಿಸಿ ಭಾಗವಹಿಸುವುದಾಗಿ ಭರವಸೆ ನೀಡಿದ್ದಾರೆ ಎಂದರು.

ಶ್ರೀಗಳ ಮೇಲಿನ ಆರೋಪ ಸತ್ಯಕ್ಕೆ ದೂರ: ಪಲ್ಲೇದ

ಯಲಬುರ್ಗಾ: ಕೂಡಲ ಸಂಗಮ ಪಂಚಮಸಾಲಿ ಪೀಠದ ಶ್ರೀಬಸವ ಜಯಮೃತ್ಯುಂಜಯ ಸ್ವಾಮಿಗಳ ಮೇಲೆ ಸುಳ್ಳು ಆರೋಪ ಮಾಡುವ ಮೂಲಕ ಅವರ ಗೌರವ,ಘನತೆಗೆ ದಕ್ಕೆತರುವ ಹುನ್ನಾರ ನಡೆಸಿದ್ದಾರೆ ಇದು ಸತ್ಯಕ್ಕೆ ದೂರವಾಗಿದೆ ಎಂದು ವೀರಶೈವ ಪಂಚಮಸಾಲಿ ಸಮಾಜ ತಾಲೂಕಾಧ್ಯಕ್ಷ ಕೆ.ಜಿ.ಪಲ್ಲೇದ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ಪ್ರತಿಕಾಗೋಷ್ಠಿ ಉದ್ದೇಶಿಸಿ ಮಾತನಡಿದ ಅವರು ಅಪರಿಚಿತ ಮಹಿಳೆಯೊರ್ವಳು ನಮ್ಮ ಸಮಾಜದ ಶ್ರೀಗಳ ವಿರುದ್ಧ ಮಹಿಳಾ ಆಯೋಗಕ್ಕೆ ದೂರು ನೀಡಿದ ತಕ್ಷಣ ಯಾವ ವಿಚಾರಣೆ ಮಾಡದೆ ಅವರ ವಿರುದ್ಧ ಕ್ರಮಕ್ಕೆ ಮುಂದಾಗಿರುವುದು ಸರಿಯಾದ ಕ್ರಮವಲ್ಲ ಎಂದು ಖಂಡಿಸಿದರು.

ನಮ್ಮ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಸೌಲಭ್ಯಗಾಗಿ ಶ್ರೀಗಳು ಸಾಕಷ್ಟು ಹೋರಾಟ ನಡೆಸಿದ್ದಾರೆ ಆದರೆ ಶಾಸಕ ವಿಜಯಾನಂದ ಕಾಶಪ್ಪನವರು ತಮ್ಮ ರಾಜಕೀಯ ಸ್ವಾರ್ಥಕ್ಕಾಗಿ ಯಾವೋದೋ ಮಹಿಳೆಯ ಮೂಲಕ ಶ್ರೀಗಳ ವಿರುದ್ಧ ಆರೋಪ ಮಾಡಿಸುತ್ತಿದ್ದಾರೆ.



ಮುಂದಿನ ದಿನಮಾನಗಳಲ್ಲಿ ನಮ್ಮ ಸಮುದಾಯ ಕಾಶಪ್ಪನವರ ಈ ಧೋರಣೆಗೆ ತಕ್ಕ ಉತ್ತರ ನೀಡಲಿದ್ದಾರೆ.ಇನ್ನೂ ಶನಿವಾರ ಶ್ರೀಗಳ ಮೇಲೆ ಮಾಡಿರುವ ಆರೋಪವನ್ನು ಖಂಡಿಸಿ ಪಟ್ಟಣದ ಕಿತ್ತೂರ ರಾಣಿ ಚನ್ನಮ್ಮ ವೃತ್ತದಲ್ಲಿ ಸಾಂಕೇತಿಕ ಪ್ರತಿಭಟನೆ ನಡೆಸಲಾಗುವುದು ಸಮಾಜದ ಮುಖಂಡರು,ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಮನವಿ ಮಾಡಿದರು.

ಸಮಾಜದ ಮುಖಂಡರಾದ ಸುರೇಶಗೌಡ ಶಿವನಗೌಡ್ರ, ವೀರನಗೌಡ ಬನ್ನಗೌಡ್ರ, ಸಿದ್ದಪ್ಪ ಹಕ್ಕಿಗುಣಿ ಹಾಗೂ ಮಂಜುನಾಥ ಅಧಿಕಾರಿ ಮಾತನಾಡಿ, ಶ್ರೀಗಳ ಮೇಲೆ ನಮ್ಮ ಸಮಾಜದ ಶಾಸಕ ವಿಜಯಾನಂದ ಕಾಶಪ್ಪನವರೆ ಇಲ್ಲ ಸಲ್ಲದ ಆರೋಪ ಮಾಡುವ ಮೂಲಕ ತೇಜೋವಧೆ ಮಾಡುತ್ತಿದ್ದಾರೆ ಇದು ಸಮಾಜದ ಗುರುಗಳಿಗೆ ಮಾಡುವ ಅಪಮಾನವಲ್ಲ ಇಡೀ ಸಮುದಾಯಕ್ಕೆ ಮಾಡಿದ ಅಪಮಾನವಾಗಿದೆ ಇದನ್ನು ಸಮಾಜ ತೀವ್ರ ಖಮಡಿಸುತ್ತದೆ ಎಂದರು.

ಗವಿಸಿದ್ದಪ್ಪ ಬನ್ನಿಗೋಳ, ಶರಣಪ್ಪ ಕೊಡಗಲಿ, ಶಿವಸಂಗಪ್ಪ ಕಮತರ, ಸಂಗಪ್ಪ ರಾಮತಾಳ, ಮಲ್ಲನಗೌಡ ಪೋಲಿಸ್ ಪಾಟೀಲ, ಮಹಾಂತೇಶ ಭಾಸ್ಕರ್, ನಾಗರಾಜ, ಗುರುಲಿಂಗನಗೌಡ ಪಾಟೀಲ, ಶರಣಪ್ಪ ಗೋಣಿ, ಚನ್ನಪ್ಪ ನರೇಗಲ್, ಸುರೇಶ ಹೊಸಳ್ಳಿ, ಸುರೇಶ ಮತ್ತಿತರರು ಇದ್ದರು.

ಕಿರುಸುದ್ದಿ

ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಕ್ರಮಕ್ಕೆ ಮನವಿ

ಮಾನ್ವಿ: ಪಟ್ಟಣದ ಪೊಲೀಸ್ ಠಾಣೆಯಲ್ಲಿ ಬಿಜೆಪಿ ಮಂಡಲ ಯುವ ಮೋರ್ಚಾ ವತಿಯಿಂದ ಮಾನ್ವಿ ಪೊಲೀಸ್ ಇನ್ಸ್‌ಪೆಕ್ಟರ್ ಸೋಮಶೇಖರ ಎಸ್.ಕೆಂಚರೆಡ್ಡಿ ಅವರಿಗೆ ಮನವಿ ಸಲ್ಲಿಸಲಾಯಿತು. ಮಂಡಲ ಯುವ ಮೋರ್ಚಾ ಅಧ್ಯಕ್ಷ ರವಿಕುಮಾರ ಅಲ್ದಾಳ್ ಮನವಿ ಸಲ್ಲಿಸಿ ಮಾತನಾಡಿ, ಅಸ್ಸಾಂ ರಾಜ್ಯದಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಚುನಾವಣಾ ಪ್ರಚಾರ ಭಾಷಣದಲ್ಲಿ ಪವಿತ್ರ ಧರ್ಮ ಗ್ರಂಥವಾದ ಕುರಾನ್ ಅನ್ನು ಉಲ್ಲೇಖಿಸಿ ಆರ್‌ಎಸ್‌ಎಸ್ ಮತ್ತು ಬಿಜೆಪಿ ಪಕ್ಷವನ್ನು ವಿಷ ಸರ್ಪಗಳಿಗೆ ಹೋಲಿಸಿ ಅವರನ್ನು ಮುಸಲ್ಮಾನರು ಹತ್ಯ ಮಾಡದೆ ಇದ್ದಲ್ಲಿ ಬದುಕುವುದಕ್ಕೆ ಆಗುವುದಿಲ್ಲ ಎಂದು ಅಲ್ಪ ಸಂಖ್ಯೆತರನ್ನು ಓಲೈಕೆ ಮಾಡುವ ಬರದಲ್ಲಿ ಪ್ರಚೋದನಕಾರಿಯಾಗಿ ಮಾತನಾಡಿದ್ದು, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಕಾನೂನು ಪ್ರಕೋಷ್ಠದ ಶರಣಬಸವ, ಮುಖಂಡರಾದ ಜಿ.ಸುಧಕಾರ್, ಗುರುಸಿದ್ದಪ್ಪ ಕಣ್ಣೂರು, ಜಿ.ಜಗದೀಶ್ ನಾಯಕ, ಶಿವಕುಮಾರ ಕೆ., ದುರುಗಪ್ಪ ತಡಕಲ್, ಜೆ.ಮಂಜುನಾಥ ನಾಯಕ, ಚನ್ನಬಸವ ನಾಯಕ, ರಾಜಶೇಖರ, ಭಾಸ್ಕರ್ ಜಗ್ಲಿ, ಸಿದ್ದಯ್ಯಸ್ವಾಮಿ ಕಳ್ಳಿಮಠ, ಈರಣ್ಣ ನಾಯಕ, ಗುರುರಾಜ ನಾಗಲಾಪುರ್, ಶಿವರಾಜ ನಾಯಕ, ಹನುಮೇಶನಾಯಕ್, ವಿಶ್ವನಾಥ ನಂದಿಹಾಳ್, ಕುಮಾರಸ್ವಾಮಿ ಮೇದಾ, ಬಸವರಾಜ ನಕ್ಕುಂದಿ ಇತರರಿದ್ದರು.

ಪಿಯು ಕಾಲೇಜಿಗೆ ಬಸವಶ್ರೀ ಪ್ರಥಮ, ವಿಜಯಲಕ್ಷ್ಮೀ ದ್ವಿತೀಯ

ಹುಣಸಗಿ: ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ಪಿಯುಸಿಯಲ್ಲಿ ವಿದ್ಯಾರ್ಥಿಗಳು ಅತ್ಯುತ್ತಮ ಫಲಿತಾಂಶದೊಂದಿಗೆ ಸಾಧನೆ ಮಾಡಿದ್ದಾರೆ. ಕಲಾ ವಿಭಾಗದ ವಿದ್ಯಾರ್ಥಿನಿ ಬಸವಶ್ರೀ ಶಿವಕುಮಾರ ಬಂಡೋಳಿ 564 ಅಂಕ ಪಡೆದು ಶೇ.94 ಫಲಿತಾಂಶ ಮಾಡುವ ಮೂಲಕ ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿದ್ದಾಳೆ. ವಿಜಯಲಕ್ಷ್ಮೀ ಸಂಜೀವಪ್ಪ 544 ಅಂಕ ಪಡೆದು ಶೇ.90.66(ದ್ವಿತೀಯ), ವಾಣಿಜ್ಯ ವಿಭಾಗದಲ್ಲಿ ರವಿ ಶಂಕ್ರಪ್ಪ 539 ಅಂಕ ಪಡೆದು ಶೇ.89.83, ಭಾಗ್ಯಶ್ರೀ ಗುರುನಾಥ ವಜ್ಜಲ್ 511 ಪಡೆದು ಶೇ.85.16, ವಿಜ್ಞಾನ ವಿಭಾಗದಲ್ಲಿ ಗಂಗಾ ತೇಜರಾಮ 493 ಪಡೆದು ಶೇ.82.16, ರಕ್ಷೀತಾ 438 ಅಂಕ ಪಡೆದು ಶೇ.73 ಫಲಿತಾಂಶ ಪಡೆದು ಕಾಲೇಜುಗೆ ಕೀರ್ತಿ ತಂದಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಕಾಲೇಜಿನ ಪ್ರಾಚಾರ್ಯ ಸಾಯಬಣ್ಣ ಭಜಂತ್ರಿ, ಹಾಗೂ ಸಿಡಿಸಿ ಅಧ್ಯಕ್ಷ ಬಸವರಾಜ ಸಜ್ಜನ್ ಸೇರಿದಂತೆ ಸಿಬ್ಬಂದಿ, ಪಾಲಕರು ಹರ್ಷ ವ್ಯಕ್ತಪಡಿಸಿದ್ದಾರೆ.




ಪಿಯುಸಿ ಫಲಿತಾಂಶ: ಎಸ್.ಪ್ರವೀಣ್‌ಗೆ ಶೇ.97.5

ವಿಜಯನಗರ: ಹೊಸಪೇಟೆ ತಾಲೂಕಿನ ಹಂಪಿ ನಿವಾಸಿ ಎಸ್.ಪ್ರವೀಣ್ ಅವರು ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಗರಿಷ್ಠ 585(ಶೇ.97.5) ಅಂಕಗಳೊಂದಿಗೆ ಡಿಸ್ಟಿಂಗ್ಷನ್‌ನಲ್ಲಿ ತೇರ್ಗಡೆಯಾಗಿ, ಸಾಧನೆ ಮಾಡಿದ್ದಾರೆ. ಕನ್ನಡ 96, ಇಂಗ್ಲಿಷ್ 97, ಭೌತಶಾಸ್ತ್ರ 100, ರಸಾಯನಶಾಸ್ತ್ರ 98, ಗಣಿತ 99 ಹಾಗೂ ಜೀವಶಾಸ್ತ್ರ 95 ಸೇರಿದಂತೆ ಒಟ್ಟು 585 ಅಂಕ ಪಡೆದಿದ್ದಾರೆ. ಎಸ್.ಪ್ರವೀಣ್ ಅವರು ಜಿಲ್ಲೆಯ ಹಿರಿಯ ಪತ್ರಕರ್ತ ಜಿ.ಶಾಂತಕುಮಾರ್ ಅವರ ಪುತ್ರನಾಗಿದ್ದು, ಹೊಸಪೇಟೆಯ ಖಾಸಗಿ ಪಿಯು ಕಾಲೇಜಿನಲ್ಲಿ ಅಭ್ಯಾಸ ಮಾಡಿದ್ದಾರೆ.



ನಿಧನ ಸುದ್ದಿ

ಅಂಗಡಿ ರಾಚಪ್ಪ

ಹಗರಿಬೊಮ್ಮನಹಳ್ಳಿ: ಪಟ್ಟಣದ ಹಳೇ ಊರಿನ ನಿವಾಸಿ, ಬಣಜಿಗ ಸಮಾಜದ ತಾಲೂಕು ಅಧ್ಯಕ್ಷ ಶಿವಾನಂದ ನಗರದ ಅಂಗಡಿ ರಾಚಪ್ಪ(51) ಶುಕ್ರವಾರ ನಿಧನರಾಗಿದ್ದಾರೆ. ಮೃತರಿಗೆ ಪತ್ನಿ, ಮಗಳು ಇದ್ದಾರೆ. ಪಟ್ಟಣದ ಹಳೇ ಊರಿನ ವೀರಶೈವ ರುದ್ರಭೂಮಿಯಲ್ಲಿ ಶನಿವಾರ ಬೆಳಿಗ್ಗೆ ಅಂತ್ಯಕ್ರಿಯೆ ನಡೆಯಲಿದೆ.





ಮಾನ್ವಿ: ಪಟ್ಟಣದ ಪೊಲೀಸ್ ಠಾಣೆಯಲ್ಲಿ ಬಿಜೆಪಿ ಮಂಡಲ ಯುವ ಮೋರ್ಚಾ ವತಿಯಿಂದ ಮಾನ್ವಿ ಪೊಲೀಸ್ ಇನ್ಸ್‌ಪೆಕ್ಟರ್ ಸೋಮಶೇಖರ ಎಸ್.ಕೆಂಚರೆಡ್ಡಿ ಅವರಿಗೆ ಮನವಿ ಸಲ್ಲಿಸಲಾಯಿತು. ಮಂಡಲ ಯುವ ಮೋರ್ಚಾ ಅಧ್ಯಕ್ಷ ರವಿಕುಮಾರ ಅಲ್ದಾಳ್, ಕಾನೂನು ಪ್ರಕೋಷ್ಠದ ಶರಣಬಸವ, ಮುಖಂಡರಾದ ಜಿ.ಸುಧಕಾರ್, ಗುರುಸಿದ್ದಪ್ಪ ಕಣ್ಣೂರು, ಜಿ.ಜಗದೀಶ್ ನಾಯಕ, ಶಿವಕುಮಾರ ಕೆ. ಇದ್ದರು.

ಖರ್ಗೆ ಬಂಧನಕ್ಕೆ ಬಿಜೆಪಿ ಆಗ್ರಹ

ವಿಜಯನಗರ: ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಪ್ರಚೋದನಕಾರಿ ಭಾಷಣ ಮಾಡುವುದರ ಮೂಲಕ ಸಮಾಜದಲ್ಲಿ ಶಾಂತಿ ಕದಡುವ ಕೆಲಸ ಮಾಡಿದ್ದಾರೆ. ಈ ಕೂಡಲೇ ಬಂಧಿಸುವಂತೆ ಬಿಜೆಪಿ ಯುವ ಮೋರ್ಚಾದಿಂದ ಪಟ್ಟಣದ ಠಾಣೆಗೆ ದೂರು ನೀಡಿ ಒತ್ತಾಯಿಸಿದರು.

ಯುವ ಮೋರ್ಚಾ ಜಿಲ್ಲಾಧ್ಯಕ್ಷ ಕಿಚಿಡಿ ಕೊಟ್ರೇಶ್ ಮಾತನಾಡಿ, ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಅಸ್ಸಾಂ ಚುನಾವಣಾ ಪ್ರಚಾರದಲ್ಲಿ ಭಾಷಣ ಮಾಡುತ್ತಾ, 'ಕುರಾನ್‌ನಲ್ಲಿ ಬರೆದಿದೆ, ನಮಾಜ್ ಮಾಡುವ ಸಂದರ್ಭದಲ್ಲಿ ವಿಷ ಸರ್ಪ ಕಂಡರೆ ಅದನ್ನು ಕೊಲ್ಲಬೇಕು. ಆರ್‌ಎಸ್‌ಎಸ್ ಹಾಗೂ ಬಿಜೆಪಿ ಅದೇ ರೀತಿಯ ವಿಷಸರ್ಪಗಳಿದ್ದಂತೆ, ನೀವು ಅದನ್ನು ಕೊಲ್ಲದಿದ್ದರೆ ಬದುಕುವುದಿಲ್ಲ ಎಂದು ಮುಸಲ್ಮಾನರಿಗೆ ಆರ್‌ಎಸ್‌ಎಸ್ ಸದಸ್ಯರನ್ನು ಕೊಲ್ಲಬೇಕು ಎಂದು ಪ್ರಚೋದಿಸಿದ್ದಾರೆ. ತಕ್ಷಣ ಅವರನ್ನು ಬಂಧಿಸಬೇಕು ಎಂದು ಆಗ್ರಹಿಸಿದರು.

ಬಿಜೆಪಿ ಮಂಡಲ ಅಧ್ಯಕ್ಷ ಶಂಕರ್ ಮೇಟಿ, ಮಂಡಲ ಪ್ರಧಾನ ಕಾರ್ಯದರ್ಶಿ ಮಧುರಚನ್ನ ಶಾಸ್ತ್ರಿ ಹಿರೇಮಠ, ಯುವ ಮೋರ್ಚಾ ಮಂಡಲ ಅಧ್ಯಕ್ಷ ಎಚ್. ರಾಘವೇಂದ್ರ, ಕೆ.ಮಧುಸೂದನ್, ಗೌಳಿ ಬಸವರಾಜ್, ಹನುಮಂತಪ್ಪ, ವ್ಯಾಸರಾಜ್, ಇಮ್ತಿಯಾಜ್, ರೇವಣ ಸಿದ್ದಪ್ಪ, ಡಿ.ತಿರುಮಲೇಶ್ ವಿಕಾಸ್, ಶಶಿಕುಮಾರ್, ದೀಪಕ್, ರಾಘು, ಶಿವಾನಂದ, ಅಭಿಷೇಕ್, ವೀರೇಂದ್ರ ಗೌಡ, ಮಂಜುನಾಥ ಇತದ್ದರು.



ವಿಜಯನಗರ: ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಪ್ರಚೋದನಕಾರಿ ಭಾಷಣ ಮಾಡುವುದರ ಮೂಲಕ ಸಮಾಜದಲ್ಲಿ ಶಾಂತಿ ಕದಡುವ ಕೆಲಸ ಮಾಡಿದ್ದಾರೆ. ಈ ಕೂಡಲೇ ಬಂಧಿಸುವಂತೆ ಬಿಜೆಪಿ ಯುವ ಮೋರ್ಚಾದಿಂದ ಪಟ್ಟಣದ ಠಾಣೆಗೆ ದೂರು ನೀಡಿ ಒತ್ತಾಯಿಸಿದರು.

ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಮಲ್ಲಪ್ಪ ಸಂಕೀನ್ ಹೇಳಿಕೆ

ಇಂದಿನಿಂದ ರಾಜ್ಯಮಟ್ಟದ ಸಮ್ಮೇಳನ

ಯಾದಗಿರಿ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದಿಂದ 40ನೇ ರಾಜ್ಯಮಟ್ಟದ ಪತ್ರಕರ್ತರ ಸಮ್ಮೇಳನ ಬೀದರ್‌ನಲ್ಲಿ ಏ.11 ಮತ್ತು 12ರಂದು ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಮಲ್ಲಪ್ಪ ಸಂಕೀನ್ ಹೇಳಿದರು.

ಜಿಲ್ಲಾ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೀದರ್‌ನ ಝೀರಾ ಕನ್ವೆನ್ಷನ್ ಹಾಲ್‌ನಲ್ಲಿ ಅಂದು ಬೆಳಗ್ಗೆ 11ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಮ್ಮೇಳನ ಉದ್ಘಾಟಿಸುವರು. ವಸ್ತು ಪ್ರದರ್ಶನಕ್ಕೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಚಾಲನೆ ನೀಡುವರು ಎಂದರು.

ಬಸವಕಲ್ಯಾಣದ ಹಾರಕೂಡ ಹಿರೇಮಠದ ಶ್ರೀಡಾ.ಚನ್ನವೀರಶಿವಾಚಾರ್ಯರು, ಬಸವಕಲ್ಯಾಣ ಅನುಭವ ಮಂಟಪದ ಅಧ್ಯಕ್ಷ ಡಾ.ಬಸವಲಿಂಗ ಪಟ್ಟದ್ದೇವರು ಸಾನ್ನಿಧ್ಯ ವಹಿಸುವರು. ಪತ್ರಕರ್ತ ವಿಶ್ವೇಶ್ವರ ಭಟ್ ಪ್ರಧಾನ ಭಾಷಣ ಮಾಡುವರು. ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಅಧ್ಯಕ್ಷತೆ ವಹಿಸುವರು ಎಂದು ತಿಳಿಸಿದರು.

ಅದಕ್ಕೂ ಮುನ್ನ ಬಸವೇಶ್ವರ ವೃತ್ತದಿಂದ ವೇದಿಕೆವರೆಗೂ ಕಲಾ ತಂಡಗಳೊಂದಿಗೆ ಸಮ್ಮೇಳನದ ಮೆರವಣಿಗೆ ನಡೆಸಲಾಗುವುದು ಎಂದು ವಿವರಿಸಿದರು.



ಸಮ್ಮೇಳನದ ಮೊದಲ ದಿನ ಮಧ್ಯಾಹ್ನ 2 ಗಂಟೆಗೆ ಗಾಂಧಿ-ಅಂಬೇಡ್ಕರ್ ಮತ್ತು ಪತ್ರಿಕೋದ್ಯಮ ವಿಷಯದ ಕುರಿತು ಗೋಷ್ಠಿ ನಡೆಯಲಿದೆ. ಕಾನೂನು ಮತ್ತು ಸಂಸದೀಯ ಸಚಿವ ಎಚ್.ಕೆ.ಪಾಟೀಲ್ ಉದ್ಘಾಟಿಸುವರು. ಸಂಜೆ 3.30ಕ್ಕೆ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮತ್ತು ಮಾಧ್ಯಮ ಕುರಿತು 2ನೇ ಗೋಷ್ಠಿ ನಡೆಯಲಿದ್ದು, ಪತ್ರಕರ್ತ ರವೀಂದ್ರ ಭಟ್ ಉದ್ಘಾಟಿಸುವರು. ಸಂಜೆ 5ಕ್ಕೆ ಗಡಿ ಸಮಸ್ಯೆಗಳು ಕುರಿತು ಸಂವಾದ ಮತ್ತು ಸಂಜೆ 5.30ಕ್ಕೆ ಮಾಧ್ಯಮ ಮತ್ತು ಉದ್ಯಮ ಕುರಿತು ಉಪನ್ಯಾಸ ಆಯೋಜಿಸಲಾಗಿದೆ. ಸಂಜೆ 7ಕ್ಕೆ ಸಂಗೀತ ಸಂಜೆ ಕಾರ್ಯಕ್ರಮ ನಡೆಯಲಿದೆ ಎಂದರು.

ಪ್ರಶಸ್ತಿ ಪ್ರದಾನ ಸಮಾರಂಭ

ಏ.12ರಂದು ಬೆಳಿಗ್ಗೆ 9.45ಕ್ಕೆ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅಧ್ಯಕ್ಷತೆಯಲ್ಲಿ ಪ್ರತಿನಿಧಿಗಳ ಸಮಾವೇಶ ಮತ್ತು ಸರ್ವ ಸದಸ್ಯರ ಸಭೆ ನಡೆಯಲಿದೆ. ಮಧ್ಯಾಹ್ನ 3ಕ್ಕೆ ಸಮಾರೋಪ ಸಮಾರಂಭ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಸ್ಪೀಕರ್ ಯು.ಟಿ.ಖಾದರ್ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಮಲ್ಲಪ್ಪ ಸಂಕೀನ್ ತಿಳಿಸಿದರು.

ಜಿಲ್ಲೆಯ ಪತ್ರಕರ್ತರಾದ ಅಮರೇಶ್ ಹಿರೇಮಠ, ಮಲ್ಲಯ್ಯ ಪೋಲಂಪಲ್ಲಿ, ಬಸವರಾಜ ಕಟ್ಟಿಮನಿ, ಸಂಜೀವ್ ರಾವ್ ಕುಲಕರ್ಣಿ ಅವರಿಗೆ ರಾಜ್ಯಮಟ್ಟದ ಪ್ರಶಸ್ತಿಗೆ ಪ್ರದಾನ ಮಾಡಲಾಗುತ್ತಿದೆ. ಇದು ನಿಜಕ್ಕೂ ಹೆಮ್ಮೆಯ ಸಂಗತಿಯಾಗಿದೆ ಎಂದರು. ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿದ್ದಪ್ಪ ಲಿಂಗೇರಿ ಇದ್ದರು.

ರಸಗೊಬ್ಬರ ಮಾರಾಟಕ್ಕೆ ಎಫ್‌ಐಡಿ ಕಡ್ಡಾಯ

ಬಳ್ಳಾರಿ: ರೈತರು ಯೂರಿಯಾ ಖರೀದಿಸುವಾಗ ಆಧಾರ್ ಕಾರ್ಡ್ ಅಥವಾ ರೈತರ ಗುರುತಿನ ಚೀಟಿ ಸಂಖ್ಯೆ (ಎಫ್‌ಐಡಿ) ನೀಡುವುದನ್ನು ಕಡ್ಡಾಯಗೊಳಿಸಲಾಗಿದೆ ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಸೋಮಸುಂದರ್ ಕೆ.ಎಂ. ಹೇಳಿದರು.

ನಗರದ ಬಿಡಿಎ ಸಭಾಂಗಣದಲ್ಲಿ ಗುರುವಾರ ಸಂಜೆ ಕೃಷಿ ಇಲಾಖೆ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಕೃಷಿ ಪರಿಕರಗಳ ಮಾರಾಟಗಾರರ ಸಭೆಯಲ್ಲಿ ಮಾತನಾಡಿದರು.

ಈ ಬಾರಿಯ ಮುಂಗಾರು ಹಂಗಾಮಿನಲ್ಲಿ ರಸಗೊಬ್ಬರವನ್ನು ಕಾಳಸಂತೆ ಮಾರಾಟಕ್ಕೆ ಕಡಿವಾಣ ಹಾಕುವ ದೃಷ್ಟಿಯಿಂದ ಹಾಗೂ ವಿತರಣೆಯನ್ನು ವ್ಯವಸ್ಥಿತಗೊಳಿಸಲು ಕೃಷಿ ಇಲಾಖೆ ಕಟ್ಟು ನಿಟ್ಟಿನ ಅನೇಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ರೈತರು ಸಹಕರಿಸಬೇಕು. ನಮ್ಮ ರೈತರಿಗೆ ಯಾವುದೇ ತೊಂದರೆಯಾಗಬಾರದು ಎನ್ನುವ ಉದ್ದೇಶದಿಂದ ಇಲಾಖೆ ಅಗತ್ಯ ಕ್ರಮಗಳನ್ನು ಕೈಗೊಂಡಿದೆ. 2026-27ನೇ ಸಾಲಿನಿಂದ ರಸಗೊಬ್ಬರ ಮಾರಾಟ ಪ್ರಕ್ರಿಯೆಯ ಮೇಲೆ ತೀವ್ರ ನಿಗಾವಹಿಸಲು ನಮ್ಮ ಇಲಾಖೆಯು ವಿಶೇಷ ಆಫ್ ನ್ನೂ ಬಿಡುಗಡೆ ಮಾಡಿದೆ. ಚಿಲ್ಲರೆ ಗೊಬ್ಬರ ಮಾರಾಟಗಾರರು ಇನ್ಮುಂದೆ ಈ ಆ್ಯಪ್ ಮೂಲಕವೇ ರೈತರ ಆಧಾರ್ ಕಾರ್ಡ್ ಅಥವಾ ಎಫ್ ಐಡಿ ಸಂಖ್ಯೆಯನ್ನು ದಾಖಲಿಸಿ ರಸಗೊಬ್ಬರಗಳನ್ನು ವಿತರಿಸಬೇಕು. ಇದರಿಂದ ರಸಗೊಬ್ಬರಗಳು ದುರ್ಬಳಕೆಯಾಗುವುದನ್ನು ತಡೆಗಟ್ಟಬಹುದು. ಮಾರಾಟಗಾರರು, ರೈತರು ಸಹಕರಿಸಬೇಕು ಎಂದರು.

ವಿಚಕ್ಷಣ ವಿಭಾಗದ ಜಂಟಿ ನಿರ್ದೇಶಕ ಎಸ್.ಶಿವಕುಮಾರ್ ಅವರು ಮಾತನಾಡಿದರು.

ಕೃಷಿ ಇಲಾಖೆಯ ಎಸ್.ಎನ್. ಮಂಜುನಾಥ್, ಕೃಷಿ ಇಲಾಖೆಯ ಉಪ ನಿರ್ದೇಶಕ ಮೃತ್ಯುಂಜಯ, ಕೃಷಿ ಪರಿಕರಗಳ ಮಾರಾಟಗಾರರ ಸಂಘದ ಅಧ್ಯಕ್ಷ ಎಚ್. ತಿಮ್ಮನಗೌಡ, ಕಾರ್ಯದರ್ಶಿ ಶ್ರೀನಿವಾಸ ರೆಡ್ಡಿ, ಹಗರಿ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಪಾಲಯ್ಯ, ವಿಜ್ಞಾನಿ ಮಂಜುನಾಥ್ ಸೇರಿದಂತೆ ವಿವಿಧ ಗಣ್ಯರು, ಕೃಷಿ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಇತರರಿದ್ದರು.



ರಾಷ್ಟ್ರೋತ್ಥಾನ ಪಿಯು ಕಾಲೇಜಿನ ಉತ್ತಮ ಸಾಧನೆ

ಹಗರಿಬೊಮ್ಮನಹಳಿ: 2025-26ನೇ ಸಾಲಿನ ದ್ವಿತೀಯ ಪಿಯುಸಿ ಫಲಿತಾಂಶ ಕಾಲೇಜಿಗೆ 85.24ರಷ್ಟಾಗಿದೆ. ಪರೀಕ್ಷೆ ಕುಳಿತವರು 61 ವಿದ್ಯಾರ್ಥಿಗಳಲ್ಲಿ 52 ಜನ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಕಾಲೇಜಿಗೆ ಪ್ರಥಮ ಎ.ಹರ್ಷಿತಾ ಮತ್ತು ಯು.ಆರ್.ರಂಜಿತಾ 577 (96.16%), ದ್ವಿತೀಯ ಸ್ಥಾನ ವೈ.ಪವನಕುಮಾರ 552 (92%) ಅಂಕ ಪಡೆದಿದ್ದು, ಕಾಲೇಜಿಗೆ ಕೀರ್ತಿ ತಂದಿರುತ್ತಾರೆ. ಅವರಿಗೆ ಆಡಳಿತ ಮಂಡಳಿ, ಪ್ರಾಚಾರ್ಯರು ಮತ್ತುಉಪನ್ಯಾಸಕ ಸಿಬ್ಬಂದಿ ಅಭಿನಂದನೆ ಸಲ್ಲಿಸಿದ್ದಾರೆ.





ಪಿಯುಸಿಯಲ್ಲಿ ವಿದ್ಯಾರ್ಥಿನಿಯರೇ ಮೇಲುಗೈ

ಸುರಪುರ: ನಗರದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು 2025-26ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ-1ರಲ್ಲಿ ಉತ್ತಮ ಸಾಧನೆ ಮಾಡಿದೆ. ಕಲಾ ವಿಭಾಗದ ಶೇ.73.33, ವಾಣಿಜ್ಯ ವಿಭಾಗ ಶೇ.87.5 ಹಾಗೂ ವಿಜ್ಞಾನ ವಿಭಾಗದ ಶೇ.54.55 ವಿದ್ಯಾರ್ಥಿಗಳು ಉತ್ತೀರ್ಣಗೊಂಡಿದ್ದು, ಕಾಲೇಜು ಒಟ್ಟು ಶೇ.70.91ಫಲಿತಾಂಶ ದಾಖಲಿಸಿದೆ.

ಕಲಾ ವಿಭಾಗದಲ್ಲಿ ಸವಿತಾ ಗದ್ಯಪ್ಪ 572(ಶೇ.95.33) ಅಂಕಳೊಂದಿಗೆ ಕಾಲೇಜಿಗೆ ಪ್ರಥಮ, ದೇವಮ್ಮ ಮೌನೇಶ 567(ಶೇ.94.5) ದ್ವಿತೀಯ ಮತ್ತು ಅನ್ನಪೂರ್ಣ ಮಲ್ಲಪ್ಪ 559 (ಶೇ.93) ತೃತೀಯ ಸ್ಥಾನ ಪಡೆದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಶ್ವೇತ ಬಸವರಾಜ 572(ಶೇ.95.33) ಅಂಕಗಳೊಂದಿಗೆ ಕಾಲೇಜಿಗೆ ಪ್ರಥಮ ಸ್ಥಾನ ಪಡೆದರೆ, ಮೀನಾಕ್ಷಿ ರಾಮಚಂದ್ರ 558 (ಶೇ.93) ದ್ವಿತೀಯ, ಲಕ್ಷ್ಮೀ ಮಹಾದೇವಪ್ಪ 549 (ಶೇ.91.5) ತೃತೀಯ ಸ್ಥಾನ ಪಡೆದಿದ್ದಾರೆ. ವಿಜ್ಞಾನ ವಿಭಾಗದಲ್ಲಿ ತನುಷಾ ಶರಣಪ್ಪ 517(ಶೇ.86.16) ಅಂಕ ಪಡೆದು ಪ್ರಥಮ, ಅರುಣಾ ಹಣಮಂತ್ರಾಯ 513(85.5) ದ್ವಿತೀಯ ಹಾಗೂ ಭಾಗ್ಯಶ್ರೀ ಹಣಮಂತ 489 (ಶೇ.81.5) ತೃತೀಯ ಸ್ಥಾನಗಳಿಸಿದ್ದಾರೆ. ಒಟ್ಟಾರೆ ಕಾಲೇಜಿನಲ್ಲಿ 20 ವಿದ್ಯಾರ್ಥಿನಿಯರು ಉನ್ನತ ಶ್ರೇಣಿಯಲ್ಲಿ, 94 ಪ್ರಥಮ ದರ್ಜೆಯಲ್ಲಿ ಮತ್ತು 27 ದ್ವಿತೀಯ ದರ್ಜೆಯಲ್ಲಿ 3 ವಿದ್ಯಾರ್ಥಿನಿಯರು ಉತ್ತೀರ್ಣರಾಗಿದ್ದಾರೆ. ವಿಷಯವಾರು ಶ್ವೇತ ಬಸವರಾಜ (ವ್ಯವಹಾರ ಅಧ್ಯಯನ ಹಾಗೂ ರಾಜ್ಯಶಾಸ್ತ್ರ) ಲಕ್ಷ್ಮೀ ಮಹಾದೇವಪ್ಪ (ವ್ಯವಹಾರ ಅಧ್ಯಯನ) ಮಡಿವಾಳಮ್ಮ ಹಾಗೂ ಸವಿತಾ (ಅರ್ಥಶಾಸ್ತ್ರ), ಅನ್ನಪೂರ್ಣ (ಕನ್ನಡ) ಅವರು ತಲಾ 100ಕ್ಕೆ100 ಅಂಕಗಳನ್ನು ಪಡೆದಿದ್ದಾರೆ. ವಿದ್ಯಾರ್ಥಿನಿಯರ ಸಾಧನೆಗೆ ಪ್ರಾಚಾರ್ಯರರಾದ ಮೋನಯ್ಯ ಗೋನಾಲ, ಕಾಲೇಜು ಅಭಿವೃದ್ಧಿ ಸಮಿತಿ, ಉಪನ್ಯಾಸಕರು ಹಾಗೂ ಸಿಬ್ಬಂದಿ ಹರ್ಷ ವ್ಯಕ್ತಪಡಿಸಿ ವಿದ್ಯಾರ್ಥಿನಿಯರಿಗೆ ಅಭಿನಂದಿಸಿದ್ದಾರೆ.








ಭ್ರೂಣಲಿಂಗ ಪತ್ತೆ: ನಿಯಮ ಉಲ್ಲಂಘಿಸಿದರೆ ಕ್ರಮ

ಬಳ್ಳಾರಿ: ಭ್ರೂಣಲಿಂಗ ಪತ್ತೆ ಹಚ್ಚುವುದು ಶಿಕ್ಷಾರ್ಹ ಅಪರಾಧವಾಗಿದ್ದು, ನಿಯಮ ಉಲ್ಲಂಘಿಸಿದರೆ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಡಿಎಚ್‌ಒ ಡಾ.ಯಲ್ಲಾ ರಮೇಶ್ ಬಾಬು ಅವರು ಖಡಕ್ ಸೂಚನೆ ನೀಡಿದರು.

ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ಪಿಸಿ ಮತ್ತು ಪಿಎನ್‌ಡಿಟಿ ಕಾಯ್ದೆಯ ಜಿಲ್ಲಾ ಸಲಹಾ ಸಮಿತಿ ಮತ್ತು ಜಿಲ್ಲಾ ಮೇಲ್ವಿಚಾರಣಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಹೆಣ್ಣು ಮಗುವಿನ ರಕ್ಷಣೆ ನಮ್ಮೆಲ್ಲರ ಜವಾಬ್ದಾರಿ. ಭ್ರೂಣಲಿಂಗ ಪತ್ತೆ ಮಾಡುವುದು ಅಥವಾ ಅದಕ್ಕೆಪ್ರಚೋದನೆನೀಡುವುದು ಕಾನೂನುಬಾಹಿರವಾಗಿದೆ. ಜಿಲ್ಲೆಯಲ್ಲಿರುವ ಎಲ್ಲಾ ಸ್ಕ್ಯಾನಿಂಗ್ ಸೆಂಟರ್‌ಗಳು ಸರ್ಕಾರದ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಕಾಲಕಾಲಕ್ಕೆ ತಮ್ಮ ಪರವಾನಗಿಯನ್ನು ನವೀಕರಿಸಿಕೊಳ್ಳಬೇಕು. ಎಲ್ಲ ಸೆಂಟರ್ ಗಳು ಪ್ರತಿ ತಿಂಗಳ 5ನೇ ತಾರೀಖಿನೊಳಗಾಗಿ 'ಎಫ್' ಫಾರಂಗಳನ್ನು ತಪ್ಪದೇ ಜಿಲ್ಲಾಕಾರ್ಯಾಲಯಕ್ಕೆಸಲ್ಲಿಸಬೇಕು. ಹೊಸದಾಗಿ ನೋಂದಣಿ ಮಾಡಿಕೊಳ್ಳುವವರು ಸೂಕ್ತ ಸಮಯದಲ್ಲಿ ಅರ್ಜಿ ಸಲ್ಲಿಸಬೇಕು ಎಂದು ಸೂಚಿಸಿದರು. ಸಭೆಯಲ್ಲಿ ಜಿಲ್ಲೆಯಲ್ಲಿನ ಸ್ಕ್ಯಾನಿಂಗ್ ಸೆಂಟರ್‌ಗಳ ಕಾರ್ಯವೈಖರಿ ಮತ್ತು ಹೆಣ್ಣು ಭ್ರೂಣ ಹತ್ಯೆ ತಡೆಗಟ್ಟುವ ಕುರಿತು ಮಹತ್ವದ ಚರ್ಚೆ ನಡೆಸಲಾಯಿತು.



ಪಿಸಿ ಮತ್ತು ಪಿಎನ್‌ಡಿಟಿ ಕಾಯ್ದೆಯ ಜಿಲ್ಲಾ ಸಲಹಾ ಸಮಿತಿ ಮತ್ತು ಜಿಲ್ಲಾ ಮೇಲ್ವಿಚಾರಣಾ ಸಮಿತಿಯ ಅಧ್ಯಕ್ಷಡಾ.ಶಂಭು, ಸದಸ್ಯರಾದ ಜಿಲ್ಲಾ ಜಾರಿ ಅಧಿಕಾರಿ ಡಾ.ವೀರೇಂದ್ರ ಕುಮಾರ್, ಖಾಸಗಿ ರೇಡಿಯಾಲಜಿಸ್ಟ್ ಡಾ.ರಾಘವೇಂದ್ರ, ಜಿಲ್ಲಾ ಆಸ್ಪತ್ರೆಯ ಮಕ್ಕಳ ತಜ್ಞೆ ಡಾ.ಭಾವನ, ಕುರುಗೋಡಿನ ರೇಡಿಯಾಲಜಿಸ್ಟ್ ಡಾ.ರವಿಚಂದ್ರವರ್ಮ, ಪಿಸಿ-ಪಿಎನ್‌ಡಿಟಿ ವಿಷಯ ನಿರ್ವಾಹಕರಾದ ಕೆ.ಎಚ್. ಗೋಪಾಲ್, ತಿಪ್ಪೇಸ್ವಾಮಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಜನಗಣತಿ ಯಶಸ್ವಿಗೊಳಿಸಲು ಪೌರಾಯುಕ್ತರ ಮನವಿ

ವಿಜಯನಗರ: ಹೊಸಪೇಟೆ ನಗರಸಭೆಯಿಂದ ನಗರದ ವಿವಿಧ ಮಸೀದಿ ಪ್ರದೇಶಗಳಲ್ಲಿ ಜನಗಣತಿಯಲ್ಲಿ ಸ್ವಯಂ ನೋಂದಣಿ ಹಾಗೂ ಗಣತಿ ಕಾರ್ಯ ಕುರಿತು ಅಲ್ಪಸಂಖ್ಯಾತರ ಸಮುದಾಯದ ಮುಖಂಡರಿಗೆ ಮಾಹಿತಿ ನೀಡಿದರು.

ಪೌರಾಯುಕ್ತ ಈ.ಶಿವಕುಮಾರ್ ಮಾತನಾಡಿ, ಏ.1ರಿಂದ 15ರ ವರೆಗೆ ಸ್ವಯಂ ನೋಂದಣೆಗೆ ಅವಕಾಶವಿದೆ. ನಂತರ ಏ.16 ರಿಂದ ಮೇ 15ರ ವರೆಗೆ ಜನಗಣತಿದಾರರು ಮನೆ ಮನೆಗೆ ಭೇಟಿ ನೀಡಿ, ಮಾಹಿತಿ ಸಂಗ್ರಹಿಸುವರು. ಈ ವೇಳೆ ಸಾರ್ವಜನಿಕರು ತಮ್ಮ ಕುಟುಂಬಕ್ಕೆ ಸಂಬಂಧಿಸಿದ ಮಾಹಿತಿಯನ್ನು ಸರಿಯಾಗಿ ಒದಗಿಸಿ, ಜನಗಣತಿಯನ್ನು ಯಶಸ್ವಿಗೊಳಿಸಬೇಕು ಎಂದು ವಿವರಿಸಿ ಕರ ಪತ್ರಗಳನ್ನು ವಿತರಿಸಿದರು.



ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೂ ಹಾಗೂ ಅಂಜುಮನ್ ಕಮಿಟಿ ಮಾಜಿ ಅಧ್ಯಕ್ಷ ಎಚ್.ಎನ್. ಮೊಹಮ್ಮದ್ ಇಮಾಮ್ ನಿಯಾಜಿ ಮಾತನಾಡಿ, ಜನಗಣತಿಗೆ ಪ್ರತಿಯೊಬ್ಬರೂ ಸಹಕರಿಸುವುದು ಅಗತ್ಯ. ಜನಸಂಖ್ಯೆ, ಶಿಕ್ಷಣ, ಉದ್ಯೋಗ ಸೇರಿದಂತೆ ವಿವಿಧ ಮಾಹಿತಿಗಳನ್ನು ಸಂಗ್ರಹಿಸಿ ಅಭಿವೃದ್ಧಿ ಯೋಜನೆಗಳನ್ನು ರೂಪಿಸುತ್ತದೆ. ಗಣತಿದಾರರಿಗೆ ಸರಿಯಾದ ಮಾಹಿತಿಯನ್ನು ನೀಡುವಂತೆ ನಾಗರಿಕರಿಗೆ ಮನವಿ ಮಾಡಿದರು.

ನಗರಸಭಾ ಸದಸ್ಯ ಅಬ್ದುಲ್ ಖದೀರ್, ಅಂಜುಮನ್ ಕಮಿಟಿ ಮಾಜಿ ಪದಾಧಿಕಾರಿಗಳಾದ ಬಿ.ಅನ್ಸರ್ ಭಾಷಾ, ಫೀರೋಜ್ ಖಾನ್, ಅಬೂಬ್ ಕಾರ್ ಅಫೀಸ್ ಸಾಬ್, ಡಾ.ದರ್ವೇಶ, ಕೆ.ಮೋಸೀನ್, ಗುಲಾಮ್ ರಸೂಲ್ ಹಾಗೂ ಸಮುದಾಯದ ಮುಖಂಡರಾದ ಗಫೂರ್ ಖಾನ್, ಅತಾಯ್ ರಸೂಲ್, ಮುಷೀರ್ ಮತ್ತಿತರರು ಇದ್ದರು.

ಶೀಘ್ರ ರೈತರ ಅರ್ಜಿ ಪರಿಹರಿಸಲು ಆಗ್ರಹ

ಹೂವಿನಹಡಗಲಿ: ತಾಲೂಕಿನಲ್ಲಿ ಆಮ್ ಆದ್ಮಿ ಪಾರ್ಟಿ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಕೆಆರ್‌ಎಸ್ ಪಕ್ಷ ಇತರೆ ಸಂಘದ ವತಿಯಿಂದ ಸರ್ವೆ ಇಲಾಖೆಯಲ್ಲಿ ರೈತರ ಜಮೀನು ಅಳತೆ ಕೆಲಸ ವಿಳಂಬವಾಗುತ್ತಿರುವುದರಿಂದ ಪಟ್ಟಣದ ಶಾಸ್ತ್ರಿ ವೃತ್ತದಿಂದ ತಹಶೀಲ್ದಾರ್ ಕಚೇರಿಯವರೆಗೆ ರ್‍ಯಾಲಿ ಮುಖಂತರ ಸರ್ವೆ ಇಲಾಖೆ ಹಾಗೂ ತಹಶೀಲ್ದಾರ್ ಮುಖಂತರ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ತಾಲೂಕಿನಲ್ಲಿ ಭೂಮಾಪನ ಇಲಾಖೆಯಲ್ಲಿ ರೈತರ ಅರ್ಜಿ ಬಾಕಿ ಇರುವ ಪ್ರಕರಣಗಳು 2000 ವಿಜಯನಗರ ಜಿಲ್ಲಾ ಬಾಕಿ ಇರುವ ಪ್ರಕರಣಗಳು 28000 ರಾಜ್ಯದಲ್ಲಿ ಬಾಕಿ ಇರುವ ಪ್ರಕರಣಗಳು 5ಲಕ್ಷ ಬಾಕಿ ಇವೆ ಸದರಿ ಇಲಾಖೆ ಸುಮಾರು ತಿಂಗಳು ಗಳಿಂದ ಅಳತೆ ಕೆಲಸಗಳು ಹದ್ದು ಬಸ್ತು ಅರ್ಜಿ 11ಇ ಪೋಡಿ ಅರ್ಜಿ ದಾರಿ ಅರ್ಜಿಗಳು ಹೀಗೆ ಹಲವರು ಅರ್ಜಿಗಳು ಇಲಾಖೆಯಿಂದ ನಿಂತಿದ್ದು ಮತ್ತು ಹತ್ತು ಹಲವಾರು ಸಮಸ್ಯೆಗಳನ್ನು ರೈತರು ಅನುಭವಿಸುತ್ತಿದ್ದಾರೆ. ಆದಕಾರಣ ಅತೀ ಶೀಘ್ರದಲ್ಲಿ ಬಗೆ ಹರಿಸಬೇಕೆಂದು ಆಗ್ರಹಿಸಿದರು.



ರಾಜ್ಯ ರೈತ ಸಂಘದ ತಾಲೂಕು ಅಧ್ಯಕ್ಷ ಸಿದ್ದಪ್ಪ ಹೊಸಮನಿ, ಪ್ರಧಾನ ಕಾರ್ಯದರ್ಶಿ ಶಿವರಾಜ ಹೊಳಗುಂದಿ, ಆಪ್ ತಾಲೂಕು ಅಧ್ಯಕ್ಷ ಎನ್.ಶ್ರೀಧರ ನಾಯ್ಕ, ಉಪಾಧ್ಯಕ್ಷ ವಿಠಲ್ ನಾಯಕ, ಸಂಘಟನಾ ಕಾರ್ಯದರ್ಶಿ ಗಿರೀಶ ಡಿ.ಕಾರ್ಯ ಅಧ್ಯಕ್ಷ ಮಂಜುನಾಥ್ ನಾಯಕ, ಡಕ್ಯನಾಯಕ, ಜಿಲ್ಲಾ ಉಪಾಧ್ಯಕ್ಷ ಕೆ.ಗನಿಸಾಬ್ ಬಾವಿಹಳ್ಳಿ ಹಾಗೂ ಕೆ.ಮಂಜುನಾಥ್ ಪುರ, ದುರುಗಪ್ಪ, ಅಖಂಡ ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಅಧ್ಯಕ್ಷ ಹಂಚಿನಾಳ ಶಿವಾನಂದಪ್ಪ, ಶಂಬುನಾಥ್, ಶಿವನಗೌಡ ನಾಗಪ್ಪ,

ಕೆಆರ್‌ಎಸ್ ಪಕ್ಷದ ರಾಜ್ಯ ರೈತ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ದೊಡ್ಡಮನಿ, ಜಿಲ್ಲಾ ಅಧ್ಯಕ್ಷ ಸುಭಾನ್ ಸಾಬ್ ಹುಗುಲೂರು, ಪಕ್ಕೀರಪ್ಪ ಪುರ, ಗುರುಬಸವರಾಜ ಇತರರಿದ್ದರು.

ಪಿಯುಸಿ ಫಲಿತಾಂಶ: ರಾಜ್ಯವಾರು 20ನೇ ಸ್ಥಾನಕ್ಕೆ ಬೀದರ್

ಬೀದರ್: 2026ನೇ ಸಾಲಿನ ದ್ವಿತೀಯ ಪಿಯುಸಿ ಫಲಿತಾಂಶ ಗುರುವಾರ ಪ್ರಕಟಗೊಂಡಿದ್ದು, ಜಿಲ್ಲೆಗೆ ಒಟ್ಟಾರೆ ಶೇ.84.62ರಷ್ಟು ಫಲಿತಾಂಶ ಬಂದಿದೆ.



2025ನೇ ಸಾಲಿಸ ಫಲಿತಾಂಶ ಹೋಲಿಸಿದರೆ ಈ ವರ್ಷ ಶೇ.17.3ರಷ್ಟು ಹೆಚ್ಚಿನ ಫಲಿತಾಂಶ ಬಂದಿದೆ. ರಾಜ್ಯದ ಜಿಲ್ಲಾವಾರು ಫಲಿತಾಂಶದ ಪಟ್ಟಿಯಲ್ಲಿ ಬೀದರ್ ಜಿಲ್ಲೆ 20ನೇ ಸ್ಥಾನ ಪಡೆದಿದೆ. ಕಳೆದ ವರ್ಷ 22ನೇ ಸ್ಥಾನದಲ್ಲಿದ್ದ ಬೀದರ್ ಜಿಲ್ಲೆ ಈ ಬಾರಿ 20ನೇ ಪಡೆದು ಫಲಿತಾಂಶದಲ್ಲಿ ಉತ್ತಮ ಸುಧಾರಣೆ ಆಗಿದೆ.

2024ರಲ್ಲಿ 19ನೇ ಸ್ಥಾನಕ್ಕೆ ಕುಸಿತ ಕಂಡರೂ ಶೇ 81.69 ಫಲಿತಾಂಶ ದಾಖಲಾಗುವ ಮೂಲಕ ಹೆಚ್ಚಳ ಕಂಡಿತು.

ಸರ್ಕಾರಿ ಕಾಲೇಜಿನ ವಿದ್ಯಾರ್ಥಿನಿ ಕಲಾ ವಿಭಾಗದಲ್ಲಿ ರಾಜ್ಯಕ್ಕೆ ನಂಬರ್ ಒನ್: ಜಿಲ್ಲೆಯ ಚಿಟಗುಪ್ಪ ಪಟ್ಟಣದ ಸರ್ಕಾರಿ ಕನ್ಯಾ ಪದವಿ ಪೂರ್ವ ಕಾಲೇಜಿನ ಕಲಾ ವಿಭಾಗದ ವಿದ್ಯಾರ್ಥಿನಿ ಸೋನಾ ಚಂದ್ರಕಾಂತ ಶೇ 98.83ರಷ್ಟು (593) ಅಂಕ ಗಳಿಸುವ ಮೂಲಕ ಕಲಾ ವಿಭಾಗದಲ್ಲಿ ರಾಜ್ಯಕ್ಕೆ ನಂಬರ್ ಒನ್ ಆಗಿದ್ದು ಜಿಲ್ಲೆಗೆ ಹೆಮ್ಮೆಯ ಸಂಗತಿ.

2026ನೇ ಸಾಲಿನಲ್ಲಿ ಬೀದರ್ ಜಿಲ್ಲೆಯಿಂದ ಒಟ್ಟು 18,301 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಆ ಪೈಕಿ 15,487 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಶೇ.84.62, ಕಲಾ ವಿಭಾಗದಲ್ಲಿ ಪರೀಕ್ಷೆ ಬರೆದ 3,123 ವಿದ್ಯಾರ್ಥಿಗಳಲ್ಲಿ 2,090 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಶೇ 76.58ರಷ್ಟು ಫಲಿತಾಂಶ ಬಂದಿದೆ. ಪರೀಕ್ಷೆ ಬರೆದ 2,067 ವಿದ್ಯಾರ್ಥಿಗಳಲ್ಲಿ 1,583 ವಿದ್ಯಾರ್ಥಿಗಳು ಪಾಸಾಗಿದ್ದು, ವಿಜ್ಞಾನ ವಿಭಾಗದ ಒಟ್ಟು ಫಲಿತಾಂಶ ಶೇ 90.11ರಷ್ಟು ಬಂದಿದೆ. ಪರೀಕ್ಷೆ ಬರೆದವರು 13,110, ಈ ಪೈಕಿ ಉತ್ತೀರ್ಣರಾದವರು 11,814 ವಿದ್ಯಾರ್ಥಿಗಳು.

ಇನ್ನು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಶೇ 86.21ರಷ್ಟು ಉತ್ತೀರ್ಣರಾಗುವ ಮೂಲಕ ಫಲಿತಾಂಶದಲ್ಲಿನಗರಪ್ರದೇಶದವಿದ್ಯಾರ್ಥಿಗಳಿಗಿಂತ ಮೇಲುಗೈ ಸಾಧಿಸಿದ್ದಾರೆ. ನಗರ ಪ್ರದೇಶದ ವಿದ್ಯಾರ್ಥಿಗಳು ಶೇ 84.16 ರಷ್ಟು ಪಾಸಾಗಿದ್ದಾರೆ. ಈ ಸಾಲಿನ ಪರೀಕ್ಷೆಯಲ್ಲೂ ಬಾಲಕಿಯರದ್ದೇ ಮೇಲುಗೈ, ಶೇ81.34ರಷ್ಟು ಫಲಿತಾಂಶ ಗಳಿಸುವ ಮೂಲಕ ಜಿಲ್ಲೆಯಲ್ಲಿ ಬಾಲಕಿಯರು ಸಾಧನೆ ಮೆರೆದಿದ್ದಾರೆ. ಮತ್ತು ಬಾಲಕರು ಶೇ 77.47ರಷ್ಟು ಫಲಿತಾಂಶವನ್ನಷ್ಟೇ ಪಡೆದಿದ್ದಾರೆ.

ಬಸ್ಸಿನಲ್ಲಿ ಮರೆತ ಬ್ಯಾಗ್ ಹಸ್ತಾಂತರ!



ಕಲಬುರಗಿ: ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಕಲಬುರಗಿ ಘಟಕ-3ರಲ್ಲಿ ಕಾರ್ಯನಿರ್ವಹಿಸುತ್ತಿದ್ದ ಬಸ್‌ನಲ್ಲಿ ಪ್ರಯಾಣಿಕರು ಮರೆತಿದ್ದ ಅಮೂಲ್ಯ ವಸ್ತುಗಳಿದ್ದ ಬ್ಯಾಗ್ ಅನ್ನು ಸಿಬ್ಬಂದಿ ಪ್ರಾಮಾಣಿಕತೆಯಿಂದ ಮರಳಿ ಮಾಲೀಕರಿಗೆ ಹಸ್ತಾಂತರಿಸಿದ ಘಟನೆ ನಡೆದಿದೆ.

ಏ.9ರಂದು ಮಾರ್ಗ ಸಂಖ್ಯೆ 221 (ಎಂ-ಹಿಪ್ಪರಗಾ) ಮಾರ್ಗದಲ್ಲಿ ಸಂಚರಿಸುತ್ತಿದ್ದ ಬಸ್‌ನಲ್ಲಿ ಪ್ರಯಾಣಿಕರು ಒಂದು ಬ್ಯಾಗ್ ಮರೆತು ಇಳಿದಿದ್ದರು. ಈ ವೇಳೆ ಚಾಲಕರಾದ ಶರಬಸಪ್ಪ (ಪಿ.ನಂ. 325) ಹಾಗೂ ನಿರ್ವಾಹಕ ಶಿವಾನಂದ್ (ಪಿ.ನಂ. 259) ಅವರು ಬ್ಯಾಗ್ ಪರಿಶೀಲಿಸಿದಾಗ ಅದರಲ್ಲಿ ಹಣ ಹಾಗೂ ಅಮೂಲ್ಯ ವಸ್ತುಗಳಿರುವುದು ಕಂಡುಬಂದಿತು. ತಕ್ಷಣವೇ ಅವರು ಘಟಕ ವ್ಯವಸ್ಥಾಪಕ ಪೀತಿ ಕಾಳೆ ಅವರ ಮೂಲಕ ಹಾಗೂ ಸಿಬ್ಬಂದಿ ವಿಜಯಕುಮಾರ್, ಕೆರಾಸಾ ಹವಲ್ದಾರ್, ಅಕೌಂಟ್ ಸೂಪರ್ ವೈಸರ್ ಅನಿಲ್ ಕಪೂರ್ ಮತ್ತು ಎಸ್ಟಾಬ್ಲಿಷ್‌ಮೆಂಟ್ ಸೂಪರ್‌ವೈಸರ್ ಸೀಮಾ ಅವರ ಸಹಕಾರದೊಂದಿಗೆ ವಾರಸುದಾರರಾದ ಸಂತೋಷ್ (ತಂದೆ ಭರತೇಶ್ವರ) ಮತ್ತು ದೇವರಾಜ್ (ತಂದೆ ಗಂಗಾರಾಮ) ಅವರನ್ನು ಸಂಪರ್ಕಿಸಿದರು. ಬ್ಯಾಗ್‌ನಲ್ಲಿ ಸುಮಾರು 20 ಗ್ರಾಂ ಬಂಗಾರ, 10 ಗ್ರಾಂ ಬೆಳ್ಳಿ, 20 ಗ್ರಾಂ ತಾಮ್ರ, 4 ಪುಸ್ತಕಗಳು ಹಾಗೂ ?1,00,000 ನಗದು ಇದ್ದವು. ಈ ಎಲ್ಲಾ ವಸ್ತುಗಳನ್ನು ಏ. 10ರಂದು ಮಾಲೀಕರಿಗೆ ಸುರಕ್ಷಿತವಾಗಿ ಹಸ್ತಾಂತರಿಸಲಾಯಿತು. ಸಿಬ್ಬಂದಿಗಳ ಪ್ರಾಮಾಣಿಕತೆ ಮತ್ತು ಕರ್ತವ್ಯನಿಷ್ಠೆಯನ್ನು ವಿಭಾಗೀಯ ನಿಯಂತ್ರಣಾಧಿಕಾರಿ, ಕಲಬುರಗಿ ವಿಭಾಗ-2 ಅವರು ಪ್ರಶಂಸಿಸಿದ್ದಾರೆ.